ವಿಶ್ವವಾಣಿ
ವಿಶ್ವಾಸವೇ ವಿಶ್ವ

ಗೋವಿನೊಂದಿಗೆ ಪ್ರಧಾನಿ ಸಂಕ್ರಾಂತಿ

ದೇಶದ ಅತ್ಯಂತ ಕಿರಿಯ ಹಸುವಿನ ತಳಿ ಎಂದು ಖ್ಯಾತವಾಗಿರುವ ಆಂಧ್ರಪ್ರದೇಶದ ಪುಂಗನೂರು ಹಸುಗಳಿಗೆ ಪ್ರಧಾನಿ ನರೇಂದ್ರ ಮೋದಿ ಸಂಕ್ರಾಂತಿ ಪ್ರಯುಕ್ತ ತಮ್ಮ ದೆಹಲಿ ನಿವಾಸದಲ್ಲಿ ಹುಲ್ಲು ತಿನ್ನಿಸಿದರು.

ಸೊಂಪಾದ ಪುಟಗಳು

ಡಿಪ್ರೆಶನ್: ಬದುಕಿ ಪ್ರಯೋಜನ ವೇನು? ಎಂಬ ಯಕ್ಷಪ್ರಶ್ನೆ!
ಶಿಶಿರಕಾಲ
ಶಿಶಿರ್ ಹೆಗಡೆ 6

ಒಂದು ಹಡಗಿನ ತುಂಬಾ ರಫ್ತಾದ ನುಗ್ಗೆಗಿಡದ ಬೀಜ!
ಶಶಾಂಕಣ
ಶಶಿಧರ ಹಾಲಾಡಿ 7

ದಾರಿದೀಪೋಕ್ತಿ

ಬಾಳಿನ ಹಾದಿಯಲ್ಲಿ ಸೋಲು ಎಂಬುದು ಕೊನೆಯಲ್ಲ, ಅದು ಹೊಸ ಪಾಠದ ಆರಂಭವಷ್ಟೇ. ಸೂರ್ಯನು ಮುಳುಗುವುದು ನಾಳೆ ಮತ್ತೆ ಪ್ರಖರವಾಗಿ ಉದಯಿಸಲಿಕ್ಕಾಗಿಯೇ ಹೊರತು ಕತ್ತಲಲ್ಲಿ ಕಳೆದುಹೋಗಲು ಅಲ್ಲ. ನಿಮ್ಮ ಗುರಿಯ ಮೇಲೆ ನಂಬಿಕೆಯಿರಲಿ ಮತ್ತು ಪ್ರತಿ ಹೆಜ್ಜೆಯಲ್ಲೂ ತಾಳ್ಮೆಯಿರಲಿ.

ವಕ್ರತುಂಡೋಕ್ತಿ

ಬೆಂಗಳೂರು ಟ್ರಾಫಿಕ್‌ಮ್‌ನ ಜಾ ಒಂದು ಲಾಭವೆಂದರೆ, ಪಕ್ಕದ ಕಾರಿನವರು ಪರಿಚಿತರಾಗಿ, ಸ್ನೇಹಿತರಾಗುತ್ತಾರೆ.

ಹಜಾರೆ: ರಾಜ್ಯಕ್ಕೆ ಸೆಮೀಸ್ ಸೋಲು

ಬೆಂಗಳೂರು: ಇಲ್ಲಿ ಗುರುವಾರ ನಡೆದ ವಿಜಯ್ ಹಜಾರೆ ಏಕದಿನ ಟ್ರೋಫಿ ಸೆಮಿ ಫೈನಲ್‌ನಲ್ಲಿ ಕರ್ನಾಟಕ ಸೋತು ಫೈನಲ್‌ನಿಂದ ಹೊರಬಿದ್ದಿದೆ. ಕರುಣ್ ನಾಯರ್ ಉತ್ತಮ ಬ್ಯಾಟಿಂಗ್ ನೆರವಿನಿಂದ ಕರ್ನಾಟಕ 280 ರನ್‌ಗಳ ಬೃಹತ್ ಮೊತ್ತ ಪೇರಿಸಿತು. 4 ವಿಕೆಟ್‌ಗೆ 284 ರನ್ ಗಳಿಸಿದ ವಿದರ್ಭ ಫೈನಲ್‌ಗೇರಿತು.

ಫನ್‌ತರಂಗ
- ರಘುಪತಿ ಶೃಂಗೇರಿ -

ಲಾಲ್‌ಬಾಗ್ ಮಾದರಿಯಲ್ಲಿ ಮತ್ತೆರಡು ಉದ್ಯಾನ ನಿರ್ಮಾಣಕ್ಕೆ ಸರ್ಕಾರ ಗ್ರೀನ್ ಸಿಗ್ನಲ್
ಸುದ್ದಿ

ಮುಲ್ಲಾಗಳೇ ತೊಲಗಿ ಆಗ್ರಹ ತೀವ್ರ । ಶವ ತೆರವು ಮಾಡಲು ಜೆಸಿಬಿ ಬಳಕೆ

ಹೋರಾಟ ಇನ್ನೂ ಜೋರು । ತಮ್ಮವರನ್ನೇ ಕೊಲ್ಲಲು ಇರಾನಿ ಯೋಧರ ನಕಾರ

ಇರಾಖ್‌ನಿಂದ ಸೇನೆಯನ್ನು ಕರೆಸಿಕೊಂಡಿದೆ ಖಮೇನಿ ಸರ್ವಾಧಿಕಾರಿ ಆಡಳಿತ?

ಇರಾನ್ ಭುಗಿಲಿಗೆ 3500 ಮಂದಿ ಬಲಿ

ಟೆಹರಾನ್: ದೇಶದ ಆರ್ಥಿಕ ಪರಿಸ್ಥಿತಿ ವಿಪರೀತ ಹದಗೆಟ್ಟಿರುವುದರಿಂದ ಆಕ್ರೋಶಗೊಂಡು ಅಲ್ಲಿನ ಧಾರ್ಮಿಕ ನಾಯಕ ಆಯತೊಲ್ಲಾ ಅಲ್ ಖಮೇನಿ ಆಡಳಿತದ ವಿರುದ್ಧ ಜನ ನಡೆಸುತ್ತಿರುವ ಪ್ರತಿಭಟನೆ ವಿಕೋಪಕ್ಕೆ ಹೋಗಿದೆ. ಇದಕ್ಕೆ ಪ್ರತಿಯಾಗಿ ಜನರನ್ನು ಕುರಿಗಳನ್ನು ಕೊಂದಂತೆ ಕೊಲ್ಲುವ ಕಾಯಕವನ್ನು ಇರಾನ್ ಸರಕಾರ ಮುಂದುವರಿಸಿದೆ. ಸದ್ಯದ ಸ್ಥಿತಿಯಲ್ಲಿ ಮೃತಪಟ್ಟವರ ಸಂಖ್ಯೆ 3500 ಅನ್ನು ದಾಟಿದೆ, ಬಂಧಿತರ ಸಂಖ್ಯೆ 20000 ದಾಟಿದೆ. 1980ರಲ್ಲಿ ಮಾಡಿದಂತೆ ಇರಾನ್ ಆಡಳಿತ ಈಗಲೂ ಪ್ರತಿಭಟನಾಕಾರರನ್ನು ಕ್ರೂರವಾಗಿ ಹತ್ತಿಕ್ಕುತ್ತಿದೆ ಎಂದು ಮೂಲಗಳು ಹೇಳಿವೆ.

ಇರಾನಿನ 31 ಪ್ರಾಂತ್ಯಗಳ 614 ಸ್ಥಳಗಳಲ್ಲಿ ಪ್ರತಿಭಟನೆ ತೀವ್ರವಾಗಿದೆ. ಮುಲ್ಲಾಗಳೇ ತೊಲಗಿ ಎಂಬ ಆಗ್ರಹ ಜಾಸ್ತಿಯಾಗಿದೆ. ರಸ್ತೆಗಳಲ್ಲಿ ರಾಶಿಬಿದ್ದಿರುವ ಹೆಣಗಳನ್ನು ತೆರವುಗೊಳಿಸಲು ಜೆಸಿಬಿಯನ್ನು ಬಳಸಲಾಗುತ್ತಿದೆ ಎಂದು ಹೇಳಲಾಗಿದೆ. ಇನ್ನೊಂದು ಕಡೆ ಅಮೆರಿಕ ಕತಾರ್‌ನಲ್ಲಿನ ತನ್ನ ನೆಲೆಯಿಂದ ತನ್ನ ಸೇನೆಯನ್ನು ಕಡಿತ ಮಾಡಿದೆ. ಇರಾನ್ ದಾಳಿ ಮಾಡುವ ಬೆದರಿಕೆ ಹಾಕಿರುವುದೇ ಇದಕ್ಕೆ ಕಾರಣ. ಒಂದು ವೇಳೆ ಪ್ರತಿಭಟನಾಕಾರರನ್ನು ಕೊಲ್ಲುವುದು, ಮರಣದಂಡನೆ ನೀಡುವುದನ್ನು ಮಾಡಿದರೆ ಅಮೆರಿಕ ಸೇನೆ ಇರಾನ್ ಮೇಲೆ ದಾಳಿ ಮಾಡಲಿದೆ ಎಂದು ಡೊನಾಲ್ಡ್ ಟ್ರಂಪ್ ಬೆದರಿಕೆ ಹಾಕಿದ್ದಾರೆ. ಪರಿಸ್ಥಿತಿ ಕೈಮೀರುತ್ತಿರುವುದನ್ನು ಗಮನಿಸಿರುವ

ಚೀನಾ, ಫ್ರಾನ್ಸ್‌ನಂತಹ ದೇಶಗಳು ಮಾತುಕತೆ ಮೂಲಕ ಸಮಸ್ಯೆ ಪರಿಹರಿಸಿಕೊಳ್ಳಲು ಆಗ್ರಹಿಸಿವೆ. ಇನ್ನು ವಿಶ್ವಸಂಸ್ಥೆ ಇರಾನ್ ಅಧಿಕಾರಿಗಳೊಂದಿಗೆ ಮಾತನಾಡಲು ಸಿದ್ಧವಾಗಿವೆ.

ಇರಾಖ್‌ನಿಂದ ಯೋಧರ ಆಮದು: ಈ ನಡುವೆ ಆತಂಕಕಾರಿ ಸುದ್ದಿಯೊಂದು ವರದಿಯಾಗಿದೆ. ಇರಾನ್‌ನೊಳಗಿನ ಪ್ರತಿಭಟನೆಯನ್ನು ಹತ್ತಿಕ್ಕಲು ಸರ್ವಾಧಿಕಾರಿ ಆಯತೊಲ್ಲಾ ಅಲ್ ಖಮೇನಿ ಆಡಳಿತ ಪಕ್ಷದ ಇರಾಖ್‌ನಿಂದ ಸೇನೆಯನ್ನು ಕರೆಸಿಕೊಳ್ಳುತ್ತಿದೆ ಎಂದು ಹೇಳಲಾಗಿದೆ. ಅದರ ಪರಿಣಾಮವೇ ಇರಾನ್‌ನಲ್ಲಿ ಸಾವಿನ ಸಂಖ್ಯೆ ಮಿತಿಮೀರಿ ಹೋಗಿದೆ ಎಂದು ಮೂಲಗಳು ಹೇಳಿವೆ.

→ 4

ಇರಾನಿಗರಿಗೆ ಎಲಾನ್ ಮಸ್ಕ್ ಕಂಪನಿಯಿಂದ ಉಚಿತ ನೆಟ್

ಜನರಿಗೆ ಅಂತರ್ಜಾಲ ಸಿಗದಂತೆ ಇರಾನ್ ಸರಕಾರ ದಿಗ್ಬಂಧನ ವಿಧಿಸಿದ್ದರೂ, ಎಲಾನ್ ಮಸ್ಕ್ ಒಡೆತನದ ಸ್ಟಾರ್‌ಲಿಂಕ್ ಉಚಿತವಾಗಿ ಅಂತರ್ಜಾಲದ ಸೇವೆ ನೀಡುತ್ತಿದೆ ಎನ್ನಲಾಗಿದೆ. ರಿಸೀವರ್‌ಗಳ ಸಮೇತ ನೆಟ್ ಪೂರೈಸಲಾಗುತ್ತಿದೆ. ಇರಾನ್ ಸರಕಾರ ಈ ಸೇವೆಯನ್ನು ಕಡಿತಗೊಳಿಸದಂತೆ ತಂತ್ರಜ್ಞಾನದ ನೆರವನ್ನೂ ಒದಗಿಸಿದೆ. ಪ್ರತಿಭಟನೆ ಜೋರಾಗಲು ಇದೂ ಮುಖ್ಯ ಕಾರಣಗಳಲ್ಲೊಂದು ಎಂದು ವಿಶ್ಲೇಷಿಸಲಾಗಿದೆ.

ಇಂದಿನಿಂದ ಭಾರತೀಯರ ತೆರವು

ಇರಾನ್‌ನಿಂದ ಭಾರತೀಯರ ತೆರವಿಗೆ ಕೇಂದ್ರ ಸರಕಾರ ಕಾರ್ಯಾಚರಣೆ ಶುರು ಮಾಡಿದೆ. ಸದ್ಯದ ಮಾಹಿತಿ ಪ್ರಕಾರ ಭಾರತೀಯರನ್ನು ಹೊತ್ತ ವಿಮಾನಗಳು ಶುಕ್ರವಾರ ದೇಶಕ್ಕೆ ಆಗಮಿಸಲಿವೆ. ಇರಾನ್‌ನಲ್ಲಿ ಅಂತರ್ಜಾಲವನ್ನು ಬಹುತೇಕ ಕಡೆ ಸ್ತಬ್ಧಗೊಳಿಸಿರುವುದರಿಂದ ಭಾರತೀಯರು ಎಲ್ಲಿದ್ದಾರೆ ಎಂಬ ಮಾಹಿತಿ ಸಿಗುತ್ತಿಲ್ಲ, ದೂರವಾಣಿ ಕರೆಗಳನ್ನು ನಂಬಲು ಆಗುತ್ತಿಲ್ಲ. ಹಾಗಾಗಿ ಭಾರತೀಯ ರಾಜತಾಂತ್ರಿಕ ಅಧಿಕಾರಿಗಳು ಖುದ್ದಾಗಿ ಓಡಾಡಿ ವಿದ್ಯಾರ್ಥಿಗಳನ್ನು ಸುರಕ್ಷಿತಗೊಳಿಸುವ ಕೆಲಸದಲ್ಲಿ ತೊಡಗಿದ್ದಾರೆ.

ಭಾರತೀಯ ವಿಮಾನ ಅತಂತ್ರ: ಇರಾನ್ ತನ್ನ ನಾಗರಿಕ ವಿಮಾನಯಾನ ವಾಯುನೆಲೆಯನ್ನು ಕಾರ್ಯಾಚರಣೆಗೆ ಮುಕ್ತಗೊಳಿಸಿದ ನಂತರ, ಕಾಶ್ಮೀರಿ ವಿದ್ಯಾರ್ಥಿಗಳನ್ನು ಹೊತ್ತ ವಿಮಾನ ಗುರುವಾರವೇ ಭಾರತಕ್ಕೆ ಬರಬೇಕಿತ್ತು. ಆದರೆ ಅನಿವಾರ್ಯ ಕಾರಣಗಳಿಂದ ಅಲ್ಲೇ ಉಳಿದಿರುವ ವಿಮಾನ ಬೆಳಗ್ಗೆ 8 ಗಂಟೆಗೆ ಭಾರತಕ್ಕೆ ಹಾರುವ ಸಾಧ್ಯತೆಯಿದೆ.

ದಲಿತರು ಸಿಎಂ ಆಗದ ನೋವಿದೆ: ಸಚಿವ ಮುನಿಯಪ್ಪ

ಸಿದ್ದು-ಡಿಕೆ ಕುರ್ಚಿ ಕಾದಾಟದ ನಡುವೆಯೇ ಹೊಸದನಿ

ಕಾಂಗ್ರೆಸ್‌ನಲ್ಲಿ ಮತ್ತೆ ದಲಿತ ಸಿಎಂ ಜಪ

ಬೆಂಗಳೂರು: ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ರಾಹುಲ್ ಗಾಂಧಿ ನಡುವೆ ನಡೆದಿರುವ ಸಂಭಾಷಣೆ, ದೆಹಲಿಗೆ ಡಿ.ಕೆ. ಶಿವಕುಮಾರ್ ಪ್ರಯಾಣದ ಬೆನ್ನಲ್ಲೇ ಕಾಂಗ್ರೆಸ್‌ನಲ್ಲಿ ಮತ್ತೆ ದಲಿತ ಸಿಎಂ ಜಪ ಶುರುವಾಗಿದೆ. ಈಗಾಗಲೇ ಗೃಹಸಚಿವ ಪರಮೇಶ್ವರ್ ನನಗೂ ಮುಖ್ಯಮಂತ್ರಿ ಆಗುವ ಬಯಕೆಯಿದೆ ಎಂದಿದ್ದಾರೆ. ಅದರ ಬೆನ್ನಲ್ಲೇ ಸಚಿವ ಕೆ.ಎಚ್. ಮುನಿಯಪ್ಪ ದಲಿತ ಸಿಎಂ ಬೇಕು ಎಂಬ ಬಲವಾದ ಆಗ್ರಹ ಮುಂದಿಟ್ಟಿದ್ದಾರೆ. ನಾಯಕತ್ವ ಬದಲಾವಣೆ ಕೂಗು ಮುನ್ನೆಲೆಗೆ ಬರುತ್ತಿದ್ದಂತೆ ದಲಿತ ಮುಖ್ಯಮಂತ್ರಿಯ ಕೂಗು ಜೋರಾಗುತ್ತಿರುವುದು ಇದೇ ಮೊದಲಲ್ಲ. ಆದರೆ 'ಐದು ವರ್ಷಕ್ಕೆ ಸಿದ್ದು ಸಿಎಂ' ಎನ್ನುವ ಹೇಳಿಕೆಯ ಹೊರತಾಗಿಯೂ ದಲಿತ ಸಿಎಂ ವಿಷಯ ಪ್ರಸ್ತಾಪವಾಗಿರುವುದು ಕುತೂಹಲಕ್ಕೆ ಕಾರಣವಾಗಿದೆ.

ಬೆಂಗಳೂರಿನಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಸಚಿವ ಕೆ.ಎಚ್.ಮುನಿಯಪ್ಪ, ದಲಿತರೊಬ್ಬರು ಮುಖ್ಯಮಂತ್ರಿಯಾಗಿಲ್ಲ ಎನ್ನುವ ನೋವು ನಮಗಿದೆ. ಹೈಕಮಾಂಡ್ ಮನಸ್ಸು ಮಾಡಿದರೆ ಎಲ್ಲವೂ ಆಗುತ್ತದೆ. ಹೈಕಮಾಂಡ್‌ಗೆ ಯಾವ ಕಾಲದಲ್ಲಿ ಏನು ತೀರ್ಮಾನ ಮಾಡಬೇಕು ಎಂಬುದು ಗೊತ್ತಿದೆ. ಈಗ ತೀರ್ಮಾನ ಮಾಡುವ ಸ್ಥಾನದಲ್ಲಿ ಹಿರಿಯರಾದ ಮಲ್ಲಿಕಾರ್ಜುನ ಖರ್ಗೆಯವರೇ ಕುಳಿತಿದ್ದಾರೆ. ನಾವು ಇನ್ನೇನು ಮಾತನಾಡುವುದು ಎಂದರು.

ರಾಜ್ಯದಲ್ಲಿ ಶೇ.25ರಷ್ಟು ಪರಿಶಿಷ್ಟ ಜಾತಿ ಸಮುದಾಯದವರಿದ್ದಾರೆ. ಇವರಲ್ಲಿ ಶೇ.75 ರಷ್ಟು ಮಂದಿ ಕಾಂಗ್ರೆಸ್‌ಗೆ ಮತ ಹಾಕುತ್ತಾರೆ. ಇವೆಲ್ಲ ವನ್ನೂ ಹೈಕಮಾಂಡ್‌ಗೆ ಮನವರಿಕೆ ಮಾಡಿಕೊಟ್ಟಿದ್ದೇವೆ.

ಆದರೂ ದಲಿತರು ಇದುವರೆಗೂ ಸಿಎಂ ಆಗದಿರುವ ಬಗ್ಗೆ ನಮಗೂ ನೋವಿದೆ. ಈ ಹಂತದಲ್ಲಿ ನಾನು ಮುಖ್ಯಮಂತ್ರಿ ಪರವೂ ಇಲ್ಲ, ವಿರೋಧವೂ ಇಲ್ಲ. ಹಾಗೆಯೇ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಪರನೂ ಇಲ್ಲ, ವಿರೋಧನೂ ಇಲ್ಲ. ಉಪಮುಖ್ಯ ಮಂತ್ರಿ ಡಿ.ಕೆ. ಶಿವಕುಮಾರ್ ಒಳ್ಳೆಯ ಕೆಲಸ ಮಾಡಿದ್ದಾರೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಕೂಡಾ ಇತಿಹಾಸ ಸೃಷ್ಟಿ ಮಾಡಿದ್ದಾರೆ ಎಂದರು.

ದೆಹಲಿಗೆ ಸಿದ್ದರಾಮಯ್ಯ ಹಾಗೂ ಡಿ.ಕೆ. ಶಿವಕುಮಾರ್ ಹೋಗುವುದು, ಹೋಗದಿರುವುದು ಅವರಿಗೆ ಬಿಟ್ಟ ವಿಚಾರ. ಮೊನ್ನೆ ರಾಹುಲ್ ಗಾಂಧಿ ಅವರು ಮೈಸೂರಿನಲ್ಲಿ ಇಬ್ಬರನ್ನು ಕರೆದು ಮಾತನಾಡಿದ್ದಾರೆ. ಯಾವುದೇ ಗೊಂದಲವಿದ್ದರೂ ಹೈಕಮಾಂಡ್ ಕರೆದು ಮಾತನಾಡುತ್ತೆ. ಎಲ್ಲವೂ ಇತ್ಯರ್ಥವಾಗಲಿದೆ.
-ಕೆ.ಎಚ್.ಮುನಿಯಪ್ಪ, ಸಚಿವ

ಇಂದು ದೆಹಲಿಗೆ ಡಿ.ಕೆ.ಶಿವಕುಮಾರ್

ರಾಹುಲ್ ಗಾಂಧಿ ಅವರ 'ವಿಲ್ ಕಾಲ್ ಯೂ ಸೂನ್' ಎನ್ನುವ ಮಾತು ಡಿಕೆ ಆಪ್ತರಿಗೆ ಆನೆ ಬಲ ನೀಡಿದಂತಾಗಿದೆ. ಈ ನಡುವೆ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ಶುಕ್ರವಾರ ದೆಹಲಿಗೆ ತೆರಳುತ್ತಿರುವುದು ಕುತೂಹಲಕ್ಕೆ ಕಾರಣವಾಗಿದೆ. ಈ ಹಿಂದೆ 19ಕ್ಕೆ ದೆಹಲಿಗೆ ಡಿಕೆ ತೆರಳಲಿದ್ದಾರೆ ಎನ್ನಲಾಗಿತ್ತು. ಆದರೀಗ ಶುಕ್ರವಾರ ದೆಹಲಿಗೆ ತೆರಳಿದ್ದಾರೆ. ಅಸ್ಸಾಂ ವಿಧಾನಸಭಾ ಚುನಾವಣಾ ಸಭೆ, ನರೇಗಾ ಸಂಬಂಧ ಸಭೆಯ ಹೊರತಾಗಿಯೂ ಡಿ.ಕೆ.ಶಿವಕುಮಾರ್ ಅವರ ಈ ದೆಹಲಿ ಭೇಟಿ ಹಲವು ರೀತಿಯ ವ್ಯಾಖ್ಯಾನಗಳಿಗೆ ಕಾರಣವಾಗುತ್ತಿದೆ. ಅಸ್ಸಾಂ ವಿಧಾನಸಭಾ ಚುನಾವಣಾ ಸಭೆಯಲ್ಲಿ ಭಾಗವಹಿಸಿದ ಬಳಿಕ ರಾಜ್ಯ ರಾಜಕೀಯಕ್ಕೆ ಸಂಬಂಧಿಸಿದಂತೆ ಚರ್ಚಿಸಲಿದ್ದಾರೆ ಎನ್ನಲಾಗಿದೆ.

ಸಿದ್ದರಾಮಾನಂದ ಶ್ರೀ ದೇಹತ್ಯಾಗ: ಸಿಎಂ ಕಂಬನಿ

ರಾಯಚೂರು: ಗುರುವಾರ ಮುಂಜಾನೆ ಹೃದಯಾಘಾತದಿಂದ ದೇಹತ್ಯಾಗ ಮಾಡಿದ ರಾಯಚೂರಿನ ತಿಂಥಣಿ ಬ್ರಿಡ್ಜ್ ಕನಕ ಗುರುಪೀಠದ ಸಿದ್ದರಾಮಾನಂದ ಸ್ವಾಮೀಜಿಯ ಅಂತ್ಯಕ್ರಿಯೆ ಸಕಲ ಸರಕಾರಿ ಗೌರವಗಳೊಂದಿಗೆ ನೆರವೇರಿತು. ಮಠದ ಪ್ರಾಂಗಣದಲ್ಲಿ ಸ್ವಾಮೀಜಿ ಅಂತ್ಯ ಕ್ರಿಯೆ ನಡೆಯಿತು. ಪೊಲೀಸ್ ಪಡೆ ಗಾಳಿಯಲ್ಲಿ ಮೂರು ಸುತ್ತು ಗುಂಡು ಹಾರಿಸುವ ಮೂಲಕ ಗೌರವ ವಂದನೆ ಸಲ್ಲಿಸಿದರು. ಸರಕಾರದ ಪರವಾಗಿ ಸಚಿವರಾದ ಬೈರತಿ ಸುರೇಶ್, ಎನ್.ಎಸ್.ಬೋಸರಾಜು ಭಾಗಿಯಾಗಿದ್ದರು. ಸಚಿವ ಬೈರತಿ ಸುರೇಶ್ ಸ್ವಾಮೀಜಿಗೆ ರಾಷ್ಟ್ರಧ್ವಜ ಸಮರ್ಪಿಸಿದರು. ಸಿಎಂ ಸಿದ್ದರಾಮಯ್ಯ, ಡಿಸಿಎಂ ಶಿವಕುಮಾರ್ ಕಂಬನಿ ಮಿಡಿದಿದ್ದಾರೆ. ಬಾಲ್ಯದಿಂದಲೇ ಸಿದ್ದರಾಮಾನಂದ ಶ್ರೀಗಳಿಗೆ ಅಧ್ಯಾತ್ಮದಲ್ಲಿ ತೀವ್ರ ಒಲವಿತ್ತು. ಆಗಲೇ ಅವರು ಹಲವಾರು ಧಾರ್ಮಿಕ ಸಂಸ್ಥೆಗಳಲ್ಲಿ ಓಡಾಡಿದ್ದರು.

ಕಡಲೆ ಕಾಳಿಗೆ ಬೆಂಬಲ ಹೆಚ್ಚಿಸಿ: ಕೇಂದ್ರಕ್ಕೆ ಪತ್ರ

ಬೆಂಗಳೂರು: ರಾಜ್ಯ ಕಡಲೆ ಬೆಳೆಗಾರರು ಸಂಕಷ್ಟದಲ್ಲಿದ್ದೂ, ಕೂಡಲೇ ಕನಿಷ್ಠ ಬೆಂಬಲ ಬೆಲೆ ಹೆಚ್ಚಿಸಬೇಕು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಕೇಂದ್ರ ಕೃಷಿ ಸಚಿವ ಶಿವರಾಜ್ ಸಿಂಗ್ ಚೌಹಾಣ್ ಅವರಿಗೆ ಆಗ್ರಹಿಸಿದ್ದಾರೆ. ಈ ಸಂಬಂಧ ಪತ್ರ ಬರೆದಿರುವ ಸಿದ್ದರಾಮಯ್ಯ ಅವರು, 'ಕರ್ನಾಟಕದಲ್ಲಿ ಕಡಲೆ ಬೆಳೆಯುವ ರೈತರು ಸಂಕಷ್ಟ ಎದುರಿಸುತ್ತಿದ್ದಾರೆ. ಕ್ವಿಂಟಲ್ ಕಡಲೆ ಕಾಳಿಗೆ 5,875 ರು. ಕನಿಷ್ಠ ಬೆಂಬಲ ಬೆಲೆಯಿದೆ. ಆದರೆ, ಮಾರುಕಟ್ಟೆ ಬೆಲೆಗಳು ಎಂಎಸ್‌ಪಿಗಿಂತ ತೀರಾ ಕಡಿಮೆಯಾಗಿದ್ದು, ರೈತರು ಮಾರಾಟದಲ್ಲಿ ಸಂಕಷ್ಟಕ್ಕೆ ಸಿಲುಕಿದ್ದಾರೆ. ರೈತರ ಆದಾಯವನ್ನು ರಕ್ಷಿಸಲು ಮತ್ತು ಮಾರುಕಟ್ಟೆಯನ್ನು ಸ್ಥಿರಗೊಳಿಸಲು ಬೆಲೆ ಬೆಂಬಲ ಯೋಜನೆಯಲ್ಲಿ ಖರೀದಿಯನ್ನು ತಕ್ಷಣವೇ ಪ್ರಾರಂಭಿಸಬೇಕು ಎಂದು ಆಗ್ರಹಿಸಿದ್ದಾರೆ. ರಾಜ್ಯದ ರೈತರು ಎದುರಿಸುತ್ತಿರುವ ಕಷ್ಟದ ಪರಿಸ್ಥಿತಿಯನ್ನು ಅವರು ವಿವರಿಸಿದ್ದಾರೆ.

ಸಕಾಲದಲ್ಲಿ ರಾಜ್ಯ ಕಾರಣಕ್ಕೆ ಬರುವೆ: ಎಚ್‌ಡಿಕೆ

ಬೆಂಗಳೂರು: ರಾಜ್ಯ ರಾಜಕೀಯದಿಂದ ದೂರ ಸರಿಯುವುದಿಲ್ಲ. ನಾನು ಎಲ್ಲಿರಬೇಕು ಎಂದು ತೀರ್ಮಾನ ಮಾಡುವುದು ರಾಜ್ಯದ ಜನತೆ. ರಾಜ್ಯ ರಾಜಕೀಯಕ್ಕೆ ಯಾವಾಗ ಬರಬೇಕು ಎಂದು ಜನತೆಯ ಆಶಯದ ಮೇರೆಗೆ ತೀರ್ಮಾನ ಮಾಡುತ್ತೇನೆ ಎಂದು ಕೇಂದ್ರದ ಕೈಗಾರಿಕಾ ಸಚಿವ ಎಚ್.ಡಿ.ಕುಮಾರಸ್ವಾಮಿ ಹೇಳಿದರು. ಬೆಂಗಳೂರಿನ ನಿವಾಸದ ಬಳಿ ಸುದ್ದಿಗಾರರೊಂದಿಗೆ ಮಾತನಾಡಿ, ನಾವು ಎನ್‌ಡಿಎ ಮೈತ್ರಿಯಲ್ಲಿದ್ದೇವೆ. ಈ ಮೈತ್ರಿಯಲ್ಲಿ ಯಾವುದೇ ಗೊಂದಲಕ್ಕೆ ಅವಕಾಶ ಕೊಡಬಾರದು. ರಾಜ್ಯದಲ್ಲಿ ಉತ್ತಮ ಸರಕಾರ ತರಬೇಕೆನ್ನುವುದು ನಮ್ಮ ಉದ್ದೇಶ ಎಂದರು. ರಾಜ್ಯದಲ್ಲಿ ಈಗ ಆಡಳಿತ ಹೇಗೆ ನಡೆಯುತ್ತಿದೆ ಎಂದು ನಾನು ನಿರಂತರವಾಗಿ ಗಮನಿಸುತ್ತಿದ್ದೇನೆ. ಒಳ್ಳೆಯ ಸರಕಾರ ಬಂದು ಜನತೆ ನೆಮ್ಮದಿಯಿಂದ ಇರಬೇಕು ಎಂದಿದ್ದಾರೆ.

ಇಡಿ ಅಧಿಕಾರಿಗಳ ಮೇಲಿನ ಎಫ್‌ಐಆರ್ ರದ್ದತಿಗೆ ಆದೇಶ

ಜಾರಿ ನಿರ್ದೇಶನಾಲಯಕ್ಕೆ ಅಡ್ಡಿ: ಮಮತಾಗೆ ಛೀಮಾರಿ

ಬಂಗಾಳ ಸಿಎಂ ಮಮತಾಗೆ ಸುಪ್ರೀಮ್ ಮುಖಭಂಗ

ದೆಹಲಿ: ಪಶ್ಚಿಮ ಬಂಗಾಳದಲ್ಲಿನ ಮಮತಾ ಬ್ಯಾನರ್ಜಿ ನೇತೃತ್ವದ ಟಿಎಂಸಿ ಸರ್ಕಾರ ಮತ್ತು ಕೋಲ್ಕತಾ ಪೊಲೀಸರಿಗೆ ಭಾರೀ ಹಿನ್ನಡೆಯಾಗಿದೆ. ರಾಜಕೀಯ ಸಲಹಾ ಸಂಸ್ಥೆ ಐ-ಪ್ಯಾಕ್ ಕಚೇರಿ ಮೇಲೆ ದಾಳಿ ನಡೆಸಿದ್ದ ಇಡಿ (ಜಾರಿ ನಿರ್ದೇಶನಾಲಯ) ಅಧಿಕಾರಿಗಳ ವಿರುದ್ಧ ದಾಖಲಾಗಿರುವ ಎಫ್‌ಐಆರ್‌ಗಳನ್ನು ಸುಪ್ರೀಮ್ ಕೋರ್ಟ್ ವಜಾಗೊಳಿಸಿದೆ.

→ 4

ನ್ಯಾಯಪೀಠ ಹೇಳಿದ್ದೇನು?

- ಜ.9ರಂದು ಕೋಲ್ಕತಾ ಉಚ್ಚ ನ್ಯಾಯಾಲಯದಲ್ಲಿ ನಡೆದ ಬೆಳವಣಿಗೆಗಳು ಆಘಾತಕಾರಿಯಾಗಿವೆ
- ಈ ಬೆಳವಣಿಗೆಯಿಂದ ದೊಡ್ಡ ಪ್ರಶ್ನೆ ಹುಟ್ಟಿದೆ. ಹೀಗೆಯೇ ಬಿಟ್ಟರೆ ಅರಾಜಕತೆ ಸೃಷ್ಟಿಯಾಗುತ್ತದೆ.
- ಕೇಂದ್ರ ಸಂಸ್ಥೆಗಳಿಗೆ ಅಡ್ಡಿ ಸರಿಯಲ್ಲ.

ಚಿತ್ರ: ಸುಧಾಕರ್ ದೇವರಾಜ್

ಮಕರ ಸಂಕ್ರಾಂತಿ ಕಿಚ್ಚು

ಮಕರ ಸಂಕ್ರಾಂತಿ ಪ್ರಯುಕ್ತ ಬೆಂಗಳೂರಿನ ಜ್ಞಾನಗಂಗಾ ನಗರದಲ್ಲಿ ಸಂಪ್ರದಾಯದಂತೆ ಕಿಚ್ಚು ಹಾಯಿಸುವ ಕಾರ್ಯಕ್ರಮ ನಡೆಯಿತು. ಎತ್ತುಗಳಿಗೆ ಅಲಂಕಾರ ಮಾಡಿ ಅವುಗಳೊಂದಿಗೆ ಜನರೂ ಉರಿಯುತ್ತಿರುವ ಬೆಂಕಿಯನ್ನು ಹಾದು ಓಡಿದ ರೋಚಕ ದೃಶ್ಯ ಇಲ್ಲಿದೆ.

ಕೆಪಿಸಿಸಿಯಿಂದ ಶಿಸ್ತುಕ್ರಮದ ಎಚ್ಚರಿಕೆ

ಮಹಿಳಾ ಅಧಿಕಾರಿಗೆ ಧಮ್ಕಿ: ರಾಜೀವ್ ಗೌಡಗೆ ನೋಟಿಸ್

ಬೆಂಗಳೂರು: ರಾಜ್ಯದಲ್ಲಿ ತೀವ್ರ ವಿವಾದಕ್ಕೆ ಕಾರಣವಾಗಿರುವ ಶಿಡ್ಲಘಟ್ಟ ಪೌರಾಯುಕ್ತೆ ಅಮೃತಾ ಗೌಡಗೆ ಧಮ್ಕಿ ಹಾಕಿದ್ದ ಕಾಂಗ್ರೆಸ್ ನಾಯಕ ರಾಜೀವ್ ಗೌಡಗೆ ಕೆಪಿಸಿಸಿ ಶೋಕಾಸ್ ನೋಟಿಸ್ ನೀಡಿದೆ. ಮಹಿಳಾ ಅಧಿಕಾರಿಗೆ ಬೆದರಿಕೆ ಹಾಕಿರುವ ಹಾಗೂ ಅಶ್ಲೀಲವಾಗಿ ಬೈದಿರುವ ಆಡಿಯೋ ತೀವ್ರ ವಿವಾದಕ್ಕೆ ಕಾರಣವಾಗಿರುವುದರಿಂದ, ಕೆಪಿಸಿಸಿ ಕಾರ್ಯಾಧ್ಯಕ್ಷ ಜಿ.ಸಿ. ಚಂದ್ರಶೇಖರ್ ನೋಟಿಸ್ ನೀಡಿದ್ದು, ಘಟನೆಯ ಸ್ಪಷ್ಟನೆ ನೀಡಲು ಸೂಚಿಸಿದ್ದಾರೆ.

→ 4

ಬುದ್ಧಿ ಹೇಳುವೆ: ಕೆಎಚ್

ಈ ವಿಷಯಕ್ಕೆ ಸಂಬಂಧಿಸಿ ಪ್ರತಿಕ್ರಿಯಿಸಿರುವ ಸಚಿವ ಮುನಿಯಪ್ಪ, ರಾಜೀವ್ ಗೌಡರನ್ನು ಕರೆದು ಬುದ್ಧಿ ಹೇಳುತ್ತೇನೆ. ರಾಜಕೀಯದಲ್ಲಿರುವವರು ಶಾಂತ ಸ್ವಭಾವದಿಂದ ಇರಬೇಕು. ಹೀಗೆಲ್ಲಾ ಮಾತನಾಡಬಾರದು. ರಾಜೀವ್ ಸೌಮ್ಯ ಸ್ವಭಾವದವರೇ. ಏಕೆ ಈ ರೀತಿ ಮಾತನಾಡಿದರು ಎಂದು ಗೊತ್ತಿಲ್ಲ ಎಂದು ಹೇಳಿದ್ದಾರೆ.

ಪೊಲೀಸ್ ಇಲಾಖೆ ಶಿಫಾರಸು ಜಾರಿಗೆ ಕೆಎಸ್‌ಸಿಎ ಶ್ರಮ

ಷರತ್ತುಬದ್ಧ ಅನುಮತಿ ನೀಡಲು ರಾಜ್ಯ ಸರಕಾರ ಸಜ್ಜು

ಚಿನ್ನಸ್ವಾಮಿಯಲ್ಲಿ ಮತ್ತೆ ಕ್ರಿಕೆಟ್?

ಬೆಂಗಳೂರು: ಬೆಂಗಳೂರಿನ ಚಿನ್ನಸ್ವಾಮಿ ಮೈದಾನದಲ್ಲಿ ಮತ್ತೆ ಕ್ರಿಕೆಟ್ ಪಂದ್ಯಗಳು ನಡೆಯುವುದು ಭಾಗಶಃ ಖಚಿತವಾಗಿದೆ. ಕರ್ನಾಟಕ ರಾಜ್ಯ ಕ್ರಿಕೆಟ್ ಸಂಸ್ಥೆಗೆ (ಕೆಎಸ್‌ಸಿಎ) ಪಂದ್ಯ ನಡೆಸಲು ಷರತ್ತುಗಳನ್ನು ವಿಧಿಸಿ ರಾಜ್ಯ ಪೊಲೀಸ್ ಇಲಾಖೆ ಹಾಗೂ ಲೋಕೋಪಯೋಗಿ ಇಲಾಖೆ ಹಾಗೂ ರಾಜ್ಯ ಸರಕಾರ ಒಪ್ಪಿಗೆ ನೀಡುವ ಸಾಧ್ಯತೆ ಇದೆ. ಕೆಎಸ್‌ಸಿಎ ರಾಜ್ಯ ಪೊಲೀಸ್ ಇಲಾಖೆ ಸೂಚಿಸಿದ ಹಲವು ಬದಲಾವಣೆಗಳನ್ನು ಈಗಾಗಲೇ ಮಾಡುತ್ತಿರುವುದರಿಂದ ಈ ಬೆಳವಣಿಗೆಯಾಗಿದೆ.

ಈ ಹಿನ್ನೆಲೆಯಲ್ಲಿ ಬುಧವಾರ ಕೆಎಸ್‌ಸಿಎನಲ್ಲಿ ಬೆಂಗಳೂರು ನಗರ ಪೊಲೀಸ್ ಆಯುಕ್ತರಾದ ಸೀಮಂತ್ ಕುಮಾರ್ ಸಿಂಗ್ ಉನ್ನತ ಮಟ್ಟದ ಸಭೆಯನ್ನು ನಡೆಸಿದ್ದಾರೆ. ಕೇಂದ್ರ ವಿಭಾಗದ ಡಿಸಿಪಿ ಅಕ್ಷಯ್, ಕೆಎಸ್‌ಸಿಎ ಅಧ್ಯಕ್ಷ ವೆಂಕಟೇಶ್ ಪ್ರಸಾದ್ ಸೇರಿ ಹಲವರು ಸಭೆಯಲ್ಲಿ ಭಾಗಿಯಾಗಿದ್ದರು. ಕಾಲ್ತುಳಿತ ಪ್ರಕರಣ ನಂತರ ಕ್ರಿಕೆಟ್ ಪಂದ್ಯಗಳಿಗೆ ಅನುಮತಿ ನೀಡಲು ರಾಜ್ಯ

ಸರಕಾರ ಹಿಂದೇಟು ಹಾಕಿತ್ತು.

ಈ ಹಿನ್ನೆಲೆಯಲ್ಲಿ ಸಿಎಂ, ಡಿಸಿಎಂ ಹಾಗೂ ಗೃಹ ಸಚಿವ ಹಾಗೂ ನಗರ ಪೊಲೀಸ್ ಆಯುಕ್ತರನ್ನು ಕೆಎಸ್‌ಸಿಎ ಅಧ್ಯಕ್ಷ ವೆಂಕಟೇಶ್ ಪ್ರಸಾದ್ ಭೇಟಿಯಾಗಿದ್ದರು. ಪಂದ್ಯಗಳನ್ನು ನಡೆಸಲು ಅವಕಾಶ ಕೋರಿ ಸರಕಾರಕ್ಕೂ ಮನವಿ ಮಾಡಿದ್ದರು. ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಏನೆಲ್ಲಾ ವ್ಯವಸ್ಥೆ ಮಾಡಿಕೊಳ್ಳಬೇಕು ಎಂದು ಷರತ್ತುಗಳನ್ನು ವಿಧಿಸಿ ಬೆಂಗಳೂರು ನಗರ ಪೊಲೀಸರು ಅನುಮತಿ ನೀಡಲಿದ್ದಾರೆ.

→ 4

ಲೋಪಗಳೇನು?

1. ಚಿನ್ನಸ್ವಾಮಿ ಮೈದಾನದ ಎಲ್ಲಾ ದ್ವಾರಗಳು ಬಹಳ ಚಿಕ್ಕದಾಗಿವೆ
2. ಅಗ್ನಿಶಾಮಕ ವಾಹನಗಳು, ಆ್ಯಂಬುಲೆನ್ಸ್ ಸಂಚಾರಕ್ಕೆ ಜಾಗ ಇಲ್ಲ
3. ಜನ ಬಂದರೆ ಅವರ ವಾಹನಗಳನ್ನು ನಿಲ್ಲಿಸಲು ಸೂಕ್ತ ವ್ಯವಸ್ಥೆ ಇಲ್ಲ
4. ಕ್ರಿಕೆಟ್ ತಂಡಗಳ ವಾಹನಗಳನ್ನು ನಿಲ್ಲಿಸಲೂ ಸಮರ್ಪಕ ಜಾಗವಿಲ್ಲ
5. ಕ್ರೀಡಾಂಗಣದ ಒಳಭಾಗದಲ್ಲಿರುವ ಕಟ್ಟಡಗಳು ವೈಜ್ಞಾನಿಕವಾಗಿಲ್ಲ
6. ಮೈದಾನದಲ್ಲಿ ಎಲ್ಲೂ ತುರ್ತು ನಿರ್ಗಮನ ವ್ಯವಸ್ಥೆಯನ್ನು ಮಾಡಿಲ್ಲ
7. ಸ್ಟೇಡಿಯಂ ಸುತ್ತಲೂ ನಿರ್ಮಾಣ ಆಗಿರುವ ತಡೆಗೋಡೆ ಅವೈಜ್ಞಾನಿಕ

ಕೃಷ್ಣಾ ಮೇಲ್ದಂಡೆಗೆ 18000, ವಿಬಿ ರಾಮ್ ಜಿಗೆ ಹೆಚ್ಚುವರಿ 3000 ಕೋಟಿ ರು. ಎತ್ತಿಡಬೇಕು

ಜಿಎಸ್‌ಟಿ ಇಳಿಕೆಯಿಂದ 9000 ಕೋಟಿ ರು. ನಷ್ಟ । ಹಣ ಹೊಂದಿಸುವುದೇ ಸರಕಾರಕ್ಕೆ ಸವಾಲು

ರಾಜ್ಯ ಬಜೆಟ್‌ಗೆ 21000 ಕೋಟಿ ರು. ಹೊರೆ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ರಾಜ್ಯ ಕಾಂಗ್ರೆಸ್‌ನಲ್ಲಿರುವ ಗೊಂದಲದ ನಡುವೆ 17ನೇ ಬಜೆಟ್ ಮಂಡಿಸಲು ಸಜ್ಜಾಗಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಈ ಬಾರಿ ಗ್ಯಾರಂಟಿ ಭಾರದೊಂದಿಗೆ, ಹೆಚ್ಚುವರಿ ಹೊರೆ ಬೀಳುವ ಆತಂಕವಿದೆ. ಪ್ರಮುಖವಾಗಿ ಕೇಂದ್ರ ಸರಕಾರದ ಎರಡು ತೀರ್ಮಾನಗಳು ರಾಜ್ಯ ಸರಕಾರದ ಬಜೆಟ್ ಮೇಲೆ ತೀವ್ರ ಪರಿಣಾಮ ಬೀಳುವ ಸಾಧ್ಯತೆಯಿದೆ. ಮೊದಲಿಗೆ ಜಿಎಸ್‌ಟಿ ತೆರಿಗೆಯಿಳಿಕೆಯಿಂದ ರಾಜ್ಯ ಸರಕಾರದ ಬೊಕ್ಕಸಕ್ಕೆ ಆಗುತ್ತಿರುವ ಒಂಬತ್ತು ಸಾವಿರ ಕೋಟಿ ರು. ನಷ್ಟ ಹಾಗೂ ಮನರೇಗಾ ಬದಲಿಗೆ ಜಾರಿಗೊಳಿಸಿರುವ ವಿಬಿ ರಾಮ್ ಜಿ ಕಾಯಿದೆಯಿಂದ ರಾಜ್ಯದ ಬೊಕ್ಕಸದ ಮೇಲೆ ಹೆಚ್ಚುವರಿ ಮೂರು ಸಾವಿರ ಕೋಟಿ ರು. ಹೊರೆ ಬೀಳಲಿದೆ. ಇದರೊಂದಿಗೆ ರಾಜ್ಯ ಸರಕಾರ ನೀಡಿರುವ 'ಭರವಸೆ'ಯಾಗಿರುವ ಕೃಷ್ಣ ಮೇಲ್ದಂಡೆ ಯೋಜನೆಯ ಭೂಸ್ವಾಧೀನಕ್ಕೆ ಅಗತ್ಯವಿರುವ 18 ಸಾವಿರ ಕೋಟಿ ರು.ಗಳನ್ನು ಯಾವ ರೀತಿ ಹೊಂದಿಸಲಿದ್ದಾರೆ ಎನ್ನುವ ಕುತೂಹಲ



ಅನೇಕರಲ್ಲಿದೆ. ಈ ಮೂರು ಸೇರಿಕೊಂಡರೆ, ರಾಜ್ಯ ಸರಕಾರ ಹೆಚ್ಚುವರಿಯಾಗಿ ಒಟ್ಟು 21 ಸಾವಿರ ಕೋಟಿ ರು. ಕ್ರೋಢೀಕರಿಸಬೇಕಿದೆ.

ಕೃಷ್ಣಾ ಮೇಲ್ದಂಡೆ ಮೂರನೇ ಹಂತಕ್ಕೆ ಅಗತ್ಯವಿರುವ ಭೂಸ್ವಾಧೀನದ ಪರಿಹಾರ ಹಾಗೂ ಪುನರ್ ನಿರ್ಮಾಣ, ವಸತಿ ಕಾರ್ಯಗಳಿಗೆ ಮುಂದಿನ ನಾಲ್ಕು ವರ್ಷದಲ್ಲಿ ಅಗತ್ಯವಿರುವ 78 ಸಾವಿರ ಕೋಟಿ ರು. ನೀಡಲು ಸೆಪ್ಟೆಂಬರ್‌ನಲ್ಲಿ ನಡೆದಿದ್ದ ವಿಶೇಷ ಸಚಿವ ಸಂಪುಟ ಸಭೆಯಲ್ಲಿ ತೀರ್ಮಾನಿಸಲಾಗಿದೆ. ಮುಳುಗಡೆ ಜಮೀನುಗಳ ಭೂಸ್ವಾಧೀನಕ್ಕಾಗಿ ಒಣ ಭೂಮಿಗೆ ಪ್ರತಿ ಎಕರೆಗೆ 30 ಲಕ್ಷ ರು., ನೀರಾವರಿ ಜಮೀನಿಗೆ ಎಕರೆಗೆ 40 ಲಕ್ಷ ರು. ನಿಗದಿ ಮಾಡಲಾಗಿದ್ದು, ಕಾಲುವೆ ನಿರ್ಮಾಣಕ್ಕೆ ಸ್ವಾಧೀನಪಡಿಸಿಕೊಳ್ಳುವ ಒಣ 25 ಲಕ್ಷ ರು. ಹಾಗೂ ನೀರಾವರಿ ಭೂಮಿಗೆ 30 ಲಕ್ಷ ರು. ನಿಗದಿ ಮಾಡಲಾಗಿದೆ.

ಯೋಜನೆಯಲ್ಲಿ ಭೂಸ್ವಾಧೀನ ಮತ್ತು ಪುನರ್ ವಸತಿ ಹಾಗೂ ಪುನರ್‌ನಿರ್ಮಾಣಕ್ಕೆ ಹೆಚ್ಚುವರಿ ಸುಮಾರು 78,000 ಕೋಟಿ ರು. ಮೊತ್ತವನ್ನು ಮುಂದಿನ 4 ವರ್ಷಗಳಲ್ಲಿ ಭರಿಸಲು ಸುಮಾರು 18,000 ಕೋಟಿ ವಾರ್ಷಿಕ ಅನುದಾನವನ್ನು ಜಲಸಂಪನ್ಮೂಲ ಇಲಾಖೆಗೆ ಆಯವ್ಯಯದಲ್ಲಿ ಕಲ್ಪಿಸಲು ತೀರ್ಮಾನಿಸ ಲಾಗಿತ್ತು. ಈ ಯೋಜನೆಗೆ ಈ ಪ್ರಮಾಣದ ಅನುದಾನ ಮೀಸಲಿಟ್ಟರೆ, ಇನ್ನುಳಿದ ನೀರಾವರಿ ಯೋಜನೆಗಳ ಅನುದಾನವನ್ನು ಹೊಂದಿಸುವುದು ಹೇಗೆ ಎನ್ನುವುದು ಅನೇಕರ ಪ್ರಶ್ನೆಯಾಗಿದೆ. ಈ ಪ್ರಮಾಣದ ಅನುದಾನ ಒದಗಿಸಲು ಹೆಚ್ಚುವರಿ ಸಾಲ ಅಥವಾ ಇಲಾಖಾವಾರು ಅನು ದಾನ ಕಡಿತಗೊಳಿಸಬೇಕಿದೆ. ಆರ್ಥಿಕ ಇಲಾಖೆ ಅಧಿಕಾರಿಗಳು, ಜಲಸಂಪನ್ಮೂಲ ಇಲಾಖೆಯ ಒಟ್ಟು ಹಂಚಿಕೆಯನ್ನು ಕಡಿತ ಮಾಡಿ ಅದನ್ನು ಭೂಪರಿಹಾರಕ್ಕಾಗಿ ಬಳಸುವುದು ಸೂಕ್ತವೆಂದು ಸಲಹೆ ನೀಡಿದೆ. ಆದರೆ ಈ ರೀತಿ ಮಾಡುವುದರಿಂದ ಈ ಪ್ರಮಾಣದಲ್ಲಿ ಅನುದಾನ ಒಗ್ಗೂಡಿಸಲು ಸಾಧ್ಯವೇ ಎನ್ನುವ ಪ್ರಶ್ನೆಯಿದೆ.

→ 4

ರಾಮ್ ಜಿಯನ್ನು ಒಪ್ಪದಿದ್ದರೂ ಅನುದಾನ ನೀಡಲೇಬೇಕು!

ಮನರೇಗಾ ಬದಲಿಗೆ ಕೇಂದ್ರ ಸರಕಾರ ಜಾರಿಗೊಳಿಸಿರುವ ವಿಬಿ ರಾಮ್ ಜಿ ಯೋಜನೆಯಿಂದ ರಾಜ್ಯ ಸರಕಾರಗಳಿಗೆ ಹೆಚ್ಚುವರಿ ಅನುದಾನ ಅಗತ್ಯ. ಕಾಂಗ್ರೆಸ್ ನಾಯಕರು, ಈ ಯೋಜನೆಯನ್ನು ಒಪ್ಪಿಕೊಳ್ಳುವುದಿಲ್ಲ ಎನ್ನುತ್ತಿದ್ದರೂ, ಕಾನೂನಾತ್ಮಕವಾಗಿ ಕಾಯಿದೆಯನ್ನು ಹಿಂಪಡೆಯದ ಹೊರತು ಈ ಯೋಜನೆಗೆ ಅನುದಾನ ನೀಡದೇ ಇರಲು ಸಾಧ್ಯವಿಲ್ಲ. ಈ ಹಿಂದೆ ಕೇಂದ್ರ ಹಾಗೂ ರಾಜ್ಯ ಶೇ.90:10 ಅನುಪಾನದಲ್ಲಿ ಅನುದಾನ ನೀಡಬೇಕಿತ್ತು. ಆದರೀಗ 60:40 ಅನುಪಾನದಲ್ಲಿ ನೀಡಲಾಗಿದೆ. ಆದ್ದರಿಂದ ಹೊಸ ಕಾಯಿದೆಯಂತೆ ಹೆಚ್ಚುವರಿ 3,000-4,000 ಕೋಟಿ ಹೊರೆ ಬೀಳಲಿದೆ ಎಂದು ಸಿಎಂ ಸಿದ್ದರಾಮಯ್ಯ ಈಗಾಗಲೇ ಆತಂಕ ವ್ಯಕ್ತಪಡಿಸಿದ್ದಾರೆ. ಆದ್ದರಿಂದ ಈ ಮೂರು ಸಾವಿರ ಕೋಟಿ ರು. ಅನುದಾನ ಹೊಂದಿಸುವುದು ಸವಾಲಿನ ಕೆಲಸ ಎನ್ನಲಾಗುತ್ತಿದೆ.

ಸಮಾಚಾರ ಸಣ್ಣದಲ್ಲ

ನೌಕರರ ಒಕ್ಕೂಟ ಪದಾಧಿಕಾರಿಗಳ ಆಯ್ಕೆ

ಬೀದರ್: ದಿನಗೂಲಿ ನೌಕರರ ಒಕ್ಕೂಟ ಬೀದರ್ ತಾಲೂಕು ಮತ್ತು ಜಿಲ್ಲಾ ಘಟಕದ ಕಾರ್ಯಕಾರಿ ಮಂಡಳಿಯ ಸಭೆಯಲ್ಲಿ ಸಂಘದ ಸರ್ವ ಸದಸ್ಯರ ಏಕಮತದಿಂದ ಜಿಲ್ಲಾ ಒಕ್ಕೂಟದ ಪದಾಧಿಕಾರಿಗಳನ್ನು ಆಯ್ಕೆ ಮಾಡಲಾಯಿತು. ಸಭೆಯಲ್ಲಿ ಆಯುಬ ಖಾನ್ (ಕಪ್ಪಲಾಪೂರ) ಅವರನ್ನು ಜಿಲ್ಲಾಧ್ಯಕ್ಷರಾಗಿ, ಮಿಥುನ ಫುಲೆ (ಕೋನಮೇಳಕುಂದ) ಜಿಲ್ಲಾ ಉಪಾಧ್ಯಕ್ಷರಾಗಿ ಹಾಗೂ ರಾಜಪ್ಪ (ಅಲಿಯಂಬರ) ಅವರನ್ನು ಜಿಲ್ಲಾ ಕಾರ್ಯದರ್ಶಿಯಾಗಿ ಆಯ್ಕೆ ಮಾಡಲಾಯಿತು. ಸಂಘದ ಸದಸ್ಯರಾಗಿ ಬಾಲಾಜಿ (ಬೆಲೂರ), ಅಂಬದಾಸ (ತೆಗಂಪೂರ), ಸುರೇಶ (ಹಬ್ಸಿಕೋಟ), ಅರುಣಕುಮಾರ (ಮದರಗಾಂವ), ಗೌತಮ (ನೆಳವಾಡ), ನರಸಪ್ಪಾ ಆನಂದ(ಸಿಂಧೋಲ), ಹಣಮಂತ ಅವರನ್ನು ಸರ್ವಾನುಮತದಿಂದ ಆಯ್ಕೆ ಮಾಡಲಾಗಿದೆ ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಪ್ರೌಢಶಾಲೆಯಲ್ಲಿ ಸಪ್ತಶಕ್ತಿ ಸಂಗಮ

ಬೀದರ್: ನಗರದ ಸರಸ್ವತಿ ಶಿಕ್ಷಣ ವಿಕಾಸ ಸಮಿತಿ (ರಿ), ಅಡಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಸರಸ್ವತಿ ಶಿಶುಮಂದಿರ, ಹಿರಿಯ ಪ್ರಾಥಮಿಕ ಶಾಲೆ ಹಾಗೂ ಶ್ರೀ ವಿದ್ಯಾರಣ್ಯ ಪ್ರೌಢಶಾಲೆಗಳ ವತಿಯಿಂದ ಸಪ್ತಶಕ್ತಿ ಸಂಗಮ ಕಾರ್ಯಕ್ರಮ ಜರುಗಿತು. ಶ್ರೀಮತಿ ಊರ್ಮಿಳಾ ಬಕ್ಷಿ ಪ್ರಸಾವಿಕ ನುಡಿಗಳನ್ನು ತಿಳಿಸಿದರು. ಶ್ರೀಮತಿ ಪುಣ್ಯವತಿ ವಿಸಾಜಿ.ರತ್ನಾ ಪಾಟೀಲ. ಪ್ರತಿಭಾ ಚಾಮಾ. ಗುಂಡಮ್ಮ ಬಸವರಾಜ ಹೆಬ್ಬಾಳೆ. ರೇವಮ್ಮ ವೈಜಿನಾಥ ಸ್ವಾಮಿ.ಸಂಸ್ಥೆಯ ಅಧ್ಯಕ್ಷ ಪ್ರೊ. ಎಸ್.ಬಿ. ಸಜ್ಜನಶೆಟ್ಟಿ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

ವಿಭಾಗ ಮಟ್ಟದ ಅಧ್ಯಯನ ಶಿಬಿರ

ಬೀದರ್:ಕರ್ನಾಟಕ ದಲಿತ ಸಂಘರ್ಷ ಸಮಿತಿ (ಅಂಬೇಡ್ಕರ್) ಕಲಬುರಗಿ ವಿಭಾಗದ ವತಿಯಿಂದ ಎರಡು ದಿನ ಅಧ್ಯಯನ ಶಿಬಿರವು ಕೊಪ್ಪಳ ಜಿಲ್ಲೆಯ ಕುಷ್ಠಗಿ ತಾಲೂಕಿನ ತಾವರಗೇರಾ ಪಟ್ಟಣದ ಬುದ್ಧ ವಿಹಾರದಲ್ಲಿ ಜರುಗಲಿದೆ ಎಂದು ಜಿಲ್ಲಾ ಸಂಚಾಲಕ ರಮೇಶ ಮಂದಕನಳ್ಳಿ ತಿಳಿಸಿದ್ದಾರೆ. ಜ.17ಮತ್ತು 18 ರಂದು ಪ್ರೊ. ಬಿ. ಕೃಷ್ಣಪ್ಪ ಧರ್ಮಪತ್ನಿ ಇಂದಿರಾ ಉದ್ಘಾಟಿಸಲಿದ್ದು. ರಾಜ್ಯ ಪ್ರಧಾನ ಸಂಚಾಲಕ ಮಾವಳ್ಳಿ ಶಂಕರ. ರಮೇಶ್ ಡಾಕುಳಗಿ, ರಾಮಣ್ಣ ಕಲ್ಲದೇವನಹಳ್ಳಿ, ನಾಗಣ್ಣ ಬಡಿಗೇರ ಹಾಗೂ ಶ್ರೀನಿವಾಸ್ ಖೇಳಗಿ ಸೇರಿದಂತೆ ಹಲವು ಹಿರಿಯ ಚಿಂತಕರು ಮತ್ತು ಹೋರಾಟಗಾರರು ಭಾಗವಹಿಸಲಿದ್ದಾರೆ ಎಂದು ತಿಳಿಸಿದ್ದಾರೆ.

ಖೋಖೋ ಕ್ರೀಡೆಯಲ್ಲಿ ರಾಷ್ಟ್ರ ಮಟ್ಟಕ್ಕೆ ಆಯ್ಕೆ

ಸುರಪುರ: ತಾಲೂಕಿನ ದೇವರಗೋನಾಲ ಗ್ರಾಮದ ಅಜಯಕುಮಾರ ವೆಂಕಟೇಶ ದಳವಾಯಿ, 14 ವರ್ಷದ ಬಾಲಕರ ಖೋ ಖೋ ಕ್ರೀಡೆಯಲ್ಲಿ ರಾಷ್ಟ್ರಮಟ್ಟಕ್ಕೆ

ಆಯ್ಕೆಯಾಗಿದ್ದಾನೆ. ಬೆಳಗಾವಿ ಜಿಲ್ಲೆಯ ಗೋಕಾಕ ತಾಲೂಕಿನ ನಾಗನೂರಿನ ಮಹಾ ಲಿಂಗೇಶ್ವರ ಶಿಕ್ಷಣ ಸಂಸ್ಥೆಯಲ್ಲಿ ಓದುತ್ತಿದ್ದು, ರಾಜಸ್ಥಾನದ ಕುರುಕ್ಷೇತ್ರದಲ್ಲಿ ನಡೆಯಲಿರುವ ರಾಷ್ಟ್ರಮಟ್ಟದ ಪಂದ್ಯಾವಳಿಯಲ್ಲಿ ಕರ್ನಾಟಕ ರಾಜ್ಯವನ್ನು ಪ್ರತಿನಿಧಿಸಲಿದ್ದಾನೆ. ವಿದ್ಯಾರ್ಥಿಯ ಸಾಧನೆಗೆ ಗ್ರಾಮಸ್ಥರು, ಪಾಲಕರು ಹರ್ಷ ವ್ಯಕ್ತಪಡಿಸಿದ್ದಾರೆ.

ಜಾತ್ರೆ: ಮದ್ಯಪಾನ, ಮಾರಾಟ ನಿಷೇಧ

ಯಾದಗಿರಿ: ಶಹಾಪೂರ ತಾಲೂನ ಶ್ರೀ ಸಂಗಮೇಶ್ವರ ಮತ್ತು ಬಲಭೀಮೇಶ್ವರ ಜಾತ್ರೆ ನಿಮಿತ್ಯ ಮದ್ಯಪಾನ ಮಾರಾಟ ನಿಷೇಧಾಜ್ಞೆ ಜಾರಿಗೊಳಿಸಿ ಆದೇಶವನ್ನು ಯಾದಗಿರಿ ಜಿಲ್ಲಾಧಿಕಾರಿ ಹರ್ಷಲ್ ಭೋಯರ್ ಹೊರಡಿಸಿದ್ದಾರೆ.ಈ ಜಾತ್ರೆಯ ಸಂದರ್ಭದಲ್ಲಿ ಯಾವುದೇ ತರಹದ ಅಹಿತಕರ ಘಟನೆಗಳು ನಡೆಯದಂತೆ ಕಾನೂನು ಸುವ್ಯವಸ್ಥೆ ಕಾಪಾಡುವ ದೃಷ್ಟಿಯಿಂದ ಮುನ್ನೆಚ್ಚರಿಕೆ ಕ್ರಮವಾಗಿ ಶಹಾಪೂರ ನಗರದ ವ್ಯಾಪ್ತಿಯಲ್ಲಿ ಮದ್ಯಪಾನ, ಮದ್ಯ ಮಾರಾಟ ನಿಷೇಧಾಜ್ಞೆ ಜಾರಿಗೊಳಿಸಿ ಆದೇಶಿಸಿದೆ. ಜ. 15 ರಂದು ಬೆಳಗ್ಗೆ 6 ಗಂಟೆಯಿಂದ 2026ರ ಜ 16ರ ಸಂಜೆ 6 ಗಂಟೆಯ ವರೆಗೆ ಎಲ್ಲ ವೈನ್ ಶಾಪ್, ಬಾರ್‌ಗಳನ್ನು ಸಗಟು ಮತ್ತು ಚಿಲ್ಲರೆ ಮದ್ಯ ಮಾರಾಟ ನಿಷೇಧಿಸಿ ಆದೇಶಿಸಿದೆ ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ವಿರಾಮ
ಪ್ರತಿ ಭಾನುವಾರ

{ ಆರ್. ಬಿ.ತಿಮ್ಮಾಪುರ } ಅಬಕಾರಿ ಸಚಿವ

ಸಿಎಂ ಬದಲಾವಣೆಗೆ ಕುರಿತಂತೆಯೇ ಯಾವ ಕ್ರಾಂತಿನೂ, ಬ್ರಾಂತಿನೂ ಇಲ್ಲ .ನಾನು ಸಿಎಲ್‌ಪಿ ನಾಯಕನೂ ಅಲ್ಲ. ಹೈಕಮಾಂಡ್ ನೂ ಅಲ್ಲ. ಸಿಎಂ ಇದ್ದವರೇ ಬಜೆಟ್ ಮಂಡಿಸುತ್ತಾರೆ. ಅದರಲ್ಲಿ ಯಾವುದೇ ಸಂಶಯವೇ ಬೇಡ. ಗ್ಯಾರಂಟಿ ಯೋಜನೆಗಳನ್ನು ಜಾರಿ ಮಾಡುವ ಮೂಲಕ ಜನಪರ ಸಿದ್ದರಾಮಯ್ಯ ಮುಖ್ಯಮಂತ್ರಿಯಾಗಿದ್ದಾರೆ.

ಮಕ್ಕಳಿಗೆ ಮೊಬೈಲ್ ನೀಡಬೇಡಿ, ಸಂಸ್ಕಾರಯುತ ಶಿಕ್ಷಣ ಕೊಡಿ: ಶಾಸಕ ಶರಣಗೌಡ ಕಂದಕೂರ ಕರೆ

ಸಂಗಮದ ಸಂಗಮೇಶ್ವರ ಜಾತ್ರಾ ಮಹೋತ್ಸವ

ಯಾದಗಿರಿ: ವಡಗೇರಾ ತಾಲೂಕಿನ ಸಂಗಮದ ಸಂಗಮೇಶ್ವರ ದೇವಸ್ಥಾನವು ಅತ್ಯಂತ ಐತಿಹಾಸಿಕ ದೇವಸ್ಥಾನವಾಗಿದ್ದು , ಇದರ ಅಭಿವೃದ್ಧಿಗೆ ಸರಕಾರ ಮುಂದಾಗಬೇಕು ಎಂದು ಗುರುಮಠಕಲ್ ಶಾಸಕ ಶರಣಗೌಡ ಕಂದಕೂರ ಒತ್ತಾಯಿಸಿದರು.

ವಡಗೇರಾ ತಾಲೂಕಿನ ಸುಕ್ಷೇತ್ರ ಕೃಷ್ಣವೇಣಿ ಭೀಮಾ ಸಂಗಮದ ಸಂಗಮೇಶ್ವರ ಜಾತ್ರಾ ಮಹೋತ್ಸವದ ಧರ್ಮಸಭೆ, ಹಾಗೂ ಮಹಿಳೆಯರಿಗೆ ಉಡಿ ತುಂಬುವ ಕಾರ್ಯಕ್ರಮ ಮತ್ತು ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿದ ಐವರು ಸಾಧಕರಿಗೆ ಹಮ್ಮಿಕೊಂಡಿದ್ದ ಸನ್ಮಾನ ಸಮಾರಂಭದ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು.

ಸಮಾಜಕ್ಕೆ ಮಠ ಮಂದಿರಗಳ ಕೊಡುಗೆ ಅಪಾರ ಧಾರ್ಮಿಕ ಕಾರ್ಯಕ್ರಮಗಳಲ್ಲಿ ಭಾಗವಹಿಸುವುದರಿಂದ ಮಾನಸಿಕ ನೆಮ್ಮದಿ ವೃದ್ಧಿ ಮಠ ಮಂದಿರ ಬೆಳವಣಿಗೆಗೆ ಭಕ್ತರ ಸಹಕಾರ ಅತ್ಯಂತ ಮುಖ್ಯವಾಗಿದೆ ಕರುಣೇಶ್ವರ ಶ್ರೀಗಳು ಸಂಗಮ ಕ್ಷೇತ್ರದ ಅಭಿವೃದ್ಧಿಗೆ ಹೆಚ್ಚಿನ ಒತ್ತು ನೀಡಿ ಇಲ್ಲಿ ಉತ್ತಮವಾದ ವಾತಾವರಣವನ್ನು ನಿರ್ಮಿಸಿದ್ದಾರೆ ಎಂದರು. ಮಹಿಳೆಯರನ್ನು

ವಡಗೇರಾ ತಾಲೂಕಿನ ಸುಕ್ಷೇತ್ರ ಕೃಷ್ಣವೇಣಿ ಭೀಮಾ ಸಂಗಮದ ಸಂಗಮೇಶ್ವರ ಜಾತ್ರಾ ಮಹೋತ್ಸವದ ಧರ್ಮಸಭೆ, ಹಾಗೂ ಮಹಿಳೆಯರಿಗೆ ಉಡಿ ತುಂಬುವ ಕಾರ್ಯಕ್ರಮ ನಡೆಯಿತು.

ಪ್ರತಿಯೊಬ್ಬರು ಭಾವನೆಯಿಂದ ಕಾಣಬೇಕು ಮಹಿಳೆಯರಿಗೆ ನಮ್ಮ ದೇಶದಲ್ಲಿ ತುಂಬಾ ಗೌರವ ಇದೆ ಎಂದರು ಸಿದ್ದಗಂಗಾ ಮಠದ ಶ್ರೀಗಳಿಗೂ ಮತ್ತು ಕರುಣೇಶ್ವರ ಶಿವಾಚಾರ್ಯ ಮಹಾಸ್ವಾಮಿಗಳಿಗೂ ಅವಿನಾಭಾವ ಸಂಬಂಧವಿದೆ ಸಂಗಮೇಶ್ವರ ದೇವಸ್ಥಾನದ ಅಭಿವೃದ್ಧಿಗೆ ನಾನು ಒಬ್ಬ ಸಾಮಾನ್ಯ ಭಕ್ತನಾಗಿ ಶ್ರಮಿಸುವುದರ ಜತೆಗೆ ದೇವಸ್ಥಾನದಲ್ಲಿ ಹಮ್ಮಿಕೊಳ್ಳುವ ಸಾಮಾಜಿಕ ಧಾರ್ಮಿಕ ಕಾರ್ಯಗಳಿಗೆ ಸದಾ ಕಾಲ

> **ಮಹಿಳೆಯರಿಗೆ ಉಡಿ ತುಂಬುವುದು ಮಹಿಳೆಯರಿಂದ ಹುಚ್ಚಾಗಿ ಎಳೆಸುವ ಕಾರ್ಯ ಮತ್ತು ವಿವಿಧ ಕ್ಷೇತ್ರದಲ್ಲಿ ಸಾಧನೆಗೈದ ಸಾಧಕರಿಗೆ ಸಂಗಮ ಸಿರಿ ಪ್ರಶಸ್ತಿ ಪ್ರದಾನದ ಹಮ್ಮಿಕೊಂಡಿರುವ ಶ್ರೀಗಳ ಕಾರ್ಯವು ಅತ್ಯಂತ ಅಮೂಲ್ಯವಾಗಿದೆ.**
> -ಮಹದೇವಿ ಬೇವಿನಾಳ ಮಠ, ರಾಜ್ಯ ರೈತ ಸಂಘದ ರಾಜ್ಯ ಉಪಾಧ್ಯಕ್ಷೆ

ಬೆಂಬಲವಾಗಿ ಶ್ರೀ ಕರುಣೇಶ್ವರ ಮಹಾಸ್ವಾಮಿಗಳ ಜತೆಗೆ ಇರುವುದಾಗಿ ಭರವಸೆ ನೀಡಿದರು. ಮಹಿಳೆಯರು ಮಕ್ಕಳಿಗೆ ಉತ್ತಮ ಶಿಕ್ಷಣ ಕೊಡಿಸುವುದರ ಜತೆಗೆ ಸಂಸ್ಕಾರ ನೀಡಬೇಕು ಮಕ್ಕಳ ಕೈಗೆ ಮೊಬೈಲ್ ನೀಡದಂತೆ ಸಲಹೆ ನೀಡಿದರು. ಕಾರ್ಯಕ್ರಮದಲ್ಲಿ ಶಿವರಾಜ್ ಪಾಟೀಲ್ ಗುರ್ಜಾಲ್ ರವರು ಪ್ರಾಸ್ತಾವಿಕವಾಗಿ ಮಾತನಾಡಿದರು.ಈ ಕಾರ್ಯಕ್ರಮದ ಸಾನಿಧ್ಯವನ್ನು ಕೃಷ್ಣವೇಣಿ ಭೀಮಾ ಸಂಗಮದ ಪರಮ ಶ್ರೀ ಕರುಣೇಶ್ವರ ಶಿವಾಚಾರ್ಯ ಮಹಾಸ್ವಾಮಿಗಳು ವಹಿಸಿ ಆಶೀರ್ವಚನ ನೀಡಿದರು. ಅಧ್ಯಕ್ಷತೆಯನ್ನು ಚಂದನಕೆರಾದ ಬನದರಾಚೊಟ್ಟೇಶ್ವರ ಶಿವಾಚಾರ್ಯ ಮಹಾಸ್ವಾಮಿಗಳು ವಹಿಸಿ ಕೊಂಡಿದ್ದರು.ಈ ವೇಳೆ ವಿವಿಧ ಕ್ಷೇತ್ರದಲ್ಲಿ ಸಾಧನೆಗೈದ ಸಾಧಕರಿಗೆ ಸಂಗಮ ಸಿರಿ ಪ್ರಶಸ್ತಿ ಪ್ರದಾನ ಮಾಡಲಾಯಿತು.

ಶಾಲಾ ಮಕ್ಕಳಿಂದ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳು ಜರುಗಿದವು.ಈ ಕಾರ್ಯಕ್ರಮದಲ್ಲಿ, ವೇದಮೂರ್ತಿ ವೀರಭದ್ರಯ್ಯ ಸ್ವಾಮಿ ದೇವಸುಗೂರ, ಶಿವರುದ್ರಯ್ಯ ಶಾಸ್ತ್ರಿಗಳು, ಬಸಯ್ಯಸ್ವಾಮಿ ಶಿವಪುರ, ಶಿವಯ್ಯ ಸ್ವಾಮಿ ಸಾತಕೇಡ, ಸಿದ್ದ ಬಸಯ್ಯಸ್ವಾಮಿ ಶಿವಪೂರ,ವಿಶ್ವನಾಥ್ ರೆಡ್ಡಿ ಗೊಂದೆಡಗಿ,ಬಸವಂತರಾಯ ಗೌಡ ಸೈದಾಪುರ,ಮಲ್ಲನಗೌಡ ಕೌಳುರ, ಮಲ್ಲಿಕಾರ್ಜುನ್ ಸತ್ಯಂಪೇಟೆ,ಮಲ್ಲಣ್ಣ ಐಕೂರ,ಮಲ್ಲಿಕಾರ್ಜುನ್ ಕರಿಕಳ್ಳಿ,ಬಾಶುಮಿಯಾ ನಾಯ್ಕೊಡಿ,ಚಂದ್ರುಗೌಡ ಸೈದಾಪುರ,ಪಂಪನಗೌಡ ಸಿರವಾರ ಮತ್ತು ಸಂಗಮೇಶ್ವರ ದೇವಸ್ಥಾನ ಸಮಿತಿಯ ಸದಸ್ಯರು ಹಾಗೂ ಸುತ್ತಮುತ್ತಲ ಗ್ರಾಮಸ್ಥರು ಮಹಿಳೆಯರು ಹಾಗೂ ಇನ್ನಿತರರು ಉಪಸ್ಥಿತರಿದ್ದರು. ಮಲ್ಲಿಕಾರ್ಜುನ್ ರೆಡ್ಡಿಗೌಡ ಬೆನಕನಳ್ಳಿ ಸ್ವಾಗತಿಸಿದರು.ಶಿಕ್ಷಕ ಮೌನೇಶ್ ವಿಶ್ವಕರ್ಮ ನಿರೂಪಿಸಿ. ವಂದಿಸಿದರು.

ತಾಲೂಕು ಸಾಹಿತ್ಯ ಸಮ್ಮೇಳನ ಫೆ.4ರಂದು

ಔರದ್: ಗುರುಪಾದಪ್ಪ ನಾಗಮಾರಪಳ್ಳಿ ಕಲ್ಯಾಣ ಮಂಟಪದಲ್ಲಿ ಫೆ. 4 ರಂದು ನಡೆಯುವ 7ನೇ ತಾಲೂಕು ಕನ್ನಡ ಸಾಹಿತ್ಯ ಸಮ್ಮೇಳನ ಅದ್ದೂರಿ ಆಚರಣೆಗಾಗಿ ವಿವಿಧ ಸಮಿತಿಗಳು ರಚಿಸಲಾಗಿದೆ ಎಂದು

ಕಸಾಪ ಅಧ್ಯಕ್ಷ ಬಾಲಾಜಿ ಅಮರವಾಡಿ ತಿಳಿಸಿದ್ದಾರೆ. ಪಟ್ಟಣದ ಕನ್ನಡ ಭವನದಲ್ಲಿ ನಡೆದ ಎರಡನೇ ಪೂರ್ವಭಾವಿ ಸಭೆಯಲ್ಲಿ ಸುದೀರ್ಘವಾಗಿ ಚರ್ಚಿಸಿ ವಿವಿಧ ಸಮಿತಿಗಳನ್ನು ರಚಿಸಲಾಗಿದೆ ಎಂದು ತಿಳಿಸಿದ್ದಾರೆ.

ಪ್ರಚಾರ ಸಮಿತಿ ಅಧ್ಯಕ್ಷರಾಗಿ ಪತ್ರಕರ್ತರ ಸಂಘದ ಅಧ್ಯಕ್ಷ ಶಿವಾನಂದ ಮೊಕ್ತೆದಾರ, ಆಹಾರ ಸಮಿತಿಗೆ ಮಹಾದೇವ ಘುಳೆ, ಅತಿಥಿ ಸತ್ಕಾರ ಸಮಿತಿಗೆ ವಿಶ್ವನಾಥ ಬಿರಾದಾರ, ಶಿಸ್ತು ಪಾಲನಾ ಸಮಿತಿ, ವೇದಿಕೆ ಸಮಿತಿಗೆ ಯಶವಂತರಾವ ಡೊಂಬಾಳೆ,ಸಂಘಟನಾ ಸಮಿತಿಗೆ ಸುನೀಲ ಮಿತ್ರ, ಹಣಕಾಸು ಸಮಿತಿಗೆ ಶಿವರಾಜ ಅಲ್ಮಾಜೆ. ಸಾಂಸ್ಕೃತಿಕ ಸಮಿತಿ ಡಾ.ಶಾಲಿವಾನ ಉದಗಿರೆ,ಸ್ಮರಣ ಸಂಚಿಕೆ ಸಮಿತಿ ಶಿವಲಿಂಗ ಹೇಡ,ಮೆರವಣಿಗೆ ಸಮಿತಿ ಸಂಜೀವ ಶೆಟಕಾರ, ನಗರ ಅಲಂಕಾರ ಸಮಿತಿಗೆ ರಾಜಕುಮಾರ ಎಡವೆ, ನೋಂದಣಿ ಸಮಿತಿಗೆ ಗೋವಿಂದರಾವ ಪಾಟೀಲ , ವೈದ್ಯಕೀಯ ಸಮಿತಿಗೆ ಡಾ.ಗಾಯತ್ರಿ, ಮಳಿಗೆ ಸಮಿತಿಗೆ ಗುರುನಾಥ ರೆಡ್ಡಿ,ಚಿತ್ರಕಲೆ ಸಮಿತಿ ಅನಿಲಕುಮಾರ ಕಟ್ಟೆ, ಮಹಿಳಾ ಸಮಿತಿಗೆ ಮಾರ್ತಮ್ಮ ಮಾಳಗೆ ಅವರನ್ನು ಅಧ್ಯಕ್ಷರನ್ನಾಗಿ ಆಯ್ಕೆ ಮಾಡಲಾಗಿದೆ.

ಈ ಸಂದರ್ಭದಲ್ಲಿ ಡಾ.ವೈಜಿನಾಥ ಬುಟ್ಟೆ, ಶಿವಾಜಿರಾವ ಪಾಟೀಲ, ಅಮೃತರಾವ ಬಿರಾದಾರ, ತುಳಸಿರಾಮ ಬೆಂದ್ರೆ, ಗುರುನಾಥ ದೇಶಮುಖ,ಬಸವರಾಜ ಶೆಟಕಾರ, ಶರಣಪ್ಪ ಪಾಟೀಲ, ವಿರೇಶ ಅಲ್ಮಾಜೆ,ಆನಂದ ದ್ಯಾಡೆ, ರತ್ನದೀಪ ಕಸ್ತೂರೆ,ಸಂಜೀವ ಬಿರಾದರ, ಕೈಲಾಸಪತಿ ಕೇದಾರ, ಪ್ರಕಾಶ ಭಂಗಾರೆ,ದತ್ತಾತ್ರಿ ಮಸ್ಕಲ, ರವಿ ಡೋಳೆ,ಬಾಲಾಜಿ ದಾಮಾ,ಮಾಧವ ಮಾಳಕಾರಿ , ಧನರಾಜ ಮಾನೆ,ಆನಂದ ಕಾಂಬಳೆ, ಆನಂದ ಪವಾರ, ಅಶೋಕ ಶೆಂಬೆಳ್ಳಿ, ಮಲ್ಲಿಕಾರ್ಜುನ ಟೆಕರಾಜ,ಮಹಾದೇವ ಶಿಂಧೆ, ಸಂದೀಪ ಪಾಟೀಲ ಸೇರಿದಂತೆ ಕನ್ನಡಪರ ಸಂಘಟನೆಗಳ ಪದಾಧಿಕಾರಿಗಳು ಉಪಸ್ಥಿತರಿದ್ದರು.

ಮೃತ ರೈತನ ಕುಟುಂಬಕ್ಕೆ ಪರಿಹಾರ ಧನ ಚೆಕ್

ಬೀದರ್: ತಾಲೂಕಿನ ಚಿಟ್ಟಾ ಗ್ರಾಮದ ರೈತ ಪ್ರಭುರಾವ ಅವರು ತಮ್ಮ ಜಮೀನಿನಲ್ಲಿ ಕೆಲಸ ನಿರ್ವಹಿಸುತ್ತಿದ್ದ ವೇಳೆ ಜಮೀನಿನಲ್ಲಿ ವಿದ್ಯುತ್ ತಂತಿ ಕಡಿದು ಬಿದ್ದ ಪರಿಣಾಮ ಸಂಭವಿಸಿದ ಅಘಾತದಿಂದ ಸ್ಥಳದಲ್ಲೇ ಮೃತಪಟ್ಟಿದ್ದರು.

ಈ ಘಟನೆ ಕುರಿತು ಬೀದರ್ ದಕ್ಷಿಣ ಕ್ಷೇತ್ರದ ಶಾಸಕ ಡಾ. ಶೈಲೇಂದ್ರ ಬೆಲ್ದಾಳೆ ಸಂತ್ರಸ್ತ ಕುಟುಂಬದ ಮನೆಗೆ ಭೇಟಿ ನೀಡಿ ಸಂತಾಪ ಸೂಚಿಸಿ, ಜೆಸ್ಕಾಂ ವತಿಯಿಂದ ಶೀಘ್ರ ಪರಿಹಾರ ಒದಗಿಸುವುದಾಗಿ ಭರವಸೆ ನೀಡಿದ್ದರು. ತಮ್ಮ ಭರವಸೆಯಂತೆ ಜೆಸ್ಕಾಂ ವತಿಯಿಂದ ಐದು ಲಕ್ಷ ಪರಿಹಾರ ಧನದ ಚೆಕ್ ಮೃತ ರೈತ ಪ್ರಭುರಾವ ಕುಟುಂಬಕ್ಕೆ ವಿತರಿಸಿದರು.

ಈ ಸಂದರ್ಭದಲ್ಲಿ ಮಾತನಾಡಿದ ಶಾಸಕರು ಈ ಪರಿಹಾರ ಧನವು ಸಂತ್ರಸ್ತ ಕುಟುಂಬದ ಸಂಕಷ್ಟದ ಸಮಯದಲ್ಲಿ ಸ್ವಲ್ಪ ಮಟ್ಟಿಗಾದರೂ



ಮೃತ ರೈತನ ಕುಟುಂಬಕ್ಕೆ ಪರಿಹಾರ ಧನದ ಚೆಕ್ ಶಾಸಕ ಶೈಲೇಂದ್ರ ಬೆಲ್ದಾಳೆ ವಿತರಣೆ ಮಾಡಿದರು.

ಆಸರೆಯಾಗಲಿ ಎಂಬ ಆಶಯವನ್ನು ವ್ಯಕ್ತಪಡಿಸಿದರು.

ಈ ಕಾರ್ಯಕ್ರಮದಲ್ಲಿ ಜೆಸ್ಕಾಂ ಅಧಿಕಾರಿಗಳಾದ ಪ್ರೇಮಕುಮಾರ, ಅಬ್ದುಲ್ ಸೈಯದ್, ಹಾಗೂ ಮುಖಂಡರಾದ ರಾಜಕುಮಾರ ಪಾಟೀಲ, ವಿದ್ಯಾಸಾಗರ ಸ್ವಾಮಿ, ಆನಂದ ಪಾಟೀಲ, ಶಿವಕುಮಾರ ಪಾಟೀಲ, ಶರಣು ಸ್ವಾಮಿ, ಶಿವಕುಮಾರ ಕೆ., ಶಿವರಾಜ ಪಾಟೀಲ, ಸೋಮು ಪಾಟೀಲ ಉಪಸ್ಥಿತರಿದ್ದರು.

ಡಾ. ಮನ್ಮಥ ಡೋಳೆಗೆ ಬಸವಾಭಿಮಾನಿಗಳಿಂದ ಸತ್ಕಾರ

ಬೀದರ್: ಜಿಲ್ಲೆಯ ಔರಾದ್ ಪಟ್ಟಣದಲ್ಲಿ ಫೆ. 4ರಂದು ನಡೆಯಲಿರುವ ಏಳನೇ ಕನ್ನಡ ಸಾಹಿತ್ಯ ಪರಿಷತ್ ಸಮ್ಮೇಳನದ ಸರ್ವಾಧ್ಯಕ್ಷರಾಗಿ ಆಯ್ಕೆಯಾಗಿರುವ ಸಾಹಿತಿ, ಚಿಂತಕ ಡಾ. ಮನ್ಮಥ ಡೋಳೆ ಅವರಿಗೆ ಡಾ. ಚನ್ನಬಸವ ಪಟ್ಟದ್ದೇವರು ಪತ್ತಿನ ಸಹಕಾರ ಬ್ಯಾಂಕ್ ನಲ್ಲಿ ಬಸವಾಭಿಮಾನಿಗಳಿಂದ ಸತ್ಕರಿಸಲಾಯಿತು.

ಬಸವಾಭಿಮಾನಿ ಸಂಘಟನೆಗಳ ವತಿಯಿಂದ ಆಯೋಜಿಸಿದ್ದ ಸತ್ಕಾರ ಸಮಾರಂಭದಲ್ಲಿ ಡಾ. ಡೋಳೆ ಅವರ ಕನ್ನಡ ಸಾಹಿತ್ಯ ಕ್ಷೇತ್ರದಲ್ಲಿನ ಸಾಧನೆ. ಬಸವ ತತ್ವಗಳ ಪ್ರಚಾರ ಹಾಗೂ ನಾಡು,ನುಡಿಗೆ ನೀಡಿರುವ ಅಮೂಲ್ಯ ಸೇವೆಯನ್ನು ಸ್ಮರಿಸಿ ಗೌರವಿಸಲಾಯಿತು. ಶಾಲು, ಪೇಟ, ಬಸವೇಶ್ವರರ ಭಾವಚಿತ್ರ ನೀಡಿ ಸನ್ಮಾನಿಸಲಾಯಿತು.

ಸನ್ಮಾನ ಸ್ವೀಕರಿಸಿ ಮಾತನಾಡಿದ ಡಾ. ಮನ್ಮಥ ಡೋಳೆ ಅವರು, ಕನ್ನಡ ಸಾಹಿತ್ಯ ಪರಿಷತ್ ಸಮ್ಮೇಳನವು ಕೇವಲ ಸಾಹಿತ್ಯಿಕ ವೇದಿಕೆಯಾಗದೆ, ಸಮಾಜ ಪರಿವರ್ತನೆಯ ಚಿಂತನೆಗಳನ್ನು ಜನಸಾಮಾನ್ಯರ ನಡುವೆ ತಲುಪಿಸುವ ಮಹತ್ವದ

ನಗರದಲ್ಲಿ ಕನ್ನಡ ಸಾಹಿತ್ಯ ಪರಿಷತ್ ಸಮ್ಮೇಳನದ ಸರ್ವಾಧ್ಯಕ್ಷರಾಗಿ ಆಯ್ಕೆಯಾಗಿರುವ ಡಾ. ಮನ್ಮಥ ಡೋಳೆಯವರನ್ನ ಸನ್ಮಾನಿಸಲಾಯಿತು.

ವೇದಿಕೆಯಾಗಬೇಕು ಎಂದರು.

ಸಮಾಜದ ಹಿರಿಯ ಮುಖಂಡರಾದ ರವಿಂದ್ರ ಮೀಸೆ, ಬಂಡೆಪ್ಪ ಕಂಟೆ, ಭಾರತೀಯ ಬಸವ ಬಳಗದ ಜಿಲ್ಲಾಧ್ಯಕ್ಷ ಡಾ. ಸಂಜೀವಕುಮಾರ ಜುಮ್ಮಾ, ಶರಣ ಸಾಹಿತ್ಯ ಪರಿಷತ್ ತಾಲೂಕು ಅಧ್ಯಕ್ಷ ಚಂದ್ರಕಾಂತ ನಿರ್ಮಳೆ, ರಾಷ್ಟ್ರೀಯ ಬಸವದಳದ ತಾಲೂಕು ಅಧ್ಯಕ್ಷ ಶಿವಶರಣಪ್ಪ ವಲ್ಲೇಪೂರೆ, ಧನರಾಜ ನಿಟ್ಟೂರೆ, ಪತ್ರಕರ್ತ ಸಂಘದ ಅಧ್ಯಕ್ಷ ಶಿವಾನಂದ ಮೊಕ್ತೆದಾರ್,ಶರಣಪ್ಪ ಚಿಟಮೇ, ಬಂಡೆಪ್ಪ ದ್ಯಾಡೆ, ರಜನಿಕಾಂತ್ ಮಲಗೆ, ಸತೀಶ್ ಗಂದಿಗಡೆ, ನಾಗನಾಥ ಪಾಟೀಲ್,

ಬಂಡೆಪ್ಪ ಡ್ಯಾಡೆ, ಶ್ರೀಕಾಂತ ಸ್ವಾಮಿ, ಸತೀಶ ಮೂಲಗೆ, ನೀಲಕಂಠ ಬಾವಗೆ, ಶರಣಪ್ಪ ನೌಬಾದೆ, ನಾಗನಾಥ ಶಂಕು, ಅಮರ ನಿಸ್ಪತೆ, ಸಂಜೀವ ವಲಾಂಡೆ, ವಾಮನ್ ಮಾನೆ, ಮಹೇಶ್, ಬಾಲಾಜಿ ವಲ್ಲೂರೆ ಸೇರಿದಂತೆ ನಾನಾ ಬಸವಾಭಿಮಾನಿ ಸಂಘಟನೆಗಳ ಪದಾಧಿಕಾರಿಗಳು, ಸಾಹಿತಿಗಳು, ಶಿಕ್ಷಕರು, ಕನ್ನಡ ಪರ ಹೋರಾಟಗಾರರು ಉಪಸ್ಥಿತರಿದ್ದರು.

ಆಡಳಿತ ನಿರ್ಲಕ್ಷ್ಯ: ಗೊಂದಲಕ್ಕೀಡಾದ ಪಲ್ಲಕ್ಕಿ ಉತ್ಸವ

ಶಹಾಪುರ: ಆರಾಧ್ಯ ದೈವ ದಿಗ್ಗಿ ಸಂಗಮೇಶ್ವರ ಮತ್ತು ಭೀಮರಾಯನ ಗುಡಿ ಬಲಭೀಮೇಶ್ವರ ಜೋಡು ಪಲ್ಲಕ್ಕಿ ಉತ್ಸವವು ಅದ್ದೂರಿಯ ಜತೆಗೆ ಸಮಯದಲ್ಲಿ ಗೊಂದಲಕ್ಕೀಡಾಗಿದ್ದರಿಂದ ಭಕ್ತರು ತಾಲೂಕಾಡಳಿತ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು.

ಸಗರನಾಡಿನ ಜೋಡು ಪಲ್ಲಕ್ಕಿ ಉತ್ಸವವು ಶತ ಶತಮಾನಗಳಿಂದ ತನ್ನ ವೈಶಿಷ್ಟ ಉಳಿಸಿಕೊಂಡು ಬಂದಿದ್ದು. ತಾಲೂಕಾಡಳಿತವು ಜೋಡು ಪಲ್ಲಕ್ಕಿ ಉತ್ಸವವು ಜ.15 ರಂದು ಬೆಳಗ್ಗಿನ ಜಾವ 6.15 ನಿಮಿಷ್ಯಕ್ಕೆ ಶ್ರೀಬಲಭೀಮೇಶ್ವರ ದೇವಸ್ಥಾನದ ಪಲ್ಲಕ್ಕಿ ಹೊರಡಲಿದೆ ಎಂದು ತಾಲೂಕಾಡಳಿತ ಹೇಳಿಕೆ ನೀಡಿತ್ತು.

ಆದರೆ ಬೆಳಗ್ಗೆ 5 ಗಂಟೆಯೊಳಗಾಗಿ ಪಲ್ಲಕ್ಕಿಗಳು ನಗರದಿಂದ ದಾಟಿದ್ದವು. ಇದರಿಂದ ಭಕ್ತರು ಕೆಲ ಕಾಲ ಗೊಂದಲಕ್ಕೀಡಾಗಿ ದ್ದಲ್ಲದೇ ಆಕ್ರೋಶಕ್ಕೂ ಕಾರಣವಾಯಿತು.

ಪಂಜಿನ ಮೆರವಣಿಗೆ:

ಸಗರನಾಡಿನ ಸಂಕ್ರಾತಿಯ ಮತ್ತೊಂ ದು ವೈಶಿಷ್ಟವೇ ಪಂಜಿನ ಮೆರವಣಿಗೆ, ಭೀಮಾತೀರದಲ್ಲಿ ಗಂಗಾಸ್ನಾನ ಮುಗಿಸಿ ಕೊಂಡು ದೇವರುಗಳ ಪಲ್ಲಕ್ಕಿಗಳು ರಾತ್ರಿ

ಆರಾಧ್ಯ ದೈವ ದಿಗ್ಗಿ ಸಂಗಮೇಶ್ವರ ಮತ್ತು ಭೀಮರಾಯನಗುಡಿ ಬಲಭೀಮೇಶ್ವರ ಜೋಡು ಪಲ್ಲಕ್ಕಿ ಉತ್ಸವವು ಅದ್ದೂರಿಯ ಜತೆಗೆ ಸಮಯದಲ್ಲಿ ಗೊಂದಲಕ್ಕೀಡಾಗಿದ್ದರಿಂದ ಭಕ್ತರು ತಾಲೂಕಾಡಳಿತ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು.

> **ಸಮಯದಲ್ಲಿ ಗೊಂದಲ, ತಾಲೂಕಾಡಳಿತದ ಬೇಜವಾಬ್ದಾರಿಯಿಂದ ಭಕ್ತರ ಆಕ್ರೋಶ**
> **ಪ್ರತಿವರ್ಷದಂತೆ ಈ ಬಾರಿಯೂ ಜೋಡು ಪಲ್ಲಕ್ಕಿಗಳ ಉತ್ಸವ ಅದ್ದೂರಿಯಾಗಿ ನಡೆದವು. ಆದರೆ ಸಮಯಗಳಲ್ಲಿ ಬದಲಾವಣೆಯಾಗಿದ್ದರಿಂದ ಭಕ್ತರಲ್ಲಿ ಬೆಳಗಿನ ಜಾವ ನಿರಾಸೆ ಮೂಡಿದ್ದು, ಭಕ್ತರಿಂದ ಪಲ್ಲಕ್ಕಿಗಳ ಹುಡುಕಾಟ ನಡೆಯಿತು. ಈ ಬಗ್ಗೆ ತಾಲೂಕಾಡಳಿತ ಮೊದಲೇ ತಿಳಿಸಬೇಕಿತ್ತು ಎಂದು ಕೇಲವರು ಅಭಿಪ್ರಾಯ ವ್ಯಕ್ತಪಡಿಸಿದರೆ, ಇನ್ನೂ 7 ಗಂಟೆಗೆ ನಗರದಲ್ಲಿ ಇರಲಿದ್ದ ಎರಡು ಪಲ್ಲಕ್ಕಿಗಳು, ನಸುಕಿನ ಜಾವ 5 ಗಂಟೆಯೊಳಗೆ ನಗರದಿಂದ ಹೊರಟಿದ್ದರಿಂದ, ಭಕ್ತರ ಆಕ್ರೋಶಕ್ಕೆ ಕಾರಣವಾಯಿತು.**

9ಗಂಟೆಗೆ ನಗರ ಪ್ರವೇಶಿಸಿದವು.

ಆಗಾ ಪಲ್ಲಕ್ಕಿಗಳನ್ನು ಸಾಲು ಸಾಲು ಪಂಜಿನ ಮೆರವಣಿಗೆಯಲ್ಲಿ ನಡೆಸಲಾಯಿತು.

ತಿಂಥಣಿ: ಮೌನೇಶ್ವರ ದರ್ಶನ ಪಡೆದ ಭಕ್ತರು

ಸುರಪುರ: ಮಕರ ಸಂಕ್ರಾಂತಿ ಹಬ್ಬದ ಹಿನ್ನೆಲೆಯಲ್ಲಿ ತಾಲೂಕಿನ ದಕ್ಷಿಣಕಾಶಿಯ ಸುಪ್ರಸಿದ್ಧ ತಿಂಥಣಿ ಮೌನೇಶ್ವರ ದೇಗುಲ ಸಮೀಪದ ಕೃಷ್ಣಾ ನದಿಯಲ್ಲಿ ಸಹಸ್ರಾರು ಭಕ್ತರು ಪುಣ್ಯಸ್ನಾನ ಮಾಡಿ ಹರಿಕೆ ತೀರಿಸಿ ಭಕ್ತಿ ಮೆರೆದರು.

ಬೆಳಗ್ಗೆಯಿಂದಲೇ ನದಿತೀರಕ್ಕೆ ಆಗಮಿಸಿದ ಅಸಂಖ್ಯ ಭಕ್ತರು, ನೀರಿನಲ್ಲಿ ಮಿಂದೆದ್ದು, ಮೌನೇಶ್ವರ ಸ್ವಾಮಿಗೆ ವಿಶೇಷ ಪೂಜೆ ಹಾಗೂ ಅರ್ಘ್ಯ ಸಮರ್ಪಿಸಿದರು. ಮಧ್ಯಾಹ್ನ 4 ಗಂಟೆಯವರೆಗೂ ಜನಜಂಗುಳಿ ಕಂಡುಬಂದಿದ್ದು, ಹಬ್ಬದ ವಾತಾವರಣ ನಿರ್ಮಾಣವಾಗಿತ್ತು. ಕೃಷ್ಣಾ ನದಿಯಲ್ಲಿ ಸ್ನಾನ ಮಾಡುವ ವೇಳೆ ಉಂಟಾಗಬಹುದಾದ ಅಪಾಯಗಳನ್ನು ತಡೆಗಟ್ಟಲು ಮುನ್ನೆಚ್ಚರಿಕಾ ಕ್ರಮವಾಗಿ ಹೆಚ್ಚಿನ ಪೊಲೀಸ್ ಸಿಬ್ಬಂದಿಯನ್ನು ನಿಯೋಜಿಸಲಾಗಿತ್ತು. ಕೃಷ್ಣೆಯಲ್ಲಿ ಮಿಂದೆದ್ದು, ತಿಂಥಣಿ ಮೌನೇಶ್ವರ ದೇಗುಲದಲ್ಲಿ ಭಕ್ತರ ದಂಡು ಹರಿದುಬಂದಿತ್ತು. ಹೊರ ಜಿಲ್ಲೆಗಳಿಂದ ಆಗಮಿಸಿದ್ದ ನೂರಾರು ಭಕ್ತರು ಸ್ವಾಮಿಯ ದರ್ಶನ ಪಡೆದರು.

ದೇವಸ್ಥಾನದ ಮುಂಭಾಗದಲ್ಲಿ ಸರತಿ ಸಾಲು ಕಂಡುಬಂದಿದ್ದು, ಭಕ್ತರು ಇಷ್ಟಾರ್ಥ ಸಿದ್ಧಿಗಾಗಿ ಪ್ರಾರ್ಥಿಸಿದರು.

ತಿಂಥಣಿ ಮೌನೇಶ್ವರ ಸ್ವಾಮಿ ದರ್ಶನ ಪಡೆದ ಜನತೆ

> **ನದಿಗಳಲ್ಲಿ ಸ್ನಾನ ಮಾಡುವುದರಿಂದ ಎಲ್ಲ ಪಾಪಗಳು ತೊಳೆದುಹೋಗುತ್ತವೆ. ಶುಭಫಲಗಳು ಪ್ರಾಪ್ತಿಯಾಗುತ್ತವೆ. ಮಕರ ಸಂಕ್ರಾಂತಿ ನಿಮಿತ್ತ ಸಾರ್ವಜನಿಕರು ನದಿಗಳಲ್ಲಿ ಪುಣ್ಯ ಸ್ನಾನ ನೆರವೇರಿಸಿ ದೇವರ ದರ್ಶನ ಪಡೆಯುವುದು ವಾಡಿಕೆ.**
> -ಮೌನೇಶ ಬೋವಿ, ತಿಂಥಣಿ ದೇಗುಲದ ಟ್ರಸ್ಟಿ ಮಾಜಿ ಸದಸ್ಯ

> **ಮಕರ ಸಂಕ್ರಾಂತಿಯಂದು ನದಿಗಳಲ್ಲಿ ಪುಣ್ಯಸ್ನಾನ ಮಾಡುವುದು ಹಿಂದೂ ಸಂಪ್ರದಾಯವಾಗಿದೆ. ಇದು ಸೂರ್ಯನ ಉತ್ತರಾಯಣ ಪಥ ಬದಲಾವಣೆಯ ಶುಭದಿನದಂದು ಪವಿತ್ರ ನದಿಗಳಾದ ಕೃಷ್ಣೆ, ಭೀಮಾ, ತುಂಗಾಭದ್ರಾ , ಡೋಣಿ ಇತ್ಯಾದಿ ನದಿಗಳಲ್ಲಿ ಸ್ನಾನ ಪುಣ್ಯ ಲಭಿಸುತ್ತದೆ ಎಂಬ ನಂಬಿಕೆಯಿದೆ.**
> -ರತ್ನರಾಜ್, ತಿಂಥಣಿ ಗ್ರಾಪಂ ಅಧ್ಯಕ್ಷ

ಶರಣರ ವಚನ ಸಾಹಿತ್ಯದಲ್ಲಿ ಮೌಲ್ಯಗಳ ಪ್ರತಿಪಾದನೆ

ಕೆಂಭಾವಿ: ಬಸವಾದಿ ಶರಣರ ವಚನ ಪರಂಪರೆಯನ್ನು ಮುಂದುವರಿಸುತ್ತಿರುವ ಆಧುನಿಕ ವಚನಕಾರರು ತಮ್ಮ ವಚನಗಳ ಮೂಲಕ ಸಮಕಾಲೀನ ಸಮಸ್ಯೆಗಳ ಮೇಲೆ ಬೆಳಕು ಚಲ್ಲುವಂತ ರಚನೆಗಳನ್ನು ನೀಡುತ್ತಿದ್ದಾರೆ ಎಂದು ವಿಮರ್ಶಕ ಸಾಹಿತಿ ಶರಣಬಸಯ್ಯ ಹಿರೇಮಠ ಹೇಳಿದರು.

ಅರಳು ಮಲ್ಲಿಗೆ ಸಾಹಿತ್ಯ ವೇದಿಕೆ ರಾಜ್ಯ ಘಟಕ ಹೂವಿನಹಡಗಲಿ ಸಹಯೋಗದಲ್ಲಿ ಆನ್ ಲೈನ್ ನಲ್ಲಿ ಹಮ್ಮಿಕೊಂಡ ರಾಜ್ಯ ಮಟ್ಟದ ಆಧುನಿಕ ವಚನ ಗೋಷ್ಠಿ ಹಾಗೂ ವಚನ ವಿಮರ್ಶೆ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿದ ಅವರು ಅಲ್ಲಮ, ಅಕ್ಕ, ದಾಸಿಮಾರ್ಯ,ಭೋಗಣ್ಣ ಹೀಗೆ ಬಸವಾದಿ ಪ್ರಮಥರಿಂದ ಮೂಡಿಬಂದ ಶರಣ ಸಾಹಿತ್ಯ ಕನ್ನಡ ಸಾರಸ್ವತಕ್ಕೆ ಬಹುದೊಡ್ಡ ಕೊಡುಗೆ ನೀಡಿದೆ ಎಂದರು.

ವಚನ ಸಾಹಿತಿ ವೀರಣ್ಣ ಕಲಕೇರಿ ಮಾತನಾಡಿ ಸಾಹಿತ್ಯ ನಿತ್ಯ ಹರಿಯುವ ಗಂಗೆ ಕನ್ನಡ ಸಾಹಿತ್ಯ ಕ್ಷೇತ್ರದಲ್ಲಿ ವಚನ ಸಾಹಿತ್ಯ ಬಹು ವೈಶಿಷ್ಟ್ಯಪೂರ್ಣ. ಸಂಸ್ಕೃತಿ, ನೀತಿ, ಮತ್ತು ಆಧುನಿಕ ಜೀವನದ ಸಮಸ್ಯೆಗಳು ಸೇರಿದಂತೆ ಮೌಲ್ಯಗಳ ಪ್ರತಿಪಾಧನೆಯಲ್ಲಿ ಅಭಿವ್ಯಕ್ತಿಯನ್ನು ಹೆಚ್ಚಿಸಿದ ಶರಣ ಸಾಹಿತ್ಯ, ಆಧುನಿಕ ವಚನ ಬರಹಗಾರರಿಂದ ಸಮಾಜವನ್ನು ತಿದ್ದುವ ಮತ್ತು ಜಾಗೃತಿ ಮೂಡಿಸುವ ನಿಟ್ಟಿನಲ್ಲಿ ರಚನೆಗಳು ಹೆಚ್ಚು ಹೆಚ್ಚು ಮೂಡಿ ಬರುತ್ತಿರುವುದು ಸಂತಸದಾಯಕ ಎಂದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ ಅರಳು ಮಲ್ಲಿಗೆ ವೇದಿಕೆಯ ಸಂಸ್ಥಾಪಕ ಎಂ.ಪಿ.ಎಮ್ ಕೊಟ್ರಯ್ಯನವರು ಮಾತನಾಡಿ ನಮ್ಮ ಅರಳು ಮಲ್ಲಿಗೆ ತಂಡದ ಸಹಕಾರದಲ್ಲಿ ವೇದಿಕೆ ಮೂಲಕ ಯುವ ಬರಹಗಾರರಿಗೆ ಅನುಕೂಲವಾಗಲಿ ಎಂಬ ಉದ್ದೇಶದಿಂದ ನಾಡಿನ ಹಿರಿಯ ಬರಹಗಾರರು, ಲೇಖಕರು, ಉಪನ್ಯಾಸಕರನ್ನೊಳಗೊಂಡಂತೆ ನಿರಂತರ ಸಾಹಿತ್ಯೀಕ ಚಟುವಟಿಕೆಗಳು ಹಾಗೂ ರಚನಾ ಕಾರ್ಯಗಾರ ನಡೆಯುತ್ತಿದ್ದು ನಾವು ನಿವೆಲ್ಲರೂ ಸದುಪಯೋಗಪಡಿಸಿಕೊಳ್ಳಬೇಕು ಎಂದರು.

ಮದ್ರಾಸ್ ವಿಶ್ವವಿದ್ಯಾಲಯದ ಆಧುನಿಕ ವಚನ ಸಂಶೋಧನಾರ್ಥಿ ಹೇಮಾ ಎನ್. ಆಧುನಿಕ ವಚನ ಸಾಹಿತ್ಯ ಕುರಿತು ಪ್ರಾಸ್ತಾವಿಕ ಮಾತನಾಡಿದರು. ವಾಚನ ಮಾಡಿದ ವಚನಗಳಲ್ಲಿ ಅತ್ಯುತ್ತಮ, ಉತ್ತಮ ಮತ್ತು ಮೆಚ್ಚುಗೆಯ ವಚನಗಳನ್ನು ಆಯ್ಕೆ ಮಾಡುವ ಮೂಲಕ ಪ್ರಮಾಣಪತ್ರ ನೀಡಲಾಯಿತು.

ವೀರುಪಾಕ್ಷೇಶ್ವರ ಜಾತ್ರಾ ಮಹೋತ್ಸವ ಜ.19 ರಿಂದ

ಭಾಲ್ಕಿ: ಮೇಹಕರ ಗ್ರಾಮದಲ್ಲಿ ಜ.19 ರಿಂದ ಫೆ.1 ರ ವರೆಗೆ ಶ್ರೀ ಗುರು ವೀರುಪಾಕ್ಷೇಶ್ವರ ಜಾತ್ರಾ ಮಹೋತ್ಸವ ಜರುಗಲಿದೆ ಎಂದು ಪೀಠಾಧಿಪತಿ ರಾಜೇಶ್ವರ ಶಿವಾಚಾರ್ಯರು ತಿಳಿಸಿದ್ದಾರೆ. ರಂಭಾಪುರಿ

ಜಗದ್ಗುರುಗಳ ಸಾನಿಧ್ಯದಲ್ಲಿ ಇಷ್ಟಲಿಂಗ ಮಹಾಪೂಜೆ ಹಾಗೂ ಧರ್ಮ ಸಭೆ ಕಾರ್ಯಕ್ರಮಗಳು ನಡೆಯಲಿವೆ.

ಜ. 21 ರಂದು ರಂಭಾಪುರಿ ಜಗದ್ಗುರುಗಳ 35 ನೇ ವರ್ಷದ ಪೀಠಾರೋಹಣ ವರ್ಧಂತಿ ಮಹೋತ್ಸವವನ್ನು ಆಚರಿಸಲಾಗುತ್ತದೆ. ಜ22 ರಿಂದ ಮಹಾರುದ್ರಾಭಿಷೇಕ ಹಾಗೂ ಜಪಯಜ್ಞ ಕಾರ್ಯಕ್ರಮಗಳು ನಡೆಯಲಿದ್ದು, ಫೆ.1 ರಂದು ಶ್ರೀ ಗುರು ವೀರುಪಾಕ್ಷೇಶ್ವರ ದೇವರ ಅದ್ದೂರಿಯಲಿದೆ. ಈ ಐತಿಹಾಸಿಕ ಜಾತ್ರಾ ಮಹೋತ್ಸವದಲ್ಲಿ ರಾಜ್ಯದ ವಿವಿಧ ಭಾಗಗಳಿಂದ ಭಕ್ತಾದಿಗಳು ಭಾಗವಹಿಸುವ ನಿರೀಕ್ಷೆಯಿದೆ.

ರಂಭಾಪುರಿ ಜಗದ್ಗುರುಗಳು ವೀರಶೈವ ಧರ್ಮದ ಆಧ್ಯಾತ್ಮಿಕ ದಿಕ್ಕುದೀಪರಾಗಿದ್ದಾರೆ. ಮೇಹಕರ ಗ್ರಾಮದ ಶ್ರೀ ಗುರು ವೀರುಪಾಕ್ಷೇಶ್ವರ ಜಾತ್ರಾ ಮಹೋತ್ಸವವು ಭಕ್ತಿ, ಶಿಸ್ತು ಮತ್ತು ಮಾನವೀಯ ಮೌಲ್ಯಗಳನ್ನು ಜೀವನದಲ್ಲಿ ಅಳವಡಿಸಿಕೊಳ್ಳುವ ಮಹತ್ವದ ಜಾತ್ರೆಯಾಗಿದ್ದು ಭಕ್ತರು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಂಡು ಪುನೀತರಾಗಬೇಕು ಎಂದು ಪ್ರಕಟಣೆಯಲ್ಲಿ ಮನವಿ ಮಾಡಿದ್ದಾರೆ.

ಶ್ರೀ ಸಿದ್ಧರಾಮನಂದಪುರಿ ಶ್ರೀಗಳ ಲಿಂಗೈಕ್ಯ: ನಾಡಿಗೆ ನಷ್ಟ

ಶಹಾಪುರ: ಧಾರ್ಮಿಕ ಕಾರ್ಯಗಳ ಜತೆಗೆ ಸಮಾಜದ ಏಳಿಗೆಯ ಬಗ್ಗೆ ಅಪಾರ ಕಾಳಜಿ ಶ್ರದ್ಧೆ ಹೊಂದಿದ್ದ ಶ್ರೀ ಕಾಗಿನೆಲೆ ಮಹಾಸಂಸ್ಥಾನ ಕನಕಗುರು ಪೀಠ ಶಾಖಾ ಮಠ ತಿಂಥಣಿ ಬ್ರಿಡ್ಜ್ ಕಲಬುರಗಿ ವಿಭಾಗೀಯ ಪೀಠದ ಶ್ರೀ ಸಿದ್ಧರಾಮನಂದಪುರಿ ಮಹಾಸ್ವಾಮಿಗಳು(49) ದೈವಾಧೀನರಾಗಿದ್ದು ಅಗಲಿಕೆ ನಾಡಿಗೆ ತುಂಬಲಾರದ ನಷ್ಟವಾಗಿದ್ದು, ಹಾಲುಮತದವರು ಅನಾಥರಾದಂತಾಗಿದೆ ಎಂದು ಕುರುಬ ಸಮಾಜದ ಹಿರಿಯರಾದ ಗಿರೆಪ್ಪಗೌಡ ಬಾಣತಿಹಾಳ ಕಂಬನಿ ಮಿಡಿದರು.

ನಗರದ ಕನಕನಗರ ಬಡಾವಣೆಯಲ್ಲಿ ಭಾವಪೂರ್ಣ ಶ್ರದ್ಧಾಂಜಲಿ ಸಲ್ಲಿಸಿ ಮಾತನಾಡಿ ಶ್ರೀಗಳ ಅಗಲಿಕೆಯಿಂದ ಸಮಾಜವು ಒಬ್ಬ ಸಮರ್ಥ ಮಾರ್ಗದರ್ಶಕರನ್ನು ಕಳೆದುಕೊಂ ಡಂತಾಗಿದೆ. ಕುರುಬ ಸಮಾಜವನ್ನು ಎಸ್.ಟಿಯಲ್ಲಿ ಸೇರಿಸಬೇಕು ಎನ್ನುವ ಉದ್ದೇಶದ ಜತೆಗೆ ಆಶೆಯನ್ನು ಹೊಂದಿದ್ದರು, ಆದರೆ ವಿಧಿಯ ಆಡವೇ ಬೇರೆಯಾಗಿದೆ.

ಸಾಹಿತ್ಯ-ಸಮಾಜ-ಸಂಸ್ಕೃತಿಯ ಮಹಾ ಪೋಷಕರಾಗಿ ಸಮಾಜ ಜಾಗೃತಿ ಕಾರ್ಯದಲ್ಲಿ ಅವಿರತವಾಗಿ ತೊಡಗಿಸಿ ಕೊಂಡಿದ್ದರು. ಹಾಲುಮತ ಸಂಸ್ಕೃತಿ ವೈಭವದ ಮೂಲಕ ಸಮಾಜದಲ್ಲಿ ಜಾಗೃತಿ,

ನಗರದ ಕನಕನಗರ ಬಡಾವಣೆಯಲ್ಲಿ ಭಾವಪೂರ್ಣ ಶ್ರದ್ಧಾಂಜಲಿ ಸಲ್ಲಿಸಿಸಲಾಯಿತು.

ಹಾಲುಮತ ಸಂಸ್ಕೃತಿ ಕುರಿತು ವಿಚಾರ ಸಂಕಿರಣ, ಪುಸ್ತಕ ಪ್ರಕಟಣೆ ಕಲೆಗಳ ಪ್ರದರ್ಶನ, ಸಂಪ್ರಾದಾಯಕ ಪರಂಪರೆಯನ್ನು ಮತ್ತು ಅನೇಕ ಸಾಧಕರಿನ್ನು ನಾಡಿಗೆ ಪರಿಚಂಯಿಸಿ, ಆಶೀರ್ವಾದ ನೀಡುವುದರೊಂದಿಗೆ ವಿಶಿಷ್ಠ ಕಾರ್ಯಕ್ರಮ ಮಾಡುತ್ತಿದ್ದರು, ಉಚಿತ ದಾಸೋಹ, ಸಾಮೂಹಿಕ ವಿವಾಹ, ಆರೋಗ್ಯ ಶಿಬಿರ, ಸಮಾಜ ಸೇವೆ ಸೇರಿದಂತೆ ಅನೇಕ ಕಾರ್ಯಗಳನ್ನು ಮಾಡಿದ್ದಾರೆ.

ಕೇವಲ ಒಂದು ಸಮುದಾಯಕ್ಕೆ ಮಾತ್ರ ಸೀಮಿತವಾಗಿರದೇ ಸರ್ವ ಜನಾಂಗದ ಹಿತ ಭಯಸುವ ಸಂತರಾಗಿದ್ದರು ಎಂದು ಶ್ರೀಗಳ ಜತೆಗೆ ಕಳೆದ ಕ್ಷಣಗಳನ್ನು ಸ್ಮರಿಸಿ ದುಃಖವನ್ನು ವ್ಯಕ್ತಪಡಿಸಿದರು.

ಈ ಸಂದರ್ಭದಲ್ಲಿ ಕುರುಬ ಸಮಾಜದ ತಾಲೂಕ ಅಧ್ಯಕ್ಷ ಯಲ್ಲಪ್ಪ ನರಿ, ಅಯ್ಯಣ್ಣ ಇನಾಂದಾರ, ಶೇಖರ ದೊರಿ, ಗೌಡಪ್ಪಗೌಡ ಶಖಾಪುರ, ಸಿದ್ಧಣಗೌಡ ಶಖಾಪುರ, ಮಲ್ಲಿಕಾರ್ಜುನ ಕಂದಕೂರ, ಯಮನಪ್ಪ ಅಗಸ್ಥಾಳ, ಮಾಳಿಂಗರಾಯ ಮಂಡಗಳ್ಳಿ, ಪರ್ವತರೆಡ್ಡಿ ಸೈದಾಪುರ, ಅಶೋಕ ದಿನ್ನಿ, ರಾಯಪ್ಪ ಚಲುವಾದಿ, ಗುರುರಾಜ ಸಗರ, ಗೌತಮ ಸಲಾದಪುರ, ನಿಂಗಣ್ಣ ವಕೀಲರು ಬಾಣತಿಹಾಳ, ಮಲ್ಲಣ್ಣ ಕಂದಕೂರ, ಮಹೇಶ ರಸ್ತಾಪುರ, ಎಮ್.ಜಿ ದೇಸಾಯಿ, ಧರ್ಮಣಗೌಡ, ಸಿದ್ದಣ್ಣ ದಿಗ್ಗಿ, ನಿಜಗುಣಪ್ಪ, ಭೀಮರಾಯ ಉಲ್ಲೂರ, ಮುನಿಯಪ್ಪಗೌಡ, ಬೀರಪ್ಪ ರಾಂಪೂರ, ನಿಂಗಣ್ಣ ಹಬ್ಬಳ್ಳಿ, ಸಾಯಿಬಣ್ಣ ಪುರ್ಲೆ,ಶರಣು, ಬಲಭೀಮ ಮಡ್ನಾಳ, ವಿಶ್ವರಾಧ್ಯ, ಮರ್ಧನಿ ಸೇರಿದಂತೆ ಬಡಾವಣೆ ಜನತೆ ಇದ್ದರು.

> **ಶ್ರೀಗಳ ಸಾಮಾಜಿಕ ಶೈಕ್ಷಣೀಕ ಮತ್ತು ಆಧ್ಯಾತ್ಮಿಕ ಸೇವೆಗಳನ್ನು ಸ್ಮರಿಸಿದರು. ಅಗಲಿಕೆ ಭಕ್ತಗಣಕ್ಕೆ ಅಪಾರ ನಷ್ಟ ಉಂಟು ಮಾಡಿದೆ. ತಮ್ಮ ಜೀವನವನ್ನೇ ಸಾಮಾಜಿಕ ಮತ್ತು ಆಧ್ಯಾತ್ಮಿಕ ಸೇವಾ ಚಟುವಟಿಕೆಗಳ ವಿಸ್ತರಣೆಗೆ ಮುಡಿಪಾಗಿಟ್ಟದ್ದರು. ಅವರ ಮಾರ್ಗದರ್ಶನವು ಅವರ ಅನುಯಾಯಿಗಳಿಗೆ , ಭಕ್ತರಿಗೆ ಮುಟ್ಟಿದ್ದು, ಇದು ಭಕ್ತಿ ಪ್ರತೀತಿ ಮತ್ತು ಮಾನವೀಯ ಹಾದಿಯಲ್ಲಿ ನಡೆಯಲು ಪ್ರೇರೆಪಿಸಿದೆ. ಹಾಲುಮತ ಸಮಾಜದ ಏಳ್ಗೆಗಾಗಿ ಅವಿಶ್ರಾಂತವಾಗಿ ಶ್ರಮಿಸಿದ್ದಾರೆ.**
> -ವಿಠಲ್ ವಗ್ಗಿ, ಸಮಾಜದ ಹಿರಿಯ

ಸಮಾಚಾರ ಸಣ್ಣದಲ್ಲ

ಅರ್ಜಿ ಆಹ್ವಾನ

ಕಾರವಾರ: ಉತ್ತರ ಕನ್ನಡ ಜಿಲ್ಲೆಯ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯ ಅಡಿಯಲ್ಲಿ ಕಾರ್ಯ ನಿರ್ವಹಿಸುತ್ತಿರುವ ದಾಂಡೇಲಿ ತಾಲೂಕಿನ ಎ.ಪಿ.ಜೆ ಅಬ್ದುಲ್ ಕಲಾಂ ವಸತಿ ಶಾಲೆ (ಸಿ.ಬಿ.ಎಸ್.ಇ) ಮತ್ತು ಮುಂಡಗೋಡ ತಾಲೂಕಿನ ಪಾಳಾ ಗ್ರಾಮದ ಅಲ್ಪಸಂಖ್ಯಾತರ ಮೊರಾರ್ಜಿ ದೇಸಾಯಿ ವಸತಿ ಶಾಲೆಗೆ 2026-27ನೇ ಶೈಕ್ಷಣಿಕ ವರ್ಷಕ್ಕೆ 6ನೇ ತರಗತಿ ಪ್ರವೇಶಕ್ಕೆ ಆನ್ಲೈನ್ ಲೈನ್ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

ವಿದ್ಯಾರ್ಥಿಯು 5ನೇ ತರಗತಿಯಲ್ಲಿ ವ್ಯಾಸಂಗ ಮಾಡುತ್ತಿರಬೇಕು/ಉತ್ತೀರ್ಣರಾಗಿರಬೇಕು. ದಾಖಲಾತಿಗಳ ಪರಿಶೀಲನೆಯ ಸಂದರ್ಭದಲ್ಲಿ ಅಂಕ ಪಟ್ಟಿ ಹೊಂದಿರಬೇಕು. ಕರ್ನಾಟಕ ರಾಜ್ಯದ ನಿವಾಸಿಯಾಗಿರಬೇಕು. ವಾರ್ಷಿಕ ಆದಾಯ 2.5 ಲಕ್ಷ ಮೀರಿರಬಾರದು. ಅಲ್ಪಸಂಖ್ಯಾತರ ಸಮುದಾಯದ ವಿದ್ಯಾರ್ಥಿಗಳಿಗೆ(ಮುಸ್ಲಿಂ, ಕ್ರಿಶ್ಚಿಯನ್, ಜೈನ್, ಬೌದ್ಧ, ಸಿಖ್ ಮತ್ತು ಪಾರ್ಸಿ)ಶೇ.75% ಮೀಸಲಾತಿ ಇತರರಿಗೆ(ಪ.ಜಾತಿ, ಪ.ಪಂಗಡ, ಹಿಂದುಳಿದ ವರ್ಗದ ವಿದ್ಯಾರ್ಥಿಗಳಿಗೆ ಶೇ.25 ಮೀಸಲಾತಿ, ಬಾಲಕೀಯರಿಗೆ ಶೇ.50 ಮೀಸಲಾತಿ ಇರುತ್ತದೆ. ಹಾಗೂ ಅಗತ್ಯ ದಾಖಲೆಗಳೊಂದಿಗೆ ವೆಬ್ಸೈಟ್ https://sevasindhu.karnataka.gov.in/ ಆನ್ಲೈನ್ ಅರ್ಜಿ ಸಲ್ಲಿಸಬಹುದಾಗಿದೆ. ನಂತರ ಆನ್ಲೈನ್ ಪ್ರತಿಯನ್ನು ಅಗತ್ಯ ದಾಖಲೆಗಳೊಂದಿಗೆ ಸಂಬಂಧಪಟ್ಟ ಶಾಲೆಗೆ ಅಥವಾ ನಿಮ್ಮ ತಾಲ್ಲೂಕಿನ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯ ಮಾಹಿತಿ ಕೇಂದ್ರಗಳಿಗೆ ಸಲ್ಲಿಸುವುದು. ಅರ್ಜಿ ಸಲ್ಲಿಸಲು ಫೆಬ್ರವರಿ 15 ಕೊನೆಯ ದಿನವಾಗಿದೆ. ವಿದ್ಯಾರ್ಥಿಗಳು ಹೆಚ್ಚಿನ ಮಾಹಿತಿಗಾಗಿ ಎ.ಪಿ.ಜೆ ಅಬ್ದುಲ್ ಕಲಾಂ ವಸತಿ ಶಾಲೆ ಪ್ರಾಂಶುಪಾಲರು ಎ.ಪಿ.ಜೆ ಅಬ್ದುಲ್ ಕಲಾಂ ವಸತಿ ಶಾಲೆ, ದಾಂಡೇಲಿ-9620915496 ಮತ್ತು ಮೊರಾರ್ಜಿ ದೇಸಾಯಿ ವಸತಿ ಶಾಲೆ-9008841149 ಅಥವಾ ಜಿಲ್ಲಾ ಅಲ್ಪಸಂಖ್ಯಾತ ಕಲ್ಯಾಣ ಇಲಾಖೆ ಉತ್ತರ ಕನ್ನಡ, ಕಾರವಾರ ದೂರವಾಣಿ ಸಂಖ್ಯೆ 08382-220336 ಅಥವಾ ತಾಲೂಕು ಮಾಹಿತಿ ಕೇಂದ್ರಗಳಿಗೆ ಕಚೇರಿ ವೇಳೆಯಲ್ಲಿ ಸಂಪರ್ಕಿಸುವಂತೆ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯ ಜಿಲ್ಲಾ ಅಧಿಕಾರಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಶಾಸಕ ಶಿವರಾಮ ಹೆಬ್ಬಾರ ಗುರುವಾರ ಮುಂಡಗೋಡ ತಾಲೂಕಿನ ಸಾಲಗಾಂವ ಗ್ರಾಮದ ಬಾಣಂತಿದೇವಿ ಜಾತ್ರಾ ಮಹೋತ್ಸವದಲ್ಲಿ ಪಾಲ್ಗೊಂಡು ದೇವರಿಗೆ ಪೂಜೆ ಸಲ್ಲಿಸಿ ಆಶೀರ್ವಾದ ಪಡೆದರು. ಈ ವೇಳೆ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಕೃಷ್ಣ ಹಿರೇಹಳ್ಳಿ, ಮಾರ್ಕೆಟಿಂಗ್ ಸೊಸೈಟಿ ಅಧ್ಯಕ್ಷ ರವಿಗೌಡ ಪಾಟೀಲ, ಮಾಲ್ತೇಶ ತಳವಾರ ಮುಂತಾದವರು ಉಪಸ್ಥಿತರಿದ್ದರು.

ಬಣ್ಣದ ಹಕ್ಕಿಗಳ ಕಲರವಕ್ಕೆ ದಾಂಡೇಲಿ ಸಾಕ್ಷಿ | ಪಕ್ಷಿಗಳ ಸಂರಕ್ಷಣೆ, ಪರಿಸರ ಪ್ರವಾಸೋದ್ಯಮಕ್ಕೆ ಉತ್ತೇಜನ | ಹಾರ್ನ್‌ಬಿಲ್ ಜೀವನ ಕ್ರಮ ಬಹಳ ಕುತೂಹಲಕಾರಿ

ಅದ್ದೂರಿ ಹಾರ್ನ್‌ಬಿಲ್ ಪಕ್ಷಿ ಹಬ್ಬ ಇಂದಿನಿಂದ

ವಿನುತಾ ಹೆಗಡೆ ಶಿರಸಿ

ಉತ್ತರ ಕನ್ನಡ ಜಿಲ್ಲೆಯ ''ಮಲೆನಾಡಿನ ಹೆಬ್ಬಾಗಿಲು'' ಎಂದೇ ಕರೆಸಿಕೊಳ್ಳುವ ದಾಂಡೇಲಿ, ಈಗ ಬಣ್ಣ ಬಣ್ಣದ ಹಕ್ಕಿಗಳ ಕಲರವಕ್ಕೆ ಸಾಕ್ಷಿಯಾಗಿದೆ. ಪಶ್ಚಿಮ ಘಟ್ಟದ ಸಾನುಬಂಧದಲ್ಲಿರುವ ಈ ಪ್ರದೇಶವು ಹಾರ್ನ್ ಬಿಲ್ (ಮಂಗಟ್ಟೆ ಹಕ್ಕಿ) ಗಳ ಆವಾಸಸ್ಥಾನಕ್ಕೆ ಹೆಸರುವಾಸಿ. ಈ ಪಕ್ಷಿಗಳ ಸಂರಕ್ಷಣೆ ಮತ್ತು ಪರಿಸರ ಪ್ರವಾಸೋದ್ಯಮಕ್ಕೆ ಉತ್ತೇಜನ ನೀಡಲು ಹಮ್ಮಿಕೊಂಡಿರುವ ಈ ಎರಡು ದಿನಗಳ ಹಬ್ಬವು ಕೇವಲ ಆಚರಣೆಯಲ್ಲ, ಅದೊಂದು ಜಾಗೃತಿಯ ಅಭಿಯಾನ.

ದಾಂಡೇಲಿ ಏಕೆ ''ಹಾರ್ನ್ ಬಿಲ್ ರಾಜಧಾನಿ'':

ವಿಶ್ವದಾದ್ಯಂತ ಇರುವ ಹಾರ್ನ್‌ಬಿಲ್ ಪ್ರಭೇದಗಳಲ್ಲಿ ಭಾರತದಲ್ಲಿ 9 ಪ್ರಭೇದಗಳಿವೆ. ಅದರಲ್ಲಿ 4 ಪ್ರಮುಖ ಪ್ರಭೇದಗಳು ದಾಂಡೇಲಿ-ಅಣಶಿ ಅರಣ್ಯ ಭಾಗದಲ್ಲಿ ಏಕಕಾಲಕ್ಕೆ ಕಾಣಸಿಗುತ್ತವೆ. ವಿಶೇಷವಾಗಿ ಮಲಬಾರ್‌ಪೈಡ್ ಹಾರ್ನ್‌ಬಿಲ್ಲುಗಳು ಇಲ್ಲಿನ ದೊಡ್ಡ ಮರಗಳ ಮೇಲೆ ಗುಂಪು ಗುಂಪಾಗಿ ವಾಸಿಸುವುದನ್ನು ನೋಡುವುದೇ ಒಂದು ಸುಂದರ ಅನುಭವ.

''ಅರಣ್ಯದ ರೈತ'' ಎಂಬ ಹೆಗ್ಗಳಿಕೆ:

ಹಾರ್ನ್‌ಬಿಲ್ ಪಕ್ಷಿಗಳನ್ನು ''Forest Engineers'' ಅಥವಾ ''ಅರಣ್ಯದ ರೈತರು'' ಎಂದು ಕರೆಯಲಾಗುತ್ತದೆ. ಇವು ಕಾಡಿನ ಹಣ್ಣುಗಳನ್ನು ತಿಂದು, ಮೈಲಿಗಟ್ಟಲೆ ದೂರ ಹಾರುತ್ತವೆ. ಅವು ವಿಸರ್ಜಿಸುವ ಬೀಜಗಳಿಂದ ದಟ್ಟವಾದ ಕಾಡು ಮರುಸೃಷ್ಟಿಯಾಗುತ್ತದೆ. ಇವುಗಳಿಲ್ಲದಿದ್ದರೆ ಕಾಡಿನ ಅನೇಕ ಮರಗಳ ಸಂತತಿ ನಾಶವಾಗುವ ಸಂಭವವಿರುತ್ತದೆ.

> **ಗಂಡು ಹಕ್ಕಿಯಿಂದ ಆಹಾರ ಶೇಖರಣೆ**
> **ಕೇವಲ ಆಹಾರ ನೀಡಲು ಒಂದು ಸಣ್ಣ ರಂಧ್ರವನ್ನು ಮಾತ್ರ ಬಿಡುತ್ತದೆ. ಮರಿಗಳು ಹಾರುವ ಸಾಮರ್ಥ್ಯ ಪಡೆಯುವವರೆಗೆ ಗಂಡು ಹಕ್ಕಿಯೇ ಆಹಾರ ತಂದು ಸಾಕಿ ಸಲಹುತ್ತದೆ. ಈ ಪ್ರೇಮ ಮತ್ತು ಕಾಳಜಿಯ ಕಥೆ ಪ್ರವಾಸಿಗರಿಗೆ ಸದಾ ಅಚ್ಚರಿ ಮೂಡಿಸುತ್ತದೆ.**

ಹಾರ್ನ್ ಬಿಲ್ಗಳ ರೋಚಕ ಜೀವನ ಶೈಲಿ ಈ ಹಕ್ಕಿಗಳ ಜೀವನಕ್ರಮ ಬಹಳ ಕುತೂಹಲಕಾರಿ.

ನಿಷ್ಠಾವಂತ ಜೋಡಿ: ಹಾರ್ನ್‌ಬಿಲ್ಗಳು ತಮ್ಮ ಜೀವನದುದ್ದಕ್ಕೂ ಒಂದೇ ಸಂಗಾತಿಯೊಂದಿಗೆ ಇರುತ್ತವೆ.

ಗೂಡು ಕಟ್ಟುವ ವಿಭಿನ್ನ ರೀತಿ: ಸಂತಾನೋತ್ಪತ್ತಿಯ ಸಮಯದಲ್ಲಿ ಹೆಣ್ಣು ಹಕ್ಕಿಯು ಮರದ ಪೊಟರೆಯ ಒಳಗೆ ಹೋಗಿ ಕುಳಿತುಕೊಳ್ಳುತ್ತದೆ. ಗಂಡು ಹಕ್ಕಿಯು ಪೊಟರೆಯ ಬಾಗಿಲನ್ನು ಮಣ್ಣಿನಿಂದ ಮುಚ್ಚುತ್ತದೆ, ಕೇವಲ ಆಹಾರ ನೀಡಲು ಒಂದು ಸಣ್ಣ ರಂಧ್ರವನ್ನು ಮಾತ್ರ ಬಿಡುತ್ತದೆ. ಮರಿಗಳು ಹಾರುವ ಸಾಮರ್ಥ್ಯ ಪಡೆಯುವವರೆಗೆ ಗಂಡು ಹಕ್ಕಿಯೇ ಆಹಾರ ತಂದು ಸಾಕಿ ಸಲಹುತ್ತದೆ. ಈ ಪ್ರೇಮ ಮತ್ತು ಕಾಳಜಿಯ ಕಥೆ ಪ್ರವಾಸಿಗರಿಗೆ ಸದಾ ಅಚ್ಚರಿ ಮೂಡಿಸುತ್ತದೆ.

ಕಾರ್ಯ ಕ್ರಮಗಳ ವಿವರ:

ಬರ್ಡ್ ಟ್ರೈಲ್ (Bird Trail): ಮುಂಜಾನೆ 6 ಗಂಟೆಗೆ ಆರಂಭವಾಗುವ ಈ ಪಾದಯಾತ್ರೆಯಲ್ಲಿ ಪಕ್ಷಿ ತಜ್ಞರು ಪ್ರವಾಸಿಗರನ್ನು ಕಾಡಿನೊಳಗೆ ಕರೆದೊಯ್ದು ಪಕ್ಷಿಗಳ ಗುರುತಿಸುವಿಕೆ ಮತ್ತು ಅವುಗಳ ಕೂಗಿನ ಬಗ್ಗೆ ಮಾಹಿತಿ ನೀಡುತ್ತಾರೆ.

ಛಾಯಾಗ್ರಹಣ ಸ್ಪರ್ಧೆ: ವನ್ಯಜೀವಿ ಛಾಯಾಗ್ರಾಹಕರಿಗಾಗಿ ವಿಶೇಷ ಸ್ಪರ್ಧೆ ಮತ್ತು ಪ್ರದರ್ಶನ. ಸ್ಥಳೀಯ ಬುಡಕಟ್ಟು ಸಂಸ್ಕೃತಿ ಪ್ರದರ್ಶನ: ದಾಂಡೇಲಿ ಸುತ್ತಮುತ್ತಲಿನ ಸಿದ್ದಿ, ಗೌಳಿ ಮತ್ತು ಕೊಂಕಣಿ ಸಮುದಾಯಗಳ ಜಾನಪದ ನೃತ್ಯ ಮತ್ತು ಕಲೆಗಳ ಅನಾವರಣ.

ಸಂವಾದ ಗೋಷ್ಠಿಗಳು: ಪರಿಸರವಾದಿಗಳಿಂದ 'ಹವಾಮಾನ ಬದಲಾವಣೆ ಮತ್ತು ಪಕ್ಷಿಗಳ ಮೇಲಾಗುವ ಪರಿಣಾಮ' ಕುರಿತು ಚರ್ಚೆ. ಪ್ರವಾಸೋದ್ಯಮಕ್ಕೆ ಬೂಸ್ಟ್

ದಾಂಡೇಲಿಯು ಕೇವಲ ರಿವರ್‌ರಾಫ್ಟಿಂಗ್‌ಗೆ ಮಾತ್ರ ಸೀಮಿತವಲ್ಲ ಎಂಬುದು ಈ ಹಬ್ಬದ ಮುಖ್ಯ ಉದ್ದೇಶ. ''ಎಕೋ-ಟೂರಿಸಂ'' (ಪರಿಸರ ಪೂರಕ ಪ್ರವಾಸೋದ್ಯಮ) ಮೂಲಕ ಸ್ಥಳೀಯ ಹೋಮ್ ಸ್ಟೇಗಳು ಮತ್ತು ಗೈಡ್‌ಗಳಿಗೆ ಉದ್ಯೋಗಾವಕಾಶ ಒದಗಿಸುವುದು ಇದರ ಹಿಂದಿನ ಆಶಯವಾಗಿದೆ.

ಎಸ್‌ಎಸ್‌ಎಲ್‌ಸಿ ಫಲಿತಾಂಶದಲ್ಲಿ ಸುಧಾರಣೆ ತನ್ನಿ: ಡಿಸಿ ಸೂಚನೆ

ಕಾರವಾರ: ಕಳೆದ ಬಾರಿಯ ಎಸ್.ಎಸ್.ಎಲ್.ಸಿ ಫಲಿತಾಂಶದಲ್ಲಿ ಕಾರವಾರ ಶೈಕ್ಷಣಿಕ ಜಿಲ್ಲೆಯು ರಾಜ್ಯದಲ್ಲಿ ತೃತೀಯ ಸ್ಥಾನ ಪಡೆದಿದ್ದು, ಈ ಬಾರಿ ಫಲಿತಾಂಶವನ್ನು ಇನ್ನೂ ಹೆಚ್ಚಿನ ಸುಧಾರಣೆ ಮಾಡಿಕೊಳ್ಳುವ ಜೊತೆಗೆ ಜಿಲ್ಲೆಯ ಎಲ್ಲಾ ಶಾಲೆಗಳಲ್ಲಿ ಶೇ.100 ಫಲಿತಾಂಶ ದಾಖಲಿಸುವುದರ ಮೂಲಕ ಜಿಲ್ಲೆಯ ಯಾವುದೇ ವಿದ್ಯಾರ್ಥಿ ಅನುತ್ತೀರ್ಣರಾಗದಂತೆ ಸಂಬಂಧಪಟ್ಟ ಶಾಲೆಗಳ ಮುಖ್ಯೋಪಾಧ್ಯಾಯರು, ಶಿಕ್ಷಕರು ಹಾಗೂ ಶಿಕ್ಷಣ ಇಲಾಖೆಯ ಅಧಿಕಾರಿಗಳು ಜವಾಬ್ದಾರಿ ವಹಿಸಿಕೊಳ್ಳಬೇಕು ಎಂದು ಜಿಲ್ಲಾಧಿಕಾರಿ ಕೆ.ಲಕ್ಷ್ಮೀಪ್ರಿಯಾ ಸೂಚಿಸಿದರು.

ಅವರು ಬುಧವಾರ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ, ಕಾರವಾರ ಶೈಕ್ಷಣಿಕ ಜಿಲ್ಲೆಯಲ್ಲಿ ಈ ಬಾರಿಯ ಎಸ್.ಎಸ್.ಎಲ್.ಸಿ ಫಲಿತಾಂಶ ವೃದ್ಧಿಗೆ ಕೈಗೊಂಡಿರುವ ಕ್ರಮಗಳ ಕುರಿತು ಎಲ್ಲಾ ಶಾಲೆಗಳ ಮುಖ್ಯೋಪಾಧ್ಯಾಯರು, ತಾಲೂಕು ಶಿಕ್ಷಣಾಧಿಕಾರಿಗಳು ಮತ್ತು ಶಿಕ್ಷಣ ಇಲಾಖೆಯ ಅಧಿಕಾರಿಗಳೊಂದಿಗೆ ನಡೆದ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ಎಸ್.ಎಸ್.ಎಲ್.ಸಿಯಲ್ಲಿ ಉತ್ತೀರ್ಣರಾದರೆ ವಿದ್ಯಾರ್ಥಿಗಳು ತಮ್ಮ ಮುಂದಿನ ಭವಿಷ್ಯವನ್ನು ರೂಪಿಸಿಕೊಳ್ಳುತ್ತಾರೆ. ವಿದ್ಯಾರ್ಥಿಗಳನ್ನು ಉತ್ತೀರ್ಣ ರಾಗುವಂತೆ ಸಿದ್ದಗೊಳಿಸುವ ಜವಾಬ್ದಾರಿ ಶಿಕ್ಷಕ ರದ್ದು, ಪ್ರತಿಯೊಬ್ಬ ವಿದ್ಯಾರ್ಥಿಯ ಜೀವನವನ್ನು ರೂಪಿಸುವ ಅತೀ ದೊಡ್ಡ ಜವಾಬ್ದಾರಿ ಹೊಂದಿರುವ ಶಿಕ್ಷಕರು, ತಮ್ಮ ಎಲ್ಲಾ ಅನುಭವವನ್ನು ಧಾರೆಯೆರೆದು, ತಮ್ಮ ಶಾಲೆಯ ಯಾವುದೇ ವಿದ್ಯಾರ್ಥಿ ಅನುತ್ತೀರ್ಣರಾಗದಂತೆ ನೋಡಿಕೊಳ್ಳಬೇಕು ಎಂದರು.

ಜಿಲ್ಲೆಗೆ ಫಲಿತಾಂಶದಲ್ಲಿ ರ್ಯಾಂಕ್ ಬರುವುದು ಮುಖ್ಯವಲ್ಲ ಆದರೆ ಜಿಲ್ಲೆಯ ವಿದ್ಯಾರ್ಥಿಗಳು ಅತ್ಯುತ್ತಮ ಅಂಕಗಳೊಂದಿಗೆ ಪ್ರತಿಯೊಬ್ಬರೂ ಉತ್ತೀರ್ಣರಾಗಬೇಕು, ಅರ್ಧ ವಾರ್ಷಿಕ ಪರೀಕ್ಷೆ ಮತ್ತು ಮೊದಲ ಪ್ರಿಪರೇಟರಿ ಫಲಿತಾಂಶವನ್ನು ವಿಶ್ಲೇಷಣೆ ಮಾಡಿ, ಕಲಿಕೆಯಲ್ಲಿ ಹಿಂದುಳಿದಿರುವ ಮಕ್ಕಳ ಬಗ್ಗೆ ವಿಶೇಷ ಕಾಳಜಿ ವಹಿಸಿ, ಅವರ ಬಗ್ಗೆ ವೈಯಕ್ತಿಕವಾಗಿ ಗಮನಹರಿಸಿ ಅವರು ಉತ್ತೀರ್ಣರಾಗುವಂತೆ ಮಾಡಬೇಕು ಎಂದರು.

ಶಾಲೆಗಳಿಗೆ ನಿರಂತರವಾಗಿ ಗೈರು ಹಾಜರಾ ಗುತ್ತಿರುವ ವಿದ್ಯಾರ್ಥಿಗಳ ಕುರಿತಂತೆ ವಿಶೇಷ ಗಮನ ಹರಿಸಿ ವೈಯಕ್ತಿವಾಗಿ ಮತ್ತು ಎಸ್.ಡಿ.ಎಂ.ಸಿ ಸದಸ್ಯರ ಮೂಲಕ ಮನೆ ಭೇಟಿ ನೀಡಿ, ಪೋಷಕರ ಮತ್ತು ವಿದ್ಯಾರ್ಥಿಯ ಮನವೊಲಿಸಿ ಶಾಲೆಗೆ ಬರುವಂತೆ ಮಾಡಿ, ಅವರನ್ನು ಉತ್ತೀರ್ಣರಾಗುವಂತೆ ಮಾಡುವ ಜವಾಬ್ದಾರಿ ವಹಿಸಿಕೊಳ್ಳಬೇಕು. ಎಸ್.ಎಸ್.ಎಲ್.ಸಿ ಫಲಿತಾಂ ಶ ಸುಧಾ ರಣೆಗಾಗಿ ಜಿಲ್ಲಾಡಳಿತದ ಮೂಲಕ ಎಲ್ಲಾ ರೀತಿಯ ಸಹಕಾರವನ್ನು ನೀಡುವುದಾಗಿ ತಿಳಿಸಿದ ಜಿಲ್ಲಾಧಿಕಾರಿಗಳು, ಕಳೆದ ಬಾರಿಯಂತೆ ವಿದ್ಯಾರ್ಥಿಗಳಿಗೆ ಪ್ರೇರಣಾತ್ಮಕ ಪತ್ರಗಳನ್ನು ಬರೆಯಲಾಗುವದು. ಪ್ರೇರಣಾ ಶಿಬಿರಗಳಿಗೆ ವಿವಿಧ ಇಲಾಖೆಗಳ ಅಧಿಕಾರಿಗಳು ಭೇಟಿ ನೀಡಿ ಮಕ್ಕಳನ್ನು ಪ್ರೋತ್ಸಾಹಿಸಲಿದ್ದು, ಫೋನ್ ಇನ್ ಕಾರ್ಯಕ್ರಮ ಆಯೋಜಿಸಲಾಗುವುದು ಎಂದರು.

ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಡಾ.ದಿಲೀಷ್ ಶಶಿ ಮಾತನಾಡಿ, ಜಿಲ್ಲೆಯು ಎಸ್.ಎಸ್.ಎಲ್.ಸಿ. ಫಲಿತಾಂಶದಲ್ಲಿ ಕಳೆದ ಬಾರಿಗಿಂತಲೂ ಉತ್ತಮ ಸಾಧನೆ ತೋರಬೇಕಿದ್ದು, ಈ ಬಾರಿ ನಮ್ಮ ಗುರಿ ಮೊದಲನೇ ಸ್ಥಾನವಾಗಬೇಕು. ಶಾಲಾ ಪರೀಕ್ಷೆಯಲ್ಲಿ ಅನುತ್ತೀರ್ಣರಾಗುವ ವಿದ್ಯಾರ್ಥಿಗಳಿಗಾಗಿ ಶಿಕ್ಷಕರು ಹೆಚ್ಚುವರಿ ಸಮಯವನ್ನು ಮೀಸಲಿಟ್ಟು ಕಲಿಕೆಯಲ್ಲಿ ಹಿಂದುಳಿದಿರುವ ವಿಷಯಗಳನ್ನು ಬೋಧಿಸಬೇಕು. ವಿದ್ಯಾರ್ಥಿಗಳು ಪ್ರಶ್ನೆ ಪತ್ರಿಕೆಯಲ್ಲಿ ಎಲ್ಲಾ ಪ್ರಶ್ನೆಗಳಿಗೂ ಉತ್ತರಿಸಬೇಕು, ಯಾವುದೇ ಪ್ರಶ್ನೆಗೂ ಉತ್ತರವನ್ನು ಖಾಲಿ ಬಿಡದೇ, ಸಾಧ್ಯವಾದಷ್ಟು ಉತ್ತರ ಬರೆಯಲು ಪ್ರಯತ್ನಿಸುವ ಬಗ್ಗೆ ಶಿಕ್ಷಕರು ತಿಳಿಸಬೇಕು. ಫಲಿತಾಂಶ ವೃದ್ಧಿಗೆ ಈಗಾಗಲೇ ರೂಪಿಸಿರುವ 29 ಅಂಶಗಳ ಅನುಷ್ಠಾನ ಮಾತ್ರವಲ್ಲದೇ, ಶಿಕ್ಷಕರು ಮತ್ತು ಪೋಷಕರು ಹಾಗೂ ಅಧಿಕಾರಿಗಳು ಸಂಘಟಿತ ಪ್ರಯತ್ನದ ಮೂಲಕ ಉತ್ತಮ ಫಲಿತಾಂಶ ಬರುವಂತೆ ಕಾರ್ಯನಿರ್ವಹಿಸಬೇಕು ಎಂದರು.

ಪ್ರಾಸ್ತಾವಿಕವಾಗಿ ಮಾತನಾಡಿದ ಕಾರವಾರ ಶೈಕ್ಷಣಿಕ ಜಿಲ್ಲೆಯ ಉಪ ನಿರ್ದೇಶಕಿ ಲತಾ ನಾಯ್ಕ, ಜಿಲ್ಲೆಯಲ್ಲಿ ಎಸ್.ಎಸ್.ಎಲ್.ಸಿ ಫಲಿತಾಂಶ ಸುಧಾರಣೆಗಾಗಿ ಹಲವು ಕ್ರಮಗಳನ್ನು ಕೈಗೊಳ್ಳಲಾಗಿ ದು, ಡಿಸೆಂಬರ್ ಅಂತ್ಯದೊಳಗೆ ಎಸ್.ಎಸ್.ಎಲ್. ಸಿ ಪಠ್ಯವಸ್ತುವನ್ನು ಪೂರ್ಣಗೊಳಿಸಲಾಗಿದೆ. ಪ್ರತಿ ವಿದ್ಯಾರ್ಥಿಗೆ ಬಡ್ಡಿ ಪೇರಿಂಗ್ ಮಾಡಲಾಗಿದೆ. ಅರ್ಧ ವಾರ್ಷಿಕ ಪರೀಕ್ಷೆ ಫಲಿತಾಂಶವನ್ನು ವಿಶ್ಲೇ ಷಣೆ ಮಾಡಿ, ಕಲಿಕೆಯಲ್ಲಿ ಮತ್ತು ವಿಷಯವಾರು ಹಿಂದುಳಿದ ಮಕ್ಕಳ ಫಲಿತಾಂಶ ವೃದ್ಧಿಗೆ ಕ್ರಮ ಕೈಗೊಳ್ಳಲಾಗುತ್ತಿದೆ. ಪ್ರತೀ ದಿನ ಮುಂಜಾನೆ ಶಿಕ್ಷಕರ ಮೂಲಕ ವೇಕ್ ಅಪ್ ಕಾಲ್ ಮಾಡಲಾಗುತ್ತಿದೆ, 5 ತಾಲೂಕುಗಳಿಗೆ ಜಿಲ್ಲಾ ಹಂತದ ಅನುಷ್ಠಾನಾಧಿಕಾರಿಗಳನ್ನು ನೋಡಲ್ ಅಧಿಕಾರಿ ಗಳನ್ನಾಗಿ ನೇಮಿಸಿದ್ದು, ಫಲಿತಾಂಶದ ಬಗ್ಗೆ ವಿಶೇಷ ಗಮನ ಹರಿಸಲು ತಿಳಿಸಲಾಗಿದೆ. 15 ದಿನಗಳಿಗೊಮ್ಮೆ ಪೋಷಕರ ಸಭೆ ನಡೆಸಿ ಎಂದರು.

ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ಇಲಾಖೆಯ ಅಧಿಕಾರಿಗಳೊಂದಿಗೆ ನಡೆದ ಸಭೆಯ ಅಧ್ಯಕ್ಷತೆ ವಹಿಸಿ ಜಿಲ್ಲಾಧಿಕಾರಿ ಕೆ.ಲಕ್ಷ್ಮೀಪ್ರಿಯಾ ಅವರು ಮಾತನಾಡಿದರು.

> **ಕಲಿಕೆಯಲ್ಲಿ ಹಿಂದುಳಿದ ವಿದ್ಯಾರ್ಥಿಗಳ ಅನುಕೂಲಕ್ಕಾಗಿ ಮಂಡಳಿಯು ಸಿದ್ದಪಡಿ ಸಿರುವ ಮಾದರಿ ಪ್ರಶ್ನೆ ಪತ್ರಿಕೆಗಳನ್ನು ಹಾಗೂ ಡಯಟ್ ಮೂಲಕ ಸಿದ್ದಪಡಿಸಿರುವ ಪ್ರಶ್ನೆ ಪತ್ರಿಕೆಗಳನ್ನು ಅಭ್ಯಾಸ ಮಾಡಿಸಬೇಕು.**
> -ಕೆ.ಲಕ್ಷ್ಮೀಪ್ರಿಯಾ, ಜಿಲ್ಲಾಧಿಕಾರಿ

ನಾಳೆ ನೌಕರರ ಕ್ರೀಡಾಕೂಟ

ಕಾರವಾರ: ಜಿಲ್ಲಾಡಳಿತ, ಜಿಲ್ಲಾ ಪಂಚಾಯತ,ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಹಾಗೂ ಸರಕಾರಿ ನೌಕರರ ಸಂಘ, ಜಿಲ್ಲಾ ಶಾಖೆ, ಕಾರವಾರ ಮತ್ತು ಶಿರಸಿ ಶೈಕ್ಷಿಣಿಕ ಜಿಲ್ಲೆ ಇವರ ಸಂಯುಕ್ತ ಆಶ್ರಯದಲ್ಲಿ ಉತ್ತರ ಕನ್ನಡ ಜಿಲ್ಲಾ ಮಟ್ಟದ ಕರ್ನಾಟಕ ರಾಜ್ಯ ಸರಕಾರಿ ನೌಕರರ ಕ್ರೀಡಾಕೂಟ ಮತ್ತು ಸಾಂಸ್ಕೃತಿಕ ಸ್ಪರ್ಧೆಗಳ ಉದ್ಘಾಟನಾ ಸಮಾರಂಭವನ್ನು ಜ.17 ರಂದು ಬೆಳಗ್ಗೆ 9.30 ಗಂಟೆಗೆ ಶಿರಸಿಯ ಮಾರಿಕಾಂಬಾ ಕ್ರೀಡಾಂಗಣದಲ್ಲಿ ಹಮ್ಮಿಕೊಳ್ಳಲಾಗಿದೆ. ಕಾರ್ಯಕ್ರಮ ವನ್ನು ಮೀನುಗಾರಿಕೆ, ಬಂದರು ಮತ್ತು ಒಳನಾಡು ಜಲಸಾರಿಗೆ ಸಚಿವ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಮಂಕಾಳ ವೈದ್ಯ ಉದ್ಘಾಟಿಸಲಿದ್ದು, ಅಧ್ಯಕ್ಷತೆಯನ್ನು ಶಿರಸಿ ಶಾಸಕ ಭೀಮಣ್ಣ ಟಿ. ನಾಯ್ಕ ವಹಿಸಲಿದ್ದಾರೆ.

ಕಾರ್ಯಕ್ರಮದಲ್ಲಿ ವಿಧಾನ ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ, ಆಡಳಿತ ಸುಧಾರಣಾ ಆಯೋಗದ ಅಧ್ಯಕ್ಷ ಆರ್.ವಿ ದೇಶಪಾಂಡೆ, ಕರ್ನಾಟಕ ರಾಜ್ಯ ಮಾರ್ಕೆಟಿಂಗ್ ಕಮ್ಯುನಿಕೇಷನ್ ಅಂಡ್ ಅಡ್ವರ್ಟೈಸಿಂಗ್ ಲಿಮಿಟೆಡ್ ಅಧ್ಯಕ್ಷ ಹಾಗೂ ಶಾಸಕ ಸತೀಶ ಕೆ. ಸೈಲ್ ಅಧ್ಯಕ್ಷತೆ ಸಂಸದ ವಿಶ್ವೇಶ್ವರ ಹೆಗಡೆ ಕಾಗೇರಿ, ಶಾಸಕರಾದ ಶಿವರಾಮ ಹೆಬ್ಬಾರ್,ದಿನಕರ ಕೆ. ಶೆಟ್ಟಿ, ವಿಧಾನ ಪರಿಷತ್ ಶಾಸಕರಾದ ಎಸ್. ವಿ. ಸಂಕನೂರು ಮತ್ತಿತರರು ಪಾಲ್ಗೊಳ್ಳಲಿದ್ದಾರೆ.

ಇರಾನ್ ಭುಗಿಲಿಗೆ 3500 ಮಂದಿ ಬಲಿ

← ಮೊದಲಪುಟದಿಂದ

ಇರಾನ್ ಯೋಧರು ತಮ್ಮದೇ ಜನರನ್ನು ಸಾಯಿಸಲು ಒಪ್ಪುತ್ತಿಲ್ಲ, ಅಲ್ಲದೇ ಕಳೆದ ಜೂನ್‌ನಲ್ಲಿ ನಡೆದ 12 ದಿನಗಳ ಯುದ್ಧ, ಇಸ್ರೇಲ್‌ನೊಂದಿಗಿನ ಸಂಘರ್ಷದಿಂದ ಈಗಾಗಲೇ ಹೈರಾಣಾಗಿರುವ ಅರೆ ಸೇನಾಪಡೆ, ಸಶಸ್ತ್ರ ಪಡೆಗಳು ಈಗಿನ ಆಂತರಿಕ ದಂಗೆಗೆ ಮಾನಸಿಕವಾಗಿ ಸಜ್ಜಾಗಿಲ್ಲ ಎನ್ನಲಾಗಿದೆ.

ವರದಿಗಳ ಪ್ರಕಾರ, ಜ.11ರ ಹೊತ್ತಿಗೆ ತಲಾ 50 ಜನರನ್ನು ಹೊತ್ತ 60 ಬಸ್‌ಗಳು ಇರಾಖ್‌ನಿಂದ ಇರಾನ್ ತಲುಪಿವೆ. ಇರಾಖ್ ಅಧಿಕಾರಿಗಳು ಧಾರ್ಮಿಕ ಯಾತ್ರೆಗೆ ಹೊರಟ ವ್ಯಕ್ತಿಗಳು ಅವರೆಲ್ಲ ಎಂದಿದ್ದರೂ, ಅವರ ಚಹರೆಗಳು ಸಂಪೂರ್ಣ ಅದಕ್ಕೆ ವ್ಯತಿರಿಕ್ತವಾಗಿದ್ದವು. ಎಲ್ಲರೂ ಕಪ್ಪುಬಣ್ಣದ ಟೀಶರ್ಟ್ ಧರಿಸಿದ್ದರು. ಅಲ್ಲಿ ಯಾರೂ ವಯಸ್ಸಾದವರಿರಲಿಲ್ಲ, ಕುಟುಂಬಸ್ಥರ ಸುಳಿವಿರಲಿಲ್ಲ. ಇವರೆಲ್ಲ ಇರಾಖ್ ಯೋಧರೇ, ಅವರೇ ನಿರ್ದಯವಾಗಿ ಪ್ರತಿಭಟನಾಕಾರರನ್ನು ಕೊಲ್ಲುತ್ತಿದ್ದಾರೆ ಎನ್ನಲಾಗಿದೆ.

ರಾಜ್ಯ ಬಜೆಟ್‌ಗೆ 21,000 ಕೋಟಿ ರುಪಾಯಿ ಹೊರೆ

← ಮೊದಲಪುಟದಿಂದ

ಜಿಎಸ್‌ಟಿಯಿಂದ 9000 ಕೋಟಿ ರು. ನಷ್ಟ: ಇನ್ನು ಕೇಂದ್ರ ಸರಕಾರ ಜಾರಿಗೊಳಿಸಿರುವ ಜಿಎಸ್‌ಟಿ 2.0ದಿಂದಾಗಿ ಎಲ್ಲ ರಾಜ್ಯಗಳ ಆದಾಯದ ಮೇಲೆ ಹೊಡೆತ ಬೀಳುತ್ತಿದೆ. ಕರ್ನಾಟಕಕ್ಕೆ ಜಿಎಸ್‌ಟಿ ಸರಳೀಕರಣದಿಂದ ಸುಮಾರು 9000 ಕೋಟಿ ರು. ನಷ್ಟವಾಗಲಿದೆ ಎನ್ನುವುದನ್ನು ಈಗಾಗಲೇ ಸರಕಾರ ಒಪ್ಪಿಕೊಂಡಿದೆ. ಆದ್ದರಿಂದ ರಾಜಸ್ವ ಸ್ವೀಕೃತಿಯಲ್ಲಿ ಬಹುಪಾಲು ಜಿಎಸ್‌ಟಿ ತೆರಿಗೆ ಮೇಲೆ ಆಧರಿಸಿದ್ದ ಸರಕಾರಕ್ಕೆ ಪೆಟ್ಟು ಬಿದ್ದಿದೆ. ಜಿಎಸ್‌ಟಿ ಸರಳೀಕರಣದ ಬಳಿಕ ಕರ್ನಾಟಕದ ಜಿಎಸ್‌ಟಿ ಬೆಳವಣಿಗೆ ಶೇ.12ರಿಂದ ಶೇ 5ಕ್ಕೆ ಇಳಿಕೆಯಾಗಿದೆ. ಇದರಿಂದ 2025-26ನೇ ಸಾಲಿನಲ್ಲಿಯೇ ಸುಮಾರು 5,000 ಕೋಟಿ ರು. ಕೊರತೆಯಾಗಿದೆ. ಅಂದರೆ 2026-27ನೇ ವರ್ಷದಲ್ಲಿ ಈ ಪ್ರಮಾಣ 9,000 ಕೋಟಿ ರು.ಗೆ ಏರಿಕೆಯಾಗುವ ಸಾಧ್ಯತೆಯಿದೆ ಎನ್ನಲಾಗಿದೆ.

...ರಾಜೀವ್ ಗೌಡಗೆ ನೋಟಿಸ್

← ಮೊದಲಪುಟದಿಂದ

ಶಿಡ್ಲಘಟ್ಟ ನಗರಸಭೆ ವ್ಯಾಪ್ತಿಯಲ್ಲಿ ಖಾಸಗಿ ಕಾರ್ಯಕ್ರಮದ ಸಭೆಯೊಂದಕ್ಕೆ ಸಂಬಂಧ ಪಟ್ಟಂತೆ ಬ್ಯಾನರ್‌ಗಳನ್ನು ನಗರಸಭೆ ವ್ಯಾಪ್ತಿಯಲ್ಲಿ ಹಾಕಿರುವುದರ ಬಗ್ಗೆ ನಗರಸಭೆ ಪೌರಾಯುಕ್ತ ರೊಂದಿಗೆ ದೂರವಾಣಿ ಸಂಭಾಷಣೆ ನಡೆಸುವಾಗ ವ್ಯಕ್ತಿಗತ ನಿಂದನೆ ಮಾಡಿ, ಕೆಟ್ಟ ಪದಗಳನ್ನು ಉಪಯೋಗಿಸಿ ನಿಂದನೆ ಮಾಡಿರುವ ವಿಷಯಗಳು ಮಾಧ್ಯಮಗಳಲ್ಲಿ ಬಿತ್ತರಗೊಂಡಿದೆ. ತಮ್ಮ ಈ ವರ್ತನೆ ಹಾಗೂ ತಾವು ಸದರಿ ನಗರಸಭೆ ಪೌರಾಯುಕ್ತರೊಂದಿಗೆ ಆಡಿರುವ ಮಾತುಗಳಿಂದ ಪಕ್ಷಕ್ಕೆ ಮುಜುಗರ ಉಂಟುಮಾಡುತ್ತದೆ ಹಾಗೂ ತಾವು ಪಕ್ಷದ ಶಿಸ್ತನ್ನು ಉಲ್ಲಂಘನೆ ಮಾಡಿರುತ್ತೀರೆಂದು ನೋಟಿಸ್ ನೀಡಲಾಗಿದ್ದು, ವಾರದಲ್ಲಿ ಸ್ಪಷ್ಟನೆ ನೀಡದಿದ್ದರೆ ಶಿಸ್ತು ಕ್ರಮವಹಿಸಲಾಗುವುದು ಎಂದು ಶೋಕಾಸ್ ನೋಟಿಸ್‌ನಲ್ಲಿ ಎಚ್ಚರಿಸಲಾಗಿದೆ.

ರಾಜೀವ್ ಗೌಡ ಅವರು 2023ರ ವಿಧಾನಸಭೆ ಚುನಾವಣೆಯಲ್ಲಿ ಕಾಂಗ್ರೆಸ್ ಅಭ್ಯರ್ಥಿಯಾಗಿದ್ದರು. ಚಿಕ್ಕಬಳ್ಳಾಪುರ ಜಿಲ್ಲೆಯ ಶಿಡ್ಲಘಟ್ಟ ಕ್ಷೇತ್ರದಿಂದ ಸ್ಪರ್ಧಿಸಿದ್ದರು. ಕಲ್ಟ್ ಸಿನಿಮಾದ ಬ್ಯಾನರ್ ತೆರವುಗೊಳಿಸಿದ ವಿಚಾರವಾಗಿ ಅವರು ಪೌರಾಯುಕ್ತೆ ಅಮೃತಾ ಗೌಡ ಅವರ ಜೊತೆಗೆ ಫೋನ್‌ನಲ್ಲಿ ಮಾತನಾಡುವ ಸಂದರ್ಭದಲ್ಲಿ ಅವಾಚ್ಯ ಶಬ್ದಗಳಿಂದ ನಿಂದಿಸಿದ್ದರು. ಇದು ಭಾರೀ ವಿರೋಧಕ್ಕೆ ಕಾರಣವಾಗಿತ್ತು.

...ಮಮತಾಗೆ ಸುಪ್ರೀಮ್ ಮುಖಭಂಗ

← ಮೊದಲಪುಟದಿಂದ

ಹಾಗೆಯೇ ಇಡಿ ಕಾರ್ಯಾಚರಣೆಗೆ ಬಂಗಾಳಿ ಪೊಲೀಸರು ಅಡ್ಡಿಪಡಿಸಿದ್ದು ತಪ್ಪು ಎಂದು ಬಲವಾದ ಶಬ್ದಗಳಲ್ಲಿ ನ್ಯಾಯಪೀಠ ಖಂಡಿಸಿದೆ. ಮುಂದಿನ ವಿಚಾರಣೆಗೆ ದಿನ ನಿಗದಿಪಡಿಸಿದ ಸುಪ್ರೀಮ್ ಕೋರ್ಟ್, ಇಡಿ ದಾಳಿಯ ಸಿಸಿಟಿವಿ ದೃಶ್ಯಾವಳಿಗಳನ್ನು ರಕ್ಷಿಸುವಂತೆ ಪಶ್ಚಿಮ ಬಂಗಾಳ ಸರ್ಕಾರಕ್ಕೆ ನಿರ್ದೇಶನ ನೀಡಿತು. ಮುಂದಿನ ವಿಚಾರಣೆ ಫೆ.3ರಂದು ನಡೆಯಲಿದೆ.

ಬಂಗಾಳದ ಡಿಜಿಪಿ ರಾಜೀವ್ ಕುಮಾರ್ ಮತ್ತು ಕೋಲ್ಕತಾ ಪೊಲೀಸ್ ಆಯುಕ್ತ ಮನೋಜ್ ಕುಮಾರ್ ವರ್ಮಾ ಸೇರಿದಂತೆ ಇತರರನ್ನು ಅಮಾನತುಗೊಳಿಸುವಂತೆ ಕೋರಿ ಇಡಿ ಸಲ್ಲಿಸಿದ ಅರ್ಜಿಯ ಕುರಿತು ವಿಚಾರಣೆ ನಡೆಸಿದ ನ್ಯಾಯಪೀಠ, ಮಮತಾ ಬ್ಯಾನರ್ಜಿ ಮತ್ತು ಬಂಗಾಳದ ತೃಣಮೂಲ ಕಾಂಗ್ರೆಸ್ ಸರ್ಕಾರದಿಂದ ಉತ್ತರಗಳನ್ನು ಕೋರಿದೆ. ಈ ವಿಷಯದಲ್ಲಿ ಸಿಬಿಐ ತನಿಖೆಗೆ ಕೋರಿ ಸಲ್ಲಿಸಲಾದ ಅರ್ಜಿಗೂ ನ್ಯಾಯಾಲಯ ಉತ್ತರವನ್ನು ಕೋರಿದೆ.

ಜ.8ರಂದು ಐ-ಪ್ಯಾಕ್ ಕಚೇರಿಯಲ್ಲಿ ಇಡಿ ದಾಳಿ ನಡೆಸುವ ವೇಳೆ ಸ್ವತಃ ಮಮತಾ ಬ್ಯಾನರ್ಜಿ ಸ್ಥಳಕ್ಕೆ ತೆರಳಿ ಕೆಲವು ಫೈಲ್‌ಗಳು, ಹಾರ್ಡ್ ಡಿಸ್ಕ್, ಲ್ಯಾಪ್‌ಟಾಪ್, ಮೊಬೈಲ್‌ಗಳನ್ನು ತೆಗೆದುಕೊಂಡು ಹೋಗಿದ್ದರು. ರಾಜ್ಯ ಸರ್ಕಾರದ ಪೊಲೀಸ್ ಅಧಿಕಾರಿಗಳೂ ಸ್ಥಳಕ್ಕೆ ತೆರಳಿದ್ದರು. ತಮ್ಮ ತನಿಖೆಗೆ ಸಿಎಂ ಅಡ್ಡಿಪಡಿಸಿದ್ದಾರೆ ಎಂದು ಇಡಿ ಸುಪ್ರೀಮ್ ಕೋರ್ಟ್ ಮೆಟ್ಟಿಲೇರಿತ್ತು. ಇದೀಗ ಸುಪ್ರೀಂ ಕೋರ್ಟ್ ತನಿಖೆಗೆ ಅಡಚಣೆ ಮಾಡಿದ ಆರೋಪದ ಮೇಲೆ ಇಡಿ ಸಲ್ಲಿಸಿದ ಅರ್ಜಿಗೆ ಸಂಬಂಧಿಸಿದಂತೆ ಪಶ್ಚಿಮ ಬಂಗಾಳ ಸರ್ಕಾರ ಮತ್ತು ರಾಜ್ಯ ಪೊಲೀಸ್ ಮಹಾನಿರ್ದೇಶಕ (ಡಿಜಿಪಿ) ರಾಜೀವ್ ಕುಮಾರ್ ಅವರಿಗೆ ನೋಟಿಸ್ ಜಾರಿ ಮಾಡಿದೆ.

ವಿರಾಮ
ಪ್ರತಿ ಭಾನುವಾರ

ಕೇವಲ ಒಡಂಬಡಿಕೆಗೆ ಸೀಮಿತವಾಗದೇ ಕೈಗಾರಿಕೆ ಆರಂಭಕ್ಕೆ ವೇದಿಕೆ ಸಿದ್ಧ

11 ತಿಂಗಳಲ್ಲಿ ₹4.71 ಲಕ್ಷ ಕೋಟಿ ಹೂಡಿಕೆ: ಸಚಿವ ಎಂ.ಬಿ.ಪಾಟೀಲ್

ಬೆಂಗಳೂರು: ಕಳೆದ 11 ತಿಂಗಳ ಅವಧಿಯಲ್ಲಿ ಕರ್ನಾಟಕದಲ್ಲಿ 4.71 ಲಕ್ಷ ಕೋಟಿ ರು. ಹೂಡಿಕೆಯಾಗಿದೆ ಎಂದು ಕೈಗಾರಿಕಾ ಸಚಿವ ಎಂ.ಬಿ. ಪಾಟೀಲ್ ತಿಳಿಸಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 2025ರ ಫೆಬ್ರವರಿಯಲ್ಲಿ ನಡೆಸಿದ ಜಾಗತಿಕ ಹೂಡಿಕೆದಾರರ ಸಮಾವೇಶದಲ್ಲಿ 10.27 ಲಕ್ಷ ಕೋಟಿ ರು. ಬಂಡವಾಳ ಹೂಡಿಕೆಯ ಖಾತ್ರಿ ಸಿಕ್ಕಿತ್ತು. ಈ ಪೈಕಿ ಡಿಸೆಂಬರ್ ಕೊನೆಯ ಹೊತ್ತಿಗೆ 4.71 ಲಕ್ಷ ಕೋಟಿ ರು. ನೈಜ ಹೂಡಿಕೆಯಾಗಿದೆ. ಇದರೊಂದಿಗೆ ಹೂಡಿಕೆ ಕೇವಲ ಕಾಗದದ ಒಡಬಂಡಿಕೆಗೆ ಸೀಮಿತವಾಗದೇ, ಕೈಗಾರಿಕೆಗಳ ಸ್ಥಾಪನೆಯೂ ಆಗುತ್ತಿದೆ ಎಂದಿದ್ದಾರೆ.

ಜಾಗತಿಕ ಹೂಡಿಕೆದಾರರ ಸಮಾವೇಶದಲ್ಲಿ ಮಾಡಿಕೊಂಡಿರುವ ಹೂಡಿಕೆ ಒಡಂಬಡಿಕೆಗಳಲ್ಲಿ ಶೇ.46ರಷ್ಟು ನೈಜ ಹೂಡಿಕೆಯಾಗಿ ಸಾಕಾರಗೊಂಡಿವೆ. ಈ ಪೈಕಿ ತಯಾರಿಕಾ ವಲಯಕ್ಕೆ 5.66 ಲಕ್ಷ ಕೋಟಿ, ಹೂಡಿಕೆ ಖಾತ್ರಿಯಲ್ಲಿ 3.22 ಲಕ್ಷ ಕೋಟಿ ನೈಜ ಬಂಡವಾಳವಾಗಿ ಈಗಾಗಲೇ ಬಂದಿದೆ. ಹಾಗೆಯೇ, ಮರುಬಳಕೆ ಇಂಧನ ವಲಯದಲ್ಲಿ 4.25 ಲಕ್ಷ ಕೋಟಿ ರು. ಖಾತ್ರಿಯ ಪೈಕಿ 1.41 ಲಕ್ಷ ಕೋಟಿ ರು. ಹೂಡಿಕೆಯಾಗಿ ಹರಿದಿದ್ದು, ಮೂಲಸೌಕರ್ಯ ಅಭಿವೃದ್ಧಿ ಕ್ಷೇತ್ರಕ್ಕೆ 45 ಸಾವಿರ ಕೋಟಿ ರು.ಗಳ ಹೂಡಿಕೆ ವಾಗ್ದಾನದಲ್ಲಿ 8500 ಸಾವಿರ ಕೋಟಿ ರು. ಹೂಡಿಕೆ ಬಂದಿದೆ. ಇದು ಕ್ರಮವಾಗಿ ಶೇ 58, ಶೇ 33 ಮತ್ತು ಶೇ 19ರ ಯಶಸ್ಸಿನ ದಾಖಲೆಯಾಗಿದೆ ಎಂದಿದ್ದಾರೆ.

ನಾವು ಕೇವಲ ಒಡಂಬಡಿಕೆಯ ಮಟ್ಟದಲ್ಲಿ ಮಾತ್ರ ನಿಂತಿಲ್ಲ. ಹೂಡಿಕೆ ಪ್ರಸ್ತಾವನೆ ಸಲ್ಲಿಸಿದ ಕೂಡಲೇ ಅರ್ಜಿ ಸಲ್ಲಿಕೆ, ಭೂಮಿ ಮತ್ತಿತರ ಮಂಜೂರಾತಿಗಳು, ಕಡ್ಡಾಯ ಅನುಮೋದನೆಗಳು ಇವೆಲ್ಲವನ್ನೂ ಸಂಪೂರ್ಣ ಡಿಜಿಟಲ್ ವೇದಿಕೆಯಾಗಿರುವ ಏಕಗವಾಕ್ಷಿ ವ್ಯವಸ್ಥೆ ಮೂಲಕ ಒದಗಿಸುತ್ತಿದ್ದೇವೆ. ಇದರ ಅಡಿಯಲ್ಲಿ 30ಕ್ಕೂ ಹೆಚ್ಚು ಇಲಾಖೆಗಳ 150ಕ್ಕೂ ಹೆಚ್ಚು ಸೇವೆಗಳನ್ನು ಏಕತ್ರಗೊಳಿಸಲಾಗಿದೆ. ಇದರಿಂದಾಗಿ ತಯಾರಿಕೆ, ಇಎಸ್‌ಡಿಎಂ, ಸೆಮಿಕಂಡಕ್ಟರ್, ಆಹಾರ ಸಂಸ್ಕರಣೆ ಕ್ಷೇತ್ರಗಳಿಗೆ ಹೆಚ್ಚಿನ ಬಂಡವಾಳವು ನೈಜರೂಪದಲ್ಲಿ ಹರಿದುಬರುತ್ತಿದೆ ಎಂದು ಅವರು ವಿವರಿಸಿದ್ದಾರೆ.

ಹೂಡಿಕೆ ಪ್ರಸ್ತಾವನೆ ತ್ವರಿತಗತಿಯಲ್ಲಿವೆ: ಕಳೆದ ಒಂದು ವರ್ಷದಲ್ಲಿ ರಾಜ್ಯದಲ್ಲಿ ಹೂಡಿಕೆ ಪ್ರಸ್ತಾವನೆಗಳು ತ್ವರಿತವಾಗಿ ಅನುಷ್ಠಾನಗೊಳ್ಳುತ್ತಿದ್ದು, ಮೊದಲಿಗಿಂತಲೂ ಹೆಚ್ಚು ಕೈಗಾರಿಕಾಸ್ನೇಹಿಯಾಗಿದೆ. ಒಟ್ಟು ಹೂಡಿಕೆ ಪ್ರಸ್ತಾವನೆಗಳ ಪೈಕಿ ಶೇ.50ರಷ್ಟು ಮತ್ತು ತಯಾರಿಕೆ ವಲಯದ ಹೂಡಿಕೆ ಪ್ರಸ್ತಾವನೆಗಳಲ್ಲಿ ಶೇ 60ರಷ್ಟು 'ಕರ್ನಾಟಕ ಉದ್ಯೋಗ ಮಿತ್ರ'ದಲ್ಲಿ ಸಲ್ಲಿಕೆಯಾಗಿವೆ. ಇವೆಲ್ಲವೂ ಸರಕಾರವು ಜಾರಿಗೆ ತಂದಿರುವ ರಚನಾತ್ಮಕ ಕೈಗಾರಿಕಾ ನೀತಿ ಮತ್ತಿತರ ರಚನಾತ್ಮಕ ಕ್ರಮಗಳಿಗೆ ಸಿಕ್ಕಿರುವ ಗೆಲುವಾಗಿದೆ. ನಾವು ಯಾವ ಯೋಜನೆಯನ್ನೂ ಕೇವಲ ಒಡಂಬಡಿಕೆಯ ಹಂತಕ್ಕಷ್ಟೇ ನಿಲ್ಲಿಸದೆ, ತಾರ್ಕಿಕ ಅಂತ್ಯಕ್ಕೆ ಕೊಂಡೊಯ್ಯುತ್ತಿದ್ದೇವೆ ಎಂದು ವಿಶ್ವಾಸವ್ಯಕ್ತಪಡಿಸಿದ್ದಾರೆ.

ಇತರೆ ಜಿಲ್ಲೆಗಳಲ್ಲಿಯೂ ಹೂಡಿಕೆ

ಸಿಮೆಂಟ್ ತಯಾರಿಕಾ ಘಟಕ ಸ್ಥಾಪನೆಗೆ ಅಲ್ಟ್ರಾ ಟೆಕ್ ಕಂಪನಿಯು ಕಲಬುರಗಿ ಜಿಲ್ಲೆಯಲ್ಲಿ 4,819 ಕೋಟಿ ರು, ದಾಲ್ಮಿಯಾ ಸಿಮೆಂಟ್ಸ್ ಬೆಳಗಾವಿಯ ಯಾದವಾಡದಲ್ಲಿ 3,000 ಕೋಟಿ ಹಾಗೂ ವಿಸ್ತರಣೆಗೆ 3,020 ಕೋಟಿ ರು, ಮರುಬಳಕೆ ಇಂಧನ ಕ್ಷೇತ್ರದಲ್ಲಿ ಟಾಟಾ ಪವರ್ 8,134 ಕೋಟಿ ರು, ವೋಲ್ವೋ ತನ್ನ ಹೊಸಕೋಟೆ ಘಟಕದ ವಿಸ್ತರಣೆಗೆ 1,251 ಕೋಟಿ, ವಿಜಯಪುರ ಜಿಲ್ಲೆಯಲ್ಲಿ ಸುಜ್ಲಾನ್ ಎನರ್ಜಿ ಲಿಮಿಟೆಡ್ 12,032 ಕೋಟಿ ರು, ಹ್ಯಾವೆಲ್ಸ್ ಇಂಡಿಯಾ ತನ್ನ ಉತ್ಪಾದನೆಯ ಹೆಚ್ಚಳ ಮತ್ತು ನೂತನ ಸಂಶೋಧನಾ ಮತ್ತು ಅಭಿವೃದ್ಧಿ ಕೇಂದ್ರ ಸ್ಥಾಪನೆಗೆ ತುಮಕೂರು ಜಿಲ್ಲೆಯಲ್ಲಿ 710 ಕೋಟಿ ರು, ಬಾಲಾಜಿ ವೇಫರ್ಸ್ 550 ಕೋಟಿ ರು, ಎಎಸ್‌ಎಂ ಟೆಕ್ನಾಲಜೀಸ್ 490 ಕೋಟಿ ರು ಹೂಡಿಕೆ ಮಾಡಲು ಕರ್ನಾಟಕ ಉದ್ಯೋಗ ಮಿತ್ರದಲ್ಲಿ ಪ್ರಸ್ತಾವನೆ ನೀಡಿವೆ ಎಂದು ಅವರು ಮಾಹಿತಿ ನೀಡಿದ್ದಾರೆ.

ವೈದ್ಯಕೀಯ ಮತ್ತು ಸ್ಯಾನಿಟರಿ ಸಾಧನಗಳನ್ನು ತಯಾರಿಸುವ ಟಿಜೆಡ್‌ಎಂಒ ಇಂಡಿಯಾ 58 ಕೋಟಿ, ಎಚ್125 ಮಾದರಿಯ ಏರ್-ಬಸ್‌ಗೆ ಬೇಕಾಗುವ ಬಿಡಿಭಾಗಗಳ ತಯಾರಿಕೆ ಟಿಎಎಸ್‌ಎಲ್ ಕೋಲಾರದ ವೇಮಗಲ್‌ನಲ್ಲಿ 500 ಕೋಟಿ, ಏವಿಯಾನಿಕ್ಸ್ ಮತ್ತು ರಕ್ಷಣಾ ಕ್ಷೇತ್ರದ ಸಾಧನಗಳ ತಯಾರಿಕೆಗೆ ಸಾಫ್ರಾನ್ ಎಲೆಕ್ಟ್ರಾನಿಕ್ಸ್ ಕಂಪನಿಯು 250 ಕೋಟಿ ಹೂಡಿಕೆ ಮಾಡುತ್ತಿವೆ.

- ಎಂ.ಬಿ.ಪಾಟೀಲ್ ಬೃಹತ್ ಕೈಗಾರಿಕಾ ಸಚಿವ

ತಯಾರಿಕಾ ವಲಯದಲ್ಲಿ ಹೆಸರು ಮಾಡಿರುವ ಸಿಫ್ಲೆಕ್ಸ್ ಕಂಪನಿಯು ಸೆಮಿಕಂಡಕ್ಟರ್ ಕ್ಷೇತ್ರದಲ್ಲಿ ಮುಖ್ಯವಾಗಿರುವ ಸಿಲಿಕಾನ್ ಬಿಡಿಭಾಗಗಳನ್ನು ತಯಾರಿಸುವ ಸ್ಥಾವರ ಸ್ಥಾಪನೆಗೆ 9,300 ಕೋಟಿ ರು, ಎಂಮೀ ಎನರ್ಜಿ ಕಂಪನಿಯು ಬೆಂಗಳೂರಿನ ಐಟಿಐಆರ್ ಪ್ರದೇಶದಲ್ಲಿ ಸೌರಕೋಶ ಮತ್ತು ಮಾಡ್ಯೂಲ್ ತಯಾರಿಕೆ ವಿಸ್ತರಣೆಗೆ 5,495 ಕೋಟಿ, ಜಿಂದಾಲ್ ಸ್ಟೀಲ್ಸ್ ವಿಜಯನಗರದಲ್ಲಿ ಎಲೆಕ್ಟ್ರಿಕಲ್ ಸ್ಟೀಲ್ ಘಟಕ ಸ್ಥಾಪನೆಗೆ 7 ಸಾವಿರ ಕೋಟಿ ರು. ಹೂಡಿಕೆ ಮಾಡುವ ಪ್ರಸ್ತಾವನೆಗಳನ್ನು ಸಲ್ಲಿಸಿವೆ ಎಂದು ವಿವರಿಸಿದ್ದಾರೆ.

ಬಳ್ಳಾರಿಯಲ್ಲಿ ನಾಳೆ ಬೃಹತ್ ಸಮಾವೇಶ

50 ಸಾವಿರ ಜನರು ಸೇರುವ ನಿರೀಕ್ಷೆ

ಬಳ್ಳಾರಿ: ಬಳ್ಳಾರಿಯ ಘರ್ಷಣೆಯನ್ನು ನಿಷ್ಪಕ್ಷಪಾತ ತನಿಖೆಗೆ ಸಿಬಿಐಗೆ ವಹಿಸಬೇಕು, ಶಾಸಕ ಭರತ್ ರೆಡ್ಡಿ ಮತ್ತು ಬೆಂಬಲಿಗರನ್ನು ಬಂಧಿಸಬೇಕು ಎಂದು ಒತ್ತಾಯಿಸಿ ಜ.17ರಂದು ಬೃಹತ್ ಸಮಾವೇಶ ಹಮ್ಮಿಕೊಳ್ಳಲಾಗಿದೆ ಎಂದು ಮಾಜಿ ಸಚಿವ ಬಿ.ಶ್ರೀರಾಮುಲು ಹೇಳಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಸಮಾವೇಶ ಕೇವಲ ಬಳ್ಳಾರಿ ಗಲಭೆಗೆ ಸಂಬಂಧಿಸಿದ ಪ್ರತಿರೋಧದ ಸಮಾವೇಶ ಅಲ್ಲ, ಬದಲಿಗೆ ಕಲ್ಯಾಣ ಕರ್ನಾಟಕ ಭಾಗದಲ್ಲಿ ಹದಗೆಟ್ಟಿರುವ ಕಾನೂನು ಸುವ್ಯವಸ್ಥೆಯನ್ನು ವಿರೋಧಿಸಿ ನಡೆಯುತ್ತಿರುವ ಸಮಾವೇಶ. ಕಲಬುರಗಿ ರಿಪಬ್ಲಿಕ್ ಆಗಿದೆ. ಅಲ್ಲಿ ಅಕ್ರಮ ಗಣಿಗಾರಿಕೆ ನಡೆಯುತ್ತಿದೆ ಎಂದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ವಿಜಯೇಂದ್ರ, ಛಲವಾದಿ ನಾರಾಯಣಸ್ವಾಮಿ ಆರೋಪಿಸಿದ್ದರು. ಅಲ್ಲಿಗೆ ಹೋದಾಗ ಅವರ ಮೇಲೆ ಕಲ್ಲು ಬಂಡೆಗಳನ್ನು ಹಿಡಿದು ಹಲ್ಲೆಗೆ ಯತ್ನಿಸಲಾಯಿತು. ಅಲ್ಲಿಯೂ ಕಾನೂನು ಸುವ್ಯವಸ್ಥೆ ಹದಗೆಟ್ಟಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಸಮಾವೇಶದಲ್ಲಿ 50 ಸಾವಿರ ಜನ ಸೇರುವ ನಿರೀಕ್ಷೆ ಇದೆ. ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ.ವಿಜಯೇಂದ್ರ, ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ, ಪ್ರತಿಪಕ್ಷ ನಾಯಕ ಆರ್.ಅಶೋಕ ಸೇರಿದಂತೆ ರಾಜ್ಯ ನಾಯಕರು ಸಮಾವೇಶದಲ್ಲಿ ಪಾಲ್ಗೊಳ್ಳಲಿದ್ದಾರೆ ಎಂದರು.



ಬಳ್ಳಾರಿ ಗಲಭೆಗೆ ಸಂಬಂಧಿಸಿದಂತೆ ಪೊಲೀಸರು, ಸಿಐಡಿಗೆ ಎಲ್ಲ ಮಾಹಿತಿ ನೀಡಲಾಗಿದೆ. ಘಟನೆಗೆ ಪೊಲೀಸ್ ವೈಫಲ್ಯ ಕಾರಣ. ಸತೀಶ್ ರೆಡ್ಡಿಯ ಬಂದೂಕಿನ ಪರವಾನಗಿ ಮುಕ್ತಾಯಗೊಂಡಿದ್ದರೂ ಅದನ್ನು ಹೇಗೆ ಬಳಸುತ್ತಿದ್ದಾನೆ? ಸತೀಶ್ ರೆಡ್ಡಿ ಹಾಗೂ ಶಾಸಕ ನಾರಾ ಭರತ್ ರೆಡ್ಡಿ ಅವರನ್ನು ಬಂಧಿಸಬೇಕು.

- ಬಿ.ಶ್ರೀರಾಮುಲು ಮಾಜಿ ಸಚಿವ

ಜಗ್ಗೇಶ್ ಧ್ವನಿಗೆ ಕೇಂದ್ರ ಅಸ್ತು

ಬೆಂಗಳೂರು: ನಟ, ರಾಜ್ಯಸಭಾ ಸದಸ್ಯ ಜಗ್ಗೇಶ್ ಅವರು ಪೈರಸಿ ವಿರುದ್ಧ ಧ್ವನಿ ಎತ್ತಿದ್ದಾರೆ. ರಾಜ್ಯಸಭೆಯಲ್ಲಿ ಅವರು ಈ ಬಗ್ಗೆ ಚರ್ಚಿಸಿದ್ದಾರೆ. ಅದರ ಫಲವಾಗಿ ಸರಕಾರದಿಂದ ಭರವಸೆ ಸಿಕ್ಕಿದೆ.

ಪೈರಸಿ ಮುಕ್ತ ಚಿತ್ರರಂಗದತ್ತ ಮಹತ್ವದ ಹೆಜ್ಜೆ

ಈ ಬಗ್ಗೆ ಜಗ್ಗೇಶ್ ಅವರು ಸಾಮಾಜಿಕ ಜಾಲತಾಣದಲ್ಲಿ ಹಂಚಿಕೊಂಡಿದ್ದಾರೆ. ಎಲ್ಲ ಭಾಷೆಯ ಚಿತ್ರರಂಗಕ್ಕೂ ಪೈರಸಿ ಎಂಬುದು ಮಾರಕ ಆಗಿದೆ. ಇದರ ವಿರುದ್ಧ ಹೋರಾಡಲು ಕನ್ನಡ ಚಿತ್ರರಂಗದ ಯಾರೂ ತಮಗೆ ಬೆಂಬಲ ನೀಡಲಿಲ್ಲ ಎಂದು ಜಗ್ಗೇಶ್ ಅವರು ಬೇಸರ ವ್ಯಕ್ತಪಡಿಸಿದ್ದಾರೆ.

ರಾಜ್ಯಸಭೆಯಲ್ಲಿ ಸಿನಿಮಾ ಪೈರಸಿ ಕಳ್ಳರ ಮಟ್ಟಹಾಕಲು ಶೂನ್ಯ ವೇಳೆಯಲ್ಲಿ ಕೇಂದ್ರ ಸರಕಾರವನ್ನು ಒತ್ತಾಯ ಮಾಡಿದ ಪ್ರತಿಫಲಕ್ಕೆ ಕೇಂದ್ರ ಸರಕಾರ ಒಪ್ಪಿಗೆ ಸೂಚಿಸಿ ಆಧುನಿಕ ತಂತ್ರಜ್ಞಾನ ಬಳಸಿ ಅಂತಹ ಸಿನಿಮಾ ಕಳ್ಳರನ್ನು ಕಂಡುಹಿಡಿದು ದಂಡ, ಜೈಲು ಕ್ರಮ ತೆಗೆದುಕೊಳ್ಳುವ ಹಾಗೂ ಸಿನಿಮಾ ಪೈರಸಿ ಆಪ್ ಬಂದ್ ಮಾಡುವ ನಿರ್ಧಾರ ಮಾಡಿದ್ದು, ವೈಯಕ್ತಿಕವಾಗಿ ಹಾಗೂ ಭಾರತೀಯ ಚಿತ್ರರಂಗದ ಪರ ಹರ್ಷ ವ್ಯಕ್ತಪಡಿಸುವೆ. ಚಿತ್ರರಂಗದ ಅನ್ನ 45 ವರ್ಷದಿಂದ ತಿಂದು ಬೆಳೆದ ನಾನು ಅದರ ಋಣ ತೀರಿಸುವ ನನ್ನ ಯತ್ನಕ್ಕೆ ಚಿತ್ರರಂಗದ ಯಾರೊಬ್ಬರೂ ಬೆಂಬಲ ವ್ಯಕ್ತಪಡಿಸಲಿಲ್ಲ (ಭಾಮಾ ಹರೀಶ್, ಬಣಕಾರ್, ಯೂಟೂಬ್ ಅನಿಲ್ ಯಾದವ್ ಗೆಳೆಯರು ಹಾಗೂ ಕೋಣ ನಿರ್ಮಾಪಕರ ಸಹಕಾರ ಹೊರತುಪಡಿಸಿ) ಎಂಬ ದುಃಖ ಕಾಡಿತು. ಆದರೂ ಪರವಾಗಿಲ್ಲ ನನ್ನ ಜೀವನದ ಪ್ರತಿ ಘಟ್ಟದಲ್ಲಿಯೂ ನಾನು ಏಕಾಂಗಿ ಹೋರಾಟ ಮಾಡಿ ನನ್ನ ಕನ್ನಡದ ಜನರ ಆಶೀರ್ವಾದದಿಂದ ಗಟ್ಟಿನೆಲೆ ಪಡೆದು ಕಂಬದಂತೆ ನಿಂತಿರುವೆ ಎಂದು ತಿಳಿಸಿದ್ದಾರೆ.

ನನ್ನ ಕೊನೆ ಉಸಿರಿನವರೆಗೂ ಉತ್ತಮ ಕಾರ್ಯಕ್ಕೆ ರಾಯರ ಆಶೀರ್ವಾದ ಪಡೆದು ನುಗ್ಗಿ ಕಾರ್ಯ ಮಾಡಿ ದೇವರು ಹಾಗೂ ದೇವರ ರೂಪದ ಜನರು ಮೆಚ್ಚುವಂತೆ ಬಾಳುವೆ. ಹರಸಿ ಹಾರೈಸಿ ಕನ್ನಡ ಚಿತ್ರರಂಗದ ಉಳಿವಿಗೆ ಎಂದು ಜಗ್ಗೇಶ್ ಅವರು ಸಾಮಾಜಿಕ ಜಾಲತಾಣದಲ್ಲಿ ಬರೆದುಕೊಂಡಿದ್ದಾರೆ. ಜಗ್ಗೇಶ್ ಅವರ ಕಾರ್ಯಕ್ಕೆ ಅಭಿಮಾನಿಗಳು ಕಮೆಂಟ್‌ಗಳ ಮೂಲಕ ಮೆಚ್ಚುಗೆ ಸೂಚಿಸಿದ್ದಾರೆ.

ಚಾಮುಂಡಿ ಬೆಟ್ಟದಲ್ಲಿ ಶಾಶ್ವತ ಕಾಮಗಾರಿ ನಿರ್ಮಾಣ ಬೇಡ

ಬೆಂಗಳೂರು: ಮೈಸೂರಿನ ಪ್ರಸಿದ್ಧ ಚಾಮುಂಡೇಶ್ವರಿ ಬೆಟ್ಟದಲ್ಲಿ ಯಾವುದೇ ಶಾಶ್ವತ ಕಾಮಗಾರಿ ನಿರ್ಮಾಣ ಮಾಡಬಾರದು ಎಂದು ಹೈಕೋರ್ಟ್ ರಾಜ್ಯ ಸರಕಾರಕ್ಕೆ ನಿರ್ದೇಶಿಸಿದೆ. ಚಾಮುಂಡೇಶ್ವರಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರ ರಚನೆಯ ಸಿಂಧುತ್ವ ಪ್ರಶ್ನಿಸಿ ಮೈಸೂರು ರಾಜಮನೆತನದ ಪ್ರಮೋದಾ ದೇವಿ ಒಡೆಯರ್ ಸಲ್ಲಿಸಿರುವ ರಿಟ್ ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠ ಈ ಕುರಿತಂತೆ ಮಧ್ಯಂತರ ಆದೇಶ ನೀಡಿದೆ.

ವಿಚಾರಣೆ ವೇಳೆ ಪ್ರಮೋದಾ ದೇವಿ ಪರ ಪದಾಂಕಿತ ಹಿರಿಯ ವಕೀಲ ಜೆ.ಸಾಯಿ ದೀಪಕ್, ದೇವಾಲಯದ ಆಸ್ತಿ ಮಾಲಿಕತ್ವ ವಿವಾದವು ಇದೇ ಹೈಕೋರ್ಟ್‌ನ ವಿಭಾಗೀಯ ನ್ಯಾಯಪೀಠದ ಮುಂದೆ ವಿಚಾರಣೆಗೆ ಬಾಕಿ ಇದೆ. ಈ ನಡುವೆ ರಾಜ್ಯ ಸರಕಾರ ಶಾಸನದ ಮೂಲಕ ಚಾಮುಂಡೇಶ್ವರಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರವನ್ನು ಅಸ್ತಿತ್ವಕ್ಕೆ ತಂದಿದೆ. ಈ ಪ್ರಾಧಿಕಾರವು ಅರ್ಜಿದಾರರಿಗೆ ಯಾವುದೇ ಸಭೆಯ ನೋಟಿಸ್‌ಗಳನ್ನು ನೀಡುತ್ತಿಲ್ಲ ಮತ್ತು ದೇವಾಲಯದ ಆವರಣದಲ್ಲಿ ಕೆಲವು ಶಾಶ್ವತ ನಿರ್ಮಾಣಗಳ ಕಾಮಗಾರಿ ನಡೆಸುತ್ತಿದೆ ಎಂದು ದೂರಿದರು.

ಇದಕ್ಕೆ ರಾಜ್ಯ ಸರಕಾರದ ಪರ ಹಾಜರಿದ್ದ ಹೆಚ್ಚುವರಿ ಅಡ್ವೊಕೇಟ್ ಜನರಲ್ ಎನ್.ದೇವದಾಸ್ (ಎಎಜಿ), ಕೇಂದ್ರ ಸರಕಾರದ ಪ್ರಸಾದ್ ಯೋಜನೆಯಡಿ ಚಾಮುಂಡಿ ಬೆಟ್ಟದಲ್ಲಿ ಕಾಮಗಾರಿ ಕೈಗೊಳ್ಳಲಾಗಿದೆ. ದೇವಾಲಯದ ಆವರಣದಲ್ಲಿ ಯಾವುದೇ ಶಾಶ್ವತ ಕಾಮಗಾರಿ ನಡೆಸುವುದಿಲ್ಲ. ಬೇಸಿಗೆ ಸಮೀಪಿಸುತ್ತಿರುವ ಕಾರಣ ಭಕ್ತರ ಹಿತದೃಷ್ಟಿಯಿಂದ ತಂಗುದಾಣ ನಿರ್ಮಿಸಲಾಗುತ್ತಿದೆ ಎಂದು ವಿವರಿಸಿದರು.

ವಾದ-ಪ್ರತಿವಾದ ಆಲಿಸಿದ ನ್ಯಾಯಪೀಠ, ಮುಂದಿನ ವಿಚಾರಣೆಯ ದಿನಾಂಕದೊಳಗಾಗಿ ಪ್ರಸಾದ್ ಯೋಜನೆ ಅಡಿಯಲ್ಲಿ ಕೈಗೊಳ್ಳುತ್ತಿರುವ ಕಾಮಗಾರಿ ಮತ್ತು ಯೋಜನೆಯ ಅನುಷ್ಠಾನದ ವಿಧಾನದ ವಿವರಗಳನ್ನು ಕೋರ್ಟ್‌ಗೆ ಹಾಜರುಪಡಿಸಬೇಕು ಎಂದು ರಾಜ್ಯ ಮತ್ತು ಕೇಂದ್ರ ಸರಕಾರಕ್ಕೆ ತಾಕೀತು ಮಾಡಿತು. ಅಲ್ಲದೆ, ಕೇಂದ್ರ ಸರಕಾರದ ಯೋಜನೆಯಡಿ ಯಾವ ರೀತಿಯ ಕಾಮಗಾರಿಗಳಿಗೆ ಅವಕಾಶವಿದೆ ಎಂಬುದನ್ನು ತಿಳಿಸಿ ಎಂದು ಉಭಯ ಸರಕಾರಗಳಿಗೆ ನಿರ್ದೇಶಿಸಿ ವಿಚಾರಣೆಯನ್ನು ಫೆಬ್ರವರಿ 13ಕ್ಕೆ ಮುಂದೂಡಿತು.

ಕೇಂದ್ರ ಪ್ರವಾಸೋದ್ಯಮ ಸಚಿವಾಲಯವನ್ನೂ ಪ್ರತಿವಾದಿಯನ್ನಾಗಿ ಸೇರ್ಪಡೆ ಮಾಡಬೇಕೆಂಬ ಮಧ್ಯಂತರ ಅರ್ಜಿ ಸ್ವೀಕರಿಸಿದ ನ್ಯಾಯಪೀಠ ಡೆಪ್ಯುಟಿ ಸಾಲಿಸಿಟರ್ ಜನರಲ್ ಎಚ್.ಶಾಂತಿಭೂಷಣ್ ಅವರಿಗೆ ನೋಟಿಸ್ ಪಡೆಯಲು ಸೂಚಿಸಿತು.

ಅರ್ಜಿದಾರರ ಕೋರಿಕೆ ಏನು?

ಶ್ರೀ ಚಾಮುಂಡೇಶ್ವರಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರ ಕಾಯ್ದೆ-2024 ಸಂವಿಧಾನದ 13, 25, 26 ಮತ್ತು 29ನೇ ವಿಧಿಗಳ ಉಲ್ಲಂಘನೆ. ಈ ಕಾಯ್ದೆಯನ್ನು ಏಕಪಕ್ಷೀಯವಾಗಿ ರೂಪಿಸಲಾಗಿದ್ದು, ತಾರತಮ್ಯದಿಂದ ಕೂಡಿದೆ. ಆದ್ದರಿಂದ, ಇದನ್ನು ಅಸಿಂಧುಗೊಳಿಸಬೇಕು ಎಂದು ಅರ್ಜಿದಾರರು ಕೋರಿದ್ದಾರೆ.

ಕಡಿಮೆಯಿರುವ 800ರಿಂದ 1,200 ರುಪಾಯಿ ಮೊತ್ತ ಸರಿದೂಗಿಸಲು ಮನವಿ

ಕಡಲೆಗೆ ಕನಿಷ್ಠ ಬೆಂಬಲ ಬೆಲೆ ಹೆಚ್ಚಿಸಲು ಸಿಎಂ ಪತ್ರ

ಬೆಂಗಳೂರು: ರಾಜ್ಯ ಕಡಲೆ ಬೆಳೆಗಾರರು ಸಂಕಷ್ಟದಲ್ಲಿದ್ದೂ, ಕೂಡಲೇ ಕನಿಷ್ಠ ಬೆಂಬಲ ಬೆಲೆ ಹೆಚ್ಚಿಸಬೇಕು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಕೇಂದ್ರ ಕೃಷಿ ಸಚಿವ ಶಿವರಾಜ್ ಸಿಂಗ್ ಚೌಹಾಣ್ ಅವರಿಗೆ ಆಗ್ರಹಿಸಿದ್ದಾರೆ.

ಈ ಸಂಬಂಧ ಪತ್ರ ಬರೆದಿರುವ ಸಿದ್ದರಾಮಯ್ಯ ಅವರು, 'ಕರ್ನಾಟಕದಲ್ಲಿ ಕಡಲೆ ಬೆಳೆಯುವ ರೈತರು ಎದುರಿಸುತ್ತಿದ್ದಾರೆ. ಕ್ವಿಂಟಲ್ ಕಡಲೆ ಕಾಳಿಗೆ 5,875 ರು. ಕನಿಷ್ಠ ಬೆಂಬಲ ಬೆಲೆಯಿದೆ. ಆದರೆ, ಮಾರುಕಟ್ಟೆ ಬೆಲೆಗಳು ಎಂಎಸ್‌ಪಿಗಿಂತ ತೀರಾ ಕಡಿಮೆಯಾಗಿದ್ದು, ರೈತರು ಮಾರಾಟದಲ್ಲಿ ಸಂಕಷ್ಟಕ್ಕೆ ಸಿಲುಕಿ ದ್ದಾರೆ. ರೈತರ ಆದಾಯವನ್ನು ರಕ್ಷಿಸಲು ಮತ್ತು ಮಾರುಕಟ್ಟೆಯನ್ನು ಸ್ಥಿರಗೊಳಿಸಲು ಬೆಲೆ ಬೆಂಬಲ ಯೋಜನೆಯಲ್ಲಿ ಖರೀದಿಯನ್ನು ತಕ್ಷಣವೇ ಪ್ರಾರಂಭಿಸಬೇಕು ಎಂದು ಆಗ್ರಹಿಸಿದ್ದಾರೆ.

ಕಡಲೆಯು ಕರ್ನಾಟಕದ ಪ್ರಮುಖ ದ್ವಿದಳ ಧಾನ್ಯ ಬೆಳೆಗಳಲ್ಲಿ ಒಂದಾಗಿದೆ. ಇದನ್ನು 9.24 ಲಕ್ಷ ಹೆಕ್ಟೇರ್‌ನಲ್ಲಿ ಬೆಳೆಯಲಾಗುತ್ತದೆ. ಅಂದಾಜು 6.27 ಲಕ್ಷ ಮೆಟ್ರಿಕ್ ಟನ್ ಉತ್ಪಾದನೆಯಾಗುತ್ತದೆ. ಧಾರವಾಡ, ಗದಗ, ಬೆಳಗಾವಿ, ವಿಜಯಪುರ, ಕಲಬುರಗಿ, ಯಾದಗಿರಿ, ಬೀದರ್, ರಾಯಚೂರು, ಕೊಪ್ಪಳ, ಬಳ್ಳಾರಿ, ಚಿತ್ರದುರ್ಗ, ಬಾಗಲಕೋಟೆ, ದಾವಣಗೆರೆ ಮತ್ತು ಚಿಕ್ಕಮಗಳೂರು ಮುಂತಾದ ಪ್ರದೇಶಗಳಲ್ಲಿ ರೈತರು ಕಡಲೆ ಬೆಳೆಯುತ್ತಾರೆ. ಸಣ್ಣ ಮತ್ತು ಅತಿ ಸಣ್ಣ ರೈತರಿಗೆ, ಅನಿಶ್ಚಿತ ಹವಾ ಮಾನ ಪರಿಸ್ಥಿತಿಗಳಲ್ಲಿ ತಿಂಗಳುಗಳ ಕಠಿಣ ಪರಿಶ್ರಮದ ನಂತರ ಕಡಲೆ ಕೊಯ್ದು ಆದಾಯದ ಏಕೈಕ ಮೂಲವಾಗಿದೆ. ಆದರೂ ರಾಜ್ಯದಲ್ಲಿ ಚಾಲ್ತಿಯಲ್ಲಿರುವ ಆತಂಕಕಾರಿ ಮಾರುಕಟ್ಟೆ ಪರಿಸ್ಥಿತಿ ಬಗ್ಗೆ ತುರ್ತು ನಿಮ್ಮ ಗಮನವನ್ನು ಸೆಳೆಯಲು ಬಯಸುತ್ತೇನೆ ಎಂದು ಪತ್ರದಲ್ಲಿ ತಿಳಿಸಿದ್ದಾರೆ.

ಬಿಜೆಪಿಗೆ ಮರಳುವಂತೆ ಕಾರ್ಯಕರ್ತರ ಒತ್ತಡ

ದಾವಣಗೆರೆ: ಬಿಜೆಪಿಗೆ ಮರಳುವಂತೆ ಕಾರ್ಯಕರ್ತರು ಒತ್ತಾಯಿಸುತ್ತಿದ್ದಾರೆ ಎಂದು ಮಾಜಿ ಡಿಸಿಎಂ ಕೆ.ಎಸ್.ಈಶ್ವರಪ್ಪ ಹೇಳಿದ್ದಾರೆ. ಹರಿಹರದ ಪಂಚಮಸಾಲಿ ಪೀಠದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿ, ಪಕ್ಷದಲ್ಲಿ ಪರಿವರ್ತನೆ ಆಗಬೇಕು ಎಂದು ನಾನು ಹೊರಗೆ ಬಂದಿದ್ದೇನೆ. ಆ ಪರಿವರ್ತನೆ ಇವತ್ತಲ್ಲ ನಾಳೆ ಆಗುತ್ತದೆ. ಬಿಜೆಪಿ ಕಾರ್ಯಕರ್ತರು ಪಕ್ಷದಲ್ಲಿ ಸಾಕಷ್ಟು ನೋವು ಅನುಭವಿಸುತ್ತಿದ್ದಾರೆ. ನನ್ನ ಮನಸ್ಸಲ್ಲೂ, ಯತ್ನಾಳ್ ಮನಸ್ಸಲ್ಲೂ ಇದೆ ವಿಚಾರ ಇದೆ. ನಮ್ಮ ಕುತ್ತಿಗೆ ಕೊಯ್ದರೂ ಹಿಂದುತ್ವ ಬಿಟ್ಟು ಬೇರೆ ಕಡೆ ಹೋಗಲ್ಲ. ಇವತ್ತಲ್ಲ ನಾಳೆ ಪಕ್ಷಕ್ಕೆ ಒಳ್ಳೆಯ ಸ್ಥಿತಿ ಬರುತ್ತದೆ. ಬಿಜೆಪಿ ಪಾದಯಾತ್ರೆ ವಿಚಾರಕ್ಕೂ ನನಗೂ ಸಂಬಂಧ ಇಲ್ಲ ಎಂದು ಹೇಳಿದರು.

ಚಿನ್ನಸ್ವಾಮಿಯಲ್ಲಿ ಮತ್ತೆ ಕ್ರಿಕೆಟ್ ಪಂದ್ಯ ಆರಂಭ?

← ಮೊದಲಪುಟದಿಂದ

ಈಗಾಗಲೇ ಬೆಂಗಳೂರು ನಗರ ಪೊಲೀಸರು ಸೂಚಿಸಿರುವ ಪ್ರಕಾರ, ಸ್ಟೇಡಿಯಂನಲ್ಲಿ ಕೆಲವೊಂದು ಬದಲಾವಣೆಗಳನ್ನು ಮಾಡಲಾಗುತ್ತಿದೆ. ವಿಶೇಷವಾಗಿ ವಿಶಾಲವಾಗಿ ಪ್ರವೇಶ ದ್ವಾರಗಳನ್ನು ನಿರ್ಮಿಸಲಾಗುತ್ತಿದೆ. ಜತೆಗೆ ಅಗ್ನಿಶಾಮಕ ಪರಿಕರಗಳ ಅಳವಡಿಕೆ ಕಾರ್ಯ ಕೂಡ ನಡೆದಿದೆ. ಅಗ್ನಿಶಾಮಕ ದಳದಿಂದಲೂ ಅನುಮತಿ ಪಡೆಯುವ ಕೆಲಸ ನಡೆಯುತ್ತಿದೆ. ಸ್ಟೇಡಿಯಂನೊಳಗೆ ಆ್ಯಂಬ್ಯುಲೆನ್ಸ್, ಅಗ್ನಿಶಾಮಕ ವಾಹನಗಳು ಬರುವಂತೆ ವಿಶಾಲವಾಗಿ ಪ್ರವೇಶ, ಎಕ್ಸಿಟ್ ಗೇಟ್ ನಿರ್ಮಿಸುವಂತೆ ಪೊಲೀಸ್ ಹಾಗೂ ಅಗ್ನಿಶಾಮಕ ದಳದ ಅಧಿಕಾರಿಗಳು ಸೂಚಿಸಿದ್ದರು.

ಕಳೆದ ವರ್ಷ ಆರ್‌ಸಿಬಿ ಐಪಿಎಲ್ ಗೆದ್ದ ನಂತರ ನಡೆಸಿದ ವಿಜಯೋತ್ಸವದ ವೇಳೆ ಸಂಭವಿಸಿದ ಕಾಲ್ತುಳಿತದಲ್ಲಿ 11 ಜನ ಮೃತಪಟ್ಟಿದ್ದರು. ಇದರಿಂದ ಇಡೀ ಸರಕಾರ ಮತ್ತು ಪೊಲೀಸ್ ಇಲಾಖೆ ತಲೆತಗ್ಗಿಸುವಂತಾಗಿತ್ತು. ಸೂಕ್ತ ಭದ್ರತೆ ನೀಡದ ಹಿನ್ನಲೆಯಲ್ಲಿ ಪೊಲೀಸ್ ಆಯುಕ್ತರಾಗಿದ್ದ ದಯಾನಂದ್ ಸೇರಿ ಹಲವರ ತಲೆದಂಡವಾಗಿತ್ತು. ಅಲ್ಲದೆ ಆರ್‌ಸಿಬಿ ವ್ಯವಸ್ಥಾಪಕರು ಸೇರಿ ಹಲವರ ಬಂಧನ ಕೂಡ ಆಗಿತ್ತು. ನಿವೃತ್ತ ನ್ಯಾ. ಮೈಕಲ್ ಡಿ ಕುನ್ಹಾ ನೇತೃತ್ವದಲ್ಲಿ ಸಮಿತಿ ರಚಿಸಿ ಸರಕಾರ ವರದಿ ಕೇಳಿತ್ತು. ಇದಕ್ಕೆಲ್ಲ ಕಾರಣ ಚಿನ್ನಸ್ವಾಮಿಯಲ್ಲಿ ವ್ಯವಸ್ಥೆ ಸರಿ ಇಲ್ಲದ್ದು ಎಂದು ಸಮಿತಿ ವರದಿ ನೀಡಿತ್ತು. ಅಂದಿನ ಘಟನೆಗೆ ಸ್ಟೇಡಿಯಂನಲ್ಲಿರುವ 16 ಲೋಪಗಳೇ ಕಾರಣ ಎಂದು ಕುನ್ಹಾ ವರದಿಯಲ್ಲಿ ಉಲ್ಲೇಖಿಸಲಾಗಿತ್ತು.

ಕಪಿಲೆಯ ತಟದಲ್ಲಿ ಸುತ್ತೂರು ಜಾತ್ರೆ, ಸಾಂಸ್ಕೃತಿಕ ವೈಭವ ಅನಾವರಣ

ಶ್ರೀ ಶಿವರಾತ್ರಿ ದೇಶೀಕೇಂದ್ರ ಸ್ವಾಮೀಜಿ ಸಮ್ಮುಖದಲ್ಲಿ ನಾನಾ ಕಾರ್ಯಕ್ರಮಗಳಿಗೆ ಚಾಲನೆ | ಮೊದಲ ದಿನವೇ ಸಹಸ್ರಾರು ಭಕ್ತರು ಭಾಗಿ

ಮೈಸೂರು: ಒಕ್ಕಣೆ ಮುಗಿಸಿದ ರೈತಕುಲದ ಮನಸ್ಸಿಗೆ ಮುದ ನೀಡುವ ಸುತ್ತೂರು ಜಾತ್ರಾ ಮಹೋತ್ಸವ ಗುರುವಾರ ಕಪಿಲೆಯ ತಟದಲ್ಲಿ ವಿಧ್ಯುಕ್ತವಾಗಿ ಆರಂಭಗೊಳ್ಳುವ ಮೂಲಕ ಈ ಭಾಗದ ಸಾಂಸ್ಕೃತಿಕ ವೈಭವ ಅನಾವರಣಗೊಂಡಿತು.

ಈ ಮೂಲಕ ಹಳೇ ಮೈಸೂರು ಭಾಗದ ಆಸ್ತಿಕ ಸಮುದಾಯದ ಅಸ್ಮಿತೆಯೆನಿಸಿದ ಸುತ್ತೂರಿನ ಶ್ರೀ ವೀರಸಿಂಹಾಸನ ಮಹಾಸಂಸ್ಥಾನದ ಆದಿಜಗದ್ಗುರು ಶ್ರೀ ಶಿವರಾತ್ರೀಶ್ವರ ಶಿವಯೋಗಿಗಳ ಜಾತ್ರಾ ಮಹೋತ್ಸವ ಸಹಸ್ರಾರು ಭಕ್ತಗಣದ ನಡುವೆ ತೆರೆದುಕೊಂಡಿತು.

ಜಾತ್ರಾ ಮಹೋತ್ಸವದ ಮೊದಲ ದಿನವಾದ ಗುರುವಾರ ವಸ್ತುಪ್ರದರ್ಶನ, ಕೃಷಿಮೇಳ, ಸಾಂಸ್ಕೃತಿಕ ಮೇಳ, ಆರೋಗ್ಯ ತಪಾಸಣಾ ಶಿಬಿರ, ದೋಣಿ ವಿಹಾರ ಸೇರಿದಂತೆ ಹಲವು ಹತ್ತು ಕಾರ್ಯಕ್ರಮಗಳು ಏಕಕಾಲದಲ್ಲಿ ಚಾಲನೆಗೊಂಡವು.

ಗುರುವಾರ ಮುಂಜಾನೆ ನಾಲ್ಕು ಗಂಟೆಗೆ ಕರ್ತೃ ಗದ್ದುಗೆಯಲ್ಲಿ ಅನುಜ್ಞೆ, ಮಹಾಸಂಕಲ್ಪಪೂರ್ವಕ ಮಹಾರುದ್ರಾಭಿಷೇಕ ನೆರವೇರಿತು. ನಂತರ ಮೇಗಳಾಪುರ-ಮಾಧವಗೆರೆ ಗ್ರಾಮಗಳಲ್ಲಿ ಸ್ನೇಹ-ಸೌಹಾರ್ದ-ಶಾಂತಿ ಪ್ರಾರ್ಥನಾ ಸಂಚಲನದ ಪ್ರಭಾತ್ ಪೇರಿ ನಡೆಯಿತು.

ಮೈಸೂರಿನ ಹೊಸಮಠದ ಕಿರಿಯ ಶ್ರೀಗಳಾದ ಶ್ರೀಸಿದ್ದಬಸವ ಸ್ವಾಮಿಗಳಿಂದ ಷಟ್‌ಸ್ಥಲ ಧ್ವಜಾರೋಹಣ, ಮಳವಳ್ಳಿ ತಾಲೂಕಿನ ಕುಂದೂರು ಬೆಟ್ಟದ ಶ್ರೀರಸಸಿದ್ದೇಶ್ವರ ಮಠದ ಕಿರಿಯ ಶ್ರೀಗಳಾದ ಶ್ರೀರುದ್ರಮಹಾಂತ ಸ್ವಾಮೀಜಿ ಧರ್ಮ ಸಂದೇಶ ನೀಡಿದರು.

ಬೆಳಗ್ಗೆ ಎಂಟು ಗಂಟೆಗೆ ಸರಿಯಾಗಿ ಆದಿಜಗದ್ಗುರು ಶ್ರೀಶಿವರಾತ್ರೀಶ್ವರ ಶಿವಯೋಗಿಗಳ ಉತ್ಸವಮೂರ್ತಿಗೆ ಅಭಿಷೇಕ ಹಾಗೂ ಮಹಾಮಂಗಳಾರತಿ ನೆರವೇರಿತು. ಮಧ್ಯಾಹ್ನ ಉತ್ಸವಮೂರ್ತಿಯನ್ನು ಶ್ರೀಮಠದಿಂದ ಕರ್ತೃ ಗದ್ದುಗೆಗೆ ಬಿಜಯಂಗೈಯಲಾಯಿತು. ತದನಂತರ ಕರ್ತೃ ಗದ್ದುಗೆಯಲ್ಲಿ ಆಗ್ರೋದಕ, ಪುಣ್ಯಾಹ, ನಾಂದಿ, ಕಲಶ ಸ್ಥಾಪನೆ ನೆರವೇರಿದವು.

ಸುತ್ತೂರು ಶ್ರೀಕ್ಷೇತ್ರದ ಪೀಠಾಧಿಪತಿ ಶ್ರೀಶಿವರಾತ್ರಿ ದೇಶೀಕೇಂದ್ರ ಸ್ವಾಮೀಜಿ ಅವರ ದಿವ್ಯ ಸಾನಿಧ್ಯದಲ್ಲಿ ಅಥಣಿಯ ಗಚ್ಚಿನ ಮಠದ ಶ್ರೀ ಶಿವಬಸವ ಸ್ವಾಮೀಜಿ, ದಾವಣಗೆರೆಯ ಶ್ರೀ ಕುಮಾರ ವಿರೂಪಾಕ್ಷ ಸ್ವಾಮೀಜಿ, ಅಮಿನಗಡದ ಶ್ರೀಚಂದ್ರಶೇಖರನಾಥ ಸ್ವಾಮೀಜಿಯವರ ದಿವ್ಯ ಸಮ್ಮುಖದಲ್ಲಿ ನಾನಾ ಕಾರ್ಯಕ್ರಮಗಳಿಗೆ ಚಾಲನೆ ನೀಡಲಾಯಿತು.

ಕ್ಷೇತ್ರದ ಕರ್ತೃ ಗದ್ದುಗೆಯ ಪಕ್ಕದಲ್ಲಿ ಹಾಕಲಾಗಿದ್ದ ಬೃಹತ್ ವೇದಿಕೆಯಲ್ಲಿ ಮಾಜಿ ಮುಖ್ಯಮಂತ್ರಿ ಜಗದೀಶ್ ಶೆಟ್ಟರ್ ಅಧ್ಯಕ್ಷತೆಯಲ್ಲಿ ನಡೆದ ಕಾರ್ಯಕ್ರಮದಲ್ಲಿ ವಸ್ತುಪ್ರದರ್ಶನ, ಕೃಷಿ ಮೇಳ, ಸಾಂಸ್ಕೃತಿಕ ಮೇಳ, ಆರೋಗ್ಯ ತಪಾಸಣಾ ಶಿಬಿರ, ದೋಣಿ ವಿಹಾರ ಕಾರ್ಯಕ್ರಮಗಳು ಚಾಲನೆಗೊಂಡವು.

ಸುತ್ತೂರು ಜಾತ್ರಾ ಮಹೋತ್ಸವಕ್ಕೆ ಅದ್ದೂರಿ ಚಾಲನೆ ನೀಡಲಾಯಿತು. ಈ ವೇಳೆ ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್, ಶಾಸಕರಾದ ತಮ್ಮಯ್ಯ, ವಿಧಾನ ಪರಿಷತ್ ಸದಸ್ಯ ಕೆ.ಶಿವಕುಮಾರ್, ಬಣ್ಣಾರಿ ಅಮ್ಮನ್ ಶುಗರ್ಸ್ ಅಧ್ಯಕ್ಷ ಎಸ್.ವಿ.ಬಾಲಸುಬ್ರಹ್ಮಣ್ಯಂ, ಶಿಲ್ಪಾ ಶೆಟ್ಟರ್, ಮೈಸೂರು ಜಿಪಂ ಸಿಇಒ ಯುಕೇಶ್ ಕುಮಾರ್ ಇನ್ನಿತರರು ಉಪಸ್ಥಿತರಿದ್ದರು.

ಜನಾಕರ್ಷಿಸಿದ ಕೃಷಿ ಮೇಳ

ಮೈಸೂರಿನ ಪ್ರಾದೇಶಿಕ ಬೆಳೆಗಾಳದ ನಂಜನಗೂಡು ರಸಬಾಳೆ, ಮೈಸೂರು ವೀಳ್ಯದೆಲೆ, ಮೈಸೂರು ಮಲ್ಲಿಗೆ ಹಾಗೂ ಈರನಗೆರೆ ಬದನೆ ಬೆಳೆಗಳ ಪ್ರಾತ್ಯಕ್ಷಿಕೆ ಹಮ್ಮಿಕೊಳ್ಳಲಾಗಿತ್ತು. ಬಳ್ಳಿ, ಸಸಿಗಳ ಲೋಕ, ಕಸಿ ಟೊಮ್ಯಾಟೋ, ಬದನೆ ಬೆಳೆ ಹಾಗೂ ವೈವಿಧ್ಯಮಯ ಪುಷ್ಪ ಪ್ರದರ್ಶನವನ್ನು ಪ್ರಾತ್ಯಕ್ಷಿಕೆ ಸಹಿತ ಏರ್ಪಡಿಸಲಾಗಿತ್ತು. ಒಂದು ಎಕರೆ 'ಕೃಷಿ ಬ್ರಹ್ಮಾಂಡ', ನೆರಳುಮನೆಯಲ್ಲಿ ಬೆಳೆದ ಹಲವಾರು ದೇಸಿ ಹಾಗೂ ವಿದೇಶಿ ತರಕಾರಿಗಳು, ಏಕದಳ, ದ್ವಿದಳ ಧಾನ್ಯಗಳು, ಎಣ್ಣೆಕಾಳುಗಳು, ವಾಣಿಜ್ಯ ಬೆಳೆಗಳು, ಮೇವಿನ ಬೆಳೆಗಳು, ವಿವಿಧ ಫಲಪುಷ್ಪಗಳು, ತೋಟಗಾರಿಕೆ ಬೆಳೆಗಳು, ರೇಷ್ಮೆಕೃಷಿ, ಹನಿ ಮತ್ತು ತುಂತುರು ನೀರಾವರಿ ಪದ್ಧತಿಗಳನ್ನು ಅನುಸರಿಸಿ ಬೆಳೆದಿರುವ ಸುಮಾರು 300 ಬೆಳೆಗಳು ಹಾಗೂ ವಿವಿಧ ತಳಿಗಳ ಪ್ರಾತ್ಯಕ್ಷಿಕೆ ಮತ್ತು ಪ್ರದರ್ಶನಕ್ಕೆ ವ್ಯವಸ್ಥೆ ಮಾಡಲಾಗಿತ್ತು.

ಶ್ರೀಮಠದಿಂದ ನೈತಿಕ ಶಕ್ತಿ ಈ ಸಮಾಜಕ್ಕೆ ಸಿಕ್ಕಿದೆ. ಈ ಜಾತ್ರಾ ಮಹೋತ್ಸವ ಬಹಳ ವೈಶಿಷ್ಟ್ಯದಿಂದ ಕೂಡಿದೆ. ನಮ್ಮ ದೇಶದ ಸಾಂಸ್ಕೃತಿಕ ಪರಂಪರೆ ಈ ಜಾತ್ರೆಗಳಲ್ಲಿ ಅಡಗಿದೆ. ಧರ್ಮದ ಜಾಗೃತಿ ಮಠಗಳಿಂದ ನಡೆದಿದೆ. ನಮ್ಮ ದೇಶದ ಪರಂಪರೆ ಹಾಗೂ ಸಂಸ್ಕೃತಿಯನ್ನು ನಮ್ಮ ಜನ ಮರೆತಿಲ್ಲ. ಅದಕ್ಕೆ ಈ ಜಾತ್ರೆಗಳೇ ಸಾಕ್ಷಿ. ಇಂದು ಮಾನಸಿಕ ಶಾಂತಿ ಸಿಗಬೇಕಾದರೆ ಇಂತಹ ಜಾತ್ರೆಗಳು ನಿರಂತರವಾಗಿ ನಡೆಯಬೇಕು. ಸುತ್ತೂರು ಶ್ರೀಗಳು ಧಾರ್ಮಿಕ ಜಾಗೃತಿ ಮೂಡಿಸುತ್ತಿರುವುದು ಮಾತ್ರವಲ್ಲದೆ, ಶೈಕ್ಷಣಿಕ ಕ್ರಾಂತಿ ಕೂಡ ಮಾಡಿದ್ದಾರೆ.

- ಜಗದೀಶ್ ಶೆಟ್ಟರ್ ಸಂಸದ

ಸಮಾಚಾರ ಸಣ್ಣದಲ್ಲ

ಇಂದಿನಿಂದ ರಾಷ್ಟ್ರೀಯ ಸಂಗೀತೋತ್ಸವ ಆರಂಭ

ಬೆಂಗಳೂರು: ವೇದನಾದ ಪ್ರತಿಷ್ಠಾನ ವತಿಯಿಂದ ಆಯೋಜಿಸಿರುವ ಷಡ್ವಿಂಶ ರಾಷ್ಟ್ರೀಯ ಸಂಗೀತೋತ್ಸವ ಕಾರ್ಯಕ್ರಮವನ್ನು ಶಿವಮೊಗ್ಗದ ಸಾಗರದಲ್ಲಿ ಇಂದಿನಿಂದ ಆರಂಭವಾಗಲಿದೆ. 26ನೇ ವರ್ಷದ ಷಡ್ವಿಂಶ ರಾಷ್ಟ್ರೀಯ ಸಂಗೀತೋತ್ಸವ ಕಾರ್ಯಕ್ರಮ ಜ.16ರಿಂದ 18ವರೆಗೆ ಶಿವಮೊಗ್ಗ ಜಿಲ್ಲೆಯ ಸಾಗರದ ಗಾಂಧಿ ಮೈದಾನದಲ್ಲಿ ಆಯೋಜಿಸಲಾಗಿದೆ. ಈ ವೇಳೆ ರಾತ್ರಿ 9.30ರಿಂದ ಆಯೋಜಿಸಿರುವ ಹಿಂದೂಸ್ತಾನಿ ಶಾಸ್ತ್ರೀಯ ಸಂಗೀತ ಕಾರ್ಯಕ್ರಮದಲ್ಲಿ ಮುಂಬೈನ ರಾಮ್ ದೇಶಪಾಂಡೆ, ಬೆಂಗಳೂರಿನ ಗುರುಮೂರ್ತಿ ವೈದ್ಯ, ಡಾ. ರವೀಂದ್ರ ಕಾಟೋಟಿ ಉಪಸ್ಥಿತರಿರಲಿದ್ದಾರೆ ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಶಾಸಕ ಬಿ.ಪಿ.ಹರೀಶ್ ವಿರುದ್ಧ ಎಫ್‌ಐಆರ್

ದಾವಣಗೆರೆ: ಕೆರೆಯ ಮಣ್ಣು ಸಾಗಾಟ ಸಂಬಂಧ ರೈತರೊಬ್ಬರಿಗೆ ಜಾತಿ ನಿಂದನೆ ಮಾಡಿದ ಆರೋಪದ ಮೇಲೆ ಹರಿಹರ ಕ್ಷೇತ್ರದ ಶಾಸಕ ಬಿ.ಪಿ.ಹರೀಶ್ ವಿರುದ್ಧ ದಾವಣಗೆರೆಯ ಡಿಸಿಆರ್‌ಇ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ದಾವಣಗೆರೆ ತಾಲೂಕಿನ ಕಾಡಜ್ಜಿ ಗ್ರಾಮದಲ್ಲಿ ಅಕ್ರಮವಾಗಿ ಮಣ್ಣು ಗಣಿಗಾರಿಕೆ ನಡೆಯುತ್ತಿದೆ ಎಂಬ ದೂರು ಕೇಳಿಬಂದ ಹಿನ್ನೆಲೆಯಲ್ಲಿ ಜ.12ರಂದು ರಂದು ಶಾಸಕ ಬಿ.ಪಿ.ಹರೀಶ್ ಅವರು ಕಾಡಜ್ಜಿ ಗ್ರಾಮಕ್ಕೆ ತೆರಳಿದ್ದರು. ಅಲ್ಲಿ ಮಣ್ಣು ಸಾಗಾಟ ಮಾಡುವುದನ್ನು ನಿಲ್ಲಿಸುವಂತೆ ರೈತರಿಗೆ ಸೂಚಿಸಿದ್ದರು. ಈ ಸಂದರ್ಭದಲ್ಲಿ ಗ್ರಾಮದ ರೈತ ಹಾಗೂ ಬಿ.ಪಿ. ಹರೀಶ್ ನಡುವೆ ವಾಗ್ವಾದ ನಡೆದಿತ್ತು. ಈ ಸಂದರ್ಭದಲ್ಲಿ ಶಾಸಕರು ಗ್ರಾಮದ ದಲಿತ ಸಮುದಾಯದ ಕಾಂತರಾಜ್ ಎಂಬುವವರಿಗೆ ಜಾತಿ ನಿಂದನೆ ಮಾಡಿದ್ದಾರೆ ಎಂದು ದೂರಿನಲ್ಲಿ ಉಲ್ಲೇಖಿಸಲಾಗಿದೆ.

ರಾಜೀವ್‌ಗೌಡನನ್ನು ಕೂಡಲೇ ಬಂಧಿಸಿ

ಬೆಂಗಳೂರು: ರಾಜ್ಯದಲ್ಲಿ ಸರಕಾರಿ ಅಧಿಕಾರಿಗಳು ಮತ್ತು ನೌಕರರಿಗೆ ರಕ್ಷಣೆಯೇ ಇಲ್ಲವಾಗಿದೆ. ಸರಕಾರದ ಮುಖ್ಯ ಕಾರ್ಯದರ್ಶಿಯವರು ಸರ್ಕಾರದ ತಾಳಕ್ಕೆ ತಕ್ಕಂತೆ ಕುಣಿಯದೇ ನೌಕರರು ಮತ್ತು ಅಧಿಕಾರಿ ಗಳ ವಿರುದ್ಧ ದೌರ್ಜನ್ಯ ನಡೆಸುವ ಮತ್ತು ಬೆದರಿಕೆ ಹಾಕುವವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಬೇಕು ಎಂದು ವಿಧಾನ ಪರಿಷತ್ ವಿರೋಧ ಪಕ್ಷದ ನಾಯಕ ಛಲವಾದಿ ನಾರಾಯಣಸ್ವಾಮಿ ಆಗ್ರಹಿಸಿದ್ದಾರೆ. ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಶಿಡ್ಲಘಟ್ಟ ಪೌರಾಯುಕ್ತೆ ಅಮೃತಾಗೌಡ ಅವರನ್ನು ಸುಟ್ಟು ಹಾಕುವುದಾಗಿ ಬೆದರಿಕೆ ಹಾಕಿರುವ ಕಾಂಗ್ರೆಸ್ ನಾಯಕ ರಾಜೀವ್ ಗೌಡ ವಿರುದ್ಧ ಎಫ್‌ಐಆರ್ ದಾಖಲಿಸಿ, ಗೂಂಡಾ ಕಾಯ್ದೆಯಡಿ ಬಂಧಿಸಬೇಕು ಎಂದು ಒತ್ತಾಯಿಸಿದರು. ಸರಕಾರಿ ಅಧಿಕಾರಿಗಳು ಮತ್ತು ನೌಕರರ ವಿರುದ್ಧ ದೌರ್ಜನ್ಯ ನಡೆದಾಗ ಮಧ್ಯ ಪ್ರವೇಶಿಸಲು ನಿಮಗೆ ನಿಮ್ಮದೇ ಆದ ಅಧಿಕಾರ ಇದೆ. ಸರಕಾರ ತಪ್ಪು ಮಾಡಿದಾಗ ಅದನ್ನು ತಿದ್ದಿ ಬುದ್ಧಿ ಹೇಳುವ ಕೆಲಸವನ್ನೂ ಮಾಡಬೇಕು. ನಿಮ್ಮ ಕರ್ತವ್ಯ ನೀವು ಮಾಡದೇ ಇದ್ದರೆ ನಿಮ್ಮ ವಿರುದ್ಧವೂ ಹೋರಾಟ ಮಾಡಬೇಕಾಗುತ್ತದೆ ಎಂದು ಸರಕಾರದ ಮುಖ್ಯ ಕಾರ್ಯದರ್ಶಿ ಯವರಿಗೆ ಎಚ್ಚರಿಕೆ ನೀಡಿದ್ದಾರೆ.

VISHWAVANI TV SPECIAL
ಯುಟ್ಯೂಬ್ ಚಾನೆಲ್ ಸಬ್‌ಸ್ಕ್ರೈಬ್ ಆಗಿ

ದಿನ ವಿಶೇಷ

16 ಜನವರಿ 2026 ಶುಕ್ರವಾರ

» ಸೂರ್ಯೋದಯ	06-47
» ಸೂರ್ಯಾಸ್ತ	06-11
» ತಿಥಿ	ತ್ರಯೋದಶಿ
» ನಕ್ಷತ್ರ	ಮೂಲಾ
» ಸಂವತ್ಸರ	ವಿಶ್ವಾವಸು
» ಆಯನ	ಉತ್ತರಾಯಣ
» ಋತು	ಶಿಶಿರ
» ಮಾಸ	ಪುಷ್ಯ
» ಪಕ್ಷ	ಕೃಷ್ಣ ಪಕ್ಷ

ವಿಶ್ವವಾಣಿ ಕ್ಲಬ್ ಹೌಸ್

16.01.2026

ಸಂಜೆ: 06.55 ರಿಂದ 08.05 ರವರೆಗೆ

ಶುಕ್ರವಾರದ ಅತಿಥಿ

ಶ್ರೀ ಪಿ.ಕೆ.ನಂದೀಶ

ವಿಷಯ

ಶ್ರೀ ಅರವಿಂದರ ಸಾವಿತ್ರಿ-10

vishwavani.news

ಹರಿಹರದ ವೀರಶೈವ ಲಿಂಗಾಯತ ಪಂಚಮಸಾಲಿ ಪೀಠದಲ್ಲಿ ಹಮ್ಮಿಕೊಂಡಿದ್ದ ಹರ ಜಾತ್ರೆಯಲ್ಲಿ ರೈಲ್ವೆ ಖಾತೆ ರಾಜ್ಯ ಸಚಿವ ವಿ.ಸೋಮಣ್ಣ ಭರವಸೆ

ಕೇಂದ್ರ ಸರಕಾರದಿಂದ ಚನ್ನಮ್ಮ ವಿಜಯೋತ್ಸವ ಆಚರಣೆ

ವಿಶ್ವವಾಣಿ ಸುದ್ದಿಮನೆ ಹರಿಹರ

ವೀರರಾಣಿ ಕಿತ್ತೂರು ಚನ್ನಮ್ಮ ಪ್ರತಿಮೆಯನ್ನು ಸಂಸತ್ತಿನ ಆವರಣದಲ್ಲಿ ಸ್ಥಾಪಿಸಲಾಗಿದೆ. ವಿಜಯೋತ್ಸವದ ದಿನ ಪ್ರತಿಮೆಗೆ ಮಾಲಾರ್ಪಣೆ ಮಾಡಿ ಗೌರವ ಸಲ್ಲಿಸಲಾಗಿದೆ. ಮುಂದಿನ ವರ್ಷದಿಂದ ಈ ವಿಜಯೋತ್ಸವವನ್ನು ಕೇಂದ್ರ ಸರಕಾರದ ವತಿಯಿಂದಲೇ ಆಚರಿಸಲು ಪ್ರಧಾನಿ ನರೇಂದ್ರ ಮೋದಿ ಅವರ ಬಳಿ ಚರ್ಚಿಸುವೆ ಎಂದು ರೈಲ್ವೆ ಖಾತೆ ರಾಜ್ಯ ಸಚಿವ ವಿ. ಸೋಮಣ್ಣ ಹೇಳಿದರು.

ಹರಿಹರದ ವೀರಶೈವ ಲಿಂಗಾಯತ ಪಂಚಮಸಾಲಿ ಪೀಠದಲ್ಲಿ ಗುರುವಾರ ಆಯೋಜಿಸಿದ್ದ ಹರ ಜಾತ್ರೆ ಮತ್ತು ಕಿತ್ತೂರು ರಾಣಿ ಚನ್ನಮ್ಮ ವಿಜಯೋತ್ಸವದ ದ್ವಿಶತಮಾನೋತ್ಸವ ಸಮಾರಂಭ ಹಾಗೂ ಲಿಂ. ಡಾ.ಮಹಾಂತ ಶಿವಾಚಾರ್ಯರ 13ನೇ ಪುಣ್ಯ ಸ್ಮರಣೋತ್ಸವ ಉದ್ಘಾಟಿಸಿ ಮಾತನಾಡಿದ ಅವರು, ವೀರರಾಣಿ ಕಿತ್ತೂರು ಚನ್ನಮ್ಮನ ಇತಿಹಾಸವನ್ನು ಮುಂದಿನ ಪೀಳಿಗೆಗೆ ಪರಿಚಯಿಸಬೇಕಿದೆ. ಅವರು ಪಂಚಮಸಾಲಿ ಸಮುದಾಯಕ್ಕೆ ಮಾತ್ರವಲ್ಲ, ಸರ್ವ ಕನ್ನಡಿಗರಿಗೆ ಸ್ಫೂರ್ತಿಯ ಚಿಲುಮೆ ಎಂದು ಹೇಳಿದರು.

ವೀರಶೈವ ಲಿಂಗಾಯತ ಪಂಚಮಸಾಲಿ ಹರಿಹರದ ಪೀಠಾಧ್ಯಕ್ಷ ವಚನಾನಂದ ಸ್ವಾಮೀಜಿ ಮಾತನಾಡಿ, ವೀರಶೈವ ಲಿಂಗಾಯತಕ್ಕೆ ಸ್ವಾತಂತ್ರ್ಯ ಧರ್ಮ ಸ್ಥಾನ ಸಿಗುವವರೆಗೂ ಹಿಂದೂವೇ ನಮ್ಮ ಧರ್ಮ. ಜಾತಿ ಗಣತಿ ಸಂದರ್ಭದಲ್ಲಿ ಸ್ಪಷ್ಟ ನಿಲುವು ತಳೆದು ಸಮುದಾಯಕ್ಕೆ ಮಾರ್ಗದರ್ಶನ ನೀಡಲಾಗಿದೆ. ಈ ನಿಲುವಿಗೆ ಸದಾ ಬದ್ಧವಾಗಿರೋಣ ಎಂದರು.

ಪ್ರತಿ ವರ್ಷದ ಮಕರ ಸಂಕ್ರಾಂತಿಗೆ ಹರಜಾತ್ರಾ ಮಹೋತ್ಸವ ಆಯೋಜಿಸಲು ತೀರ್ಮಾನಿಸಲಾಗಿದೆ.

ಹರಿಹರ ತಾಲೂಕಿನ ಹನಗವಾಡಿ ಹೊರವಲಯದ ವೀರಶೈವ ಲಿಂಗಾಯತ ಪಂಚಮಸಾಲಿ ಗುರುಪೀಠದ ಆವರಣದಲ್ಲಿ ಗುರುವಾರ ಆಯೋಜಿಸಿದ್ದ ಹರ ಜಾತ್ರಾ ಮಹೋತ್ಸವವನ್ನು ಕೇಂದ್ರ ಜಲಶಕ್ತಿ ಹಾಗೂ ರೈಲ್ವೆ ಖಾತೆ ರಾಜ್ಯ ಸಚಿವ ವಿ.ಸೋಮಣ್ಣ ಉದ್ಘಾಟಿಸಿದರು.

ರಾಜ್ಯದಲ್ಲಿ 25 ವರ್ಷಗಳಿಂದ ನನೆಗುದಿಗೆ ಬಿದ್ದಿದ್ದ ₹ 49,000 ಕೋಟಿ ವೆಚ್ಚದ ರೈಲ್ವೆ ಯೋಜನೆಗಳನ್ನು ಕೈಗೆತ್ತಿಕೊಳ್ಳಲಾಗಿದೆ. ದಾವಣಗೆರೆ-ಚಿತ್ರದುರ್ಗ-ತುಮಕೂರು ನೇರ ರೈಲು ಮಾರ್ಗ ಸೇರಿ ಹಲವು ಯೋಜನೆಗಳು ಸಾಕಾರ ಗೊಳ್ಳಲಿವೆ. ಪ್ರಧಾನಿ ನರೇಂದ್ರ ಮೋದಿ ಸಾರಥ್ಯದಲ್ಲಿ ದೇಶ ಸಂಪದ್ಭರಿತವಾಗಲಿವೆ. ವಿಶ್ವದ ಆರ್ಥಿಕತೆಯಲ್ಲಿ 4ನೇ ಸ್ಥಾನದಲ್ಲಿರುವ ಭಾರತ ಮೊದಲ ಸ್ಥಾನಕ್ಕೆ ಏರಲಿದೆ.

-ವಿ.ಸೋಮಣ್ಣ ಕೇಂದ್ರ ಸಚಿವ

ಭಕ್ತರಿಗಾಗಿ ಈ ಜಾತ್ರೆಯನ್ನು ನಡೆಸಲಾಗುತ್ತಿದೆ. ಮಠ-ಪೀಠ ಚೆನ್ನಾಗಿ ನಡೆಯುತ್ತಿದೆ. ಇಡೀ ರಾಜ್ಯವನ್ನು ಮೂರು ಬಾರಿ ಸಂಚರಿಸಿ ಸಮುದಾಯದ ಸಂಘಟನೆಗೆ, ಧರ್ಮದ ಒಳಿತಿಗೆ ಪ್ರಯತ್ನಿಸಿದ್ದೇವೆ.

ಎರಡು ಪೀಠಗಳ ನಡುವೆ ದ್ವೇಷವಿಲ್ಲ: ವಚನಾನಂದ ಶ್ರೀ

ಕೂಡಲಸಂಗಮ ಹಾಗೂ ಹರಿಹರ ಪಂಚಮಸಾಲಿ ಪೀಠ ಎರಡೂ ಒಂದೇ. ಎರಡು ಪೀಠ ಹಾಗೂ ಪೀಠಾಧ್ಯಕ್ಷರ ನಡುವೆ ದ್ವೇಷ ಇಲ್ಲ. ಕೂಡಲಸಂಗಮದ ಪೀಠಾಧ್ಯಕ್ಷರು ಸಮುದಾಯ ಸಂಘಟನೆ ಮಾಡಿದ್ದಾರೆ. ಅವರು ಕೂಡ ಒಳ್ಳೆಯ ಕೆಲಸ ಮಾಡುತ್ತಿದ್ದಾರೆ ಎಂದು ಹರಿಹರ ಪೀಠದ ವಚನಾನಂದ ಸ್ವಾಮೀಜಿ ಹೇಳಿದರು. ದ್ವೇಷದಿಂದ ಒಬ್ಬರನ್ನು ಗೆಲ್ಲುವ ಬದಲು ಪ್ರೀತಿಯಿಂದ ಎಲ್ಲರನ್ನೂ ಗೆಲ್ಲೋಣ. ಈವರೆಗೆ ಎದುರಾದ ಟೀಕೆ, ನಿಂದನೆಗೆ ಬೇಸರ ಮಾಡಿಕೊಂಡಿಲ್ಲ. ಟೀಕೆ ಮಾಡಿದ ಎಲ್ಲರನ್ನೂ ನಾನು ಕ್ಷಮಿಸಿದ್ದೇನೆ. ಹರಿಹರ ಪೀಠಕ್ಕೆ ಎಲ್ಲರಿಗೂ ಮುಕ್ತ ಆಹ್ವಾನವಿದೆ ಎಂದು ಹೇಳಿದಾಗ ಭಕ್ತರು ಚಪ್ಪಾಳೆ ತಟ್ಟಿದರು.

ಮಠ-ಪೀಠದ ಏಳಿಗೆಗೆ ರಾಜಕೀಯ ಪಕ್ಷದ ಮುಖಂಡರು ಸಹಕರಿಸಿದ್ದಾರೆ ಎಂದು ಹೇಳಿದರು.

ಮಠದ ದಾಸೋಹಕ್ಕೆ ಈವರೆಗೆ ಭಕ್ತರು ₹ 1.65 ಕೋಟಿ ನೆರವು ನೀಡಿದ್ದಾರೆ. ಇದರಲ್ಲಿ ₹50 ಲಕ್ಷವನ್ನು ಬಸವರಾಜ ಬೊಮ್ಮಾಯಿ, ₹ 25 ಲಕ್ಷವನ್ನು ಎಸ್.ಎಸ್.ಮಲ್ಲಿಕಾರ್ಜುನ್ ಕೊಟ್ಟಿದ್ದಾರೆ. ಇದು ಒಬ್ಬ ವ್ಯಕ್ತಿಯಿಂದಲ್ಲ ಭಕ್ತರಿಂದ ನಡೆಯುತ್ತಿದೆ. ಹರ ದೇಗುಲ ನಿರ್ಮಿಸಿಕೊಟ್ಟವರು ಶಾಮನೂರು ಶಿವಶಂಕರಪ್ಪ, ಮಠಕ್ಕೆ ನೀರು ಬರಲು ಕಾರಣರಾದವರು ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್. ಸಿರಿಗೆರೆ ತರಳಬಾಳು ಮಠದ ರೀತಿಯಲ್ಲಿ ಪಾರದರ್ಶಕ ವ್ಯವಸ್ಥೆಯನ್ನು ರೂಪಿಸಲಾಗಿದೆ ಎಂದರು.

ತರಳಬಾಳು ಮಠದ ಶಿವಮೂರ್ತಿ ಶಿವಾಚಾರ್ಯ ಸ್ವಾಮೀಜಿ ಸಾನ್ನಿಧ್ಯ ವಹಿಸಿದ್ದರು. ರಾಜನಹಳ್ಳಿಯ ವಾಲ್ಮೀಕಿ ಗುರುಪೀಠದ ಪ್ರಸನ್ನಾನಂದಪುರಿ ಸ್ವಾಮೀಜಿ, ಮಡಿವಾಳ ಗುರುಪೀಠದ ಬಸವ ಮಾಚಿದೇವ ಸ್ವಾಮೀಜಿ, ಮಲ್ಲಿಕಾರ್ಜುನ ಸ್ವಾಮೀಜಿ, ಸಂಗನಬಸಪ್ಪ ಶಿವಾಚಾರ್ಯ ಸ್ವಾಮೀಜಿ ಹಾಜರಿದ್ದರು.

ಹಾವೇರಿಯ ಗೊಟಗೋಡಿಯ 'ಉತ್ಸವ ರಾಕ್ ಗಾರ್ಡನ್' ಕಲಾ ನಿರ್ದೇಶಕಿ ಡಾ.ವೇದಾರಾಣಿ ದಾಸನೂರು ಅವರಿಗೆ ಕಿತ್ತೂರು ರಾಣಿ ಪ್ರಶಸ್ತಿ ಪ್ರದಾನ ಮಾಡಲಾಯಿತು.

ರಾಜ್ಯಸಭಾ ಸದಸ್ಯ ವೀರಣ್ಣ ಕಡಾಡಿ, ಸಂಸದ ಬಸವರಾಜ ಬೊಮ್ಮಾಯಿ, ಮಾಜಿ ಸಚಿವ ಕೆ.ಎಸ್. ಈಶ್ವರಪ್ಪ, ಪಂಚಮಸಾಲಿ ಸಮಾಜದ ರಾಜ್ಯ ಘಟಕದ ಅಧ್ಯಕ್ಷ ಸೋಮನಗೌಡ ಮಾಲಿಪಾಟೀಲ, ಶಾಸಕರಾದ ಕೆ.ಎಸ್.ಬಸವಂತಪ್ಪ, ಡಿ.ಜಿ.ಶಾಂತನಗೌಡ, ಯಾಸೀರ್ ಖಾನ್ ಪಠಾಣ್, ಪ್ರಕಾಶ ಕೋಳಿವಾಡ, ವಿಧಾನ ಪರಿಷತ್ ಸದಸ್ಯ ಕೆ.ಎಸ್.ನವೀನ್, ಮಾಜಿ ಸಚಿವ ಎಂ.ಪಿ.ರೇಣುಕಾಚಾರ್ಯ, ಜೆಡಿಯು ರಾಜ್ಯ ಘಟಕದ ಅಧ್ಯಕ್ಷ ಮಹಿಮ ಪಟೇಲ್, ಜಾತ್ರಾ ಮಹೋತ್ಸವ ಸಮಿತಿ ಅಧ್ಯಕ್ಷ ಬಸವರಾಜ ವೀರಾಪುರ, ಪೀಠದ ಪ್ರಧಾನ ಧರ್ಮದರ್ಶಿ ಬಿ.ಸಿ. ಉಮಾಪತಿ, ರೈತ ಮುಖಂಡ ತೇಜಸ್ವಿ ಪಟೇಲ್, ಬಿಜೆಪಿ ಎಸ್‌ಟಿ ಮೋರ್ಚಾ ರಾಜ್ಯ ಘಟಕದ ಅಧ್ಯಕ್ಷ ಬಂಗಾರು ಹನಮಂತು, ಬಿಜೆಪಿ ಜಿಲ್ಲಾ ಘಟಕದ ಅಧ್ಯಕ್ಷ ಎನ್.ರಾಜಶೇಖರ್ ಹಾಜರಿದ್ದರು.

2025ರ ಜೂನ್‌ನಿಂದ ಅಂದಾಜು 60 ಕೋಟಿ ರು. ಮೊತ್ತದ ಔಷಧ ಬಿಲ್‌ಗಳು ಬಾಕಿ

ಔಷಧ ಪೂರೈಕೆ ಕಂಪನಿಗಳಿಗೆ ಬಾಕಿ ಹಣ ಪಾವತಿಗೆ ಆಗ್ರಹ

ಬೆಂಗಳೂರು: ಸಿವಿಲ್ ಕಾಮಗಾರಿಗಳಿಗೆ ಹಣ ಬಿಡುಗಡೆಯಾಗದೆ ಗುತ್ತಿಗೆದಾರರು ಸಂಕಷ್ಟ ಅನುಭವಿಸುತ್ತಿರುವ ಬೆನ್ನಲ್ಲೇ ಇದೀಗ, ಔಷಧ ಪೂರೈಸಿರುವ 100ಕ್ಕೂ ಅಧಿಕ ಔಷಧ ಕಂಪನಿಗಳಿಗೆ ಹಲವು ತಿಂಗಳಿಂದ ಹಣ ಪಾವತಿ ಮಾಡುವಂತೆ ಆಗ್ರಹಿಸಲಾಗಿದೆ.

ಕಾರ್ಮಿಕ ಇಲಾಖೆಯ ವ್ಯಾಪ್ತಿಯ ನೌಕರರ ರಾಜ್ಯ ವಿಮಾ ನಿಗಮದ (ಇಎಸ್‌ಐಸಿ) ಆಸ್ಪತ್ರೆ ಮತ್ತು ಡಿಸ್ಪೆನ್ಸರಿಗಳಿಗೆ ಕೋಟ್ಯಂತರ ರು. ಮೌಲ್ಯದ ವಿವಿಧ ಬಗೆಯ ಜೀವ ರಕ್ಷಕ ಮತ್ತು ಸಾಮಾನ್ಯ ಔಷಧಗಳನ್ನು ಕಂಪನಿಗಳು ಸರಬರಾಜು ಮಾಡಿವೆ. ಅಂದಾಜು 60 ಕೋಟಿ ರು. ಮೊತ್ತದ ಔಷಧ ಬಿಲ್‌ಗಳು ಬಾಕಿ ಉಳಿದಿವೆ. ಇಎಸ್‌ಐಸಿ ನಿಯಮದಂತೆ 4ರಿಂದ 6 ವಾರ ದೊಳಗೆ ಔಷಧ ಪೂರೈಸಿದ್ದ ಕಂಪನಿಗಳಿಗೆ ಹಣ ಪಾವತಿಸುವುದು ಇಲಾಖೆಯ ಅಧಿಕಾರಿಗಳ ಕರ್ತವ್ಯವಾಗಿದೆ. ಆದರೆ, ಆದರೆ, 2025ರ ಜೂನ್‌ನಿಂದ ಈ ಔಷಧ ಬಿಲ್‌ಗಳಿಗೆ ಹಣ ಪಾವತಿಯಾಗಿಲ್ಲ.

ದೆಹಲಿಯ ಇಎಸ್‌ಐ ಕೇಂದ್ರ ಕಚೇರಿಯಲ್ಲಿ ಟೆಂಡರ್ ನಡೆಯುತ್ತದೆ. ರೇಟ್ ಕಾರ್ಡ್ (ಆರ್‌ಸಿ) ಆಧಾರದಲ್ಲಿ ಅರ್ಹತೆ ಪಡೆದ ಕಂಪನಿಗಳಿಗೆ ಔಷಧ ಪೂರೈಸಲು ಕಾರ್ಯಾದೇಶ ಪತ್ರ ನೀಡಲಾಗುತ್ತದೆ. ಕಳೆದ ವರ್ಷ ಪೂರೈಕೆ ಆದೇಶ ಪತ್ರ ಪಡೆದಿರುವ ಕಂಪನಿಗಳು, ರಾಜ್ಯದ ಇಎಸ್‌ಐ ಆಸ್ಪತ್ರೆ ಮತ್ತು ಡಿಸ್ಪೆನ್ಸರಿಗಳಲ್ಲಿ ಔಷಧ ಸರಬರಾಜು ಮಾಡಿವೆ. ಕೇಂದ್ರ ಸರಕಾರದಿಂದ ಈಗಾಗಲೇ ಅನುದಾನ ಬಿಡುಗಡೆಯಾಗಿದ್ದರೂ ರಾಜ್ಯ ಸರಕಾರದ ಕಾರ್ಮಿಕ ಇಲಾಖೆ ಕಂಪನಿಗಳಿಗೆ ಹಣ ಬಿಡುಗಡೆ ಮಾಡುತ್ತಿಲ್ಲ. ಪ್ರತಿ ವರ್ಷ ಕೇಂದ್ರ ಮತ್ತು ರಾಜ್ಯ ಸರಕಾರಗಳಿಂದ ಹತ್ತಾರು ಕೋಟಿ ರು. ಬರುವ ಅನುದಾನದಲ್ಲಿ ಔಷಧಗಳನ್ನು ಖರೀದಿಸಿ ಆಸ್ಪತ್ರೆಗಳಿಗೆ ಸರಬರಾಜು ಮಾಡುವುದು ಕಾರ್ಮಿಕ ಇಲಾಖೆಯ ಜವಾಬ್ದಾರಿಯಾಗಿದೆ.

ಔಷಧಗಳ ಇಂಡೆಂಟ್ ಸಂಗ್ರಹಿಸಿ ಖರೀದಿಸುವುದು ಅಧಿಕಾರಿಗಳು ಕರ್ತವ್ಯವೂ ಹೌದು. ಆದರೆ, ಅಧಿಕಾರಿಗಳ ನಿರ್ಲಕ್ಷ್ಯದಿಂದಾಗಿ ಔಷಧ ಖರೀದಿ ಪ್ರಕ್ರಿಯೆ ಕುಂಟುತ್ತಾ ಸಾಗುತ್ತಿದೆ. ಸಮರ್ಪಕವಾಗಿ ಅನುದಾನವೂ ಸದ್ಬಳಕೆಯಾಗುತ್ತಿಲ್ಲ. ನವಜಾತ ಶಿಶುಗಳಿಗೆ ಬರುವ ಸೂಕ್ಷ್ಮ ಕಾಯಿಲೆಗಳಿಂದ ಹಿಡಿದು ಎಲ್ಲ ತರಹದ ಚಿಕಿತ್ಸೆಗಳು ಕಾರ್ಮಿಕರಿಗೆ ಮತ್ತು ಅವರ ಅವಲಂಬಿತರ ಕುಟುಂಬಗಳಿಗೆ ಈ ಆಸ್ಪತ್ರೆಗಳಲ್ಲಿ ಉಚಿತವಾಗಿ ಚಿಕಿತ್ಸೆ ಸೌಲಭ್ಯ ನೀಡಲಾಗುತ್ತದೆ. ಸಾಮಾನ್ಯ ಕಾಯಿಲೆಗಳಿಂದ ಹಿಡಿದು ಗಂಭೀರ ಕಾಯಿಲೆಗಳ ನಿವಾರಿಸುವ ಔಷಧಗಳು ದಾಸ್ತಾನು ಇಲ್ಲ. ಇದರಿಂದ ರೋಗಿಗಳು ಪರದಾಡುವಂತಾಗಿದೆ.

- **ಅಧಿಕಾರಿಗಳ ನಿರ್ಲಕ್ಷ್ಯದಿಂದಾಗಿ ಕುಂಟುತ್ತಾ ಸಾಗಿದ ಔಷಧ ಖರೀದಿ ಪ್ರಕ್ರಿಯೆ**
- **ಸಾಮಾನ್ಯ, ಗಂಭೀರ ಕಾಯಿಲೆಗಳ ನಿವಾರಿಸುವ ಔಷಧಗಳು ದಾಸ್ತಾನು ಇಲ್ಲ**

ಕನಕಗುರು ಪೀಠದ ಸಿದ್ದರಾಮನಂದ ಸ್ವಾಮೀಜಿ ಹೃದಯಾಘಾತದಿಂದ ಸಾವು

ದೇವದುರ್ಗ (ವೀರಗೋಟ): ದೇವದುರ್ಗ ತಾಲೂಕಿನ ತಿಂಥಣಿ ಬ್ರಿಜ್ಡ್ ಕಾಗಿನೆಲೆ ಕನಕ ಗುರುಪೀಠದ ಸಿದ್ದರಾಮನಂದ ಸ್ವಾಮೀಜಿ (49) ಅವರು ಗುರುವಾರ ಬೆಳಗಿನ ಜಾವ ಹೃದಯಾಘಾತದಿಂದಾಗಿ ನಿಧನರಾಗಿದ್ದಾರೆ.

ಬೆಳಗಿನ ಜಾವ 3.40ರ ಸುಮಾರಿಗೆ ಎದೆನೋವು ಕಾಣಿಸಿಕೊಂಡಿತ್ತು. ಸ್ವಾಮೀಜಿ ಅವರನ್ನು ಲಿಂಗಸೂಗೂರು ಆಸ್ಪತ್ರೆಗೆ ದಾಖಲು ಮಾಡುವುದರಲ್ಲಿ ಹೃದಯಾಘಾತದಿಂದ ಕೊನೆಯುಸಿರೆಳೆದಿದ್ದಾರೆ ಎಂದು ಪೀಠದ ಭಕ್ತರು ತಿಳಿಸಿದ್ದಾರೆ. ತಿಂಥಣಿಯ ಕನಕ ಗುರು ಪೀಠದಲ್ಲಿಯೇ ಹಾಲುಮತದ ಪದ್ಧತಿಯಂತೆ ಅಂತ್ಯಕ್ರಿಯೆ ನಡೆಯಿತು.

ಸಿದ್ದರಾಮಾನಂದ ಸ್ವಾಮೀಜಿ ಮೂಲತಃ ಚಿತ್ರದುರ್ಗ ಜಿಲ್ಲೆಯ ಚಳ್ಳಕೆರೆ ತಾಲೂಕಿನ ಕಲಮರಹಳ್ಳಿಯವರು. ಮಹದೇವಯ್ಯ ಮತ್ತು ಜಯಮ್ಮ ದಂಪತಿಯ 2ನೇ ಪುತ್ರರು. ಸಿದ್ದರಾಮನಂದ ಸ್ವಾಮೀಜಿಯ ಮೂಲ ಹೆಸರು ಮೋಹನ್ ಪ್ರದಾನ ಎಂದು ತಿಳಿದುಬಂದಿದೆ.

18ನೇ ವಯಸ್ಸಿಗೆ ಮನೆ ಬಿಟ್ಟಿದ್ದ ಅವರು ಮೊದಲು ಜೈನ, ಕ್ರೈಸ್ತ, ಬ್ರಹ್ಮಕುಮಾರಿ ಪಂಥಗಳ ಪ್ರಭಾವಕ್ಕೆ ಒಳಗಾಗಿದ್ದರು. ಶರಣ ಸಾಹಿತ್ಯದ ಜತೆಗೆ ಎಲ್ಲ ಧರ್ಮಗಳ ಅಧ್ಯಯನ ಮಾಡಿದ ಸ್ವಾಮೀಜಿಗಳು ಚಿತ್ರದುರ್ಗದ ಮುರುಘಾಮಠದಲ್ಲಿ ಕೆಲ ಕಾಲ ಅಧ್ಯಯನ ಮಾಡಿ, ಬಳಿಕ ನಾಲ್ಕು ವರ್ಷಗಳ ಕಾಲ ಸಿಂಧನೂರಿನಲ್ಲಿ ವಾಸ್ತವ್ಯ ಮಾಡಿದರು. ನಂತರ ದೇವದುರ್ಗ ತಾಲೂಕಿನ ತಿಂಥಣಿ ಬ್ರಿಜ್ಡ್ ಹತ್ತಿರ 2011ರಲ್ಲಿ ಕನಕಗುರು ಪೀಠಕ್ಕೆ ಬಂದು ಕಾಗಿನೆಲೆ ಕನಕ ಗುರುಪೀಠ ಸ್ಥಾಪನೆ ಮಾಡಿದರು. ಪ್ರತಿ ವರ್ಷ ಜನವರಿ 12, 13, 14ರಂದು ಹಾಲುಮತ ಸಂಸ್ಕೃತಿ ವೈಭವ ನಡೆಸುತ್ತಿದ್ದರು. ಈ ವರ್ಷವೂ ಹಾಲು ಮತ ಸಾಹಿತ್ಯ ಸಮ್ಮೇಳನ ಹಮ್ಮಿಕೊಂಡು ಯಶಸ್ವಿಯಾಗಿ ಪೂರ್ಣಗೊಳಿಸಿದ್ದರು. ಸ್ವಾಮೀಜಿ ನಿಧನಕ್ಕೆ ಸಿಎಂ ಸಿದ್ದರಾಮಯ್ಯ, ಡಿಸಿಎಂ ಡಿ.ಕೆ.ಶಿವಕುಮಾರ್, ವಿಧಾನ ಸಭೆ ಪ್ರತಿಪಕ್ಷ ನಾಯಕ ಆರ್.ಅಶೋಕ, ಸಚಿವರಾದ ಶರಣಪ್ರಕಾಶ್ ಪಾಟೀಲ್, ಎನ್.ಎಸ್.ಬೋಸರಾಜು, ಸಂಸದ ಜಿ.ಕುಮಾರ ನಾಯಕ, ಶಾಸಕಿ ಕರೆಮ್ಮ ನಾಯಕ, ಮಾಜಿ ಸಚಿವ ಕೆ.ಶಿವನಗೌಡ ನಾಯಕ, ಮಾಜಿ ಸಂಸದ ಬಿ.ವಿ.ನಾಯಕ ಸೇರಿ ಅನೇಕ ಗಣ್ಯರು ಸಂತಾಪ ಸೂಚಿಸಿದ್ದಾರೆ.

ಮಾಜಿ ಸಚಿವ ಕೃಷ್ಣಪ್ಪ ಸಂತಾಪ

ಬೆಂಗಳೂರು: ಶ್ರೀ ಕಾಗಿನೆಲೆ ಕನಕ ಗುರು ಪೀಠದ ಶ್ರೀ ಸಿದ್ದರಾಮಾನಂದ ಮಹಾಸ್ವಾಮಿಗಳು ನಮ್ಮನ್ನು ಅಗಲಿದ ಸುದ್ದಿ ಆಘಾತಕಾರಿಯಾದದ್ದು. ಸ್ವಾಮೀಜಿ ಅವರ ಅಗಲಿಕೆ ಸಮಾಜಕ್ಕಾದ ಬಹುದೊಡ್ಡ ನಷ್ಟ ಎಂದು ಮಾಜಿ ಸಚಿವ ಆರ್. ಕೃಷ್ಣಪ್ಪ ಕಂಬನಿ ಮಿಡಿದಿದ್ದಾರೆ. ಮಹಾನ್ ಆಧ್ಯಾತ್ಮಿಕ ಗುರುಗಳಾಗಿದ್ದ ಸ್ವಾಮೀಜಿ ಸಮಾಜ ಸುಧಾರಣೆಯ ಭಾಗವಾಗಿ ಉಚಿತ ಶಿಕ್ಷಣದ ಜತೆಗೆ ದಾಸೋಹ, ಸಾಮೂಹಿಕ ವಿವಾಹ,ಆರೋಗ್ಯ ಶಿಬಿರ, ರಕ್ತದಾನ ಶಿಬಿರ ಸೇರಿದಂತೆ ಅನೇಕ ಜನೋಪಕಾರಿ ಕಾರ್ಯಗಳ ಮೂಲಕ ಮಾರ್ಗದರ್ಶಿಗಳಾಗಿದ್ದರು. ಅವರ ಆತ್ಮಕ್ಕೆ ಚಿರ ಶಾಂತಿ ಸಿಗಲಿ ಎಂದು ಪ್ರಾರ್ಥಿಸುತ್ತೇನೆ ಎಂದು ಆರ್. ಕೃಷ್ಣಪ್ಪ ತಿಳಿಸಿದ್ದಾರೆ. ಪಾವಗಡ ತಾಲೂಕಿನ ರಾಯಚೆರ್ಲು ಬೀರಲಿಂಗೇಶ್ವರ ದೇವಸ್ಥಾನದ ಅಧ್ಯಕ್ಷ ಆರ್.ಪಿ. ಸಾಂಬಸದಾಶಿವರೆಡ್ಡಿ ರವರು ತೀವ್ರ ಸಂತಾಪ ವ್ಯಕ್ತಪಡಿಸಿದ್ದಾರೆ.

ದೆಹಲಿಗೆ ಹೋದಾಗ ಎಲ್ಲ ನಾಯಕರನ್ನು ಭೇಟಿ ಮಾಡುತ್ತೇನೆ: ಡಿಕೆಶಿ

ನಾಯಕರ ಭೇಟಿ ಹೊಸತಲ್ಲ, ಸಹಜ ಪ್ರಕ್ರಿಯೆ

ಬೆಂಗಳೂರು: ರಾಹುಲ್ ಗಾಂಧಿ ಅವರನ್ನು ನಾನು ಭೇಟಿ ಮಾಡುವುದರಲ್ಲಿ ಹೊಸತೇನಿಲ್ಲ. ಇದು ಸಹಜ ಪ್ರಕ್ರಿಯೆ ಎಂದು ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಸ್ಪಷ್ಟಪಡಿಸಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಶುಕ್ರವಾರ ದೆಹಲಿಗೆ ಹೋಗುತ್ತಿದ್ದು, ಎಲ್ಲಾ ನಾಯಕರು ಅಲ್ಲೇ ಇರುತ್ತಾರೆ. ಭೇಟಿ ಮಾಡುತ್ತೇನೆ. ರಾಹುಲ್ ಗಾಂಧಿ ಅವರ ಭೇಟಿ ನಂತರ ನಿಮ್ಮ ಬೆಂಬಲಿಗ ಶಾಸಕರು ಸಂತೋಷವಾಗಿದ್ದಾರೆ ಎಂದು ಕೇಳಿದಾಗ, ಅವರು ನಮ್ಮ ಪಕ್ಷದ ನಾಯಕರು. ನಮ್ಮ ಪಕ್ಷದ ನಾಯಕರನ್ನು, ಅಧ್ಯಕ್ಷರನ್ನು ಭೇಟಿ ಮಾಡು ವುದು, ಕರೆ ಮೂಲಕ ಚರ್ಚೆ ಮಾಡುವುದು ಸಹಜ ಪ್ರಕ್ರಿಯೆ. ಅವುಗಳನ್ನು ಸಾರ್ವಜನಿಕವಾಗಿ ಚರ್ಚೆ ಮಾಡುವುದಿಲ್ಲ ಎಂದು ಸ್ಪಷ್ಟಪಡಿಸಿದರು.

ನನ್ನ ಟ್ವೀಟ್ ಬೇರೆ ರೀತಿ ವ್ಯಾಖ್ಯಾನಿಸಲಾಗುತ್ತಿದೆ: ಕರ್ನಾಟಕ ನಾಡಿನ ಜನತೆಗೆ ಸಂಕ್ರಾಂತಿ ಹಬ್ಬದ ಶುಭಾಶಯಗಳು. ಪ್ರಯತ್ನ ವಿಫಲವಾದರೂ ಪ್ರಾರ್ಥನೆ ವಿಫಲವಾಗುವುದಿಲ್ಲ ಎಂದು ನಾನು ಟ್ವೀಟ್ ಮಾಡಿದ್ದನ್ನು ಕೆಲವು ಮಾಧ್ಯಮಗಳು ವಿವಿಧ ರೀತಿ ವ್ಯಾಖ್ಯಾನ ಮಾಡುತ್ತಿವೆ. ಕಾವೇರಿ ಆರತಿಯ ಪ್ರಾರ್ಥನೆಗೆ ನ್ಯಾಯಾಲಯದಲ್ಲಿ ನಮ್ಮ ಪರವಾಗಿ ತೀರ್ಪು ಬಂದಿದೆ. ಮೇಕೆದಾಟು ಯೋಜನೆ ತಾಂತ್ರಿಕ ಅಂಶವನ್ನು ಕೇಂದ್ರ ಜಲ ಆಯೋಗವೇ ತೀರ್ಮಾನ ಮಾಡಬೇಕು ಎಂದು ನಿರ್ದೇಶನ ನೀಡಿದೆ. ಈ ಹಿನ್ನೆಲೆಯಲ್ಲಿ ನಾನು ಈ ಮಾತನ್ನು ಹೇಳುತ್ತಾ ಬಂದಿದ್ದೇನೆ. ಇದನ್ನು ಬೇರೆ ರೀತಿ ವ್ಯಾಖ್ಯಾನ ಮಾಡಿದರೆ ಅರ್ಥವಿಲ್ಲ ಎಂದು ತಿಳಿಸಿದರು.

ಕಲ್ಪತರು ಸಾಹಿತ್ಯ ಪ್ರಶಸ್ತಿಗೆ ಸಿದ್ದಪ್ಪ ಬಿದರಿ ಆಯ್ಕೆ

ಬೆಂಗಳೂರು: ಕಲ್ಪತರು ಸಾಹಿತ್ಯ, ಕಲಾ ಟ್ರಸ್ಟ್ ಪ್ರತಿ ವರ್ಷ ನೀಡುವ ರಾಜ್ಯಮಟ್ಟದ ಮೂರು ಪ್ರಶಸ್ತಿ ಪ್ರಕಟಿಸಿದೆ. ದಿ.ಆರ್.ಜಿ. ಬಸಪ್ಪ ಅವರ ಸ್ಮರಣಾರ್ಥವಾಗಿ ನೀಡಲಾಗುವ ಕಲ್ಪತರು ಸಾಹಿತ್ಯ ಸಿರಿ ದತ್ತಿ ಪ್ರಶಸ್ತಿಗೆ ಬಾಗಲಕೋಟೆ ಜಿಲ್ಲೆಯ ಆಶುಕವಿ ಸಿದ್ದಪ್ಪ ಬಿದರಿ ಅವರನ್ನು ಆಯ್ಕೆ ಮಾಡಲಾಗಿದೆ. ಈ ಪ್ರಶಸ್ತಿ 10 ಸಾವಿರ ನಗದು, ಪ್ರಶಸ್ತಿ ಫಲಕ ಒಳಗೊಂಡಿದೆ. ಕಲ್ಪತರು ಸಂಗೀತ ಸಿರಿ ರಾಜ್ಯ ಪ್ರಶಸ್ತಿಗೆ ಬಳ್ಳಾರಿ ಜಿಲ್ಲೆಯ ಸಂಗೀತ ನಿರ್ದೇಶಕ ರಾಜು ಎಮ್ಮಿಗೂರ ಹಾಗೂ ಕಲ್ಪತರು ಕಲಾಸಿರಿ ಪ್ರಶಸ್ತಿಗೆ ತುಮಕೂರು ಜಿಲ್ಲೆಯ ವೀರಗಾಸೆ ಕಲಾ ವಿದೆ ಮಾಧುರ್ಯ ಆಯ್ಕೆಯಾಗಿದ್ದಾರೆ. ಈ ಎರಡು ಪ್ರಶಸ್ತಿ ತಲಾ 5 ಸಾವಿರ ನಗದು, ಪ್ರಶಸ್ತಿ ಫಲಕ ಹೊಂದಿದೆ. ಪ್ರಶಸ್ತಿ ಪ್ರದಾನ ಸಮಾರಂಭ ಜ.17ರಂದು ಬೆಂಗಳೂರಿನ ಕೃಷ್ಣರಾಜ ಪರಿಷತ್ ಮಂದಿರ ದಲ್ಲಿ ನಡೆಯಲಿದ್ದು, ಕಾರ್ಯಕ್ರಮದಲ್ಲಿ ಸಾಹಿತಿ ಡಾ.ಸತ್ಯಾನಂದ ಪಾತ್ರೋಟ, ಡಾ.ಮನು ಬಳಿಗಾರ ಉಪಸ್ಥಿತರಿರಲಿದ್ದಾರೆ ಎಂದು ಕಲ್ಪತರು ಸಾಹಿತ್ಯ ಕಲಾ ಟ್ರಸ್ಟ್‌ನ ಅಧ್ಯಕ್ಷ ಎಂ.ವಿ ಷಡಕ್ಷರಿ ತಿಳಿಸಿದ್ದಾರೆ.

ಆಹಾರದ ಸ್ಥಿತಿ, ಮಣ್ಣು, ನೀರು, ರೈತರ ಸಂಕಷ್ಟದ ಬಗ್ಗೆ ನಿತ್ಯ 2 ನಿಮಿಷ ಮಾತನಾಡಿ: ಸದ್ಗುರು ಜಗ್ಗಿ ವಾಸುದೇವ್ ಮನವಿ

ಆದಿಯೋಗಿ ಸನ್ನಿಧಿಯಲ್ಲಿ ಮಕರ ಸಂಕ್ರಾಂತಿ ಆಚರಣೆ

ಚಿಕ್ಕಬಳ್ಳಾಪುರ: ದೇಶದ ಆಹಾರದ ಸ್ಥಿತಿ, ಮಣ್ಣಿನ ಅವನತಿ, ನೀರಿನ ಕೊರತೆ ಮತ್ತು ರೈತರ ಸಂಕಷ್ಟದ ಬಗ್ಗೆ ಜಾಗೃತಿ ಮೂಡಿಸಲು ಪ್ರತಿದಿನ ಕೇವಲ ಎರಡು ನಿಮಿಷಗಳನ್ನು ಮೀಸಲಿಡುವಂತೆ ಸದ್ಗುರು ಜಗ್ಗಿ ವಾಸುದೇವ್ ಮನವಿ ಮಾಡಿದರು.

ಈಶಾ ಮಂದಿರದ ಆದಿಯೋಗಿ ಸನ್ನಿಧಿಯಲ್ಲಿ ನಡೆದ ಮಕರ ಸಂಕ್ರಾಂತಿ ಸಂಭ್ರಮ ದಲ್ಲಿ ಮಾತನಾಡಿದ ಅವರು, ನೀವು ಎಲ್ಲರೂ ಪ್ರಜ್ಞೆಯಿಂದ ಕೂಡಿದ್ದರೆ ಪ್ರತಿದಿನ ಕೇವಲ ಎರಡು ನಿಮಿಷ ಈ ದೇಶದ ಮಣ್ಣು, ಈ ದೇಶದ ನೀರು, ಈ ದೇಶದ ಆಹಾರದ ಸ್ಥಿತಿ ಮತ್ತು ರೈತರ ಸಂಕಷ್ಟಗಳ ಬಗ್ಗೆ ಪ್ರತಿದಿನ ನಿಮ್ಮ ಫೋನ್‌ನಲ್ಲಿ ಸ್ವಲ್ಪ ಸಂಶೋಧನೆ ಮಾಡಿ ಏನನ್ನಾದರೂ ಹೇಳಿ. ಎಲ್ಲಕ್ಕಿಂತ ಮುಖ್ಯವಾಗಿ ಕೃಷಿಯನ್ನು ಲಾಭದಾಯಕ ಪ್ರಕ್ರಿಯೆಯನ್ನಾಗಿ ಮಾಡಬೇಕು ಎಂದು ಹೇಳಿದರು.

ಸದ್ಗುರು ಸನ್ನಿಧಿಯಿಂದ ಬೆಂಗಳೂರಿನಲ್ಲಿ ಸೆಪ್ಟೆಂಬರ್ ಅಂತ್ಯಕ್ಕೆ ನಿಗದಿಪಡಿಸಲಾಗಿರುವ ಲಿಂಗ ಭೈರವಿ, ನವಗ್ರಹ ದೇವಾಲಯಗಳು ಮತ್ತು ತೀರ್ಥಕುಂಡಗಳ ಪ್ರತಿಷ್ಠಾಪನೆಯೊಂದಿಗೆ ಕರ್ನಾಟಕಕ್ಕೆ ಒಂದು ಮಹತ್ತರವಾದ ಆಧ್ಯಾತ್ಮಿಕ ಉಡುಗೊರೆಯನ್ನು ಘೋಷಿಸಿದರು. ಸೆಪ್ಟೆಂಬರ್ 28ರಿಂದ ಅಕ್ಟೋಬರ್ 2 ರವರೆಗೆ 5 ದಿನಗಳ ತೀವ್ರತರ ಪ್ರತಿಷ್ಠಾಪನಾ ಪ್ರಕ್ರಿಯೆಯಾಗಿರುತ್ತದೆ ಎಂದು ಸದ್ಗುರು ಹಂಚಿಕೊಂಡರು.

ದಿನವಿಡೀ ನಡೆದ ಆಚರಣೆ: ದಿನವಿಡೀ ನಡೆದ ಆಚರಣೆಯಲ್ಲಿ ನಾಗ, ಯೋಗೇಶ್ವರ ಲಿಂಗದ ಪ್ರತಿಷ್ಠಾಪಿತ ಸ್ಥಳಗಳಲ್ಲಿ ವಿಶೇಷ ಅರ್ಪಣೆಗಳು ನಡೆದವು. ಸ್ಥಳೀಯ ಜನಪದ ಕಲಾವಿದರಿಂದ ಸಾಂಸ್ಕೃತಿಕ ಪ್ರದರ್ಶನಗಳ ಜತೆ ಸೌಂಡ್ಸ್ ಆಫ್ ಈಶ ತಂಡದಿಂದ ಸಂಗೀತ ಮತ್ತು ಈಶ ಸಂಸ್ಕೃತಿಯ ಭಕ್ತಿ ನೃತ್ಯ ಹಾಗೂ ಪ್ರಾಚೀನ ಸಮರ ಕಲೆ ಕಲರಿಪಯಟ್ಟು ಪ್ರದರ್ಶನಗಳು ಕೂಡ ನಡೆದವು. ನಂತರ ಬ್ರಹ್ಮಚಾರಿಗಳು ಆದಿಯೋಗಿಗೆ ಭವ್ಯ ಆರತಿಯನ್ನು ಅರ್ಪಿಸಿದರು.

ಹಬ್ಬದ ಮಹತ್ವದ ಬಗ್ಗೆ ಒಳನೋಟಗಳನ್ನು ಹಂಚಿಕೊಂಡ ಸದ್ಗುರು, ಮಕರ ಸಂಕ್ರಾಂತಿ ಒಂದು ಕಲ್ಪಿತ ಹಬ್ಬವಲ್ಲ, ಇದು ನಂಬಿಕೆಯ ಕಟ್ಟುಪಾಡಿನ ಬಗ್ಗೆಯೂ ಅಲ್ಲ. ಇದು ಜೀವನದ ಒಂದು ಅತ್ಯಂತ ಸೂಕ್ಷ್ಮ ಅವಲೋ ಕನ. ಇದು ವಸಂತ ಋತುವಿನ ಆರಂಭ, ಜೀವನ ಅನೇಕ ವಿಭಿನ್ನ ರೀತಿಯಲ್ಲಿ ವಿಕಾಸ ಗೊಳ್ಳುತ್ತದೆ ಮತ್ತು ಇದು ಸುಗ್ಗಿಯ ಹಬ್ಬವೂ ಹೌದು. ಈ ದಿನದಂದು ನಮ್ಮ ಸುತ್ತಲಿನ ಜೀವನದೊಂದಿಗಿನ ನಮ್ಮ ಸಂಬಂಧವನ್ನು ಆಚರಿಸಲಾಗುತ್ತದೆ ಎಂದು ಹೇಳಿದರು.

ಸದ್ಗುರು ಮತ್ತು ಎಸ್ಪಿ ಕುಶಾಲ್ ಚೌಕ್ಸಿ, ಚಿಕ್ಕಬಳ್ಳಾಪುರದ ಪೊಲೀಸ್ ಅಧೀಕ್ಷಕರು, ಸದ್ಗುರು ಸನ್ನಿಧಿಗೆ ಬೆಂಗಳೂರಿನಿಂದ ಆಗಮಿಸುವ ಸಂದರ್ಶಕರ ಸುರಕ್ಷತೆಗಾಗಿ ಹೊಸ ಪೊಲೀಸ್ ಚೆಕ್ ಪೋಸ್ಟ್ ಉದ್ಘಾಟಿಸಿದರು.

ಅವರೆಕಾಯಿ ಹಬ್ಬ

ಸದ್ಗುರು ಸನ್ನಿಧಿಯಲ್ಲಿ ನಡೆದ ಐದು ದಿನಗಳ ಸಾಂಪ್ರದಾಯಿಕ ಜಾತ್ರೆಯ ಭಾಗವಾಗಿ, ಅವರೆಕಾಯಿ ಹಬ್ಬ ದಕ್ಷಿಣ ಕರ್ನಾಟಕದ ಅವರೆಕಾಳಿನ ವೈಭವವನ್ನು ಮರುಕಳಿಸುವಂತೆ ಮಾಡಿತು. ಈ ಪ್ರದೇಶದಲ್ಲಿ ಮಾತ್ರ ಲಭ್ಯವಿರುವ ಈ ವಿಶೇಷ ಕಾಳುಗಳ ಬಗ್ಗೆ ಮಾತನಾಡಿದ ಸದ್ಗುರುಗಳು, ಇವು ಹೆಚ್ಚಾಗಿ ದಕ್ಷಿಣ ಕರ್ನಾಟಕದಲ್ಲಿ ಮಾತ್ರ ಲಭ್ಯವಿರುವ ವಿಶೇಷವಾದ ಕಾಳುಗಳು. ಆದ್ದರಿಂದ ಈ ಋತುವಿನಲ್ಲಿ ಎಲ್ಲವನ್ನೂ ಈ ಕಾಳುಗಳಿಂದಲೇ ತಯಾರಿಸಲಾಗುತ್ತದೆ ಎಂದು ಹೇಳಿದರು.

ರಾಜ್ಯ ರಾಜಕೀಯದಿಂದ ದೂರ ಸರಿಯುವುದಿಲ್ಲ

ಬೆಂಗಳೂರು: ರಾಜ್ಯ ರಾಜಕೀಯದಿಂದ ದೂರ ಸರಿಯುವುದಿಲ್ಲ. ನಾನು ಎಲ್ಲಿರಬೇಕು ಎಂದು ತೀರ್ಮಾನ ಮಾಡುವುದು ರಾಜ್ಯದ ಜನತೆ. ರಾಜ್ಯ ರಾಜಕೀಯಕ್ಕೆ ಯಾವಾಗ ಬರಬೇಕು ಎಂದು ಜನತೆಯ ಆಶಯದ ಮೇರೆಗೆ ತೀರ್ಮಾನ ಮಾಡುತ್ತೇನೆ ಎಂದು ಕೇಂದ್ರದ ಕೈಗಾರಿಕಾ ಸಚಿವ ಎಚ್.ಡಿ.ಕುಮಾರಸ್ವಾಮಿ ಹೇಳಿದರು.

ಬೆಂಗಳೂರಿನ ನಿವಾಸದ ಬಳಿ ಸುದ್ದಿಗಾರರೊಂದಿಗೆ ಮಾತನಾಡಿ, ನಾವು ಎನ್‌ಡಿಎ ಮೈತ್ರಿಯಲ್ಲಿದ್ದೇವೆ. ಈ ಮೈತ್ರಿಯಲ್ಲಿ ಯಾವುದೇ ಗೊಂದಲಕ್ಕೆ ಅವಕಾಶ ಕೊಡಬಾರದು. ನಮ್ಮ ಉದ್ದೇಶ ರಾಜ್ಯದಲ್ಲಿ ಉತ್ತಮ ಸರಕಾರ ತರಬೇಕೆನ್ನುವುದು ಹಾಗೂ ವೈಯಕ್ತಿಕ ಉದ್ದೇಶ ಎಂದರು. ರಾಜ್ಯದಲ್ಲಿ ಈಗ ಆಡಳಿತ ಹೇಗೆ ನಡೆಯುತ್ತಿದೆ ಎಂದು ನಾನು ನಿರಂತರವಾಗಿ ಗಮನಿಸುತ್ತಿದ್ದೇನೆ. ಒಳ್ಳೆಯ ಸರಕಾರ ಬಂದು ಜನತೆ ನೆಮ್ಮದಿಯಿಂದ ಇರಬೇಕು. ಈ ನಿಟ್ಟಿನಲ್ಲಿ ನಾಡಿನ ಜನತೆ ನಾನು ಯಾವ ಸ್ಥಾನದಲ್ಲಿ ಇರಬೇಕು ಅಂತ ತೀರ್ಮಾನ ಮಾಡಿದರೆ ಅದರಂತೆ ನಡೆಯುತ್ತೇನೆ. ಈ ವಿಷಯ ನನ್ನ ಕೈಯಲ್ಲಿ ಇಲ್ಲ. ನಾನು ರಾಜ್ಯ ರಾಜಕೀಯದಿಂದ ದೂರ ಸರಿಯುತ್ತೇನೆ ಅಂತ ಯಾರಾದರೂ ತಿಳಿದುಕೊಂಡಿದ್ದರೆ ತಪ್ಪು. ನಾನು ರಾಜ್ಯ ರಾಜಕಾರಣದಿಂದ ದೂರ ಸರಿಯಲ್ಲ. ರಾಜ್ಯದ ರಾಜಕಾರಣದಲ್ಲಿ ಇರುತ್ತೇನೆ. ಪ್ರಧಾನಿ ಅವರು ಕೇಂದ್ರದಲ್ಲಿ ಉತ್ತಮ ಜವಾಬ್ದಾರಿ ಕೊಟ್ಟಿದ್ದಾರೆ. ಎರಡು ಇಲಾಖೆಯಲ್ಲಿ ಪ್ರಾಮಾಣಿಕವಾಗಿ ಕೆಲಸ ಮಾಡಲು ಅವಕಾಶ ನೀಡಿದ್ದಾರೆ. ರಾಜ್ಯ ರಾಜಕೀಯಕ್ಕೆ ಯಾವ ಸಮಯದಲ್ಲಿ ಬರಬೇಕು ಅಂತ ತೀರ್ಮಾನ ಮಾಡುತ್ತೇನೆ. ತಪ್ಪಿಸಿಕೊಳ್ಳಲು ಆಗುವುದಿಲ್ಲ ಎಂದರು.

ಅಧಿಕಾರಿಗಳ ಮೇಲೆ ಒತ್ತಡ ಹೇರಿ ಕೆಲಸ ಮಾಡಿಸುವ ಪ್ರವೃತ್ತಿ ಸರಕಾರದಲ್ಲಿ ವ್ಯಾಪಕವಾಗಿದೆ. ಸಾಮಾನ್ಯ ಕಾರ್ಯಕರ್ತರಿಂದ ಹಿಡಿದು ಅಧಿಕಾರದಲ್ಲಿರುವ ಮೇಲಿನವರು ಅಧಿಕಾರಿಗಳ ಮೇಲೆ ಒತ್ತಡ ಹಾಕಿ ಕಾನೂನುಬಾಹಿರ ಕೆಲಸ ಮಾಡಿಸುತ್ತಿದ್ದಾರೆ. ಸರಕಾರ ಸರಿ ಇಲ್ಲದೆ ಇಲ್ಲದಿದ್ದಾಗ ಇವೆಲ್ಲ ನಡೆಯುತ್ತವೆ. ಮೇಟಿ ಸರಿಯಾಗಿದ್ದರೆ ಇಂತಹ ಘಟನೆಗಳು ನಡೆಯುವುದಿಲ್ಲ.

-ಎಚ್.ಡಿ.ಕುಮಾರಸ್ವಾಮಿ ಕೇಂದ್ರ ಸಚಿವ

ವಿಶ್ವವಾಣಿ

ಸಂಪಾದಕೀಯ

ಶಾಂತಿದೂತನ ಇಬ್ಬಂದಿತನ

ದಿನಗಳೆದಂತೆ, ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರ ಒಂದೊಂದೇ ಬಣ್ಣಗಳು ಬಯಲಾಗುತ್ತಿವೆ. ಸಾಕಷ್ಟು ಅಂತಾರಾಷ್ಟ್ರೀಯ ಯುದ್ಧಗಳನ್ನು ನಿಲ್ಲಿಸಿರುವ ತಮಗೆ ನೊಬೆಲ್ ಶಾಂತಿ ಪುರಸ್ಕಾರ ದಕ್ಕಲೇಬೇಕು ಎಂದು ಇನ್ನಿಲ್ಲದಂತೆ ಹಠ ಹಿಡಿದಿದ್ದ ಟ್ರಂಪ್ ಮಹಾಶಯರು, ಆ ಕಾಲಘಟ್ಟ ಮುಗಿಯುತ್ತಿದ್ದಂತೆ ಇರಾನ್‌ನ ಅಂತಃಕಲಹದಲ್ಲಿ ಮೂಗು ತೂರಿಸುತ್ತಿದ್ದಾರೆ. ಅದಕ್ಕೆ ಇನ್ನಷ್ಟು ಪ್ರಚೋದನೆ ನೀಡುವ ಮೂಲಕ ತಾವು ಧರಿಸಿಕೊಂಡಿದ್ದ 'ಶಾಂತಿದೂತ' ಎಂಬ ಮುಖವಾಡವನ್ನು ತಾವೇ ಕಳಚಿಟ್ಟಿದ್ದಾರೆ. ಅಗತ್ಯ ವಸ್ತುಗಳ ಬೆಲೆಯಲ್ಲಿ ತೀವ್ರ ಏರಿಕೆ, ಅರಾಜಕತೆ ಮುಂತಾದ ಕಾರಣಗಳಿಗೆ ಇರಾನ್‌ನಲ್ಲಿ ಜನರಿಂದ ಪ್ರತಿಭಟನಾ ಸ್ವರೂಪದ ಸಂಘರ್ಷ ನಡೆಯುತ್ತಿರುವುದು ಗೊತ್ತಿರುವ ಸಂಗತಿಯೇ. ಸಾಧ್ಯವಾದರೆ, ಇದನ್ನು ತಹಬಂದಿಗೆ ತರುವ ನಿಟ್ಟಿನಲ್ಲಿ ಪ್ರಸ್ತಾವಗಳನ್ನು ಮುಂದು ಮಾಡಬೇಕಿದ್ದ 'ಶಾಂತಿದೂತ' ಟ್ರಂಪ್ ಅವರು, 'ನಿಮ್ಮ ಬೆಂಬಲಕ್ಕೆ ನಾವಿದ್ದೇವೆ, ಪ್ರತಿಭಟನೆಯನ್ನು ಮುಂದುವರಿಸಿ' ಎಂಬರ್ಥದಲ್ಲಿ ಅಭಯ ನೀಡಿರುವುದಕ್ಕೆ ಯಾವ ತಾರ್ಕಿಕ ನೆಲೆಗಟ್ಟು ಇದೆಯೋ? ಇದಕ್ಕೆ ಅವರೇ ಉತ್ತರಿಸಬೇಕು. ಇಲ್ಲಿ ಪ್ರತಿಭಟನೆ ನಡೆಸುತ್ತಿರುವವರ ಉದ್ದೇಶಗಳು ಸರಿಯಿವೆಯೋ ಅಥವಾ ತಪ್ಪಾಗಿವೆಯೋ? ಎಂಬುದು ಪ್ರಶ್ನೆಯಲ್ಲ; ಈ ಸಂಘರ್ಷದ ಬೆಂಕಿಯಲ್ಲಿ ತಮ್ಮ ಮೈಕಾಯಿಸಿಕೊಳ್ಳಲು ಹೊರಟಿರುವ ಡೊನಾಲ್ಡ್ ಟ್ರಂಪ್ ಅವರ ಧೋರಣೆ ಮಾತ್ರ ಸಹ್ಯವಾಗುತ್ತಿಲ್ಲ, ಅಷ್ಟೇ. ವಿಶ್ವದ ದೊಡ್ಡಣ್ಣ ಎನಿಸಿಕೊಂಡ ಅಮೆರಿಕವು ಜಾಗತಿಕ ಭೂರಾಜಕೀಯದಲ್ಲಿ ಯಾವ ರೀತಿಯಲ್ಲಿ ಬೇಕಾದರೂ ಹಸ್ತಕೇಪ ಮಾಡಬಹುದು ಮತ್ತು ಮಾಡಬಲ್ಲದು ಎಂಬ ಟ್ರಂಪ್ ಅವರ ಧಾರ್ಷ್ಟ್ಯವೇ ಇದಕ್ಕೆ ಕಾರಣವಾಗಿರಬಹುದೇ? ಈ ಪ್ರಶ್ನೆಗೆ ಉತ್ತರಿಸಲು ಅವರಿಗೆ ಸಮಯವಾದರೂ ಎಲ್ಲಿದೆ?!

ಸೊಂಪಾದಕೀಯ

ಪ್ರಾಣ ಬಿಟ್ಟೇವು, ಜಾತಿ ಬಿಡೆವು

ನಮ್ಮ ಸಮಾಜದಲ್ಲಿ ಜಾತಿ ಅನ್ನೋದು ಎಷ್ಟರ ಮಟ್ಟಿಗೆ ಪ್ರಭಾವ ಬೀರುತ್ತದೆ ಎಂಬ ಬಗ್ಗೆ ಹೊಸದಾಗಿ ಹೇಳಬೇಕಾಗಿಲ್ಲ. ಆದರೆ, 'ಪ್ರಾಣ ಬಿಟ್ಟೇವು, ಜಾತಿ ಬಿಡೆವು' ಅನ್ನೋ ಕೆಲವರು, ಸಾವಿನ ವಿಷಯದಲ್ಲೂ ಸಣ್ಣತನ ತೋರಿದ ಉದಾಹರಣೆಗಳನ್ನು ನೋಡಿದಾಗ ಮತ್ತೆ ಮತ್ತೆ ಜಾತಿ ಭೂತ, ಮೂಢನಂಬಿಕೆಗಳ ಭೂತ ನೆನಪಾಗೋದು ಸಹಜ. ಊರೊಂದರಲ್ಲಿ ಹೆಂಗಸೊಬ್ಬರು ಸತ್ತಾಗ, ಆಕೆಯ ಹೆಣ್ಣುಮಕ್ಕಳು ಬೇರೆ ಜಾತಿಯವರನ್ನು

ಮದುವೆ ಆಗಿದ್ದಾರೆ ಅನ್ನೋ ಕಾರಣಕ್ಕೆ ಸಂಬಂಧಿಕರು ತಿರುಗಿ ನೋಡಲಿಲ್ಲವಂತೆ. ಕೊನೆಗೆ, ಗ್ರಾಮಸ್ಥರೇ ಅಂತಿಮಕಾರ್ಯ ಮಾಡಿದರಂತೆ. ಹಾಗಾಗಿ, ನಿಜವಾದ ಸಂಬಂಧಿಕರು ಯಾರು ಅನ್ನೋ ಪ್ರಶ್ನೆ ಇಂಥ ವೇಳೆ ಹೊಮ್ಮುವುದು ಸಹಜ. ಅದಕ್ಕೆ ಉತ್ತರವೂ ಸುಲಭ. ಇನ್ನೊಂದು ಅಮಾನವೀಯ ಘಟನೆಯಲ್ಲಿ ಜನ ತಮ್ಮ ಮೂಢನಂಬಿಕೆಗಳನ್ನು ಯಾವ ಲೆವೆಲ್ಲಿಗೆ ಬೇಕಾದ್ರೂ ತಗೊಂಡ್ ಹೋಗ್ತಾರೆ ಅನ್ನೋದು ಪ್ರೂವ್ ಆಗಿದ್ದುಂಟು. ತೊನ್ನು ಸಮಸ್ಯೆಯಿದ್ದ ಒಬ್ಬಾಕೆ ಸತ್ತು, ಅವರನ್ನು ಊರಲ್ಲಿ ಹೂಳಲಾಗಿತ್ತು. ಆದರೆ ಸುತ್ತಮುತ್ತಲ ಊರಲ್ಲಿ ಮಳೆ ಬಂದರೂ, ಆ ಊರಲ್ಲಿ ಮಾತ್ರ ಮಳೆ ಬಾರದಿದ್ದಾಗ, ಸೋ ಕಾಲ್ಡ್ ನಾಗರಿಕರು, 'ತೊನ್ನು ಬಂದವರನ್ನು ಸುಟ್ಟು ಹಾಕಬೇಕು, ಅವರನ್ನು ಹೂತಿದ್ದಕ್ಕೇ ಊರಿಗೆ ಬರ ಬಂದಿದೆ' ಎಂದು ಹೇಳಿ ಹೂತಿದ್ದ ಶವವನ್ನು ಹೊರತೆಗೆದು ಸುಟ್ಟು ಹಾಕಿದರಂತೆ. ಇಂಥ ಮೂಢನಂಬಿಕೆಗಳನ್ನು ನೋಡಿಯೇ ದೊಡ್ಡವರು 'ಹುಟ್ಟು ಗುಣ ಸುಟ್ಟರೂ ಹೋಗಲ್ಲ' ಅಂತ ಹೇಳಿದ್ದರೋ ಏನೋ. ಈ ಮೂಲಕ ಮೂಢನಂಬಿಕೆಯ ಜನ, ಗಾದೆಮಾತನ್ನು ಅಕ್ಷರಶಃ ನಿಜ ಮಾಡಿ ದರು ಎನ್ನಬೇಕು. ಬದುಕಿರುವವರನ್ನು ಬದುಕೋಕೆ ಬಿಡದ ಈ ಮೂಢ ನಂಬಿಕೆಗಳ ಸರದಾರರು, ಸತ್ತು ಹೆಣವಾದವರನ್ನೂ ಹೆಣಗಾಡಿಸೋದು ತರವೇ?

ಸಂಪಾದಕರ ಸದ್ಯಶೋಧನೆ

ವೈ ವೈ: ನೇಪಾಳದ ಜಾಗತಿಕ ಬ್ರ್ಯಾಂಡ್

ಜಾಗತಿಕ ಬ್ಯಾಂಡ್‌ಗಳು ಅಮೆರಿಕ, ಚೀನಾ, ಜರ್ಮನಿ, ಫ್ರಾನ್ಸ್‌ಗಳಲ್ಲಿಯೇ ಹುಟ್ಟಬೇಕೆಂದೇನೂ ಇಲ್ಲ. ಅದು ಯಾವ ಸಣ್ಣ-ಪುಟ್ಟ ದೇಶಗಳಲ್ಲೂ ಅವತರಿಸಬಹುದು. ಅದಕ್ಕೆ ವೈ ವೈ ನೂಡಲ್ಸ್ ಒಂದು ಉತ್ತಮ ನಿದರ್ಶನ. ನೂಡಲ್ಸ್ ಅಂದ್ರೆ ಇಂದು ಕೇವಲ ಮಕ್ಕಳ ತಿಂಡಿಯಲ್ಲ, ಅದು ಬ್ಯಾಚುಲರ್‌ಗಳ ಸಂಜೀವಿನಿ, ಪ್ರವಾಸಿಗರ ನೆಚ್ಚಿನ ಆಹಾರ ಮತ್ತು ಆಧುನಿಕ ಬದುಕಿನ ಅತಿ ವೇಗದ ಆಹಾರವಾಗಿ ಬದಲಾಗಿದೆ. ಮ್ಯಾಗಿ, ಯಿಪ್ಪಿ ಮುಂತಾದ ಬ್ರ್ಯಾಂಡ್‌ಗಳ ನಡುವೆ ತನ್ನದೇ ಆದ ವಿಶಿಷ್ಟ ರುಚಿ ಮತ್ತು 'ರೆಡಿ ಟು ಈಟ್' ವೈಶಿಷ್ಟ್ಯದಿಂದ ಜನಪ್ರಿಯವಾಗಿರುವುದು 'ವೈ ವೈ' (Wai Wai) ನೂಡಲ್ಸ್. ಅಷ್ಟಕ್ಕೂ ಈ ನೂಡಲ್ಸ್ ಮೂಲತಃ ನೇಪಾಳದ್ದು. ಇದರ ಹಿಂದೆ ಇರುವುದು ನೇಪಾಳದ ಸಿರಿವಂತ ಉದ್ಯಮಿ ಬಿನೋದ್ ಚೌಧರಿ. 1980ರ ದಶಕದ ಆರಂಭದಲ್ಲಿ ನೇಪಾಳದ 'ಚೌಧರಿ ಗ್ರೂಪ್' (CG Corp Global) ಥೈಲ್ಯಾಂಡ್‌ನ ಕಂಪನಿಯೊಂದರ ಸಹಯೋಗದೊಂದಿಗೆ ಈ ನೂಡಲ್ಸ್ ಉತ್ಪಾದನೆಯನ್ನು ಪ್ರಾರಂಭಿಸಿತು. ಕುತೂಹಲದ ಸಂಗತಿಯೆಂದರೆ, ಬಿನೋದ್ ಚೌಧರಿ ಅವರು ಥೈಲ್ಯಾಂಡ್‌ನಿಂದ ನೇಪಾಳಕ್ಕೆ ಬರುವ ವಿಮಾನಗಳಲ್ಲಿ ಜನರು ಹೆಚ್ಚಿನ ಪ್ರಮಾಣದಲ್ಲಿ ನೂಡಲ್ಸ್ ಪ್ಯಾಕೆಟ್‌ಗಳನ್ನು ತರುತ್ತಿರುವುದನ್ನು ಗಮನಿಸಿದರು. ನೇಪಾಳದಲ್ಲಿ ಇದಕ್ಕೆ ದೊಡ್ಡ ಮಾರುಕಟ್ಟೆ ಇದೆ ಎಂದು ಅರಿತ ಅವರು 'ವೈ ವೈ' ಬ್ರ್ಯಾಂಡ್ ಅನ್ನು ಆರಂಭಿಸಿದರು. ವೈ ವೈ ನೂಡಲ್ಸ್‌ನ ವೈಶಿಷ್ಟ್ಯ ಏನು? ಇತರ ನೂಡಲ್ಸ್‌ಗಿಂತ ವೈ ವೈ ಹೇಗೆ ಭಿನ್ನ? ಇತರೆ ನೂಡಲ್ಸ್ ಅನ್ನು ತಿನ್ನಲು ಬೇಯಿಸಲೇಬೇಕು. ಆದರೆ ವೈ ವೈ ನೂಡಲ್ಸ್ ಅನ್ನು ಎಣ್ಣೆಯಲ್ಲಿ ಮೊದಲೇ ಫ್ರೈ ಮಾಡಿರುವುದರಿಂದ, ಇದನ್ನು ಪ್ಯಾಕೆಟ್ ಬಿಡಿಸಿ ಹಾಗೆಯೇ ಕುರುಕುಲಾಗಿ ತಿನ್ನಬಹುದು. ಇದು ಇದರ ಅತಿದೊಡ್ಡ ಪ್ಲಸ್ ಪಾಯಿಂಟ್. ವೈ ವೈ ಪ್ಯಾಕೆಟ್ ಒಳಗೆ ಕೇವಲ ಮಸಾಲೆ ಪುಡಿ ಮಾತ್ರವಲ್ಲದೇ, ಒಂದು ಪ್ಯಾಕೆಟ್ ಸುವಾಸನೆಯುಳ್ಳ ಈರುಳ್ಳಿ ಎಣ್ಣೆ ಮತ್ತು ಖಾರದ ಪುಡಿ ಕೂಡ ಇರುತ್ತದೆ. ಇದು ನೂಡಲ್ಸ್‌ಗೆ ವಿಶಿಷ್ಟ ನೇಪಾಳಿ ಅಥವಾ ಹಿಮಾಲಯದ ರುಚಿಯನ್ನು ನೀಡುತ್ತದೆ. ಇತರೆ ನೂಡಲ್ಸ್ ಬಿಳಿ ಅಥವಾ ಹಳದಿ ಬಣ್ಣದಲ್ಲಿದ್ದರೆ, ವೈ ವೈ ನೂಡಲ್ಸ್ ಕಂದು ಬಣ್ಣದಲ್ಲಿ ಇರುತ್ತದೆ. ನೇಪಾಳದ ನಂತರ ವೈ ವೈ ಅತಿ ದೊಡ್ಡ ಮಾರುಕಟ್ಟೆಯನ್ನು ಕಂಡುಕೊಂಡಿದ್ದು ಭಾರತದಲ್ಲಿ. ಅದರಲ್ಲೂ ವಿಶೇಷವಾಗಿ ಭಾರತದ ಈಶಾನ್ಯ ರಾಜ್ಯಗಳಾದ, ಸಿಕ್ಕಿಂ ಮತ್ತು ಪಶ್ಚಿಮ ಬಂಗಾಳದ ಗುಡ್ಡಗಾಡು ಪ್ರದೇಶಗಳಲ್ಲಿ. ವೈ ವೈ ಕೇವಲ ಆಹಾರವಲ್ಲ, ಅದೊಂದು ಭಾವನೆ. ಇಂದು ಭಾರತದಾದ್ಯಂತ ಮೆಟ್ರೋ ನಗರಗಳಿಂದ ಹಿಡಿದು ಹಳ್ಳಿಗಳ ತನಕ ವೈ ವೈ ಸಿಗುತ್ತಿದೆ. ಭಾರತದಲ್ಲಿ ಸಿಜಿ ಕಾರ್ಪ್ ಗ್ಲೋಬಲ್ ಕಂಪನಿಯು ಸಿಕ್ಕಿಂ, ಅಸ್ಸಾಂ ಮತ್ತು ಉತ್ತರ ಪ್ರದೇಶದಂಥ ಕಡೆಗಳಲ್ಲಿ ಬೃಹತ್ ಉತ್ಪಾದನಾ ಘಟಕಗಳನ್ನು ಹೊಂದಿದೆ. ವೈ ವೈ ಅನ್ನು ಜನರು ಮೂರು ಪ್ರಮುಖ ರೀತಿಗಳಲ್ಲಿ ಆನಂದಿಸುತ್ತಾರೆ. ಮೊದಲನೆಯದು ಡ್ರೈ ನೂಡಲ್ಸ್. ಚಿಪ್ಸ್ ತಿಂದಂತೆ ಪ್ಯಾಕೆಟ್‌ನಲ್ಲೇ ಪುಡಿ ಮಾಡಿ, ಮಸಾಲೆ ಬೆರೆಸಿ ತಿನ್ನುವುದು. ಇದು ಕಾಲೇಜು ವಿದ್ಯಾರ್ಥಿಗಳ ನೆಚ್ಚಿನ ವಿಧಾನ. ಎರಡನೆಯದು, ಸೂಪಿ ನೂಡಲ್ಸ್. ಬಿಸಿ ನೀರಿಗೆ ಮಸಾಲೆ ಹಾಕಿ ಎರಡು ನಿಮಿಷ ಬೇಯಿಸಿ ತಿನ್ನುವುದು. ಚಳಿಗಾಲದಲ್ಲಿ ಅಥವಾ ಮಳೆಯ ಸಮಯದಲ್ಲಿ ಇದು ಅದ್ಭುತ ರುಚಿ ನೀಡುತ್ತದೆ. ಮೂರನೆಯದು, ವೈ ವೈ ಚಾಟ್. ನೂಡಲ್ಸ್ ಅನ್ನು ಪುಡಿ ಮಾಡಿ ಅದಕ್ಕೆ ಹೆಚ್ಚಿದ ಈರುಳ್ಳಿ, ಟೊಮೆಟೊ, ಹಸಿಮೆಣಸಿನಕಾಯಿ ಮತ್ತು ಸ್ವಲ್ಪ ಲಿಂಬೆ ರಸ ಬೆರೆಸಿ ಮಾಡುವ ಚಾಟ್ ತುಂಬಾ ಪ್ರಸಿದ್ಧ. ಯಾವುದೇ ಇನ್‌ಸ್ಟಂಟ್ ನೂಡಲ್ಸ್‌ನಂತೆ ವೈ ವೈ ಕೂಡ ಮೈದಾ ಹಿಟ್ಟಿನಿಂದ ತಯಾರಾಗುತ್ತದೆ. ಇದರಲ್ಲಿ ಸೋಡಿಯಂ ಅಂಶ ಹೆಚ್ಚಿರುತ್ತದೆ. ಹೀಗಾಗಿ, ಇದನ್ನು ಮಿತವಾಗಿ ಬಳಸುವುದು ಸೂಕ್ತ. ಇತ್ತೀಚಿನ ದಿನಗಳಲ್ಲಿ ಕಂಪನಿಯು 'ಮಲ್ಟಿಗ್ರೇನ್' ಮತ್ತು ಹೆಚ್ಚು ಪೌಷ್ಟಿಕಾಂಶವಿರುವ ನೂಡಲ್ಸ್ ಅನ್ನು ಮಾರುಕಟ್ಟೆಗೆ ತರುತ್ತಿದೆ. ಆದರೂ, ಮಕ್ಕಳಿಗೆ ಪ್ರತಿದಿನ ಇದನ್ನು ನೀಡುವ ಬದಲು ಸಾಪ್ತಾಹಿಕ ತಿಂಡಿಯಾಗಿ ಬಳಸುವುದು ಉತ್ತಮ. ಇಂದು ವೈ ವೈ ಸುಮಾರು 30ಕ್ಕೂ ಹೆಚ್ಚು ದೇಶಗಳಲ್ಲಿ ಲಭ್ಯವಿದೆ. ಜಪಾನ್ ಮತ್ತು ಕೊರಿಯಾದ ನೂಡಲ್ಸ್ ಬ್ರ್ಯಾಂಡ್‌ಗಳಿಗೆ ಪೈಪೋಟಿ ನೀಡುತ್ತಿರುವ ದಕ್ಷಿಣ ಏಷ್ಯಾದ ಏಕೈಕ ಬ್ರ್ಯಾಂಡ್ ಎಂದರೆ ಅದು ವೈ ವೈ. ಬಿನೋದ್ ಚೌಧರಿ ಅವರ ವೈ ವೈ ನೂಡಲ್ಸ್ ಇಂದು ವಿಶ್ವದಾದ್ಯಂತ ಬಿಲಿಯನ್ ಪ್ಯಾಕೆಟ್‌ಗಳನ್ನು ಮಾರಾಟ ಮಾಡುತ್ತಿರುವುದು ಹೆಮ್ಮೆಯ ವಿಷಯ. ಈ ನೂಡಲ್ಸ್ ಕೇವಲ ಹಸಿವನ್ನು ನೀಗಿಸುವ ಪದಾರ್ಥವಲ್ಲ, ಅದು ಸಮಯದ ಉಳಿತಾಯ ಮತ್ತು ರುಚಿಯ ಸಂಗಮ. ಪ್ರಯಾಣ, ಪರ್ವತಾರೋಹಣದ ವೇಳೆ ಅಥವಾ ಅಡುಗೆ ಮಾಡಲು ಸೋಮಾರಿತನ ಬಂದಾಗ ನೆನಪಾಗುವ ಮೊದಲ ಹೆಸರು 'ವೈ ವೈ'. ಅತಿ ಕಡಿಮೆ ಬೆಲೆಯಲ್ಲಿ (ಕೇವಲ 10-15 ರು) ರಾಜಾತಿಥ್ಯದ ರುಚಿ ನೀಡುವ ಈ ನೂಡಲ್ಸ್ ಮುಂದಿನ ದಿನಗಳಲ್ಲಿ ಇನ್ನಷ್ಟು ವೈವಿಧ್ಯಗಳೊಂದಿಗೆ ಮಾರುಕಟ್ಟೆ ಆಳುವುದರಲ್ಲಿ ಸಂಶಯವಿಲ್ಲ.

ಡಿಪ್ರೆಶನ್: ಬದುಕಿ ಪ್ರಯೋಜನವೇನು? ಎಂಬ ಯಕ್ಷಪ್ರಶ್ನೆ!

ಶಿಶಿರಕಾಲ
ಶಿಶಿರ್ ಹೆಗಡೆ
shishirh@gmail.com

ಅಜ್ಞಾನದಲ್ಲಿ ಜ್ಞಾನಕ್ಕಿಂತ, ದಡ್ಡತನದಲ್ಲಿ ಬುದ್ಧಿವಂತಿಕೆಗಿಂತ ಹೆಚ್ಚಿನ ಸಮಾಧಾನವಿದೆ. ನಮ್ಮ ತಲೆಯಲ್ಲಿ ಮೂಡುವ ಶೇ.99.99ರಷ್ಟು ಯೋಚನೆಗಳಿಗೆ ಯಾವುದೇ ಅರ್ಥವಿರುವುದಿಲ್ಲ. ಉದ್ದೇಶ, ದಿಶೆ, ತಲೆ-ಬುಡ ಕೂಡ ಇರುವುದಿಲ್ಲ. ಕ್ಷಣಕ್ಕೊಮ್ಮೆ ಬದಲಾಗುವ ನಮ್ಮದೇ ಯೋಚನೆಗಳತ್ತ ಹುಂಡು ಗಮನ ಹರಿಸಿದಲ್ಲಿ ಇದು ನಮಗೆ ಸ್ಪಷ್ಟವಾಗುತ್ತದೆ. ಯೋಚನೆಗಳೇ ಹಾಗೆ. ನಿನ್ನೆ ರಾತ್ರಿ ಯೋಚಿಸಿದ್ದು ಇವತ್ತು ಬೆಳಗ್ಗೆ ಬಾಲಿಶವೆನಿಸುತ್ತದೆ. ಬಹುತೇಕ ಖಾಲಿ ಬರಡು. ಹಾಗಂತ ಚಿಂತೆ, ಉದ್ವೇಗ, ಯೋಚನೆ ಎಲ್ಲವೂ ಅನವಶ್ಯಕವಲ್ಲ, ಹದದಲ್ಲಿ ಇರಬೇಕು. ಪರೀಕ್ಷೆಯ ದಿನ, ಸಭೆಯಲ್ಲಿ ಹತ್ತು ಜನರ ಎದುರು ಮಾತನಾಡುವಾಗ, ರಸ್ತೆಯಲ್ಲಿ ಹುಲಿ ಎದುರಿಗೆ ಬಂದಾಗ, ಏನೋ ಒಂದು ಅಪಾಯದ ಸನ್ನಿವೇಶ, ಸಾಧ್ಯತೆ ಎದುರಾದಾಗ, ಬಸ್ಸು ತಪ್ಪಿಹೋಗುವಷ್ಟು ತಡವಾದಾಗ, ಇಂಥ ಸನ್ನಿವೇಶಗಳಲ್ಲಿ ಕೈಕಾಲು ನಡುಗುವುದು, ಬೆವರುವುದು, ಇನ್ನೊಬ್ಬರಿಗೆ ಕಾಣಿಸಿಕೊಳ್ಳುವಷ್ಟಾಗುವ ತಳಮಳಗೊಳ್ಳುವುದು ಸಮಸ್ಯೆ ಅಲ್ಲ, ಅವೆಲ್ಲ ತಾತ್ಕಾಲಿಕ. ಯಾವುದೋ ಒಂದು ಕ್ರಿಯೆಗೆ, ಎದುರಿಗಿರುವ ಸ್ಥಿತಿಗೆ ಆರೋಗ್ಯಕರ ಪ್ರತಿಕ್ರಿಯೆ. ಆದರೆ ಆ ಉದ್ವೇಗ ನಂತರವೂ, ಅಕಾರಣ ಮುಂದುವರಿದರೆ, ಉದ್ವೇಗವೇ ವ್ಯಕ್ತಿಯ ಮನೋದೈಹಿಕ ಸ್ಥಿತಿಯಾಗಿಬಿಟ್ಟರೆ ಅದು ಆಂಕ್ಸೈಟಿ. ಯೋಚನೆಯೊಂದು ಮೂಡಿ, ಕೆಲಹೊತ್ತು ಇದ್ದು, ತಲೆಯಿಂದ ಹೊರಡಬೇಕು- ಮನೆಗೆ ಬಂದ ನೆಂಟರಂತೆ. ನೆಂಟರು ಕಾಯಂ ಉಳಿದುಬಿಟ್ಟರೆ? ಅದುವೇ ಸ್ಥಿತಿ ಆಂಕ್ಸೈಟಿಯದು. ಅತಿಯಾದ ಯೋಚನೆ, ಮಾನಸಿಕ ಚಿಂತೆಯ ರಿಹರ್ಸಲ್, ಇನ್ನೊಬ್ಬರ ಬದುಕಿನ ಜತೆ ಎಲ್ಲದಕ್ಕೂ ಹೋಲಿಕೆ, ಅತಿಯಾದ ಮಾಹಿತಿ, ಸುದ್ದಿ, ಮಾನಸಿಕ ಬಿಡುವಿಲ್ಲದ ರೀತಿ ಬದುಕುವುದು ಇವೆಲ್ಲ anxiety ಎಂಬ ಸ್ಥಿತಿಗೆ ನಮ್ಮನ್ನು ಬದಲಿಸಬಹುದು. ಈ ಬಗ್ಗೆ ಹಿಂದಿನ ವಾರದ ಲೇಖನದಲ್ಲಿ ಸವಿವರವಾಗಿ ಹೇಳಿದ್ದೆ.

ನಮ್ಮ ಯೋಚನೆಗಳೇ ನಮ್ಮ ಸುಸ್ತಿಗೆ ಕಾರಣವಾಗುತ್ತಿವೆ, ಭಾರವೆನಿಸುತ್ತಿವೆ ಎನ್ನುವುದನ್ನು ತಿಳಿದುಕೊಳ್ಳುವುದು ಕಷ್ಟದ ವಿಷಯವೇನಲ್ಲ. ನಮ್ಮ ವಿಚಾರಗಳನ್ನು, ಮನೋಹರಿವನ್ನು ಗಮನಕೊಟ್ಟು ನೋಡದಿದ್ದರೆ ಅವುಗಳಲ್ಲಿ ನಿಜವಾದ ಸಮಸ್ಯೆಗಳೆಷ್ಟು ಮತ್ತು ನಮ್ಮ ಕಲ್ಪನೆಯ ಸಮಸ್ಯೆಗಳೆಷ್ಟು ಎನ್ನುವ ಪ್ರತ್ಯೇಕತೆ ತಿಳಿಯುವುದಿಲ್ಲ. ನಿಜವಾದ ಸಮಸ್ಯೆ ಕೊಡುವಷ್ಟೇ ಹಿಂಸೆಯನ್ನು ಕಾಲ್ಪನಿಕ ಸಮಸ್ಯೆಗಳೆಲ್ಲ ಕೊಡಲು ಶುರುಮಾಡಿದರೆ ಆ ಹಿಂಸೆಗೆ ಕಲ್ಪನೆಯಂತೆ- ಮಿತಿಯೇ ಇಲ್ಲ. ಬುದ್ಧಿವಂತಿಕೆ ಹೆಚ್ಚಿದಂತೆ ಯೋಚನೆ ಮತ್ತು ಕಲ್ಪನೆ, ಎರಡರ ಸಾಮರ್ಥ್ಯವೂ ಜಾಸ್ತಿ. ಹಾಗಾಗಿಯೇ ಹಾವಾಡಿಗರಿಗೆ ಹಾವು ಜಾಸ್ತಿ ಕಡಿಯುವಂತೆ- ಬುದ್ಧಿವಂತರಿಗೆ ಆಂಕ್ಸೈಟಿ ಸುಲಭದಲ್ಲಿ ಅಂಟಿಕೊಂಡುಬಿಡುತ್ತದೆ.

ಆಂಕ್ಸೈಟಿ ಎಂದರೆ ಅತಿಚಿಂತೆಯ ಮನೋದೈಹಿಕ ಸ್ಥಿತಿ ಎಂದಾದರೆ ಈ 'ಡಿಪ್ರೆಶನ್'- ಮಹಾಖಿನ್ನತೆಯ ಕಥೆಯೇನು? ಅದೇನು ಹುಚ್ಚೆ? ಅಥವಾ ಬುದ್ಧಿಗೆ ಮಂಕು ಬಡಿಯುವುದೇ, ಅಥವಾ ಮಾನಸಿಕ ರೋಗವೇ? ಆಂಕ್ಸೈಟಿ ಹೋಗಿ ಡಿಪ್ರೆಶನ್ ಆಗುವುದು, ಯೋಚನೆಗಳ ಸುಳಿಯೇ ಬದುಕಿಗೆ ಅಂತ್ಯವಾಗುವಷ್ಟು ಕಠೋರವಾಗುವುದು ಯಾವಾಗ? ಹೇಗೆ?

'ಡಿಪ್ರೆಶನ್' ಎಂಬುದು ಆಂಕ್ಸೈಟಿಯ ಮುಂದಿನ ಹಂತವೇ ಆದರೂ ಇದು ತದ್ವಿರುದ್ಧದ ಸ್ಥಿತಿ! ಅತ್ಯುದ್ವೇಗವು ರಾತ್ರಿ ಬೆಳಗಾಗುವುದರೊಳಗೆ ಮಹಾಖಿನ್ನತೆಯಾಗುವುದಿಲ್ಲ. ಇದೆಲ್ಲ ನಿಧಾನದ ಕ್ರಿಯೆ. ಅತ್ಯುದ್ವೇಗ ಹೆಚ್ಚಿದಂತೆ, ಅದೊಂದು ನಿರಂತರ ಹಿಂಸೆ, ಆ ನೋವಿನ ನಿರಂತರತೆಯನ್ನು ನಿಭಾಯಿಸುವ ಶಕ್ತಿ ಮೀರಿದಾಗ ಮನಸ್ಸು, ಮಿದುಳು ಇದನ್ನು ಬಗೆಹರಿಸಲು ಮುಂದಾಗುತ್ತವೆ. Survival Instinct- ಆತ್ಮ ರಕ್ಷಣೆಯ ಪ್ರಯತ್ನ ಅದು. ನಿಮಗೆ ಗೊತ್ತಿರಬಹುದು- ಮಿದುಳು ಇರುವುದು ದೇಹದ ತೂಕದ ಸುಮಾರು 2 ಶೇಕಡಾ. ಅಷ್ಟೇ ಇದ್ದರೂ ಇದು ದೇಹವು ಬಳಸಿಕೊಳ್ಳುವ ಶಕ್ತಿಯಲ್ಲಿ ಅಂದಾಜು ಶೇ. 20ರಷ್ಟನ್ನು ಬಳಸಿಕೊಳ್ಳುತ್ತದೆ. ಯೋಚನೆ ಎಂದರೆ ಶಕ್ತಿಯ ವ್ಯಯ. ಹಿಂಸೆ ಎಂದರೆ ಹಾನಿ. ಮನಸ್ಸು ಆ ಒಂದು ಹಂತದಲ್ಲಿ ಸುಸ್ತಾಗಿ ತಿರುಗಿಬಿದ್ದಾಗ ಜಿಜ್ಞಾಸೆ ಶುರುವಾಗುತ್ತದೆ. ಬೆಕ್ಕನ್ನು ಕೋಣೆಯಲ್ಲಿ ಮೂಲೆಮಾಡಿ ಹೊಡೆದರೆ, ಕೊನೆಗೊಮ್ಮೆ ಬೆಕ್ಕು ಮೈಮೇಲೆ ಹಾರಿ ಪರಚುತ್ತದೆ. ಆ ರೀತಿ ಗೊಂದಲದ ಮನಸ್ಸಿನ ಬಚಾವ್ ಪ್ರಕ್ರಿಯೆ.

ಅತ್ಯುದ್ವೇಗಕ್ಕೆ ತದ್ವಿರುದ್ಧವಾದ ಸ್ಥಿತಿ ಎಂದರೆ ಪ್ರತಿಯೋಚನೆ. ಸಮಜಾಯಿಷಿ. ''ಇಷ್ಟು ಕಾಲ ಇಷ್ಟೆಲ್ಲಾ ಚಿಂತೆ ಮಾಡಿದೆನಲ್ಲ, ಇದರಿಂದ ಆದ ಪ್ರಯೋಜನವೇನು?'' ಎಂಬ ಪ್ರಶ್ನೆ. ಮನಸ್ಸು ಚಿಂತಿಸಿ ಚಿಂತಿಸಿ ಸುಸ್ತಾಗಿ, ಬಳಲಿ ಕೇಳುವ ಪ್ರಶ್ನೆಗಳು- What is the point? ಚಿಂತಿಸಿ ಪ್ರಯೋಜನವೇನು? ಯೋಚಿಸಿ ಏನುಪಯೋಗ? ಬೆಳಗ್ಗೆ ಏಕೆ ಬೇಗ ಏಳಬೇಕು? ಅಷ್ಟಕ್ಕೂ ಎದ್ದು ಮಾಡಬೇಕಾದದ್ದು ಏನಿದು? ಏನು ಮಾಡಿದರೇನು ಪ್ರಯೋಜನ? ಯಾರಿಗೇಕೆ ಉತ್ತರಿಸಬೇಕು? ಪ್ರತಿಕ್ರಿಯಿಸಬೇಕು? ಏಕೆ ವಿವರಿಸಬೇಕು? ಯಾರನ್ನೇ ಭೇಟಿಯಾಗಿ ಪ್ರಯೋಜನವೇನು? ನಾನು ಹೇಗೆ ಬದುಕಿದರೂ, ಎಷ್ಟೇ ಬದುಕಿದರೂ ಏನೂ ಬದಲಾಗುವುದಿಲ್ಲ ಎಂದಾದ ಮೇಲೆ ಏಕೆ ಬದುಕಬೇಕು? ಉಳಿದವರಿಗೇಕೆ ನನ್ನ ಕಷ್ಟಗಳಿಲ್ಲ? ಏಕೆ ಯಾರಲ್ಲೋ ನನ್ನ ಸಮಸ್ಯೆ ಹೇಳಿಕೊಳ್ಳಬೇಕು? ಸಮಸ್ಯೆಗಳು ಮುಗಿಯುವವೇ ಅಲ್ಲವೆಂದರೆ ಇನ್ನೇಕೆ ಇರಬೇಕು? ಯಾರಿಂದ ಏನೂ ಆಗಬೇಕಿಲ್ಲ, ಯಾರೂ ಬೇಕಿಲ್ಲ, ನಾನು ಇರಬೇಕಿಲ್ಲ, ಇದು ಡಿಪ್ರೆಶನ್- ಮಹಾಖಿನ್ನತೆಯ ಸ್ಥಿತಿ.

ವಾಟ್ ಈಸ್ ದ ಪಾಯಿಂಟ್? ಬದುಕಿನ ಉದ್ದೇಶವೇನು? ಎಲ್ಲರಿಗೂ ಒಂದಿಲ್ಲೊಂದು ದಿನ ಈ ಮಹಾಪ್ರಶ್ನೆ ಎದುರಾಗುತ್ತದೆ. ಬದುಕಿ ಆಗಬೇಕಾದದ್ದು ಏನಿದೆ? ಪ್ರಶ್ನೆ ತಪ್ಪಲ್ಲ, ವಾಸ್ತವ. ನೀವಾಗಲಿ, ನಾನಾಗಲಿ, ಇನ್ಯಾರೋ ಆಗಿರಲಿ, ಹುಟ್ಟಿಯೇ ಇಲ್ಲದಿದ್ದರೆ ಈ ಜಗತ್ತು ಇದಕ್ಕಿಂತ ವಿಭಿನ್ನವಾಗಿ ಇರುತ್ತಿರಲಿಲ್ಲ. ಹುಟ್ಟದೇ ಇರುವವರ ಬಗ್ಗೆ ಯಾರಿಗೆ ಗೊತ್ತಿರುತ್ತಿತ್ತು? ನಾವೆಲ್ಲ ಚಿಕ್ಕದೋ, ದೊಡ್ಡದೋ ಸಾಧನೆ ಮಾಡಿರಬಹುದು, ಹಣ ಗಳಿಸಿರಬಹುದು, ಗೆದ್ದಿರಬಹುದು, ಸೋತಿರಬಹುದು, ಪರೀಕ್ಷೆಯಲ್ಲಿ ನಪಾಸಾಗಿರಬಹುದು. ಯಾವುದೇ ಕ್ರಿಯೆ, ಪ್ರತಿಕ್ರಿಯೆಗಳಿಗೆ ಒಂದು ಚಿಕ್ಕ ಕಾಲಮಿತಿಯ ನಂತರ ಅರ್ಥವೇ ಇಲ್ಲ. ನಿಮ್ಮ ಲೆಕ್ಕದಲ್ಲಿ ಯಾವುದು ದೊಡ್ಡ ಸಾಧನೆ? ಅಂಬಾನಿಯಷ್ಟು ಹಣ ಗಳಿಸುವುದೇ? ಅಥವಾ ದೇಶದ ಪ್ರಧಾನಿಯಾಗುವುದೇ? ಅಥವಾ ಬಲಿಷ್ಠ ರಾಷ್ಟ್ರವೊಂದರ ಅಧ್ಯಕ್ಷರಾಗುವುದೇ? ಇತ್ತೀಚೆಗೆ ಇಲ್ಲಿ ಅಮೆರಿಕದಲ್ಲಿ ಸರಕಾರಿ ಗ್ಯಾಲರಿ ಒಂದಕ್ಕೆ ಹೋಗಿದ್ದೆ. ಅಲ್ಲಿ ಅಮೆರಿಕದ ಅಧ್ಯಕ್ಷರಾದವರ ಫೋಟೋಗಳನ್ನು ಸಾಲಲ್ಲಿ ಜೋಡಿಸಿಟ್ಟಿದ್ದರು. 47 ಅಧ್ಯಕ್ಷರು- 47 ಫೋಟೋಗಳು ಅಲ್ಲಿದ್ದವು. ಅವರವರ ಫೋಟೋ ಕೆಳಗೆ ಚಿಕ್ಕ ಗುಂಡಿ- ಅದನ್ನು ಒತ್ತಿದರೆ ಮರೆಸಿಟ್ಟ ಅವರ ಹೆಸರು ಬೆಳಕಾಗಿ ಕಾಣಿಸುತ್ತಿತ್ತು. ಅಲ್ಲಿ ಯಾವುದೋ ಕಾಲೇಜಿನ ಡಿಗ್ರಿ ಮಟ್ಟದ ಇತಿಹಾಸದ ವಿದ್ಯಾರ್ಥಿಗಳು ಗುಂಪಾಗಿ ಬಂದಿದ್ದರು. ಅವರೆಲ್ಲ ಸೇರಿ, ಯಾರು ಹೆಚ್ಚು ಅಧ್ಯಕ್ಷರ ಹೆಸರನ್ನು ಚಿತ್ರ ನೋಡಿ ಊಹಿಸುತ್ತಾರೆ ಎಂಬ ಆಟವಾಡುತ್ತಿದ್ದರು. ಆಟ ಮಜವಾಗಿತ್ತು- ನಾನು ಸ್ವಲ್ಪ ಹೊತ್ತು ನಿಂತೆ. ಗಮನಿಸಿದ್ದೇನೆಂದರೆ ಎಲ್ಲರಿಗೂ ಹತ್ತರಿಂದ ಹದಿನೈದು ಅಧ್ಯಕ್ಷರನ್ನಷ್ಟೇ ಗುರುತಿಸಲು ಸಾಧ್ಯವಾಗುತ್ತಿತ್ತು. ಹೆಚ್ಚಿನವು ಇತ್ತೀಚಿನ ಅಧ್ಯಕ್ಷರ ಹೆಸರು.. ಒಂದೆರಡು ತೀರಾ ಹಳೆಯವು. ಅರ್ಧಕ್ಕಿಂತ ಜಾಸ್ತಿ ಅಧ್ಯಕ್ಷರ ಹೆಸರು ಅಲ್ಲಿದ್ದ ಯಾರಿಗೂ ಗೊತ್ತಿರಲಿಲ್ಲ. ನಕ್ಷತ್ರಗಳು ಹುಟ್ಟುತ್ತವೆ, ಉರಿಯುತ್ತವೆ, ಗ್ಯಾಲಕ್ಸಿಗಳು ಡಿಕ್ಕಿ ಹೊಡೆಯುತ್ತವೆ, ಸಾಯುತ್ತವೆ, ಕಪ್ಪು ರಂಧ್ರವಾಗುತ್ತವೆ, ನಾಲ್ಕೈದು ತಲೆಮಾರಿನಾಚೆ ನಾವು ಈಗ ಬದುಕಿರುವವರೆಲ್ಲರೂ ಅಪ್ರಸ್ತುತರಾಗಿಬಿಡುತ್ತೇವೆ. ಇವತ್ತು ಬದುಕಿದವರು ಇನ್ನೊಂದು ನೂರು ವರ್ಷ ಕಳೆದರೆ- ಹೆಚ್ಚೆಂದರೆ ಫೇಸ್‌ಬುಕ್ ಸಾಮಾಜಿಕ ಜಾಲತಾಣದ ಆರ್ಕೈವ್ ಅಕೌಂಟ್ ಆಗಿ ಎಲ್ಲಿಯೋ ಸರ್ವರ್‌ಗಳ ಮೂಲೆಯಲ್ಲಿ ಬಿದ್ದಿರುತ್ತೇವೆ. ಇವೆಲ್ಲ ಪರಮ 'ವೈರಾಗ್ಯ' ಅನ್ನಿಸಿದರೂ, ವಿಷಯ ನಿಜ ತಾನೇ? ಎಲ್ಲವೂ ತಾತ್ಕಾಲಿಕ, ಬದಲಾವಣೆ ಮಾತ್ರ ನಿರಂತರ- ಶಾಶ್ವತ. ನೀವು ಎಲಾನ್ ಮಸ್ಕ್ ಆಗಿರಬಹುದು, ನೊಬೆಲ್ ಪಡೆದವರಿರಬಹುದು ಅಥವಾ ಇನ್ನೇನೋ ಸಾಧಿಸಿದವರಾಗಿರಬಹುದು. ಎಲ್ಲದಕ್ಕೂ, ಎಲ್ಲರ ಬದುಕಿಗೂ ಒಂದು ಮಿತಿಯಿದೆ. ಅದರಾಚೆ ಅರ್ಥವೇ ಇಲ್ಲ.

ತಾಳು ಮನವೇ ಭಾಗ- 2

ವಾಟ್ ಈಸ್ ದ ಪಾಯಿಂಟ್? ಬದುಕುವುದೇಕೆ? ಏನು ಮಾಡಿ ಏನು ಪ್ರಯೋಜನ? ಈ ಪ್ರಶ್ನೆಯನ್ನು ಖಿನ್ನತೆಯಿಂದ ಬಳಲುತ್ತಿರುವ ಒಬ್ಬ ವ್ಯಕ್ತಿ ಕೇಳಿಕೊಳ್ಳುವುದಕ್ಕೂ, ಒಬ್ಬ ತತ್ವಜ್ಞಾನಿ ಕೇಳುವುದಕ್ಕೂ ಬಹಳ ವ್ಯತ್ಯಾಸವಿದೆ. ಒಬ್ಬ ವ್ಯಕ್ತಿ ಆಂಕ್ಸೈಟಿಯ ಮಾರ್ಗದಲ್ಲಿ ಈ ಪ್ರಶ್ನೆಗೆ ಬಂದು ಮುಟ್ಟುವುದಕ್ಕೂ, ತಾರ್ಕಿಕ, ಅನ್ವೇಷಣೆಯ ಮಾರ್ಗದಿಂದ ತಲುಪುವುದಕ್ಕೂ ಅಜಗಜಾಂತರವಿದೆ. ಪ್ರಶ್ನೆ, ಚಿಂತೆ, ಯೋಚನೆಗಳಿಗೆ ಸುಸ್ತಾದ ಮನಸ್ಸಿಗೆ ಇಂಥದೊಂದು ಬಗೆಹರಿಯದ ಪ್ರಶ್ನೆಯನ್ನು ಎದುರಿಸುವಷ್ಟು, ವಿವೇಚಿಸುವಷ್ಟು ಸಮಾಧಾನವಿರುವುದಿಲ್ಲ. ಈ ಪ್ರಶ್ನೆ ಹುಟ್ಟಿರುವುದು ದುರ್ಬಲವಾದ ಮನಸ್ಸಿನಲ್ಲಿ, ಉದ್ವೇಗದ ಹಿನ್ನೆಲೆಯಿದ್ದಲ್ಲಿ- ''ಬದುಕಿಗೆ ಏನು ಅರ್ಥ, ಏಕೆ ಬದುಕಬೇಕು?'' ಎಂಬ ಪ್ರಶ್ನೆಗೆ, ''ಏನೂ ಕಾರಣವಿಲ್ಲ, ಯಾವುದೂ ಮುಖ್ಯವಲ್ಲ, ನೀನೂ ಮುಖ್ಯವಲ್ಲ, ನಿನ್ನ ಬದುಕೂ ಮುಖ್ಯವಲ್ಲ'' ಎಂಬ ಸಿದ್ಧ, ಸುಲಭದ ಉತ್ತರ ಕೊಡುವುದು ಸುಲಭ! ಮನಸ್ಸು ಬೇಕಾದಷ್ಟು ಉದಾಹರಣೆಗಳನ್ನು ಕೂಡ ಪಟ್ಟಿ ಮಾಡಿ, 'ಅರ್ಥವೇ ಇಲ್ಲ' ಎಂದು ನಂಬಿಸಿಬಿಡುತ್ತದೆ. ಹಾಗಂತ ಮಹಾಖಿನ್ನತೆಗೆ ಅತ್ಯುದ್ವೇಗ ಮಾತ್ರ ಕಾರಣವೇ? ಆಂಕ್ಸೈಟಿ ಇದ್ದವರು ಮಾತ್ರ ಡಿಪ್ರೆಶನ್, ನಂತರ ಜೀವ ಕಳೆದುಕೊಳ್ಳುವ ಹಂತಕ್ಕೆ ತಲುಪುವುದೇ? ಹಾಗೇನಿಲ್ಲ. ಹತ್ತು ಹಲವು ಕಾರಣಗಳಿಂದ ವ್ಯಕ್ತಿ ಡಿಪ್ರೆಶನ್ ತಲುಪಬಹುದು. ಡಿಪ್ರೆಶನ್ ಎಂದರೆ ಮಹಾಪ್ರಶ್ನೆಗೆ ಉತ್ತರ ಕಂಡುಕೊಳ್ಳಲಾಗದ ಸ್ಥಿತಿ. ಅದು

ಅನ್ಯಕಾರಣಗಳಿಂದಲೂ ಉದ್ಭವಿಸಬಹುದು. ಅತಿಯಾದ ಒತ್ತಡದ ವೃತ್ತಿ, ಬದುಕು, ಅತ್ಯಾಪ್ತರ ಸಾವು, ನೋವು, ಏಕಾಂಗಿತನ, ಕೆಲವೊಮ್ಮೆ ಮಿದುಳಿನ ರಾಸಾಯನಿಕಗಳು ಬದಲಾದಲ್ಲಿ, ಹಾರ್ಮೋನ್ ಬದಲಾವಣೆಯಿಂದ ಕೂಡ ಖಿನ್ನತೆ ಹುಟ್ಟುತ್ತದೆ. ಬಾಣಂತಿಯ ಖಿನ್ನತೆಯು ದೈಹಿಕ ಕಾರಣಕ್ಕೆ ಆರಂಭವಾಗಿ, ನಂತರವೂ ನಿರಂತರ ಕೆಲವರನ್ನು ಕಾಡುವುದಿದೆ. ಭಾವನೆಗಳನ್ನು ಹೊರಹಾಕದೆ ಬಂಧಿಸಿ, ಕುಪೋಷಿಸಿದರೆ, ಅಥವಾ ಅತ್ಯಂತ ನಿಸ್ಸಹಾಯಕ ಸ್ಥಿತಿಯಲ್ಲಿ, ಜೈಲಿನಲ್ಲಿ ಡಿಪ್ರೆಶನ್ ಸಂಭವಿಸುತ್ತದೆ. ಯುದ್ಧದಲ್ಲಿ ಭಾಗವಹಿಸಿದ ಸೈನಿಕರಿಗೆ, ಪರಮ ಕ್ರೌರ್ಯ ಕಂಡವರಿಗೆ ಡಿಪ್ರೆಶನ್ ಕಾಡುವ ಸಾಧ್ಯತೆ ಅತಿಹೆಚ್ಚು. ಈಗೀಗ ಕಡಿಮೆ ನಿದ್ರೆ, ಬೇಕಾಬಿಟ್ಟಿ ಆಹಾರ ಸೇವನೆ, ಸಾಮಾಜಿಕ ಜಾಲತಾಣ, ಶಿಸ್ತಿಲ್ಲದ ಬದುಕು ಇತ್ಯಾದಿಯಿಂದ ಕೂಡ ಡಿಪ್ರೆಶನ್ ಸಾಧ್ಯತೆ ಹೆಚ್ಚು ಎನ್ನುವುದು ಸಿದ್ಧಸತ್ಯ.

ಜೀವನದ ಬಗೆಹರಿಯದ ಪ್ರಶ್ನೆ ಖಿನ್ನತೆಯಾಗಿ ಎದುರಾದಾಗ ಇರುವ ಮಾರ್ಗಗಳನ್ನು ಹೇಳುವುದಕ್ಕಿಂತ ಮೊದಲು ಇಲ್ಲಿ ಒಂದು ವಿಚಾರವನ್ನು ಸ್ಪಷ್ಟಪಡಿಸಬೇಕು. ನಾನು ಯಾವುದೇ ಮಾನಸಿಕ ಸಮಸ್ಯೆಗೆ ಪರಿಹಾರ ಹೇಳುವ ಉದ್ದೇಶದಿಂದ ಈ ಲೇಖನ ಮಾಲೆಯನ್ನು ಬರೆಯುತ್ತಿಲ್ಲ. ಅಥವಾ ಇದು ಯಾವುದೇ expert opinion ಕೂಡ ಅಲ್ಲ, ಒಬ್ಬ ಸಾಮಾನ್ಯ ಓದುಗನಲ್ಲಿ ಇದರ ಬಗ್ಗೆ ಕೆಲವು ತಿಳಿವಳಿಕೆಯನ್ನು ಹಂಚಿಕೊಳ್ಳುವುದಷ್ಟೇ ಉದ್ದೇಶ. ಇದೆಲ್ಲ ಸ್ವವಿಮರ್ಶೆಗೇ ಹೊರತು ಇನ್ನೊಬ್ಬರ ರೋಗನಿರ್ಣಯಕ್ಕಲ್ಲ. ಮನೋದ್ವೇಗ, ಖಿನ್ನತೆ ಮಿತಿಮೀರಿದರೆ, ಮೊದಲು ನೆನಪಾಗಬೇಕಾದವರು, ಬಗೆಹರಿಸಬೇಕಾದವರು ಚಿಕಿತ್ಸಕರು (Therapists). ಮನೋವೈದ್ಯರ ಮಾರ್ಗದರ್ಶನಕ್ಕೆ ಯಾರದೇ ಮುಲಾಜಿಲ್ಲದೆ ಹೊರಡುವುದು ಅಂಥ ಸಮಯದಲ್ಲಿ ಮಾಡಲೇಬೇಕಾದ ಪ್ರಯತ್ನ. ನಮಗೆ ನಾವೇ ಮಾಡಿಕೊಳ್ಳಬಹುದಾದ ದೊಡ್ಡ ಉಪಕಾರ.

ಮಹಾಖಿನ್ನತೆ, ಮನೋದ್ವೇಗ, ಭರಿಸಲಾರದ ನಷ್ಟ, ಬದುಕಲಾಗದ ಕಷ್ಟವನ್ನು ಎದುರಿಸಿ ಬದುಕುವ ಹಲವಾರು ಜನರು ನಮ್ಮ ಸುತ್ತಮುತ್ತಲೇ ಇರುತ್ತಾರೆ, ನೋಡುತ್ತೇವೆ. ಅವರಲ್ಲಿ ಹೆಚ್ಚಿನವರು ಇಂಥ ಸ್ಥಿತಿಯಲ್ಲಿ ಅಧ್ಯಾತ್ಮ ಚಿಂತನೆಯ ಮೊರೆಹೋಗುವುದು ಕಾಣಿಸುತ್ತದೆ. ಇದು ಆಶ್ಚರ್ಯವೆನಿಸುವ ರೀತಿ ಅವರನ್ನು ಆ ಚಿಂತೆಯ ಸುಳಿಯಿಂದ ಮೇಲಕ್ಕೆತ್ತಿರುತ್ತದೆ. ಇದು ಪ್ಲೇಸಿಬೋ ಅಲ್ಲ- ಏನೋ ಒಂದು ಪರಿಹಾರ ಅಲ್ಲಿದೆ. ಬದುಕಿನ ಅರ್ಥವೇನು ಎಂದು ಕೇಳಹೊರಟ ಯೋಗಿ, ಸಾಧಕ ಖಿನ್ನನಾಗುವ ಬದಲು ಹೇಗೆ ಅನ್ವೇಷಕನಾಗುತ್ತಾನೋ ಅದೇ ರೀತಿ. ಇದು ವಿಷಯಸೂಕ್ಷ್ಮ. ಹಲವರಿಗೆ ಅಧ್ಯಾತ್ಮ, ಆಧ್ಯಾತ್ಮಿಕ ಚಿಂತನೆ ಎಂದರೆ ವಯಸ್ಸಾಗಿ ನಿವೃತ್ತಿ ಹೊಂದಿದ ಮೇಲಿನ ಟೈಮ್‌ಪಾಸ್ ಅವಶ್ಯಕತೆಯೆಂಬ ಅನಿಸಿಕೆಯಿದೆ. ಎಷ್ಟೋ ಜನರಿಗೆ ಅಧ್ಯಾತ್ಮವು ಅವೈಜ್ಞಾನಿಕ ಮತ್ತು ವಿರಕ್ತಿ, ವೈರಾಗ್ಯ ಎಂಬೆಲ್ಲ ಕೊಲೋನಿಯಲ್ ಭಾವ ಇಂದಿಗೂ ಇದೆ. ಬದುಕಿನಲ್ಲಿ ಏನೂ ಇಲ್ಲ, ಎಲ್ಲವೂ ಶೂನ್ಯ ಎಂದು ಅಧ್ಯಾತ್ಮ ಹೇಳುತ್ತದೆ ಎಂಬ ಸಾರ್ವತ್ರಿಕ ಅನಿಸಿಕೆಯಿದೆ. ಹೆಚ್ಚಿನವರಿಗೆ ಅಧ್ಯಾತ್ಮ ಶುರುವಾಗುವುದೇ 'ಬದುಕಿನ ಅರ್ಥವೇನೆಂಬ ಪ್ರಶ್ನೆಯಿಂದ' ಎನ್ನುವುದು ತಿಳಿದಿರುವುದಿಲ್ಲ. ಆರಂಭವೇ ಅಂತ್ಯ ಎಂದುಕೊಂಡಿರುತ್ತಾರೆ. ಅಧ್ಯಾತ್ಮ ಒಂದು ಖಿನ್ನಭಾವ ಎಂದು ಇದರಿಂದ ದೂರ ಇರುವವರು ಎಷ್ಟು ಜನ ಬೇಕು? ಇರಲಿ. ಬದುಕಿನಲ್ಲಿ 'ವಾಟ್ ಈಸ್ ದ ಪಾಯಿಂಟ್?' ಎಂಬ ಪ್ರಶ್ನೆ ಯಾವುದೇ ರೀತಿ ಎದುರಾಗುವುದಕ್ಕಿಂತ ಮೊದಲೇ ಒಂದಿಷ್ಟು ಅಧ್ಯಾತ್ಮ ಸಂಸ್ಕಾರದ ಪರಿಚಯವಿದ್ದರೆ, ಒಳಗಿಳಿಸಿಕೊಂಡಿದ್ದರೆ ಬದುಕು ಸುಲಭದಲ್ಲಿ ಹಳಿತಪ್ಪುವುದಿಲ್ಲ. ಅಧ್ಯಾತ್ಮ ಚಿಂತನೆಗಳು ನಿರಾಶ್ರಿತರ ಶಿಬಿರವಲ್ಲ. ಸನಾತನ ಧರ್ಮದ ಉಪನಿಷತ್ತು, ಭಗವದ್ಗೀತೆ ಇವೆಲ್ಲ ಬದುಕು ಮುಗಿಯುವಾಗಿನ ಸಮಾಧಾನಕ್ಕಲ್ಲ, ಅವು ಅಸಲಿಗೆ ರೂಪಿಸಲ್ಪಟ್ಟದ್ದೇ ಸಮಯ ಸಂಕೋಲೆಯಾಚೆ ಇನ್ನೂ ಬದುಕನ್ನು ಉಳಿಸಿಕೊಂಡವರಿಗೆ.

ದೇವರು ಬಂದು ಖಿನ್ನಭಾವದ ಸಮಸ್ಯೆಯನ್ನು ಪರಿಹರಿಸುವುದಿಲ್ಲ. ಕೃಷ್ಣ ಭಗವದ್ಗೀತೆಯಲ್ಲಿಯೇ ಹೇಳಿಬಿಟ್ಟಿದ್ದಾನೆ- ''ಉದ್ಧರೇದಾತ್ಮನಾತ್ಮನಮ್ ನಾತ್ಮಾನಮ್ ಅವಸಾದಯೇತ್''. ಸೂಚ್ಯವಾಗಿ- ನಾವೇ ನಮ್ಮನ್ನು ಖಿನ್ನತೆಯಿಂದ ಮೇಲಕ್ಕೆತ್ತಿಕೊಳ್ಳಬೇಕು, ''ನ ಅವಸಾದಯೇತ್''- ಅದರಲ್ಲಿ ಮುಳುಗಬಾರದು. ಅತ್ಯಂತ ದೊಡ್ಡ ಆಘಾತವಾದಾಗ, ಹತ್ತಿರದವರನ್ನು, ಗಂಡ ಹೆಂಡತಿಯನ್ನು, ಹೆಂಡತಿ ಗಂಡನನ್ನು, ಮಗುವನ್ನು, ತಂದೆ ತಾಯಿಯನ್ನು ಕಳೆದುಕೊಂಡು ಬದುಕಿನ ದಿಕ್ಕು ತಪ್ಪಿಹೋಗುತ್ತದೆ. ನನ್ನ ಪರಿಚಯದವರೊಬ್ಬರು ಕೆಲವು ವರ್ಷಗಳ ಹಿಂದೆ ತಮ್ಮ ಗಂಡನನ್ನು ಕಳೆದುಕೊಂಡರು. ನಂತರ ಖಿನ್ನತೆಯ ಕಾರಣಕ್ಕೆ, ಬೆಳೆದ ಅವರ ಮಗನೂ ಎರಡೇ ವರ್ಷಕ್ಕೆ ಬಿಟ್ಟು ಹೋಗಿಬಿಟ್ಟ. ಕೆಲವರಿಗಾಗುತ್ತದಲ್ಲ- ಪ್ರಪಂಚದಲ್ಲಿರುವ ಎಲ್ಲ ಕಷ್ಟಗಳೂ ಅವರಿಗೇ ಬಂದುಬಿಡುತ್ತವೆ. ಒಂದರ ಮೇಲೊಂದು ಸುಧಾರಿಸಿಕೊಳ್ಳಲಾಗದ ಹೊಡೆತ. ನಾನು ಆಗೀಗ ಅವರ ಜತೆ ಮಾತನಾಡುತ್ತಿರುತ್ತೇನೆ. ಅವರು ಎಂದೂ ಕೊರಗಿದ್ದು ನೋಡಿಲ್ಲ, ಜೀವಚಿಲುಮೆ. ಅವರು 'ಏಕೆ ಬದುಕಬೇಕು?' ಎಂಬ ಪ್ರಶ್ನೆಗೆ ತಮ್ಮ ಬದುಕನ್ನೇ ಉತ್ತರವಾಗಿ ರೂಪಿಸಿಕೊಂಡಿದ್ದಾರೆ. ಅವರು ಯಾವತ್ತೂ ಹೇಳುವ ಮಾತೊಂದಿದೆ- ''ಶಿಶಿರ್, ನಾನಿವತ್ತು ಬದುಕಿದ್ದೇನೆ ಎಂದರೆ ಅದಕ್ಕೆ ಏಕೈಕ ಕಾರಣ ಸ್ಪಿರಿಚುಯಾಲಿಟಿ. ನನ್ನನ್ನು ಇದೆಲ್ಲ ಸಂದರ್ಭದಲ್ಲಿ ಕಾಪಾಡಿದ್ದು- ನಾನು ನನಗೆ ಕೊಟ್ಟುಕೊಂಡ ಆಧ್ಯಾತ್ಮಿಕ ವಿಚಾರ ಮತ್ತು ಸಂಸ್ಕಾರ. ಇಲ್ಲದಿದ್ದರೆ ನಾನು ಯಾವತ್ತೋ ಸತ್ತುಹೋಗುತ್ತಿದ್ದೆ ಅಥವಾ ಹುಚ್ಚಿಯಾಗಿಬಿಡುತ್ತಿದ್ದೆ. ನನ್ನ ಬದುಕಿಗೆ ಅರ್ಥವೇ ಇಲ್ಲ ಎಂದು ನನಗೆ ಲಕ್ಷ ಬಾರಿ ಅನಿಸಿದೆ. ಆದರೆ ಪ್ರತಿಬಾರಿಯೂ ಅದನ್ನೊಂದು ಅನ್ವೇಷಣೆಯಾಗಿ ಆಧ್ಯಾತ್ಮಿಕ ಚಿಂತನೆಯು ಬದಲಿಸಿದೆ''. ಈಗೀಗ ಪಾಶ್ಚಾತ್ಯ ಮನಃಶಾಸ್ತ್ರಜ್ಞರು ಮಹೋದ್ವೇಗ, ಖಿನ್ನತೆಗೆ ಕೌನ್ಸಿಲಿಂಗ್‌ನ ಜತೆಗೆ ಯೋಗ, ಧ್ಯಾನವನ್ನು ಕೂಡ ಪ್ರಿಸ್ಕ್ರೈಬ್ ಮಾಡದೇ ಇರುವುದಿಲ್ಲ.

ಇಲ್ಲಿ ಪ್ರಶ್ನೆ ಇರುವುದು 'ಬದುಕುವುದೇಕೆ' ಎಂದಲ್ಲವೇ? ಹಾಗಾದರೆ ಬದುಕಿನ ಉದ್ದೇಶ ತಿಳಿದುಕೊಳ್ಳಬೇಕೆಂದರೆ ನಾಲ್ಕು ವೇದ, ಶ್ರುತಿ, ಉಪನಿಷತ್ತು, ರಾಮಾಯಣ, ಮಹಾಭಾರತ, ಪುರಾಣ, ಯೋಗಸೂತ್ರ ಎಲ್ಲವನ್ನೂ ತಿಳಿಯಬೇಕೆ? ಅಥವಾ, ''ಎಲ್ಲರೂ ಬದುಕುತ್ತಾರೆ- ಹಾಗಾಗಿ ಬದುಕಬೇಕು, ಏನೋ ಒಂದು ಕಾರಣ ಇಟ್ಟುಕೊಳ್ಳಬೇಕು'' ಎನ್ನುವುದು ಪರಿಹಾರದ ಉತ್ತರವೇ? ನಮ್ಮೆಲ್ಲರ ವಯಸ್ಸು, ಹಿನ್ನೆಲೆ, ವೃತ್ತಿ, ಬದುಕಿನ ಸಾಧ್ಯತೆ, ಸಂಕೋಲೆಗಳು ಬೇರೆಯಾಗಿರುವಾಗ 'ಏಕೆ ಬದುಕಬೇಕು?' ಎಂಬ ಪ್ರಶ್ನೆಗೆ ಉತ್ತರ ಕಂಡುಕೊಳ್ಳುವುದು ಹೇಗೆ?

ಸುಲಭದ 'ಶಾರ್ಟ್ ಕಟ್' ಮುಂದಿನ ವಾರಕ್ಕೆ.

(ಮುಂದುವರಿಯುವುದು)

ಕರೆನ್ಸಿ ನೋಟುಗಳಿಗಿಂತ ಬಂಗಾರ-ಬೆಳ್ಳಿಗೇ ಈಗ ಮೌಲ್ಯ!

ಮನಿ ಮೈಂಡೆಡ್
ಕೇಶವ ಪ್ರಸಾದ್ ಬಿ.
keshavaprasadb@gmail.com

ಜಗತ್ತಿನಾದ್ಯಂತ ಕರೆನ್ಸಿ ನೋಟುಗಳು ತಮ್ಮ ಮೌಲ್ಯವನ್ನು ಕಳೆದುಕೊಳ್ಳುತ್ತಿವೆ. ಅವುಗಳ ಖರೀದಿ ಸಾಮರ್ಥ್ಯವೂ ಗಣನೀಯವಾಗಿ ಕುಸಿಯುತ್ತಿವೆ. ಅಮೆರಿಕದ ಡಾಲರ್ ಜಾಗತಿಕ ಕರೆನ್ಸಿ ಎಂಬ ಹೆಗ್ಗಳಿಕೆ ಗಳಿಸಿದ್ದರೂ, ಅದರ ಮೌಲ್ಯವೂ ಕ್ರಮೇಣ ಇಳಿಯುತ್ತಿರುವುದನ್ನು ಗಮನಿಸಬಹುದು. ಮತ್ತೊಂದು ಕಡೆ ಬಂಗಾರ ಮತ್ತು ಬೆಳ್ಳಿಯ ದರ ಅನೂಹ್ಯವಾಗಿ ಏರುತ್ತಿದೆ. ಈ ಅಮೂಲ್ಯ ಲೋಹಗಳ ದರ ಇಳಿಕೆಯಾಗುವ ನಿರೀಕ್ಷೆ ಹೊತ್ತವರಿಗೆ ನಿರಾಸೆಯಾಗಿದೆ. ಕೇವಲ ವಾರದ ಹಿಂದೆ ಇದ್ದ ದರ ಈಗಿಲ್ಲ. ಏಕೆ ಹೀಗೆ ಎಂದು ಜನ ಕೇಳುತ್ತಿದ್ದಾರೆ!

ಭಾರತದಲ್ಲಿ 2023ರ ಜನವರಿಯಲ್ಲಿ 24 ಕ್ಯಾರಟ್‌ನ 10 ಗ್ರಾಮ್ ಬಂಗಾರದ ದರ 52,000 ರುಪಾಯಿ ಆಸುಪಾಸಿನಲ್ಲಿತ್ತು. ಈಗ ಅದೇ ಚಿನ್ನದ ದರ 1 ಲಕ್ಷದ 40 ಸಾವಿರ ರುಪಾಯಿಗೆ ಜಿಗಿದಿದೆ. ಮೂರೇ ವರ್ಷದಲ್ಲಿ ಇಮ್ಮಡಿಗಿಂತಲೂ ಜಾಸ್ತಿಯಾಗಿದೆ. ದರ ಯಾವಾಗ ಇಳಿಯಲಿದೆ ಎಂದರೆ ಉತ್ತರ ಸಿಗುತ್ತಿಲ್ಲ. ಆದರೆ ಇನ್ನು ಬಂಗಾರದ ದರ ಇಳಿದರೂ, ಚೂರುಪಾರು ಇಳಿಯಬಹುದಷ್ಟೇ ಎಂಬ ಭವಿಷ್ಯವನ್ನಂತೂ ಜನಸಾಮಾನ್ಯರೂ ಹೇಳುತ್ತಾರೆ. ಈ ಭಾರಿ ಪಲ್ಲಟದ ಹಿಂದಿರುವ ಜಾಗತಿಕ ವಿದ್ಯಮಾನಗಳನ್ನು, ಕರೆನ್ಸಿ ನೋಟುಗಳು ಕಿಮ್ಮತ್ತು ಕಳೆದುಕೊಳ್ಳುತ್ತಿರುವ ಟ್ರೆಂಡ್ ಅನ್ನು ಅರ್ಥಮಾಡಿಕೊಳ್ಳಬೇಕಾಗಿದೆ.

ಮುಖ್ಯವಾಗಿ ಜಾಗತಿಕ ಆರ್ಥಿಕತೆಯ ಅನಿಶ್ಚಿತತೆ, ಹೆಚ್ಚುತ್ತಿರುವ ಹಣದುಬ್ಬರ, ಜಿಯೊಪಾಲಿಟಿಕಲ್ ಅಸ್ಥಿರತೆಗಳು ಕರೆನ್ಸಿಗಳ ಮೌಲ್ಯ ನಷ್ಟಕ್ಕೆ ಕಾರಣವಾಗಿವೆ. ಇಂಥ ಸನ್ನಿವೇಶದಲ್ಲಿ ಚಿನ್ನ ಆಪದ್ಧನವಾಗಿ, ಹೂಡಿಕೆಯ ಸುರಕ್ಷಿತ ತಾಣವಾಗಿ ಹೊರಹೊಮ್ಮಿದೆ. ಮತ್ತೊಂದು ಕಡೆ ಬೆಳ್ಳಿಯು ಉದ್ದಿಮೆಗಳಲ್ಲೂ ವ್ಯಾಪಕ ಬೇಡಿಕೆ ಪಡೆಯುತ್ತಿದೆ, ಹೀಗಾಗಿ ದರವನ್ನು ಏರಿಸಿಕೊಂಡಿದೆ.

ನೋಟುಗಳನ್ನು ಮುದ್ರಿಸಿ ಹಂಚಿದರೆ ಬಡವರನ್ನೂ ಶ್ರೀಮಂತರನ್ನಾಗಿಸಬಹುದಲ್ಲವೇ? ಕಷ್ಟ ಕಾರ್ಪಣ್ಯಗಳು ನಿವಾರಣೆಯಾಗುವುದಿಲ್ಲವೇ? ವಾಸ್ತವವಾಗಿ ನೋಟುಗಳನ್ನು ಮಿತಿ ಮೀರಿ ಮುದ್ರಿಸಿದರೆ, ವ್ಯವಸ್ಥೆಯಲ್ಲಿ ನೋಟುಗಳು ಹೆಚ್ಚುತ್ತವೆ. ಆದರೆ ಅದರ ಬೆಲೆ ಕುಸಿಯುತ್ತದೆ. ವಸ್ತುಗಳು ಮತ್ತು ಸೇವೆಗಳ ಬೆಲೆ ಗಗನಕ್ಕೇರುತ್ತವೆ. ಆದ್ದರಿಂದ ಉತ್ಪಾದನೆ ಇಲ್ಲದೆ ಕೇವಲ ನೋಟುಗಳನ್ನು ಮುದ್ರಿಸಿ ಹಂಚಿದರೆ ಉಪಯೋಗವಿಲ್ಲ. ಆಗ ಕರೆನ್ಸಿಯ ಖರೀದಿ ಸಾಮರ್ಥ್ಯ ಕುಸಿಯುತ್ತದೆ. ಅದನ್ನು 'ಪರ್ಚೇಸಿಂಗ್ ಪವರ್ ಆಫ್ ಮನಿ' ಎನ್ನುತ್ತಾರೆ. ಹೀಗಾಗಿ ಹಣದುಬ್ಬರ ಜಾಸ್ತಿಯಾಗಿ ಪರದಾಡುವಂತಾಗುತ್ತದೆ. ಇಂಥ ಸಂದರ್ಭದಲ್ಲಿ ಹೂಡಿಕೆದಾರರು, ಸೆಂಟ್ರಲ್ ಬ್ಯಾಂಕ್‌ಗಳು ತಮ್ಮ ಸಂಪತ್ತಿನ ಮೌಲ್ಯವನ್ನು ರಕ್ಷಿಸಲು ಚಿನ್ನ, ಬೆಳ್ಳಿಯಲ್ಲಿ ಹೂಡಿಕೆ ಮಾಡುತ್ತವೆ. ಏಕೆಂದರೆ ಅವರೆಡನ್ನೂ ನೋಟುಗಳಂತೆ ಬೇಕಾದಷ್ಟು ಮುದ್ರಿಸಲಾಗುವುದಿಲ್ಲ ಮತ್ತು ಅವುಗಳಿಗೆ ಮಿತಿ ಇದೆ. ಅಭಾವ ಇರುವುದರಿಂದಲೇ ಬಂಗಾರಕ್ಕೆ ಬೇಡಿಕೆ ಹೆಚ್ಚು.

ಹಂಗರಿಯಲ್ಲಿ 1946ರಲ್ಲಿ ನೋಟುಗಳನ್ನು ಅತಿಯಾಗಿ ಮುದ್ರಿಸಿ ಹಂಚಿದ ಪರಿಣಾಮ ಪ್ರತಿ 15 ಗಂಟೆಗಳಿಗೊಮ್ಮೆ ದರ ಇಮ್ಮಡಿಯಾಗಿತ್ತು. ಜಿಂಬಾಬ್ವೆಯಲ್ಲಿ 2000ನೇ ವರ್ಷದ ಅಂತ್ಯದ ವೇಳೆಗೆ ನೋಟುಗಳು ಬೆಲೆ ಕಳೆದುಕೊಂಡು, ಜನರು ವಿದೇಶಿ ಡಾಲರ್ ಅನ್ನು ವ್ಯವಹಾರಗಳಲ್ಲಿ ಬಳಸಿದ್ದರು. 1920ರಲ್ಲಿ ಜರ್ಮನಿಯಲ್ಲೂ ಹೆಚ್ಚು ನೋಟುಗಳನ್ನು ಮುದ್ರಿಸಿದ ಪರಿಣಾಮ ಕೆಲವೇ ದಿನಗಳಲ್ಲಿ ದರಗಳು ಡಬಲ್ ಆಗುತ್ತಿತ್ತು. ಯುಗೊಸ್ಲಾವಿಯಾ, ವೆನಿಜುವೆಲಾ, ಗ್ರೀಸ್, ಇರಾನ್‌ನಲ್ಲಿ ಇದೇ ಕಾರಣಕ್ಕಾಗಿ ನಾಗರಿಕರು ತಿರುಗಿಬಿದ್ದಿದ್ದರು. ವೆನಿಜುವೆಲಾದಲ್ಲಿ ಅಧ್ಯಕ್ಷರನ್ನೇ ಅಪಹರಿಸಿದರೂ ಜನ ತಣ್ಣನೆಯ ಪ್ರತಿಕ್ರಿಯೆ ನೀಡಿದ್ದಾರೆ. ಇರಾನ್‌ನಲ್ಲಿ ಹಿಂಸಾಚಾರ ತಾಂಡವವಾಡುತ್ತಿದ್ದು ಖಮೇನಿಯ ಸರ್ವಾಧಿಕಾರ ಅಂತ್ಯವಾಗುವ ಲಕ್ಷಣ ಕಾಣಿಸುತ್ತಿದೆ. ಚೀನಾದಲ್ಲಿ 1940ರಲ್ಲಿ ಯುದ್ಧದ ಖರ್ಚುಗಳನ್ನು ಭರಿಸಲು ನ್ಯಾಷನಲಿಸ್ಟ್ ಸರಕಾರ ನೋಟುಗಳನ್ನು ಅತಿಯಾಗಿ ಮುದ್ರಿಸಿತ್ತು. ಇದರಿಂದ ಬೆರಳೆಣಿಕೆಯ ದಿನಗಳಲ್ಲಿ ವಸ್ತುಗಳು, ಸೇವೆಗಳ ದರಗಳು ಇಮ್ಮಡಿಯಾಗುತ್ತಿತ್ತು. ನಾಗರಿಕ ದಂಗೆ ತೀವ್ರವಾಗಿ ಸರಕಾರ ಪತನವಾಯಿತು.

ಇರಾನ್‌ನ ದುರಂತವನ್ನೇ ನೋಡಿ, ಪ್ರಾಚೀನ ಪರ್ಷಿಯನ್ ಸಾಮ್ರಾಜ್ಯವೇ ಈಗಿನ ಇರಾನ್. ಎಪ್ಪತ್ತರ ದಶಕದಲ್ಲಿ ಇಸ್ಲಾಮಿಕ್ ಮೂಲಭೂತವಾದಿಗಳಿಂದ ದಂಗೆ ಸಂಭವಿಸುವ ಮೊದಲು ಷಾ ದೊರೆಗಳು ಚೆನ್ನಾಗಿ ಆಳ್ವಿಕೆ ನಡೆಸುತ್ತಿದ್ದರು. ವಿದೇಶಿ ವಿನಿಮಯ ಮಾರುಕಟ್ಟೆಯಲ್ಲಿ ಇರಾನಿನ ರಿಯಾಲ್ ಕರೆನ್ಸಿಯು ಭಾರತದ ರುಪಾಯಿಗಿಂತಲೂ ಹೆಚ್ಚಿನ ಮೌಲ್ಯವನ್ನು ಹೊಂದಿತ್ತು. ಇರಾನನ್ನು ಆಳಿದ್ದ ಕೊನೆಯ ಪರ್ಷಿಯನ್ ದೊರೆ (ಷಾ) ಮಹಮ್ಮದ್ ರೇಜಾ ಪಹ್ಲವಿ ಅವರು ಅಮೆರಿಕ ಮತ್ತು ಪಾಶ್ಚಿಮಾತ್ಯ ದೇಶಗಳ ಜತೆಗೆ ಉತ್ತಮ ಸಂಬಂಧ ಇಟ್ಟುಕೊಂಡಿದ್ದರು. ಈಗಲೂ ಎಪ್ಪತ್ತರ ದಶಕದ ಸಮೃದ್ಧ ಮತ್ತು ಆಧುನಿಕ ಇರಾನ್‌ನ ಜನಜೀವನವನ್ನು ಬಿಂಬಿಸುವ ವಿಡಿಯೊಗಳನ್ನು ಯುಟ್ಯೂಬ್‌ನಲ್ಲಿ ವೀಕ್ಷಿಸಬಹುದು. ನೋಡಿದರೆ ಆಶ್ಚರ್ಯವಾಗುವಷ್ಟು, ಇರಾನ್ ಜನರು ಸಕಲ ಸ್ವಾತಂತ್ರ್ಯಗಳೊಂದಿಗೆ, ಪಾಶ್ಚಿಮಾತ್ಯರಂತೆ ಜೀವಿಸುತ್ತಿದ್ದರು. ಹೆಣ್ಣು ಮಕ್ಕಳು ಆಧುನಿಕ ಉಡುಗೆ ತೊಡುಗೆಗಳನ್ನು ಧರಿಸುತ್ತಿದ್ದರು. ಗಣನೀಯ ಆರ್ಥಿಕಾಭಿವೃದ್ಧಿ, ಸಾಮಾಜಿಕ ಸುಧಾರಣೆ, ಮಹಿಳಾ ಸಬಲೀಕರಣ ನಡೆದಿತ್ತು. ಆದರೆ ಇಸ್ಲಾಮಿಕ್ ಕ್ರಾಂತಿಯ ಬಳಿಕ ಇರಾನ್ ಪತನ ಶುರುವಾಯಿತು. ಬಂಡವಾಳದ ಹೊರಹರಿವು, ರಾಜಕೀಯ ಅನಿಶ್ಚಿತತೆ, ಮಹಿಳೆಯರ ಹಕ್ಕುಗಳ ನಿರಾಕರಣೆ, ನಾನಾ ನಿರ್ಬಂಧಗಳಿಂದ ಆರ್ಥಿಕ ವ್ಯವಸ್ಥೆ ಹದಗೆಟ್ಟಿತು. 1979ರ ನವೆಂಬರ್‌ನಲ್ಲಿ ಅಮೆರಿಕವು ಮೊದಲ ಬಾರಿಗೆ ಇರಾನ್ ವಿರುದ್ಧ ನಿರ್ಬಂಧ ವಿಧಿಸಿತು. ಬಳಿಕ ಡಜನ್‌ಗಟ್ಟಲೆ ನಿರ್ಬಂಧಗಳನ್ನು ಇರಾನ್ ವಿರುದ್ಧ ಜಾರಿಗೊಳಿಸಲಾಗಿದೆ. ಇರಾನ್‌ನಲ್ಲಿ ತೈಲ ಸಂಪನ್ಮೂಲ ಇದ್ದರೂ, ಮಾರಾಟಕ್ಕೆ ಅಡಚಣೆಯಾಯಿತು. ಜಾಗತಿಕ ಬ್ಯಾಂಕಿಂಗ್ ವ್ಯವಸ್ಥೆಯೊಂದಿಗೆ ಸಂಪರ್ಕ ಕಡಿತವಾಯಿತು. ಇರಾನ್‌ನ ಪರಮಾಣು ಕಾರ್ಯಕ್ರಮಗಳನ್ನು ಅಮೆರಿಕ ಹತ್ತಿಕ್ಕಿದೆ. ಮತ್ತೊಂದು ಕಡೆ ಚಟುವಟಿಕೆಗಳು ಮುಂದುವರಿದಿವೆ ಎಂದೂ ಇರಾನ್ ಹೇಳಿಕೊಂಡಿದೆ. ಈ ರೀತಿಯಲ್ಲಿ ವಿವಾದಗಳಿಂದ ಸೊರಗಿರುವ ಇರಾನ್‌ನಲ್ಲಿ ಈಗ ಜನರೇ ದಂಗೆ ಎದ್ದು ಮತ್ತೆ ಷಾ ದೊರೆಗಳ ಆಳ್ವಿಕೆ ಬೇಕೆಂದು ಬೀದಿಗಿಳಿದಿದ್ದಾರೆ. ಇದಕ್ಕೆ ಅಮೆರಿಕದ ಬೆಂಬಲವೂ ಇದೆ. ಆರ್ಥಿಕ-ರಾಜಕೀಯ-ಸಾಮಾಜಿಕ ಸಂಘರ್ಷಗಳು, ಅಂತಾರಾಷ್ಟ್ರೀಯ ನಿರ್ಬಂಧಗಳು ಹೇಗೆ ಒಂದು ದೇಶದ ಕರೆನ್ಸಿಯನ್ನು ನೆಲಕಚ್ಚಿಸುತ್ತದೆ ಎಂಬುದಕ್ಕೆ ಇರಾನ್, ವೆನಿಜುವೆಲಾ ಇತ್ತೀಚಿನ ಸಾಕ್ಷಿಗಳಾಗಿವೆ.

ಕೋವಿಡ್ ಬಿಕ್ಕಟ್ಟಿನ ಸಂದರ್ಭ ಅಮೆರಿಕ ಕೂಡ ಸರಕಾರಿ ಬಾಂಡ್‌ಗಳನ್ನು ಖರೀದಿಸಲು 'ಕ್ವಾಂಟಿಟೇಟಿವ್ ಈಸಿಂಗ್' ಪದ್ಧತಿಯನ್ನು ಅನುಸರಿಸಿತ್ತು. ಇದರ ಅಡಿಯಲ್ಲಿ ಬಾಂಡ್‌ಗಳನ್ನು ಕೊಳ್ಳಲು ನೋಟುಗಳನ್ನು ಮುದ್ರಿಸಿತ್ತು. ಹಣದ ಚಲಾವಣೆಯನ್ನು ಹೆಚ್ಚಿಸಲು, ಆರ್ಥಿಕ ಚಟುವಟಿಗಳನ್ನು ಉತ್ತೇಜಿಸುವುದು ಇದರ ಉದ್ದೇಶವಾಗಿತ್ತು. ಅಮೆರಿಕದ ಡಾಲರ್ ಜಾಗತಿಕ ಮಟ್ಟದಲ್ಲಿ ಪ್ರಬಲವಾಗಿರಬಹುದು. ಆದರೆ ಆ ದೇಶ ಈಗ 38 ಲಕ್ಷ ಕೋಟಿ ಡಾಲರ್ ಸಾಲವನ್ನು ಹೊಂದಿದೆ. ಇದು ಅಮೆರಿಕದ ಜಿಡಿಪಿಗಿಂತಲೂ ಅಧಿಕ. ಇದಕ್ಕೆ ಕಾರಣ ಹಲವಾರು ಬಾರಿ ಕ್ವಾಂಟಿಟೇಟಿವ್ ಈಸಿಂಗ್ ಉಪಕ್ರಮವನ್ನು ನಡೆಸಿರುವುದು. ಇದರ ಪರಿಣಾಮ ಅಮೆರಿಕದ ಆರ್ಥಿಕ ಬೆಳವಣಿಗೆ ಮಂದಗತಿಯಲ್ಲಿದೆ. ಬಡ್ಡಿ ದರ ಪಾವತಿಯ ಹೊರೆ ಹೆಚ್ಚುತ್ತಿದೆ. ಪ್ರತಿ ವರ್ಷ 1 ಲಕ್ಷ ಕೋಟಿ ಡಾಲರ್ ಬಡ್ಡಿಯನ್ನು ಕೊಡಬೇಕಾಗುತ್ತದೆ. ರಕ್ಷಣಾ ಬಜೆಟ್‌ಗಿಂತಲೂ ಹೆಚ್ಚು ಮೊತ್ತವನ್ನು ಸಾಲದ ಬಡ್ಡಿ ಪಾವತಿಗೆ ಅಮೆರಿಕ ಸರಕಾರ ಇಡಬೇಕಾಗಿ ಬಂದಿದೆ. ಹಳೆಯ ಸಾಲದ ಬಡ್ಡಿ ಕಟ್ಟುವುದರ ಬದಲಿಗೆ ಹೊಸ ಸಾಲ ಮಾಡಲಾಗುತ್ತಿದೆ. ಅಲ್ಲಿನ ಪ್ರತಿ ಪ್ರಜೆಯ ಮೇಲೆ 114,000 ಡಾಲರ್ ಸಾಲ ಇದೆ (1.02 ಕೋಟಿ ರುಪಾಯಿ). ಮತ್ತೊಂದು ಕಡೆ ಅಮೆರಿಕದ ಬಾಂಡ್‌ಗಳನ್ನು ಚೀನಾ ಮತ್ತು ಜಪಾನ್ ಮಾರಲು ಆರಂಭಿಸಿವೆ. ಇದು ಡಾಲರ್ ಮತ್ತಷ್ಟು ದುರ್ಬಲವಾಗಲು ಕಾರಣವಾದೀತು.

ಕರೆನ್ಸಿ ದರಗಳಲ್ಲಿ ಕುಸಿತ ತೀವ್ರವಾದಾಗ ಬಂಗಾರ-ಬೆಳ್ಳಿಯ ದರ ಏರಿಕೆಯಾಗುತ್ತವೆ. ಜಾಗತಿಕ ಮಾರುಕಟ್ಟೆಯಲ್ಲಿ ಚಿನ್ನವನ್ನು ಡಾಲರ್ ಲೆಕ್ಕದಲ್ಲಿ ಖರೀದಿಸಲಾಗುತ್ತದೆ. ಡಾಲರ್ ಎದುರು ಸ್ಥಳೀಯ ಕರೆನ್ಸಿ ದುರ್ಬಲವಾದಾಗ ಚಿನ್ನ ಮತ್ತು ಬೆಳ್ಳಿಯ ಆಮದು ಕೂಡ ದುಬಾರಿಯಾಗುತ್ತದೆ. ಬಡ್ಡಿ ದರಗಳು ಕಡಿತವಾದಾಗ ಬಾಂಡ್‌ಗಳಲ್ಲಿ ಹೂಡಿಕೆ ಮಾಡುವುದಕ್ಕಿಂತ ಬಂಗಾರದಲ್ಲಿ ಹೂಡಿಕೆ ಲಾಭದಾಯಕವಾಗುತ್ತದೆ.

ಬೆಳ್ಳಿಯನ್ನು ಸೌರಫಲಕ, ಇಲೆಕ್ಟ್ರಿಕ್ ವಾಹನಗಳು, ಇಲೆಕ್ಟ್ರಾನಿಕ್ಸ್‌ನಲ್ಲಿ ಬಳಸುತ್ತಾರೆ. ಉದ್ಯಮ ವಲಯದ ಅಗತ್ಯಗಳಿಗೆ ಬಳಸುವುದರಿಂದ ರಜತ ಲೋಹದ ದರ ಹೆಚ್ಚಳವಾಗುತ್ತಿದೆ. ಹಾಗಾದರೆ ಚಿನ್ನದ ದರದಲ್ಲಿ ಭಾರಿ ಇಳಿಕೆ ನಿರೀಕ್ಷಿಸಬಹುದೇ? ಮಾರುಕಟ್ಟೆ ತಜ್ಞರ ಪ್ರಕಾರ ಸಾಧ್ಯವಿಲ್ಲ. ಏಕೆಂದರೆ ಬಂಗಾರದ ದರ ಇಳಿಯಬೇಕಿದ್ದರೆ ಮುಖ್ಯವಾಗಿ ಮೂರು ಬೆಳವಣಿಗೆಗಳು ಏಕಕಾಲಕ್ಕೆ ಸಂಭವಿಸಬೇಕಾಗಿದೆ. ಮೊದಲನೆಯದಾಗಿ ಹಣದುಬ್ಬರ ಭಾರಿ ಇಳಿಕೆಯಾಗಬೇಕು. ಎರಡನೆಯದಾಗಿ, ಸೆಂಟ್ರಲ್ ಬ್ಯಾಂಕ್‌ಗಳು ನಿರೀಕ್ಷೆ ಮೀರಿ ಬಡ್ಡಿ ದರವನ್ನು ತಗ್ಗಿಸಬೇಕು. ಮೂರನೆಯದಾಗಿ, ಡಾಲರ್ ತನ್ನ ಬಲ ವೃದ್ಧಿಸಬೇಕು. ಈ ಮೂರೂ ಬೆಳವಣಿಗೆಗಳು ಒಟ್ಟಾಗಿ ಸಂಭವಿಸಿದರೆ ಹೂಡಿಕೆದಾರರು ಬಾಂಡ್‌ಗಳಲ್ಲಿ ಹೂಡಿಕೆಗೆ ಮರಳಬಹುದು. ಆಗ ಚಿನ್ನದ ದರ ಗಣನೀಯ ಇಳಿಯಬಹುದು. ಚಿನ್ನದ ದರ ಈಗಾಗಲೇ ಸಾರ್ವಕಾಲಿಕ ಉನ್ನತ ಮಟ್ಟದಲ್ಲಿ ಇರುವುದರಿಂದ ದಿಢೀರ್ ಏರಿಕೆಯ ಟ್ರೆಂಡ್ ಮುಂದುವರಿಯುವ ಸಾಧ್ಯತೆ ಇಲ್ಲ, ಅದೇ ರೀತಿ ದಿಢೀರ್ ಕುಸಿಯುವ ಸಾಧ್ಯತೆಯೂ ಇಲ್ಲ. ಆದ್ದರಿಂದ ರಿಟೇಲ್ ಖರೀದಿದಾರರು ಹಂತಗಳಲ್ಲಿ ಕೊಳ್ಳುವುದು ಉತ್ತಮ ಆಯ್ಕೆಯಾದೀತು. ಬೆಳ್ಳಿಯ ಕಥೆ ಹಾಗಲ್ಲ, ದೀರ್ಘಕಾಲೀನ ದೃಷ್ಟಿಯಿಂದ ಬೇಡಿಕೆ ಇರಬಹುದು, ಆದರೆ ತಾತ್ಕಾಲಿಕವಾಗಿ ತಕ್ಷಣದ ಲಾಭ ಗಳಿಕೆಯ ದೃಷ್ಟಿಯಿಂದ ಹೂಡಿಕೆದಾರರು ಮಾರಾಟ ಮಾಡಬಹುದು. ಈ ಪ್ರಾಫಿಟ್ ಬುಕಿಂಗ್ ಪರಿಣಾಮ ದರ ಇಳಿಯಬಹುದು. ಆದ್ದರಿಂದ ಅಲ್ಪಾವಧಿಗೆ ಏರಿಳಿತದ ಅಪಾಯ ಇದ್ದೇ ಇದೆ, ಆದರೆ ದೀರ್ಘಾವಧಿಯ ಹೂಡಿಕೆಗೆ ಚಿಂತೆ ಇಲ್ಲ ಎನ್ನುತ್ತಾರೆ ತಜ್ಞರು.

ರಿಸರ್ವ್ ಬ್ಯಾಂಕ್ ಆಫ್ ಇಂಡಿಯಾ ನೋಟುಗಳನ್ನು ಮುದ್ರಿಸುವಾಗ ಅಷ್ಟೇ ಮೌಲ್ಯದ ಬಂಗಾರವನ್ನು ಪ್ರತ್ಯೇಕವಾಗಿ ಇಡಬೇಕಾಗುತ್ತದೆಯೇ? ಎಂಬ ಪ್ರಶ್ನೆ ಇರಬಹುದು. ಆದರೆ ಅಂಥ ನಿಯಮವಿಲ್ಲ. ಆದರೆ ಅನಿಯಂತ್ರಿತವಾಗಿ ನೋಟುಗಳ ಮುದ್ರಣವೂ ಸಾಧ್ಯವಿಲ್ಲ. ಹಣದುಬ್ಬರ, ಜಿಡಿಪಿಯ ಸ್ಥಿತಿಗತಿ, ಆರ್‌ಬಿಐ-ಕೇಂದ್ರ ಸರಕಾರದ ಸಮಾಲೋಚನೆಯ ಬಳಿಕ ಎಷ್ಟು ನೋಟುಗಳನ್ನು ಮುದ್ರಿಸಬೇಕು ಎಂಬುದು ನಿರ್ಧಾರವಾಗುತ್ತದೆ. ಆರ್‌ಬಿಐನಲ್ಲಿ ಮಿನಿಮಮ್ ರಿಸರ್ವ್ ಸಿಸ್ಟಮ್ ಎಂಬ ವ್ಯವಸ್ಥೆ ಇದೆ. ಈ ಚೌಕಟ್ಟಿನಡಿಯಲ್ಲಿ ಆರ್‌ಬಿಐ ಎಲ್ಲ ಸಂದರ್ಭದಲ್ಲೂ 200 ಕೋಟಿ ರುಪಾಯಿ ಮೌಲ್ಯದ ಸಂಪನ್ಮೂಲವನ್ನು ಇಡಬೇಕಾಗುತ್ತದೆ. ಇದರಲ್ಲಿ 115 ಕೋಟಿ ರುಪಾಯಿ ಮೌಲ್ಯದ ಚಿನ್ನ ಇರಬೇಕು. ಉಳಿದ 85 ಕೋಟಿ ರುಪಾಯಿ ಹಣಕಾಸು ರೂಪದಲ್ಲಿ ಇರುತ್ತದೆ. ಆದರೆ ಪ್ರತಿ ಬಾರಿಯೂ ಎಷ್ಟು ಮೊತ್ತದ ಕರೆನ್ಸಿ ನೋಟು ಮುದ್ರಣವಾಗಲಿದೆಯೋ, ಅಷ್ಟೇ ಮೌಲ್ಯದ ಚಿನ್ನ ಇಡಬೇಕು ಎಂಬ ನಿಯಮ ಇಲ್ಲ.

ಒಟ್ಟಿನಲ್ಲಿ ಕರೆನ್ಸಿಯ ಮೇಲೆ ಜನರ ವಿಶ್ವಾಸ ಹೆಚ್ಚಬೇಕಿದ್ದರೆ, ಸರಕಾರಗಳು ವಿತ್ತೀಯ ಶಿಸ್ತನ್ನು ಕಾಪಾಡಿಕೊಳ್ಳಬೇಕು. ಆರ್ಥಿಕ ಅಭಿವೃದ್ಧಿಗೆ ಒತ್ತುನೀಡಬೇಕು. ಹಣದುಬ್ಬರವನ್ನು ನಿಯಂತ್ರಣದಲ್ಲಿ ಇಟ್ಟುಕೊಳ್ಳಬೇಕು. ಜನ ಬೆಂಬಲವಿರುವ ಪ್ರಬಲ ಸರಕಾರ ಕೂಡ ಅಷ್ಟೇ ನಿರ್ಣಾಯಕ.

ಭಟ್ಟರ್ ಸ್ಕಾಚ್

● **ರಮೇಶ ಹೆಗಡೆ, ಶಿರಸಿ**
ಭಟ್ರೇ, ಇತ್ತೀಚೆಗೆ ನನ್ನ ಅಂತರಂಗ 'ತಾಳು ಮನವೇ' ಎಂದು ಹೇಳುತ್ತಿದೆಯಲ್ಲ?
– **ನನ್ನ ಅಂತರಂಗ 'ತಾಳಮದ್ದಳೆ ಮನವೇ' ಎಂದು ಹೇಳುತ್ತಿದೆ!**

● **ರಘುನಾಥ ಬಲಸೆ, ಶಿವಮೊಗ್ಗ**
ಭಟ್ರೇ, ನೀವು ಕ್ಷಮೆಯಾಚಿಸಬೇಕು ಎಂದು ತಾಳಮದ್ದಳೆ ಅರ್ಥಧಾರಿಗಳು ಹೇಳಿದ್ದಾರಲ್ಲ?
– **ಕ್ಷಮೆ ಕೇಳಬೇಕಾದವರು ಅವರು... ನಾನೂ ಅರ್ಥಧಾರಿಗಳನ್ನು ಕೋರ್ಟಿಗೆ ಎಳೆದರೆ ಹೇಗೆ ಎಂದು ಯೋಚಿಸುತ್ತಿದ್ದೇನೆ!**

● **ಸೀತಾ ರಾವ್, ಗಿರಿನಗರ**
ಭಟ್ರೇ, ಅಡ್ಡಾದಿಡ್ಡಿ ಮಾತಾಡುವ ಹೆಂಡತಿಗೂ, ತಾಳಮದ್ದಳೆಯ ಅರ್ಥಧಾರಿಗೂ ವ್ಯತ್ಯಾಸವೇನು?
– **ಹೆಂಡತಿಯಾದರೂ ಕೊನೆಗೂ ಮಾತು ನಿಲ್ಲಿಸಿಯಾಳು. ಈ ಮಾತು ಅರ್ಥಧಾರಿಗಳಿಗೆ ಅನ್ವಯ ಆಗೊಲ್ಲ!**

● **ಸದಾಶಿವ ಬಾಣಕಲ್, (ಇಮೇಲ್ ಮೂಲಕ)**
ಭಟ್ರೇ, ಅರ್ಥಧಾರಿಗಳು ವೇದಿಕೆಯ ಮೇಲೆ ಅಪ್ಪಿತಪ್ಪಿಯೂ 'ನನಗೆ ಗೊತ್ತಿಲ್ಲ' ಎಂದು ಹೇಳುವುದಿಲ್ಲವಲ್ಲ?
– **ಯಾಕೆಂದರೆ, ಗೊತ್ತಿಲ್ಲದ ವಿಷಯವನ್ನೇ ಗಂಟೆಗಟ್ಟಲೆ ವಿವರಿಸುವ ಅದ್ಭುತ ಶಕ್ತಿ ಇರುವುದೇ 'ಅರ್ಥಧಾರಿ'ಗೆ!**

● **ಬಾಬು, ಉಡುಪಿ**
ಭಟ್ರೇ, ಅರ್ಥಧಾರಿಗಳಿಗೂ, ರೈಲು ಗಾಡಿಗೂ ಇರುವ ಸಾಮ್ಯತೆ?
– **ರೈಲಿಗೆ ನಿಲ್ದಾಣ ಸಿಗದಿದ್ದರೆ ನಿಲ್ಲುವುದಿಲ್ಲ, ಅರ್ಥಧಾರಿಗಳಿಗೆ ಭಾಗವತರ ಪದ್ಯ ಸಿಗದಿದ್ದರೆ ಮಾತು ನಿಲ್ಲಿಸುವುದಿಲ್ಲ!**

● **ವಿದ್ಯಾಧರ, ಕೊಳ್ಯೂರು**
ಭಟ್ರೇ, ಮೊದಲ ಹೆಂಡತಿ ಇರುವಾಗಲೇ, ಎರಡನೆಯವಳಿಂದ ಮಗು ಪಡೆದವನನ್ನು ಅರ್ಥಧಾರಿಗಳು ಏನಂತಾರೆ?
– **ಮೊದಲ ಹೆಂಡತಿಯಿಂದ 'ದಂಡ' (ಶಿಕ್ಷೆ) ಮತ್ತು ಎರಡನೇ ಹೆಂಡತಿಗೆ 'ಪಿಂಡ' ಕೊಟ್ಟ 'ದಂಡಪಿಂಡ' ಅಂತಾರೆ!**

● **ಗಿಡ್ಡ ಗೋಪಾಲ, ಶ್ರೀರಂಗಪಟ್ಟಣ**
ಭಟ್ರೇ, ಡಿಕೆಶಿ–ಹೈಕಮಾಂಡ್ ನೋಡಿದರೆ ಏನು ಅನಿಸುತ್ತದೆ?
– **ನೀ ಕೊಡೆ, ನಾ ಬಿಡೆ!**

● **ರಾಘಣ್ಣ ಆಚಾರ್ಯ, ಕೃಷ್ಣಮೂರ್ತಿಪುರಂ**
ಭಟ್ರೇ, ಉಭಯ ಮಠಗಳ ಐತಿಹಾಸಿಕ ಒಡಂಬಡಿಕೆ ದಿನವೇ ಹುಟ್ಟಿದ ನಮ್ಮ ಚೊಚ್ಚಲ ಗಂಡು ಕೂಸಿಗೆ ಏನೆಂದು ಹೆಸರಿಡಲಿ?
– **ಸುಬುದಾತ್ಮ ಎನ್ನಬಹುದಲ್ಲ!**

● **ವಾಸುದೇವ ಆರ್ ಭಟ್, (ಇಮೇಲ್ ಮೂಲಕ)**
ಭಟ್ರೇ, ನನ್ನ ಹೆಂಡತಿ ಯಾವಾಗಲೂ ನನ್ನ ಹಳೆಯ ತಪ್ಪುಗಳನ್ನು ನೆನಪಿಸುತ್ತಿರುತ್ತಾಳಲ್ಲ?
– **ಆಗಾಗ ಹೊಸ ತಪ್ಪುಗಳನ್ನು ಮಾಡು, ಆಗ ಹಳೆಯದನ್ನು ಮರೆಯುತ್ತಾಳೆ!**

ಒಂದು ಹಡಗಿನ ತುಂಬಾ ರಫ್ತಾದ ನುಗ್ಗೆಗಿಡದ ಬೀಜ!

ಶಶಾಂಕಣ
ಶಶಿಧರ ಹಾಲಾಡಿ
vveditoped@gmail.com

ಬಡತನದಲ್ಲಿರುವ, ಪೌಷ್ಟಿಕಾಂಶಗಳ ಕೊರತೆ ಇರುವ ಪ್ರದೇಶಗಳಿಗೆ ಅತ್ಯುತ್ತಮ ತರಕಾರಿ ಎಂದರೆ ನುಗ್ಗೆ ಕಾಯಿ! ಇದನ್ನು ಗಮನಿಸಿದ ಕ್ಯೂಬಾ ದೇಶವು, ನಮ್ಮ ದೇಶದಿಂದ ನುಗ್ಗೆಕಾಯಿಯ ಗಿಡಗಳನ್ನು, ಬೀಜಗಳನ್ನು ತರಿಸಿಕೊಂಡ ವಿಚಾರ ಬಹಳ ಸ್ವಾರಸ್ಯಕರವಾಗಿದೆ. ಈ ವಿಚಾರವನ್ನು ಹೊರ ತುಪಡಿಸಿಯೂ, ನುಗ್ಗೆಕಾಯಿಯ ಪೌಷ್ಟಿಕಾಂಶಗಳ ವಿಚಾರ ಬಹು ಹಿಂದೆಯೇ ನಮ್ಮ ದೇಶದವರಿಗೆ ತಿಳಿದಿತ್ತು. ನುಗ್ಗೆಯ ಸೊಪ್ಪು, ಕಾಯಿ, ಬೀಜ ಎಲ್ಲದರಲ್ಲೂ ಔಷಧೀಯ ಗುಣಗಳಿವೆ; ಜತೆಗೆ, ಇದನ್ನು ತರಕಾರಿಯಾಗಿಯೂ ಉಪಯೋಗಿಸಬಹುದು ಎಂದು ನಮ್ಮ ದೇಶದಲ್ಲಿ ಬಹು ಹಿಂದಿನಿಂದಲೇ ಕಂಡುಕೊಂಡಿದ್ದರು.

ಅಮೆರಿಕದಂಥ ಪ್ರಬಲ ರಾಷ್ಟ್ರದ ಪಕ್ಕದಲ್ಲಿರುವ ಕ್ಯೂಬಾ ದೇಶವು, ನುಗ್ಗೆ ಗಿಡಗಳ ಬೆನ್ನು ಹತ್ತಿದ ಕಥೆಗೆ ಮೂಲ ಪುರುಷರೆಂದರೆ, ಆ ಸಣ್ಣ ದ್ವೀಪರಾಷ್ಟ್ರವನ್ನು ನಾಲ್ಕೈದು ದಶಕಗಳ ಕಾಲ ಮುನ್ನಡೆಸಿದ, ಫೀಡೆಲ್ ಕಾಸ್ಟ್ರೋ! ಕ್ಯೂಬಾವು ಅನುಸರಿಸಿಕೊಂಡು ಬಂದ ರಾಜಕೀಯ ಸಿದ್ಧಾಂತವನ್ನು ಅಮೆರಿಕವು ಒಪ್ಪದೇ ಇರುವುದರಿಂದಾಗಿ, ಆ ಪುಟ್ಟ ದೇಶವು ಪ್ರತಿದಿನ ಹೋರಾಟ ನಡೆಸುವ ಅನಿವಾರ್ಯತೆ, ತನ್ನ ದೇಶದಲ್ಲಿ ಸಮಾಜವಾದವನ್ನು ಅಕ್ಷರಶಃ ಜಾರಿಗೆ ತರುವ ದಿಟ್ಟತನ, ವ್ಯವಹಾರ, ಕೃಷಿಯನ್ನು ರಾಷ್ಟ್ರೀಕರಣಗೊಳಿಸುವ ಧೈರ್ಯ, ಕಮ್ಯುನಿಸ್ಟ್ ತತ್ವಗಳ ಅನುಷ್ಠಾನ, ಎಂಥ ಹೋರಾಟಕ್ಕಾದರೂ ಸದಾ ಸಿದ್ಧ– ಇದು ಫೀಡೆಲ್ ಕ್ಯಾಸ್ಟ್ರೋ ಅವರ ಕಾಲದ ಕ್ಯೂಬಾದಲ್ಲಿದ್ದ ಸ್ಥಿತಿ.

ಹಲವು ದಶಕಗಳ ಕಾಲ ಕ್ಯೂಬಾದಲ್ಲಿ ಆಡಳಿತ ನಡೆಸಿದ ಕಮ್ಯುನಿಸ್ಟ್ (ಎಂಎಲ್) ಪಕ್ಷಕ್ಕೆ ಇವರದ್ದೇ ನಾಯಕತ್ವ. 1959ರಿಂದ 1976ರ ತನಕ ಕ್ಯೂಬಾದ ಪ್ರಧಾನಿಯಾಗಿ, 1976ರಿಂದ 2008ರ ತನಕ ಕ್ಯೂಬಾದ ಅಧ್ಯಕ್ಷರಾಗಿ, 1965ರಿಂದ 2011ರ ತನಕ ಅಲ್ಲಿನ ಕಮ್ಯುನಿಸ್ಟ್ ಪಕ್ಷದ ಪ್ರಥಮ ಕಾರ್ಯದರ್ಶಿಯಾಗಿ ಜವಾಬ್ದಾರಿ ನಿಭಾಯಿಸಿದ ಕಾಸ್ಟ್ರೋ, 2011ರಲ್ಲಿ ರಾಜಕೀಯ ಜೀವನದಿಂದ ನಿವೃತ್ತರಾದರು. ಆ ಸಮಯದಲ್ಲಿ, ಅಂದರೆ 2010ರಲ್ಲಿ ಪಕ್ಕದ ದೇಶ ಹೈಟಿಯಲ್ಲಿ ಭೂಕಂಪವಾಗಿತ್ತು. ಅಲ್ಲೂ ಬಡತನ. ಆ ನಡುವೆ ನೆರೆಹಾವಳಿ, ಜತೆಗೆ ಕಾಲರಾ. ಜನರು ಅನಾರೋಗ್ಯದಿಂದ ಕಂಗೆಟ್ಟರು. ಅವರ ಕಷ್ಟ ನೋಡಲಾಗದೇ, ನಿವೃತ್ತ ಜೀವನದಲ್ಲಿದ್ದ ಕಾಸ್ಟ್ರೋ ಅವರು ಅಲ್ಲಿನ ಬಡಜನರ ಆರೋಗ್ಯ ಉತ್ತಮಪಡಿಸಲು ಏನಾದರೂ ಮಾಡಬೇಕೆಂದು ನಿರ್ಧರಿಸಿದರು. ಕ್ಯೂಬಾದ ಫಿನ್ಲೆ ಇನ್‌ಸ್ಟಿಟ್ಯೂಟ್‌ನ ಕಾಂಪಾ ಹ್ಯೂರ್ಗೋ ಎಂಬ ಮಹಿಳೆಗೆ ಫೋನ್ ಮಾಡಿ, ಜನರ ಅಪೌಷ್ಟಿಕತೆಗೆ ಒಂದು ಪರಿಹಾರ ಹುಡುಕಲು ಹೇಳಿದಾಗ ಅವರು ನೀಡಿದ ಉತ್ತರ ಆ ಕಾಲಕ್ಕೆ ಮಾರ್ಮಿಕವಾಗಿತ್ತು! ''ನಮ್ಮ ನಾಡಿನಲ್ಲಿ ವ್ಯಾಪಕವಾಗಿರುವ, ಜನರ ನಿರಂತರ ಹಸಿವು ಮತ್ತು ಅಪೌಷ್ಟಿಕತೆಗೆ ಸರಿಯಾದ ಉತ್ತರ ಎಂದರೆ ನುಗ್ಗೆಕಾಯಿ!'' ಎಂದು ಆ ಮಹಿಳೆ ಉತ್ತರಿಸಿದಾಗ, ಬೆರಗಾಗುವ ಸರದಿ ಕಾಸ್ಟ್ರೋ ಅವರದ್ದು. ಸಸ್ಯವೊಂದು ಕೊಡುವ ಕಾಯಿ ಮತ್ತು ಅದರ ಎಲೆಗಳು ಬಡವರ ಆರೋಗ್ಯಕ್ಕೆ ಪೂರಕವಾಗಬಲ್ಲವು, ಕಡಿಮೆ ಬೆಲೆಯಲ್ಲಿ ಪೌಷ್ಟಿಕಾಂಶಗಳನ್ನು ನೀಡಬಲ್ಲವು ಎಂಬ ವಿಚಾರವೇ ತುಸು ವಿಸ್ಮಯ ಹುಟ್ಟಿಸುವಂಥದ್ದು.

ಬಡ ಜನರಿಗೆ ನುಗ್ಗೆಕಾಯಿಯನ್ನು ತಿನ್ನಿಸುವುದು ಎಂದು ನಿರ್ಧರಿಸಿಲಾಯಿತು. ಆದರೆ, ಅದರ ಗಿಡ, ಬೀಜ ಸುಲಭವಾಗಿ ಎಲ್ಲಿ ಸಿಗುತ್ತದೆ? ಅವರಿಗೆ ದೊರೆತ ಉತ್ತರ– ಭಾರತ! ಪೌಷ್ಟಿಕಾಂಶಗಳ ಆಗರ ನುಗ್ಗೆ ಕಾಯಿ, ನುಗ್ಗೆ ಸೊಪ್ಪು, ನುಗ್ಗೆ ಬೀಜಗಳ ಮೂಲ ಭಾರತ ಮತ್ತು ಸುತ್ತಮುತ್ತಲಿನ ದೇಶಗಳು. ನುಗ್ಗೆ ಕಾಯಿಯ ವಿಚಾರ ತಿಳಿದ ಕೂಡಲೇ, ಕಾಸ್ಟ್ರೋ ಅವರು ಅದರ ಕುರಿತು ಎಲ್ಲಾ ಮಾಹಿತಿಯನ್ನು ಕಲೆಹಾಕಿದರು. ಮೊರಿಂಗಾ ಎಂಬ ಹೆಸರಿನಿಂದ ಜನಪ್ರಿಯವಾಗಿರುವ ಈ ಸಸ್ಯವು ಬಡವರ ಉತ್ತಮ ಆಹಾರ ಎಂದು ನಿರ್ಧರಿಸಿ, ಕಾಂಪಾ ಹ್ಯೂರ್ಗೋ ಅವರೊಂದಿಗೆ ಚರ್ಚಿಸಿ, ''ಈ ಗಿಡವನ್ನು ನಮ್ಮ ದ್ವೀಪಗಳಲ್ಲಿ ಬೆಳೆಯಬೇಕಲ್ಲ, ಏನು ಮಾಡುವುದು? ಯಾರಾದರೂ ಭಾರತಕ್ಕೆ ಹೋಗಿ ನುಗ್ಗೆ ಕೃಷಿಯನ್ನು ಅಧ್ಯಯನ ಮಾಡಿ, ಅದರ ಬೀಜಗಳನ್ನು ಕ್ಯೂಬಾಕ್ಕೆ ತರಬೇಕು. ಯಾರು ಹೋಗುತ್ತಾರೆ?'' ಎಂದರು. ಕಾಸ್ಟ್ರೊ ಅವರ ಅಪಾರ ಆಸಕ್ತಿಯನ್ನು ಕಂಡು, ಆ ವಿಜ್ಞಾನಿ ಮಹಿಳೆ ''ನಾನೇ ಭಾರತಕ್ಕೆ ಹೋಗಿ ನೋಡಿಕೊಂಡು ಬರುತ್ತೇನೆ'' ಎಂದರು. ಫಿನ್ಲೆ ಇನ್‌ಸ್ಟಿಟ್ಯೂಟ್‌ನ ನಿರ್ದೇಶಕರಾಗಿ 31 ವರ್ಷ ದುಡಿದ ಅನುಭವ ಹೊಂದಿದ್ದ ಹ್ಯೂರ್ಗೋ ಅವರು, ವ್ಯಾಕ್ಸಿನ್ ಕ್ಷೇತ್ರದಲ್ಲಿ ತಜ್ಞರು. ರಾಜಕೀಯದಿಂದ ನಿವೃತ್ತರಾಗಿದ್ದರೂ, ಕಾಸ್ಟ್ರೋ ವ್ಯಕ್ತಪಡಿಸುತ್ತಿದ್ದ ಉತ್ಸಾಹ ಕಂಡು, ತಮ್ಮ ದೇಶದ ಬಡಜನರಿಗೆ ಅನುಕೂಲವಾಗುವುದಾದರೆ ತಾವೇ ಭಾರತಕ್ಕೆ ಹೋಗಿ ನುಗ್ಗೆಕಾಯಿ ಕೃಷಿಯ ಮಾಹಿತಿಯನ್ನು ತರುವುದಾಗಿ ಹೇಳಿ ಹೊರಟರು.

ಇದು ನಡೆದದ್ದು 2011ರಲ್ಲಿ. ನಮ್ಮ ದೇಶದ ನುಗ್ಗೆಕಾಯಿಯ ಔಷಧೀಯ ಗುಣಗಳು, ಲಾಭಗಳು ನಮಗೆಲ್ಲಾ ತಿಳಿದಿದ್ದರೂ, ಅದು ಅದರ ಪಾಡಿಗೆ ಒಂದು ತರಕಾರಿ ಎಂದೇ ಗುರುತಿಸುವವರು ಬಹಳ. ನುಗ್ಗೆ ಸೊಪ್ಪು, ಬೀಜಗಳು ಸಹ ಔಷಧೀಯ ಗುಣ ಹೊಂದಿವೆ, ನಾಟಿ ವೈದ್ಯದಲ್ಲಿ, ಹಳ್ಳಿ ಮದ್ದಿನಲ್ಲಿ, ಆಯುರ್ವೇದದಲ್ಲಿ ಮೊದಲಿನಿಂದಲೂ ಬಳಕೆಯಲ್ಲಿದೆ. ಕ್ಯೂಬಾದಿಂದ ತಜ್ಞರ ತಂಡದೊಂದಿಗೆ ಬಂದ ಕಾಂಪಾ ಹ್ಯೂರ್ಗೋ ಅವರು ಆಂಧ್ರಪ್ರದೇಶ, ತಮಿಳುನಾಡು ಮತ್ತು ಕೇರಳಗಳಲ್ಲಿ ಸಂಚರಿಸಿದರು; ಅಲ್ಲೆಲ್ಲಾ ಇದ್ದ ವಿವಿಧ ತಳಿಯ ನುಗ್ಗೆಕಾಯಿ ಗಿಡಗಳನ್ನು ಗಮನಿಸಿದರು ಮತ್ತು ನುಗ್ಗೆಗಿಡದ ಕೃಷಿಯನ್ನು ಅಧ್ಯಯನ ಮಾಡಿದರು. ಬೇರೆ ಬೇರೆ ಪ್ರದೇಶಗಳಲ್ಲಿರುವ ನುಗ್ಗೆಯ ಸ್ಥಳೀಯ ಮತ್ತು ವಿಭಿನ್ನ ತಳಿಯನ್ನು ಪರಿಶೀಲಿಸಿ, ಕ್ಯೂಬಾಕ್ಕೆ ಯಾವ ತಳಿ ಉತ್ತಮ ಎಂಬುದನ್ನು ಗುರುತಿಸಲು ಪ್ರಯತ್ನಿಸಿದರು. ಸ್ಥಳೀಯ ಅಡುಗೆಯವರನ್ನು ಕೂರಿಸಿಕೊಂಡು, ನುಗ್ಗೆಯನ್ನು ಯಾವ ರೀತಿಯಲ್ಲಿ ಆಹಾರವಾಗಿ ಸೇವಿಸಬಹುದು ಎಂಬುದನ್ನು ಬರೆದುಕೊಂಡರು. ನುಗ್ಗೆ ಕಾಯಿಯ ಸಾಂಬಾರು, ಪಲ್ಯಗಳ ಜತೆ ನುಗ್ಗೆ ಸೊಪ್ಪಿನ ಹುಡಿಯನ್ನು ಪ್ರತಿದಿನ ಆಹಾರದೊಂದಿಗೆ ಸೇವಿಸುವ ಪದ್ಧತಿಯ ಲಾಭವನ್ನು ಕಂಡುಕೊಂಡರು.

ಡಿಸೆಂಬರ್ 2011. ಇವರ ಅಧ್ಯಯನದ ವಿವರಗಳು ಕ್ಯೂಬಾ ಸರಕಾರವನ್ನು ತಲುಪಿತು. ಕಾಸ್ಟ್ರೊ ಅವರ ಶಿಫಾರಸಿನ ಮೇಲೆ, ಅಲ್ಲಿನ ಸರಕಾರವು 100 ಟನ್ ನುಗ್ಗೆ ಬೀಜವನ್ನು ಕ್ಯೂಬಾಕ್ಕೆ ತರಿಸಲು ಅನುಮೋದನೆ ನೀಡಿತು. ಕ್ಯೂಬಾದಿಂದ ಬಂದ ಮಹಿಳೆ ಕಾಂಪಾ ಹ್ಯೂರ್ಗೋ ನಮ್ಮ ದೇಶದಿಂದ 100 ಟನ್ ನುಗ್ಗೆ ಬೀಜಗಳನ್ನು ಹಡಗಿನಲ್ಲಿ ತುಂಬಿಸಿ ತಮ್ಮ ದೇಶಕ್ಕೆ ಕಳಿಸಿದರು! ಭಾರತದಿಂದ ಒಂದು ಹಡಗಿನ ತುಂಬಾ ವಿವಿಧ ತಳಿಯ ನುಗ್ಗೆ ಬೀಜಗಳು ಕ್ಯೂಬಾ ದೇಶವನ್ನು ತಲುಪಿದಾಗ, ಅಲ್ಲಿನ ಬಂದರಿನ ಅಧಿಕಾರಿಗಳು, ಈ ಬೀಜಗಳನ್ನು ಕಂಡು ವಿಸ್ಮಯಗೊಂಡಿರಲೇಬೇಕು! ಫೀಡೆಲ್ ಕಾಸ್ಟ್ರೊ ಅವರಂತೂ ನುಗ್ಗೆ ಬೀಜ, ನುಗ್ಗೆ ಕೃಷಿಯ ಕುರಿತು ಬಹಳ ಉತ್ಸಾಹ ತಳೆದಿದ್ದರು. ಅವರ ದೇಶದ ಬಡಜನರ ಆರೋಗ್ಯ ಸುಧಾರಿಸಲು ನುಗ್ಗೆಕಾಯಿಯೇ ರಾಮಬಾಣ ಎಂದು ನಿರ್ಧರಿಸಿದ್ದರು. ಭಾರತದ ಈ ಸಸ್ಯವು ತಮ್ಮ ಜನರಲ್ಲಿ ಶಕ್ತಿ ತುಂಬುತ್ತದೆ ಎಂಬುದು ಅವರ ವಿಶ್ವಾಸ.

ನಂತರದ ವರ್ಷಗಳಲ್ಲಿ, ಕ್ಯೂಬಾ ದೇಶದಲ್ಲಿದ್ದ ಒಣ ಮತ್ತು ಬರಡು ಪ್ರದೇಶಗಳಲ್ಲಿ ನುಗ್ಗೆ ಕೃಷಿಯನ್ನು ಆರಂಭಿಸಲಾಯಿತು. ನುಗ್ಗೆ ಗಿಡಕ್ಕೆ ಹೆಚ್ಚಿನ ಆರೈಕೆ ಬೇಡ; ತುಸು ಒಣ ಪ್ರದೇಶ ಮತ್ತು ನೀರಿನ ಆಶ್ರಯ ಕಡಿಮೆ ಇದ್ದಲ್ಲೂ ಅದು ಬೆಳೆಯಬಲ್ಲದು. ಗಿಡಗಳು ಬೆಳೆದವು; ಕಾಯಿ ಬಿಡುವ ಮುಂಚೆಯೇ, ಆ ಗಿಡದ ಸೊಪ್ಪಿನ ಬಳಕೆಯನ್ನು ಪ್ರಚುರ ಪಡಿಸುವ ಮೂಲಕ, ಜನರ ಅಪೌಷ್ಟಿಕತೆಯನ್ನು ಕಡಿಮೆ ಮಾಡಬಹುದು ಎಂದು ಕಂಡುಕೊಂಡ ಅಲ್ಲಿನವರು, ಸೊಪ್ಪಿನ ಪುಡಿಯನ್ನು ತಯಾರಿಸಿ, ಆಹಾರದ ಜತೆ ಬಳಸುವುದನ್ನು ಕಲಿತರು. ಸೂಪ್‌ಗಳಲ್ಲಿ, ಕರಿಗಳಲ್ಲಿ ನುಗ್ಗೆ ಸೊಪ್ಪಿನ ಪುಡಿಯನ್ನು ನಿರಂತರವಾಗಿ ಉಪಯೋಗಿಸುವುದನ್ನು ರೂಢಿ ಮಾಡಿಕೊಂಡರು. ನುಗ್ಗೆಯನ್ನು ಅಲ್ಲಿ ಜನಪ್ರಿಯಗೊಳಿಸಲು ಸ್ವತಃ ಕಾಸ್ಟ್ರೊ, ಹಲವು ಲೇಖನಗಳನ್ನು ಬರೆದರು! 'ಭಾರತ ಮೂಲದ ನುಗ್ಗೆಯು ಎಲ್ಲಾ ಅಮೈನೋ ಆಸಿಡ್ ಹೊಂದಿರುವ ಏಕೈಕ ಸಸ್ಯ. ನುಗ್ಗೆಗಿಡಗಳ ಕೃಷಿಯನ್ನು ಕೈಗೊಳ್ಳುವ ಮೂಲಕ, ಒಂದು ಹೆಕ್ಟೇರಿಗೆ ಪ್ರತಿ ವರ್ಷ 300 ಟನ್ ನುಗ್ಗೆ ಸೊಪ್ಪನ್ನು ತಯಾರಿಸಬಹುದು. ಅದರಲ್ಲಿ ನಾನಾ ರೀತಿಯ ಔಷಧೀಯ ಗುಣಗಳಿವೆ' ಎಂಬ ಲೇಖನವನ್ನು ಕಾಸ್ಟ್ರೋ ಬರೆದಾಗ ಅವರಿಗೆ 90 ವರ್ಷ!

2016ರಲ್ಲಿ ಫಿಡೆಲ್ ಕಾಸ್ಟ್ರೊ ನಿಧನರಾದಾಗ, ಅವರ ಕ್ರಾಂತಿಕಾರಿ ಜೀವನ, ಕಮ್ಯುನಿಸ್ಟ್ (ಎಂಎಲ್) ಪಕ್ಷದ ಒಡನಾಟ, ಅಮೆರಿಕಕ್ಕೆ ಸೆಡ್ಡು ಹೊಡೆದದ್ದು ಮೊದಲಾದವುಗಳನ್ನು ನೆನಪಿಸಿಕೊಳ್ಳುವುದರ ಜತೆಯಲ್ಲೇ, ಭಾರತದಿಂದ 100 ಟನ್ ನುಗ್ಗೆಕಾಯಿ ಬೀಜಗಳನ್ನು ತರಿಸಿದ್ದನ್ನು ಸಹ ಜನರು ನೆನಪಿಸಿಕೊಂಡರು.

ಆದರೂ, ನುಗ್ಗೆಕಾಯಿಯ ಅಪಾರ ಶಕ್ತಿಯನ್ನು, ಪೌಷ್ಟಿಕಾಂಶಗಳನ್ನು ಇಂದು ನಾವು ಸರಿಯಾಗಿ ಗುರುತಿಸಿ, ಬಳಸುತ್ತಿದ್ದೇವೆಯೆ? ನಗರೀಕರಣದ ಭರದಲ್ಲಿ, ಹಳೆಯದೆಲ್ಲವನ್ನೂ ಹಳ್ಳಿಯವರೂ ಕ್ರಮೇಣ ಮರೆಯುತ್ತಿರುವ ಭರಾಟೆಯಲ್ಲಿ, ನುಗ್ಗೆಕಾಯಿಯ ಅಪಾರ ಶಕ್ತಿಯನ್ನು ಕಡೆಗಣಿಸುತ್ತಿದ್ದೇವೆಯೆ? ನುಗ್ಗೆಕಾಯಿಯು ನಮ್ಮ ನಾಡಿನ ಅಡುಗೆ ಮನೆಯಲ್ಲಿ ಒಂದು ಹಂತದ ತನಕ ಪ್ರಮುಖ ಸ್ಥಾನ ಗಳಿಸಿದ್ದು, ಅದು ಮುಂದುವರಿಯುತ್ತಿದೆ; ಆದರೆ ನುಗ್ಗೆ ಸೊಪ್ಪಿನ ಬಳಕೆಯನ್ನು ನಾವು ಏಕೆ ಗರಿಷ್ಠ ಪ್ರಮಾಣದಲ್ಲಿ ಮಾಡುತ್ತಿಲ್ಲ? ಆ ಮೂಲಕ ನಮ್ಮ ಆರೋಗ್ಯವನ್ನು ಸುಧಾರಿಸಿಕೊಳ್ಳುತ್ತಿಲ್ಲ?

ನುಗ್ಗೆಕಾಯಿ ಮತ್ತು ಸೊಪ್ಪಿನಲ್ಲಿರುವ ಪೌಷ್ಟಿಕಾಂಶಗಳು ಹೇರಳ. ಸಮಾನ ತೂಕದ ನುಗ್ಗೆಕಾಯಿಯನ್ನು ಮತ್ತು ಇತರ ಹಲವು ತರಕಾರಿಗಳನ್ನು ಹೋಲಿಸಿದರೆ, ನುಗ್ಗೆಯಲ್ಲಿ ಹೆಚ್ಚಿನ ಪ್ರಮಾಣದ ನ್ಯೂಟ್ರಿಯೆಂಟ್ಸ್ ಇವೆ. ನುಗ್ಗೆಕಾಯಿಯಲ್ಲಿ ಕಿತ್ತಲೆ ಹಣ್ಣಿನಲ್ಲಿರುವ ವಿಟಮಿನ್ 'ಸಿ'ಗಿಂತ ಏಳು ಪಟ್ಟು ಹೆಚ್ಚು ಇದೆ. ಬಸಳೆ ಸೊಪ್ಪಿಗಿಂತ ಮೂರುಪಟ್ಟು ಕಬ್ಬಿಣದ ಅಂಶವಿದೆ. ಕ್ಯಾರೆಟ್‌ನಲ್ಲಿರುವುದಕ್ಕಿಂದ ನಾಲ್ಕು ಪಟ್ಟು ವಿಟಮಿನ್ 'ಎ' ಇದೆ. ಒಂದು ಲೋಟ ಹಾಲಿನಲ್ಲಿರುವುದಕ್ಕಿಂತ ನಾಲ್ಕು ಪಟ್ಟು ಕ್ಯಾಲ್ಸಿಯಂ ಇದೆ. ಬಾಳೆ ಹಣ್ಣಿನಲ್ಲಿರುವ ಪೊಟ್ಯಾಸಿಯಂನ ಮೂರು ಪಟ್ಟು ಇದೆ. ಮಜ್ಜಿಗೆಯಲ್ಲಿರುವ ಎರಡರಷ್ಟು ಪ್ರೊಟೀನ್ ಇವೆ. ಈ ಪಟ್ಟಿ ಇಲ್ಲಿಗೇ ಮುಗಿಯುವುದಿಲ್ಲ. ನಾನಾ ರೀತಿಯ ಪೌಷ್ಟಿಕಾಂಶಗಳ ಜತೆಯಲ್ಲೇ, ಹಲವು ಔಷಧೀಯ ಗುಣಗಳೂ ಇದರಲ್ಲಿವೆ.

ಕ್ಯೂಬಾದ ಉದಾಹರಣೆಯನ್ನೇ ತೆಗೆದುಕೊಂಡರೆ, ಪೌಷ್ಟಿಕಾಂಶಗಳ ಕೊರತೆ ಮತ್ತು ಜನರನ್ನು ಬಾಧಿಸುತ್ತಿರುವ ಲವಣಾಂಶಗಳ ಕೊರತೆ ಎಂಬ ಸಂಕೀರ್ಣ ಸಮಸ್ಯೆಗೆ ಒಂದೇ ಪರಿಹಾರ ನುಗ್ಗೆಕಾಯಿ! ಹೆಚ್ಚಿನ ಪ್ರಮಾಣದ ಪ್ರೊಟೀನ್, ವಿಟಮಿನ್ 'ಬಿ', ವಿಟಮಿನ್ 'ಸಿ', ರಿಬೋಫ್ಲೇವಿನ್ ಮತ್ತು ಕಬ್ಬಿಣದ ಅಂಶ ಇರುವ ನುಗ್ಗೆಯು, ನಮ್ಮ ಜನರ ಪ್ರತಿದಿನದ ಆಹಾರವಾಗುವ ಅವಶ್ಯಕತೆ ಇದೆ. ನುಗ್ಗೆ ರಸವನ್ನು ಮೂಗಿಗೆ, ಕಿವಿಗೆ ಹಾಕಿ ಹಲವು ರೋಗಗಳನ್ನು ನಮ್ಮ ನಾಟಿ ವೈದ್ಯ ಪದ್ಧತಿ ಗುಣಪಡಿಸಬಲ್ಲದು. ಅರಶಿನ ಮುಂಡಿಗೆ ಕಾಯಿಲೆಗೆ ಇಂದಿಗೂ ನುಗ್ಗೆಸೊಪ್ಪಿನ ರಸವನ್ನು ಔಷಧವಾಗಿ ನೀಡಲಾಗುತ್ತಿದೆ. ನುಗ್ಗೆಕಾಯಿಯಲ್ಲಿ ಹೆಚ್ಚಿನ ಪ್ರಮಾಣದ ಆ್ಯಂಟಿ ಆಕ್ಸಿಡೆಂಟ್ ಇವೆ. ನಮ್ಮ ದೇಹದ ವಯಸ್ಸಾಗುವ ಪ್ರಕ್ರಿಯೆಯನ್ನು ಈ ಆ್ಯಂಟಿ ಆಕ್ಸಿಡೆಂಟ್‌ಗಳು ಕಡಿಮೆ ಮಾಡುತ್ತವೆ.

ನುಗ್ಗೆಕಾಯಿ ಸೇವನೆಯಿಂದ ಒತ್ತಡ, ಖಿನ್ನತೆ ಕಡಿಮೆಯಾಗುತ್ತವೆ ಎನ್ನುತ್ತಾರೆ ಕೆಲವು ಆಯುರ್ವೇದ ತಜ್ಞರು. ಸಂಧಿವಾತ, ಆರ್ಥ್ರೈಟಿಸ್‌ನಲ್ಲಿ ಕಂಡುಬರುವ ಕೀಲುಗಳ ನೋವನ್ನು ನುಗ್ಗೆ ಉಪಶಮನಗೊಳಿಸಬಲ್ಲದು. ನುಗ್ಗೆಯ ಎಲೆ ಮತ್ತು ಬೀಜಗಳಲ್ಲಿ ಆ್ಯಂಟಿ ಇನ್‌ಫ್ಲಮೇಟರಿ ಸಂಯುಕ್ತಗಳಿವೆ ಮತ್ತು ಅವು ಉರಿಯೂತವನ್ನು ತಡೆಯುತ್ತವೆ. ಇದರಲ್ಲಿರುವ ನಿಯಾಜಿಮೈಸಿನ್ ಕ್ಯಾನ್ಸರ್ ಬಾರದಂತೆ ತಡೆಯಬಲ್ಲದು ಎನ್ನುತ್ತದೆ ಇನ್ನೊಂದು ಅಧ್ಯಯನ.

ನುಗ್ಗೆಗಿಡವನ್ನು ನಮ್ಮ ದೇಶದಲ್ಲಿ ವ್ಯಾಪಕವಾಗಿ ಬೆಳೆಯಲು ಅನುಕೂಲವಾಗುವ ಒಂದು ಪ್ರಮುಖ ಪಾರಸರಿಕ ಅಂಶವಿದೆ. ನುಗ್ಗೆಯು ಅತಿ ಕಡಿಮೆ ನೀರಿನ ಪ್ರದೇಶದಲ್ಲಿ, ಒಣ ಪ್ರದೇಶಗಳಲ್ಲಿ ಸುಲಭವಾಗಿ ಬೆಳೆಯಬಲ್ಲದು. ಇದರ ಬೇರುಗಳು ನೆಲದಾಳಕ್ಕೆ ಹೋಗುವ ಗುಣ ಹೊಂದಿರುವುದರಿಂದ, ಕಡಿಮೆ ನೀರಿನಂಶ ಇರುವ ಪ್ರದೇಶಗಳಲ್ಲೂ ನುಗ್ಗೆ ಬೆಳೆಯಬಲ್ಲದು, ಸಾಕಷ್ಟು ಇಳುವರಿ ನೀಡಬಲ್ಲದು. ಇತರ ಹಲವು ಬೆಳೆಗಳಿಗೆ ಹೋಲಿಸಿದರೆ, ನುಗ್ಗೆಗೆ ಅತಿ ಕಡಿಮೆ ನೀರು ಸಾಕು. ಕ್ಯೂಬಾದ ಅಧ್ಯಕ್ಷ ಕಾಸ್ಟ್ರೋ ನಮ್ಮ ದೇಶದಿಂದ 100 ಟನ್ ನುಗ್ಗೆ ಬೀಜ ತರಿಸಿಕೊಂಡು, ಕ್ಯೂಬಾ ಮತ್ತು ಅಕ್ಕಪಕ್ಕದ ದೇಶಗಳಲ್ಲಿ ನುಗ್ಗೆ ಗಿಡ ಬೆಳೆಸಿ, ಅಲ್ಲಿನ ಬಡಜನರಿಗೆ ಅದನ್ನು ತಿನ್ನಿಸಿ, ಅವರ ಅಪೌಷ್ಟಿಕತೆಯನ್ನು ಹೋಗಲಾಡಿಸಲು ಪ್ರಯತ್ನಿಸಿದ್ದರಲ್ಲಿ ನಮಗೆ ಒಂದು ಪಾಠವಿದೆ. ಮೂಲತಃ ನಮ್ಮ ನಾಡಿನಲ್ಲಿ ವ್ಯಾಪಕವಾಗಿ ಬೆಳೆಯುತ್ತಿರುವ ನುಗ್ಗೆ ಸಸ್ಯಗಳಿಗೆ ನಾವು ಇನ್ನಷ್ಟು ಪ್ರಚಾರ ಕೊಡಬೇಕು. ಇದರ ಸೊಪ್ಪನ್ನು, ಬೀಜಗಳನ್ನು ಹೆಚ್ಚು ಹೆಚ್ಚು ಸೇವಿಸುವ ವಿಧಾನವನ್ನು ಪ್ರಚುರಗೊಳಿಸಬೇಕು.

ನಮ್ಮ ದೇಶದಲ್ಲಿ ಈಚಿನ ಒಂದು ದಶಕದಲ್ಲಿ ಒಂದು ಭ್ರಮೆ ಆವರಿಸಿದೆ: ನಗರೀಕರಣದ ಪ್ರಭಾವದಿಂದ ಮತ್ತು ಜಾಹೀರಾತಿನ ಅಬ್ಬರದಿಂದಾಗಿ, ಹಳೆಯ ಉತ್ತಮ ಆಹಾರ ಮತ್ತು ವಸ್ತುಗಳ ಕುರಿತು ಅನಾದರವಿದೆ. ಜಂಕ್‌ಫುಡ್, ಪ್ಲಾಸ್ಟಿಕ್ ಕವರಿನಲ್ಲಿ ಸುತ್ತಿದ ಆಹಾರವೇ ಶ್ರೇಷ್ಠ ಎಂಬ ಭ್ರಮೆ ಹೆಚ್ಚಿನವರನ್ನು ಆವರಿಸಿದೆ. ಥಳುಕಿನ ಆಹಾರಪದಾರ್ಥಗಳ ಮಧ್ಯೆ ನುಗ್ಗೆಯಂಥ ಅಪೂರ್ವ ತರಕಾರಿ, ಸೊಪ್ಪಿನ ಪ್ರಾಮುಖ್ಯ ಕಳೆದುಹೋಗುತ್ತಾ ಇದೆ. ದುಬಾರಿ ಆಹಾರ ಪದಾರ್ಥಗಳನ್ನು ಖರೀದಿಸಲು ಅವಕಾಶವಿಲ್ಲದವರು, ನುಗ್ಗೆಯನ್ನು ಚೆನ್ನಾಗಿ ತಿನ್ನಿ, ನುಗ್ಗೆ ಸೊಪ್ಪನ್ನು ಪುಡಿ ಮಾಡಿ ಪ್ರತಿದಿನ ಸೂಪ್ ಜತೆ, ತಿಳಿಸಾರಿನ ಜತೆ ಸೇವಿಸಿ ಎಂದು ಪ್ರಚಾರ ಮಾಡಬೇಕಾಗಿದೆ. ಕ್ಯೂಬಾ ದೇಶದ ಕ್ಯಾಸ್ಟ್ರೋ ಮೆಚ್ಚಿದ ನುಗ್ಗೆಕಾಯಿ ನಮ್ಮ ಪ್ರೀತಿಯ ಆಹಾರವಾಗಬೇಕು, ಆಗ ದೇಶಕ್ಕೆ, ದೇಹಕ್ಕೆ ಶಕ್ತಿ ಕೂಡಿಬರುತ್ತದೆ.

ಓದುಗರ ಓಣಿ
ಓದುಗರನ್ನು ಬಿಟ್ಟು ಇಲ್ಲಿ ಯಾರಿಗೂ ಪ್ರವೇಶವಿಲ್ಲ

ವಂದನೆ, ಅಭಿನಂದನೆ...

ವಿಶ್ವವಾಣಿ' ಪತ್ರಿಕೆಯು ಹತ್ತು ವರ್ಷಗಳನ್ನು ಯಶಸ್ವಿಯಾಗಿ ಪೂರೈಸಿ ಹನ್ನೊಂದನೇ ವರ್ಷಕ್ಕೆ ಕಾಲಿಡುತ್ತಿರುವುದು ಸಂತೋಷದ ವಿಷಯ. ಈ ಸಂದರ್ಭದಲ್ಲಿ ಪತ್ರಿಕೆಯ ಪ್ರಧಾನ ಸಂಪಾದಕರಾದ ವಿಶ್ವೇಶ್ವರ ಭಟ್ಟರಿಗೆ ಮತ್ತು ಸಮಸ್ತ ಸಿಬ್ಬಂದಿಗೆ ಅಭಿನಂದನೆಗಳು.

ಪತ್ರಿಕೆಯೊಂದು ಸತತ 10 ವರ್ಷಗಳಿಂದ ಓದುಗರನ್ನು ಹಿಡಿದಿಟ್ಟುಕೊಂಡಿದೆ ಅಂದರೆ, ಆ ಪತ್ರಿಕೆಯಲ್ಲಿ ಏನೋ ವಿಶೇಷವಿದೆ ಅಂತಲೇ ಅರ್ಥ. ದಿನನಿತ್ಯದ ಸಂಪಾದಕೀಯ ಮತ್ತು ಸುದ್ದಿಗಳ ಜತೆಗೆ ಭಟ್ಟರು ಬರೆಯುವ 'ಇದೇ ಅಂತರಂಗ ಸುದ್ದಿ', 'ನೂರೆಂಟು ವಿಶ್ವ', 'ಆಸ್ಕ್ ದಿ ಎಡಿಟರ್', 'ಸಂಪಾದಕರ ಸದ್ಯಶೋಧನೆ', 'ಭಟ್ಟರ್ ಸ್ಕಾಚ್' ಮುಂತಾದ ಅಂಕಣಗಳು ತುಂಬಾನೇ ಚೆನ್ನಾಗಿರುತ್ತವೆ. ಜಗತ್ತಿನ ಬಹುತೇಕ ದೇಶಗಳನ್ನು ಸುತ್ತಿರುವ

ಭಟ್ಟರು, ಅಲ್ಲಲ್ಲಿನ ಆಸಕ್ತಿಕರ ವಿಷಯಗಳನ್ನು ಓದುಗರೊಂದಿಗೆ ಆಗಾಗ ಹಂಚಿಕೊಳ್ಳುತ್ತಿರುತ್ತಾರೆ. ಸಾಲದೆಂಬಂತೆ, ತಮ್ಮ ಬಳಗದ 'ಪ್ರವಾಸಿ ಪ್ರಪಂಚ' ಪತ್ರಿಕೆಯಲ್ಲೂ ಸ್ವಾರಸ್ಯಕರವಾದ ಒಂದಿಷ್ಟು ಅಂಕಣಗಳನ್ನು ಬರೆಯುತ್ತಾರೆ. ಸಂಪಾದಕರೇ ಸ್ವತಃ ಇಷ್ಟೊಂದು ಬರೆಯುವ ಬೇರೆ ಪತ್ರಿಕೆಗಳು ಇಲ್ಲವೆನಿಸುತ್ತದೆ.

ಇಷ್ಟು ಮಾತ್ರವಲ್ಲದೆ, ಶ್ರೀವತ್ಸ ಜೋಶಿ, ಶಿಶಿರ್ ಹೆಗಡೆ, ರಂಗಸ್ವಾಮಿ ಮೂಕನಹಳ್ಳಿ, ಶಶಿಧರ ಹಾಲಾಡಿ, ಮೋಹನ್ ವಿಶ್ವ, ಕಿರಣ್ ಉಪಾಧ್ಯಾಯ, ನವೀನ್ ಸಾಗರ್, ಕೇಶವ ಪ್ರಸಾದ್, ವಿನಾಯಕ ವೆಂ.ಭಟ್ಟ ಅಂಬ್ಲಿಹೊಂಡ, ಆರ್.ಟಿ. ವಿಠ್ಠಲಮೂರ್ತಿ ಮುಂತಾದ ಅಂಕಣಕಾರರು ವಿಭಿನ್ನ ವಿಷಯಗಳ ಮೇಲೆ ಬೆಳಕು ಚೆಲ್ಲುವ ಲೇಖನಗಳನ್ನು ನಿರಂತರವಾಗಿ ಬರೆದು ಓದುಗರಿಗೆ ನೀಡುತ್ತಿದ್ದಾರೆ. ಪ್ರತಿದಿನ ಪ್ರಕಟವಾಗುವ ರೂಪ ಗುರುರಾಜ್ ಅವರ 'ಒಂದೊಳ್ಳೆ ಮಾತು' ಅಂಕಣವಂತೂ ಅನೇಕ ಓದುಗರನ್ನು ಆಕರ್ಷಿಸಿದೆ. ಹರಿಪರಾಕ್ ಅವರ 'ತುಂಟರಗಾಳಿ' ಮತ್ತು ಯಗಟಿ ರಘು ನಾಡಿಗ್ ಅವರ 'ಸುದ್ದಿಗಿಷ್ಟು ಒಗ್ಗರಣೆ' ಅಂಕಣಗಳೂ ಕಚಗುಳಿ ಇಡುತ್ತವೆ, ಮಜಾ ಕೊಡುತ್ತವೆ. ಪತ್ರಿಕೆಯನ್ನು ಪ್ರತಿದಿನ ಓದುವಂತಾಗಲು ಓದುಗರನ್ನು ಹಿಡಿದಿಟ್ಟುಕೊಳ್ಳುವುದು ಇಂಥ ಬರಹಗಳೇ.

ಇನ್ನು, 'ಆರಾಮ' ಪುರವಣಿಯ ಮೂಲಕ ನಮ್ಮಂಥ ಸಾಮಾನ್ಯ ಓದುಗರಿಗೂ, ಹವ್ಯಾಸಿ ಬರಹಗಾರರಿಗೂ ಬರೆಯಲು ಅವಕಾಶ ನೀಡುತ್ತಿದೆ 'ವಿಶ್ವವಾಣಿ'. ಇದರ ಜತೆಜತೆಗೆ 'ಪ್ರವಾಸಿ ಪ್ರಪಂಚ', 'ವಿಶ್ವವಾಣಿ ಟಿವಿ', 'ವಿಶ್ವವಾಣಿ ಕ್ಲಬ್‌ಹೌಸ್' ಮುಂತಾದ ಹೊಸ ಪ್ರಯೋಗಗಳಿಗೂ ಒಡ್ಡಿಕೊಂಡಿರುವ ವಿಶ್ವೇಶ್ವರ ಭಟ್ಟರ ಪ್ರಯೋಗಶೀಲತೆ ಶ್ಲಾಘನೀಯ. ಈ ಪತ್ರಿಕಾ ಬಳಗವು ಇನ್ನು ಮುಂದೆಯೂ ಈ ತರಹದ ವಿನೂತನ ಪ್ರಯೋಗಗಳಿಂದ ಓದುಗರನ್ನು ಸೆಳೆದಿಟ್ಟುಕೊಳ್ಳಲಿ, ವಾರ್ಷಿಕೋತ್ಸವಗಳ ಸಂಖ್ಯೆ ಹೀಗೆಯೇ ಬೆಳೆಯುತ್ತಾ ಹೋಗಲಿ ಎಂದು ಹಾರೈಸುವೆ.

– ರಾಘವೇಂದ್ರ ಜೋಯಿಸ್, ಮೈಸೂರು

ಓದುಗರ ಓಣಿಗೆ ಭೇಟಿ ಕೊಡಿ
ನಿಮ್ಮ ಅಭಿಪ್ರಾಯಗಳನ್ನು vveditoped@gmail.comಗೆ ಮೇಲ್ ಮಾಡಬಹುದು ಅಥವಾ ಕಚೇರಿಯ ವಿಳಾಸಕ್ಕೆ ಕಳುಹಿಸಬಹುದು

ತಾಳಮದ್ದಳೆ ಅರ್ಥಧಾರಿಗಳ ತಪ್ಪಿದ ತಾಳದ ಸುತ್ತಮುತ್ತ!

ವಿಶ್ವವಾಣಿ ಪತ್ರಿಕೆಯಲ್ಲಿ, ತಮಾಷೆಗೆ ಮೀಸಲಾಗಿರುವ 'ಭಟ್ಟರ್ ಸ್ಕಾಚ್' ಪ್ರಶ್ನೋತ್ತರದ ಕಾಲಂನಲ್ಲಿ ''ಮನುಷ್ಯನಿಗೆ ಬುದ್ಧಿವಂತಿಕೆ ಇದ್ದೂ ಭೂಷಣ ಎನಿಸಿಕೊಳ್ಳದಿದ್ದರೆ– ಪ್ರಭಾಕರ ಜೋಶಿ ಅಂತಾರೆ'' ಎಂದು ಪ್ರಕಟವಾಗಿತ್ತು. ಇದಾಗಿ ಅನೇಕ ದಿನಗಳೇ ಕಳೆದಿವೆ. ಇದೀಗ ಉಡುಪಿಯಲ್ಲಿ ಕಲಾವಿದ ಪ್ರಭಾಕರ ಜೋಶಿ ನೇತೃತ್ವದ 14 ಜನರ ತಂಡವು ಪತ್ರಿಕಾಗೋಷ್ಠಿ ನಡೆಸಿ ವಿಶ್ವೇಶ್ವರ ಭಟ್ಟರು ಬಹಿರಂಗ ಕ್ಷಮೆ ಯಾಚಿಸಬೇಕು ಎಂದು ಗುಡುಗಿದೆ.

ಅಂದು ವಿಶ್ವೇಶ್ವರ ಭಟ್ಟರು ಯಾಕೆ ಹೀಗೆ ಬರೆದರು, ಅವರಾಗಿ ಕಾಲು ಕೆರೆದು ಜಗಳಕ್ಕೆ ನಿಲ್ಲುವವರಲ್ಲ, ಏನೋ ಆಗಿರಬೇಕಲ್ವಾ ಎಂದು ತಲೆ ಕೆರೆದುಕೊಂಡಿದ್ದೆ. ಬಳಿಕ ಗೊತ್ತಾದದ್ದು ಏನೆಂದರೆ.. ಸಾಮಾಜಿಕ ಜಾಲತಾಣದಲ್ಲಿ ಗೌರವಾನ್ವಿತ ಇಬ್ಬರು ಪತ್ರಕರ್ತರ ವಿರುದ್ಧದ ವ್ಯಂಗ್ಯ, ಟೀಕೆ, ಮಾತ್ಸರ್ಯವೇ ಮೂರ್ತಿವೆತ್ತ ಒಂದು ವಾಕ್ಯದ ಜೋಶಿಯವರ ವಿಮರ್ಶೆ! ವಿಪರ್ಯಾಸ ಎಂದರೆ ಜೋಶಿಯವರು ತಾವು ತಪ್ಪು ಮಾಡಿದ್ದು ಮಾತ್ರವಲ್ಲದೆ ಸಮರ್ಥಿಸಲು ಎಲ್ಲರನ್ನೂ ಒತ್ತಾಯಪೂರ್ವಕವಾಗಿ ಎಳೆದು ತಂದು ಅವರಿಗೂ ಕೆಸರು ಮೆತ್ತಿಸಿದ್ದಾರೆ.

ಸುದ್ದಿಗೋಷ್ಠಿ ನಡೆಸಿ 'ಇದು ಯಕ್ಷಗಾನದ ಮೇಲೆ, ತಾಳಮದ್ದಳೆಯ ಮೇಲೆ ಸವಾರಿ' ಎಂದು ಪ್ರಲಾಪಿಸುವುದನ್ನು ನೋಡುವಾಗ ಭಟ್ಟರ್ ಸ್ಕಾಚ್‌ನಲ್ಲಿ ಜೋಶಿಯವರ ಬಗ್ಗೆ ಆರಂಭದಲ್ಲಿ ಬರೆದದ್ದು ಸರಿ ಎಂದು ಈಗ ಅನಿಸುತ್ತಿದೆ!

''ಯಕ್ಷಗಾನ ಕಲಾವಿದರು ಸಲಿಂಗಕಾಮಿಗಳು'' ಎಂದು ಅಕಾಡೆಮಿ ಅಧ್ಯಕ್ಷ ಪುರುಷೋತ್ತಮ ಬಿಳಿಮಲೆಯವರು ಬಹಿರಂಗವಾಗಿ ಹೇಳಿದಾಗ ಇವರಿಗೆ ಸುದ್ದಿಗೋಷ್ಠಿ ನಡೆಸುವ 'ದಮ್' ಇರಲಿಲ್ಲ. ಅದಕ್ಕಿಂತ ಹೆಚ್ಚಾಗಿ 'ನನಗೆ ಹೇಳಿಲ್ಲವಲ್ಲ, ಕಲಾವಿದರಿಗೆ ಹೇಳಿದರೆ ನಮಗೇನು?' ಎಂಬ ಭಾವ ಇವರಲ್ಲಿತ್ತು. ಆದರೆ ಇಡೀ ಯಕ್ಷಗಾನ ರಂಗದ ಕಲಾವಿದರಿಗೆ ಅವಮಾನ ಆದಾಗ, ಎಲ್ಲ ಕಲಾವಿದರಿಗೆ ಕರೆ ಮಾಡಿ ಪ್ರತಿಭಟಿಸುವ ಮನಸ್ಸು ಬರಲಿಲ್ಲ. ಆಗ ಏನೂ ಅನಿಸಲಿಲ್ಲ.

ಮೂಗಿನ ನೇರಕ್ಕೆ ಮಾತನಾಡುವುದು, ಬರೆಯುವುದೇ ಕಟುವಾದ ವಿಮರ್ಶೆ, ಜಾಲತಾಣದಲ್ಲಿ ವೈಯಕ್ತಿಕವಾಗಿ ಟೀಕಿಸುವುದೇ ಪಾಂಡಿತ್ಯ ಎಂದುಕೊಂಡು ಕೆಲವರು ಮೆರೆಯುವಾಗ, ಒಂದು ಸಣ್ಣ ಪ್ರಶ್ನೋತ್ತರಕ್ಕೆ ಯಕ್ಷಗಾನ ಲೋಕದ ಮೇಲಿನ ದಾಳಿ ಎಂದು ಬಿಂಬಿಸಿದಿರಲ್ಲಾ ಇದೇನಾ ನಿಮ್ಮ ಹೆಚ್ಚುಗಾರಿಕೆ. ''ನಾನು ಮಾಡಿದರೆ ರಾಮಲೀಲೆ, ಇನ್ನೊಬ್ಬರು ಮಾಡಿದರೆ ರಾಸಲೀಲೆ'' ಎಂಬ ಅಹಂಭಾವವೇ ಇಷ್ಟಕ್ಕೆಲ್ಲ ಕಾರಣ. ವೈಯಕ್ತಿಕ ಕಾರಣಕ್ಕಾಗಿ ಆದ ಕ್ಷುಲ್ಲಕ ವಿಚಾರವನ್ನು ಇಡೀ ಯಕ್ಷಗಾನ ರಂಗಕ್ಕೆ ಎಳೆದು ತಂದು ಉಳಿದ ಕಲಾವಿದರನ್ನು ಅದರೊಳಗೆ ಸಿಲುಕಿಸುವ ನರೇಟಿವ್ ಸೃಷ್ಟಿ ಮಾಡಿದ್ದೀರಲ್ಲ. ಇದಕ್ಕೆ ಮೆಚ್ಚಲೇಬೇಕು.

ಪತ್ರಿಕಾಗೋಷ್ಠಿ ನಡೆಸಿದ ಅರ್ಥಧಾರಿಗಳು ತಾಳಮದ್ದಳೆ ಕ್ಷೇತ್ರದ ತಾರೆಗಳು ಎನ್ನುವುದರಲ್ಲಿ ಎಳ್ಳಷ್ಟೂ ಸಂಶಯವಿಲ್ಲ. ನಾನು ತುಂಬಾ ಮೆಚ್ಚುವ ಕಲಾವಿದರು ಅಲ್ಲಿದ್ದಾರೆ. ಆದರೆ ಇಷ್ಟು ಸರಳವಾಗಿದ್ದ ವಿಚಾರವನ್ನು ಇಷ್ಟು ಕ್ಲಿಷ್ಟ ಮಾಡಿಸಿದ ಹಿನ್ನೆಲೆ, ಕಾರಣ ಅರ್ಥಧಾರಿಗಳಿಗೆ ಅರ್ಥವಾಗಿಲ್ಲ ಎಂದರೆ...

ಸೆಲೆಬ್ರಿಟಿ ಅರ್ಥಧಾರಿಗಳು ಮಾತ್ರ ಯಕ್ಷರಂಗವೇ?

5–6 ದಶಕಗಳ ಹಿಂದೆ, ಕಾರ್ಕಳದ ಪುಟ್ಟಹಳ್ಳಿಯಲ್ಲಿ ದೇವಸ್ಥಾನದ ಅರ್ಚಕರಾಗಿರುವ ರಾಘವೇಂದ್ರ ಭಟ್ಟರು ತಾಳಮದ್ದಳೆ ಪ್ರಿಯರನ್ನೂ, ಊರಿನ ಯುವಕರನ್ನು ಕಟ್ಟಿಕೊಂಡು ಹಿರಿಯರ ಜತೆ ದೇವಸ್ಥಾನದಲ್ಲಿ ಯಕ್ಷಗಾನ, ತಾಳಮದ್ದಳೆ, ಶಾಲೆಯಲ್ಲಿ ನಾಟಕ ಮಾಡಿಸುತ್ತಿದ್ದರು. ಅಕ್ಕಿ ಖಾಲಿಯಾಗಿ ಉಪವಾಸ ಕುಳಿತರೂ ಸಿಂಹಮಾಸದಲ್ಲಿ ಸೋಣಾರ್ತಿ ಸಂದರ್ಭ ತಾಳಮದ್ದಳೆಯನ್ನು ತಪ್ಪಿಸುತ್ತಿರಲಿಲ್ಲ. ಪ್ರಸಿದ್ಧ ಅರ್ಥಧಾರಿ ಅಲ್ಲದಿದ್ದರೂ ಸುತ್ತಮುತ್ತ ತಾಳಮದ್ದಳೆಗೆ ಹೋಗುತ್ತಿದ್ದರು. ಬಹುತೇಕ ಪ್ರತಿ ಊರಿನಲ್ಲಿಯೂ ಇಂಥವರು ಇದ್ದರು. ಇಂಥವರು ಯಕ್ಷಗಾನ ಲೋಕದಲ್ಲಿ ಪ್ರಚಾರ ಪಡೆಯುವುದೇ ಇಲ್ಲ. ಆದರೆ ಯಕ್ಷಗಾನ ರಂಗದ ಉಸಿರಾಟದಲ್ಲಿ ಇವರೆಲ್ಲರೂ ಇದ್ದಾರೆ!

ಹಿಂದೆ ಪ್ರತಿ ಊರಿನಲ್ಲಿಯೂ ಆಯಾ ಊರಿನ ಅಕ್ಕಪಕ್ಕದ ಊರಿನ ಕಲಾವಿದರು ಬಂದು ಅವರಲ್ಲೇ ಒಬ್ಬ ಭೀಷ್ಮ, ಅರ್ಜುನ, ಕೃಷ್ಣ, ಶಿಖಂಡಿ ಪಾತ್ರಗಳನ್ನು ಮಾಡುತ್ತಿದ್ದರು. ಭಾಗವತರೂ ಅದೇ ಊರಿನವರು. ಅಪರೂಪಕ್ಕೆ ಅಪರೂಪ ಎಂಬಂತೆ ಸ್ಟಾರ್ ಕಲಾವಿದರಿಗೆ ತಾಳಮದ್ದಳೆಗೆ ಆಹ್ವಾನ ಇರುತ್ತಿತ್ತು. ಆದರೆ ಈಗ ಬಹುತೇಕ ತಾಳಮದ್ದಳೆಗಳಿಗೆ ಸ್ಟಾರ್ ಕಲಾವಿದರೇ ಆಕರ್ಷಣೆ. ಇದು ರೂಢಿಯಾಗುತ್ತಿದ್ದಂತೆ ಪ್ರತಿ ಊರಿನ ಯಕ್ಷಗಾನ ಸಂಘಗಳಲ್ಲಿ ಅರ್ಥಧಾರಿಗಳು ನಶಿಸತೊಡಗಿದರು.



ಈಗೇನಿದ್ದರೂ ತಾಳಮದ್ದಳೆ ಸಂಘಟಕರಿಗೆ ತಾಳಮದ್ದಳೆಯ ಮೇಲೆ ಅಭಿಮಾನ ಇದ್ದರೆ ಅವರಿಗೆ ಸರ್ಪಾಸ್ತ್ರದಂಥ ಪಾತ್ರಗಳೇ ಸೀಮಿತ. ಸರ್ಪಾಸ್ತ್ರ ಅಂದಾಗ ನೆನಪಾಯಿತು. ಮೂಡುಬಿದರೆಯಲ್ಲಿಯೂ ಒಬ್ಬ ಯಕ್ಷಗಾನ ಪ್ರೇಮಿ ಇದ್ದಾರೆ– ಮೇನಕಾ ಟೆಕ್ಸ್‌ಟೈಲ್ಸ್‌ನ ಸದಾಶಿವ ಅವರು. ಅವರು ತಾಳಮದ್ದಳೆ, ಯಕ್ಷಗಾನವನ್ನು ಅಲ್ಲಲ್ಲಿ ಸಂಘಟಿಸುತ್ತಾ ಸಣ್ಣ ಪುಟ್ಟ ಪಾತ್ರಗಳನ್ನು ಅಚ್ಚುಕಟ್ಟಾಗಿ ಮಾಡುತ್ತಾರೆ. ಕಲಾವಿದರನ್ನು ಮಳಿಗೆಗೆ ಕರೆಸಿ ಉಡುಗೊರೆ ಕೊಟ್ಟು ಖುಷಿಪಡಿಸುತ್ತಾರೆ. ಇಂಥ ಅಭಿಮಾನಿ ಸಂಘಟಕರು ಅನೇಕ ಕಡೆಗಳಲ್ಲಿ ಕಾಣ ಸಿಗುತ್ತಾರೆ. ಉದ್ಯಮ ಬೇರೆ ಇದ್ದರೂ ಯಕ್ಷಗಾನವನ್ನೇ ಉಸಿರಾಟ ಮಾಡಿಕೊಂಡವರು ಯಕ್ಷರಂಗದ ಆಸ್ತಿ. ಆದರೆ ಯಕ್ಷಗಾನವನ್ನೇ ವ್ಯವಸಾಯ ಮಾಡಿಕೊಂಡವರು ಅದರಲ್ಲಿಯೂ ಸ್ಟಾರ್ ಕಲಾವಿದರಷ್ಟೇ ಪ್ರಚಾರ, ಪ್ರಸಿದ್ಧಿ, ಅಭಿಮಾನಿ ಬಳಗವನ್ನು ಹೊಂದಿದ್ದಾರೆ. ತಾಳಮದ್ದಳೆ/ಯಕ್ಷಗಾನ ವಿಮರ್ಶೆ ಮಾಡಿದಾಕ್ಷಣ ಅಭಿಮಾನಿವರ್ಗ ರಣಧೀರ ಪಡೆಯಂತೆ ಮುನ್ನುಗ್ಗಿ ವಿಮರ್ಶಕರ ಚಾರಿತ್ರ್ಯವಧೆಗೂ ಹೇಸುವುದಿಲ್ಲ.

ಹಿಂದೆಲ್ಲ ಹೀಗಿರಲಿಲ್ಲ. 3 ದಶಕಗಳ ಹಿಂದೆ ಇರಬಹುದು.

ತಾಳ-ಮೇಳ
ಜಿತೇಂದ್ರ ಕುಂದೇಶ್ವರ
vveditoped@gmail.com

ಉಡುಪಿ ರಥಬೀದಿಯಲ್ಲಿ ತಾಳಮದ್ದಳೆಯಿತ್ತು. ಜಟೆ ಧರಿಸಿದ ಸಾಮಗರು (ರಾಮದಾಸ ಸಾಮಗರು) ವೇದಿಕೆಯಲ್ಲಿ ಕೂತು ಗರ್ಜಿಸುತ್ತಿದ್ದರು– ''ಕೃಷ್ಣಪೂಜೆ ಮಾಡುವವರ ಕೈ ಕಡಿಯಬೇಕು'' ಅಂತ. ಶಿಶುಪಾಲನೋ ಅಥವಾ ಇನ್ಯಾವುದೋ ಕೃಷ್ಣ ವಿರೋಧಿ ಪಾತ್ರ ಇರಬೇಕು. ಪ್ರಸಂಗದ ಒಳಗೇ ಬರುತ್ತದೆ. ಆಶ್ಚರ್ಯ ಎಂದರೆ ಉಡುಪಿಯಲ್ಲಿ ಶ್ರೀಕೃಷ್ಣ ಪೂಜೆ ಮಾಡುವವರು ಅಷ್ಟಮಠಗಳ ಸ್ವಾಮಿಗಳು. ಆ ಮಠಗಳ ನಡುವಿನ ವೇದಿಕೆಯಲ್ಲಿ ಕೂತು ಹೀಗೆ ಹೇಳಬೇಕಾದರೆ!! ಆಗ ನನ್ನ ಮನಸ್ಸಲ್ಲಿ ಮೂಡಿದ್ದು ಹಿಂದೂ ಧರ್ಮ ಎಷ್ಟೊಂದು ವಿಶಾಲವಾಗಿದೆ, ತಾಳಮದ್ದಳೆಯೂ ಎಷ್ಟೊಂದು ವಿಶಾಲ ಕ್ಷೇತ್ರ, ಎಲ್ಲಕ್ಕಿಂತಲೂ ಮಿಗಿಲಾಗಿ ಸ್ವಾಮೀಜಿಗಳದ್ದು ಎಷ್ಟೊಂದು ವಿಶಾಲ ಹೃದಯ ಎಂಬ ಭಾವ. ಆಗ ಅರ್ಥಧಾರಿಗಳಿಗೆ ಅಷ್ಟೊಂದು ಸ್ವಾತಂತ್ರ್ಯ ಇತ್ತು. ಪ್ರೇಕ್ಷಕರೂ ಒಳ್ಳೆಯವರಿದ್ದರು.

ಸಂವಾದವೇ ಜೀವಾಳವಾಗಿರುವ ಯಕ್ಷಗಾನ ತಾಳಮದ್ದಳೆಯು ಇಂದು ಜ್ಞಾನದ ಗಣಿಯಾಗಿರುವಂತೆಯೇ, ಅಹಂಕಾರದ ಅಖಾಡವಾಗಿಯೂ ಬದಲಾಗುತ್ತಿದೆಯೇ ಎಂಬ ಆತಂಕ ಕಲಾಭಿಮಾನಿಗಳಲ್ಲಿ ಮನೆಮಾಡಿದೆ.

ಯಕ್ಷಗಾನ ತಾಳಮದ್ದಳೆ ಎನ್ನುವುದು ಕೇವಲ ಮಾತಿನ ಮಲ್ಲಯುದ್ಧವಲ್ಲ; ಅದು ಅರ್ಥಾನುಸಂಧಾನದ ಮೂಲಕ ಪರಮಾರ್ಥವನ್ನು ಶೋಧಿಸುವ ಪ್ರಕ್ರಿಯೆ. ಆದರೆ ಇತ್ತೀಚಿನ ದಿನಗಳಲ್ಲಿ ಈ ಕಲೆಗೆ 'ಪಾಂಡಿತ್ಯದ ಪ್ರದರ್ಶನ' ಎಂಬ ರೋಗ ತಗುಲಿದಂತಿದೆ. ಅರ್ಥಧಾರಿಗಳು ಪ್ರಸಂಗದ ಆಶಯವನ್ನು ಮರೆತು, ಕಠಿಣ ಶಬ್ದಜಾಲ ಮತ್ತು ಪಾಂಡಿತ್ಯ ಪ್ರದರ್ಶನಕ್ಕೆ ಆದ್ಯತೆ ನೀಡುತ್ತಿರುವುದು ಕಲೆಯ ಮೂಲಸತ್ವಕ್ಕೆ ಧಕ್ಕೆ ತರುತ್ತಿದೆ.

ಪಾಂಡಿತ್ಯ ಇದ್ದವರೆಲ್ಲಾ ಅಹಂಕಾರಿಗಳು ಎನ್ನುವುದು ತಪ್ಪು. ನಾನು ಸಾರ್ವಕಾಲಿಕವಾಗಿ ಮೆಚ್ಚುವ ಅರ್ಥಧಾರಿ ಎಂದರೆ ಮಲ್ಪೆ ವಾಸುದೇವ ಸಾಮಗರು. ಕಿಂಚಿತ್ತೂ ಅಹಂಕಾರ ಇಲ್ಲ. ಕೊಟ್ಟದ್ದನ್ನು ತೆಗೆದುಕೊಂಡು ಹೋಗುವ ಒಳ್ಳೆಯತನ. ಎಲ್ಲರಿಗೂ ಅವಕಾಶ ನೀಡುವ ಮತ್ತು ಎಲ್ಲರೂ ತಾಳಮದ್ದಳೆ ನಡೆಸಲು ಸಾಧ್ಯವಾಗುವಂತೆ, ಕೈಗೆಟುಕುವಂಥ ಮತ್ತು ಸಂಯಮಭರಿತ ತಾಳಮದ್ದಳೆ ತಂಡವನ್ನು ರಚಿಸಿದವರು ಅವರು. ಇತ್ತೀಚೆಗೆ ಜಾಲತಾಣವೊಂದರಲ್ಲಿ ಸಾಮಗರ ಭೀಷ್ಮ ಮತ್ತು ಅಂಬೆಯ ಸಂವಾದದ ಹಳೆ ತುಣುಕು ನೋಡುವಾಗ ಅಚ್ಚರಿ ಪಡುವಂಥ ರೀತಿಯಲ್ಲಿ, ಸಮಾಜಕ್ಕೆ ರವಾನೆಯಾಗಬಲ್ಲ ಅದ್ಭುತವಾದ ಸಂದೇಶ ಅದರಲ್ಲಿತ್ತು.

''ಅರ್ಥಗಾರಿಕೆಯು ತರ್ಕಬದ್ಧವಾಗಿರಬೇಕು ಮತ್ತು ಪ್ರಸಂಗದ ಮಿತಿಯಲ್ಲಿರಬೇಕು'' ಎಂದು ಹಿರಿಯ ಅರ್ಥಧಾರಿಗಳು ಪ್ರತಿಪಾದಿಸುತ್ತಿದ್ದರು. ಆದರೆ ಇಂದು ವೇದಿಕೆಯ ಮೇಲೆ ಒಬ್ಬ ಅರ್ಥಧಾರಿ ಇನ್ನೊಬ್ಬರನ್ನು ಮಾತಿನಲ್ಲಿ ಸೋಲಿಸಲೇಬೇಕು ಎಂಬ ಹಠಕ್ಕೆ ಬೀಳುತ್ತಿದ್ದಾರೆ. ಹಿಂದೆಯೂ ಪ್ರಸಂಗದ ಒಳಗೆ ಇಂಥ ಅಧಿಕ ಪ್ರಸಂಗಗಳು ನಡೆಯುತ್ತಿದ್ದವು. ಒಮ್ಮೆ ಭೀಷ್ಮನ ಪಾತ್ರಧಾರಿ ಹಿರಿಯ ಅರ್ಥಧಾರಿಯೊಬ್ಬರು ಸ್ವಯಂವರಕ್ಕೆ ಬಂದ ಸಭೆಯಲ್ಲಿರುವ ರಾಜಕುಮಾರರನ್ನು (ಲೆಕ್ಕಭರ್ತಿಗೆ ಹೆಸರುಗಳೇ ಇಲ್ಲದ ರಾಜರುಗಳು) ನಾಯಿಗಳಿಗೆ ಹೋಲಿಸಿ, ''ನಿನ್ನ ಅಪ್ಪ ಯಾರೆಂದು ಗೊತ್ತಿದೆಯೋ?'' ಎಂದು ಲೇವಡಿ ಮಾಡಿದ್ದರು. ಆಗ ಯುವ ಕಲಾವಿದನೊಬ್ಬ ''ನನ್ನ ಅಪ್ಪ ಯಾರೆಂದು ನನಗೆ ಗೊತ್ತಿದೆ, ಹಾಗೆ ಗೊತ್ತಿರದೆ ಇರಲು ನಾವೇನೂ ಹಸ್ತಿನಾವತಿಯವರಲ್ಲ!'' ಎಂದು ತಿರುಗೇಟು ನೀಡಿದ್ದರು. ಇದನ್ನು ಶ್ರೀಧರ ಡಿ.ಎಸ್. ಅವರು ತಮ್ಮ ಪುಸ್ತಕದಲ್ಲಿ ದಾಖಲಿಸಿದ್ದರು. ಇಲ್ಲಿ ಹಿರಿಯರ ಅಹಂಕಾರಕ್ಕೆ ಕಿರಿಯನ ಬೌದ್ಧಿಕ ಚಾಟಿ ಏಟು ಇತ್ತು. ಹಿರಿತನ ಎನ್ನುವುದು ಕಿರಿಯರ ಬಗೆಗಿನ ಕೀಳರಿಮೆಯಲ್ಲ, ಬದಲಾಗಿ ಮಾರ್ಗದರ್ಶನದ ದೀವಿಗೆಯಾಗಬೇಕು.

ತಾಳಮದ್ದಳೆ ಅರ್ಥಧಾರಿಗಳ ವಾಗ್ವಾದ, ಜಟಾಪಟಿಗೆ ಹತ್ತಾರು ಉದಾಹರಣೆಗಳಿವೆ. ಯಕ್ಷಗಾನದಲ್ಲಿಯೂ ಅರ್ಥಧಾರಿಗಳ ಅಹಂ ವೈಭವದಿಂದಾಗಿ ಕೆಲವೊಮ್ಮೆ ಪುರಾಣದ ಪ್ರಸಂಗದ ಪಾತ್ರಗಳಿಗೇ ಸೋಲಾಗುತ್ತಿತ್ತು. ಯಕ್ಷಗಾನಗಳೇ ಅರ್ಥಕ್ಕೆ ನಿಂತ ಉದಾಹರಣೆಗಳೂ ಇವೆ. ಅರ್ಥಧಾರಿಗಳ ಶಕ್ತಿ ಇರುವುದು ಪುರಾಣದ ಘಟನೆಗಳಿಗೆ ಹೊಸ ಆಯಾಮ ನೀಡುವಲ್ಲಿ. ಉದಾಹರಣೆಗೆ, ಏಕಲವ್ಯನ ಹೆಬ್ಬೆರಳು ಕೇಳಿದ ದ್ರೋಣನ ನಡೆಯನ್ನು ಸುಣ್ಣಂಬಳ ವಿಶ್ವೇಶ್ವರ ಭಟ್ಟರು ಸಮರ್ಥಿಸುವ ರೀತಿ ಅದ್ಭುತ. ''ಕೇವಲ ನಾಯಿ ಬೊಗಳಿತು ಎಂಬ ಕಾರಣಕ್ಕೆ ಶಬ್ದವೇಧಿಯಂಥ ವಿದ್ಯೆ ಪ್ರಯೋಗಿಸುವವನಿಗೆ ವಿವೇಚನೆ ಇಲ್ಲ'' ಎಂಬ ಅವರ ತರ್ಕವು ದ್ರೋಣನ ಪಾತ್ರಕ್ಕೆ ಹೊಸ ಗೌರವ ತಂದುಕೊಡುತ್ತದೆ. ಇಂಥ ಸಾತ್ವಿಕ ಅರ್ಥಗಾರಿಕೆ ಜನಮಾನಸದಲ್ಲಿ ಬದಲಾವಣೆ ತರುತ್ತದೆ. ಆದರೆ ಇಂದು ಈ ವಿದ್ವತ್ತು, ಪಾಂಡಿತ್ಯ ಶಕ್ತಿಯು ಸೈದ್ಧಾಂತಿಕ ಗುಂಪುಗಾರಿಕೆ ಮತ್ತು ರಾಜಕೀಯ ನಾಯಕರ ಸಮರ್ಥನೆಗೆ ಬಳಕೆಯಾಗುತ್ತಿರುವುದು ಎಲ್ಲರಿಗೂ ಗೊತ್ತೇ ಇದೆ. ಕೇಸುಗಳು ಕೂಡಾ ದಾಖಲಾಗಿವೆ. ಇನ್ನು ಕೆಲವು ಕಲಾವಿದರ ವೈಯಕ್ತಿಕ ತೀಟೆಗಳು, ಹನಿಟ್ರ್ಯಾಪ್ ಪ್ರಕರಣಗಳ ವಿಷಯದಲ್ಲಿ ಪೊಲೀಸ್ ಕೇಸುಗಳಾದಾಗ ನಾನು ಬರೆದು ಅಲ್ಲಿಗೇ ನಿಲ್ಲಿಸಿದ್ದೇನೆ. ವೇದಿಕೆಯಲ್ಲಿ ಶ್ರೀರಾಮಚಂದ್ರನ ಅದ್ಭುತ ಏಕಪತ್ನೀವ್ರತದ ಮಹತ್ವ ಹೇಳುವವರು ವೈಯಕ್ತಿಕ ಬದುಕಿನಲ್ಲಿ ಕೃಷ್ಣನ ಆದರ್ಶ ಪಾಲಿಸುತ್ತಿರುವುದು ಜಗಜ್ಜಾಹೀರಾಗಿದ್ದರೂ ಯಾವ ಪತ್ರಕರ್ತರೂ ಅದನ್ನು ವರದಿಗೆ ಯೋಗ್ಯ ಎಂದು ಬರೆಯಲು ಹೋಗಿಲ್ಲ, 'ಇಬ್ಬರಿಗೂ ಖುಷಿ ಇದ್ದರೆ ಸಂಸಾರ ನಡೆಸಲಿ, ಅವರಿಷ್ಟ' ಎಂದೇ ಒಳ್ಳೆಯ ಪತ್ರಿಕೋದ್ಯಮಕ್ಕೆ ಮಾದರಿಯಾಗಿದ್ದಾರೆ.

ಸಾಮಾಜಿಕ ಜಾಲತಾಣ ಮತ್ತು 'ಫ್ಯಾನ್ ವಾರ್' ಇನ್ನು ತಾಳಮದ್ದಳೆಯ ಗಂಭೀರತೆಯನ್ನು ಹಾಳುಮಾಡುತ್ತಿರುವುದು ಸಾಮಾಜಿಕ ಜಾಲತಾಣಗಳ 'ಫ್ಯಾನ್ ವಾರ್'ಗಳು. ಕಲಾವಿದರಿಗಿಂತ ಅವರ ಅಭಿಮಾನಿಗಳೇ ವೈಯಕ್ತಿಕ ನಿಂದನೆಗೆ ಇಳಿಯುತ್ತಿರುವುದು ಕಲೆಯ ಘನತೆಯನ್ನು ಕುಂದಿಸುತ್ತಿದೆ. ವ್ಯಕ್ತಿಪೂಜೆ ಹೆಚ್ಚಾದಂತೆ ಕಲಾಪೂಜೆ ಗೌಣವಾಗುತ್ತಿದೆ.

ಪ್ರಖ್ಯಾತ ಅರ್ಥಧಾರಿಗಳು ತಾಳಮದ್ದಳೆಯನ್ನು ಜನಪ್ರಿಯಗೊಳಿಸಿರಬಹುದು. ಆದರೆ, ಈ ಕಲೆ ಇಂದಿಗೂ ಜೀವಂತವಾಗಿರುವುದು ಕೇವಲ ಆ ಪ್ರಸಿದ್ಧ ವ್ಯಕ್ತಿಗಳಿಂದಲ್ಲ. ಬದಲಾಗಿ, ಹಳ್ಳಿಗಳ ದೇವಸ್ಥಾನಗಳ ಪ್ರಾಂಗಣದಲ್ಲಿ ಶ್ರದ್ಧೆಯಿಂದ ಕೂರುವ ಸಾಮಾನ್ಯ ಕಲಾವಿದರಿಂದ. ಕೈಯಲ್ಲಿ ಹಣವಿಲ್ಲದಿದ್ದರೂ, ಕಲಾಶ್ರೀಮಂತಿಕೆಯ ಹಸಿವಿನಿಂದ ಯುವಕ ಸಂಘಗಳನ್ನು ಕಟ್ಟಿಕೊಂಡವರಿಂದ. ಯಾವುದೇ ಪ್ರಚಾರದ ಹಪಾಹಪಿಯಿಲ್ಲದೆ ಪುರಾಣದ ಭಾವಕ್ಕೆ ಸ್ಪಂದಿಸುವ ಗ್ರಾಮೀಣ ಹಿರಿಯರಿಂದ. ಈಗಿನ ಕಾಲದಲ್ಲಿ ಯಕ್ಷಗಾನ ಎಲ್ಲೇ ಆಗುತ್ತಿರಲಿ ಆ ವೀಡಿಯೋ ಕ್ಲಿಪ್ಪಿಂಗ್‌ಗಳನ್ನು ಜಾಲತಾಣದಲ್ಲಿ ಹಾಕುತ್ತಾರೆ, ವೆಂಕಟೇಶ ಬೊಳಿಯಾಲ, ಸನತ್ಕುಮಾರ್ ಇತ್ಯಾದಿ ನೂರಾರು ಮಂದಿ ಯಕ್ಷಗಾನದ ಉಸಿರಾಟದಲ್ಲಿ ಅಡಕವಾಗಿದ್ದಾರೆ. ಯಕ್ಷಗಾನದಲ್ಲಿ ಪುರುಷರ ಬಳಗದವರಷ್ಟೇ ಅಲ್ಲ ಮಹಿಳಾ ಲೋಕದವರೂ ಅಭಿಮಾನಿ ವರ್ಗವನ್ನು ಸೃಷ್ಟಿಸಿದ್ದಾರೆ. ಕಾವ್ಯಶ್ರೀ ಅಜೇರು, ಭವ್ಯಶ್ರೀ ಕುಲ್ಕುಂದ, ಸಿಂಚನ ಹೆಗಡೆ ಮೊದಲಾದವರು ಇದಕ್ಕೆ ಉದಾಹರಣೆ. ಉನ್ನತ ಶಿಕ್ಷಣ ಪಡೆದ ಡಾಕ್ಟರ್ ಪ್ರಖ್ಯಾತ್, ಚಿನ್ಮಯ ಭಟ್ ಕಲ್ಲಡ್ಕ ಮೊದಲಾದ ಯುವ ಪ್ರತಿಭೆಗಳ ದಂಡೆ ಇದೆ. ಈಗ ಹಳ್ಳಿಯ ಯಕ್ಷಗಾನ ಸಂಘಗಳು ಕಡಿಮೆಯಾಗಿದ್ದರೂ ಅಲ್ಲಲ್ಲಿ ಮಕ್ಕಳಿಗೆ ಉಚಿತವಾಗಿ ಯಕ್ಷಗಾನ ಕಲಿಸುವ ಪ್ರಮೋದ ತಂತ್ರಿ ಅವರಂಥ ನೂರಾರು ಯಕ್ಷಗುರುಗಳಿದ್ದಾರೆ. ಊರು ಬಿಟ್ಟು ರಾಜಧಾನಿ ಸೇರಿ ಅಲ್ಲಿ ಮಕ್ಕಳಿಗೆ ಯಕ್ಷಗಾನ ಶಾಲೆಗಳನ್ನು ತೆರೆದ ಸೃಷ್ಟಿ ಕಲಾವಿದ್ಯಾಲಯದ ಛಾಯಾಪತಿ ಕಂಚಿಬೈಲ್ ಅಂಥವರು ನೂರಾರು ಸಂಖ್ಯೆಯಲ್ಲಿದ್ದಾರೆ. ಕಲಾವಿದರಿಗೆ ನೆರವಾಗುವ ಜತೆ ಸಹಸ್ರಾರು ಮಂದಿ ವಿದ್ಯಾರ್ಥಿಗಳಿಗೆ ಯಕ್ಷಗಾನ ಕಲಿಸುವ ಪಟ್ಲ ಸತೀಶ್ ಶೆಟ್ಟರ ನೇತೃತ್ವದ ಯಕ್ಷಧ್ರುವ ಪಟ್ಲ ಫೌಂಡೇಶನ್ ದೊಡ್ಡ ಮಟ್ಟದಲ್ಲಿ ಕಾರ್ಯಾಚರಿಸುತ್ತಿದೆ. ಉಡುಪಿಯಲ್ಲಿ ಮುರಲಿ ಕಡೆಕಾರ್ ನೇತೃತ್ವದ ಯಕ್ಷಗಾನ ಕಲಾರಂಗವೂ ಯಕ್ಷರಂಗದಲ್ಲಿ ಹೃದಯ ದಂತೆ ಕಾರ್ಯ ನಿರ್ವಹಿಸುತ್ತಿದೆ. ಇಷ್ಟೆಲ್ಲ ವಿಶಾಲವಾದ ಯಕ್ಷಗಾನದಲ್ಲಿ ವೈಯಕ್ತಿಕ ವಿಚಾರಕ್ಕಾಗಿ ಇಡೀ ಯಕ್ಷಗಾನ ರಂಗಕ್ಕೆ ಅವಮಾನ ಎಂದು ಬಿಂಬಿಸುವುದೇ ಬಹುದೊಡ್ಡ ತಪ್ಪು. ಇದಕ್ಕೆ ನಾವೇನು ಕ್ಷಮೆ ಯಾಚಿಸಿ ಎಂದು ಹೇಳುವುದಿಲ್ಲ. ಬದಲು ಆತ್ಮಾವಲೋಕನ ಮಾಡಿಕೊಳ್ಳಲಿ. ತಾಳಮದ್ದಳೆಯು ಕೇವಲ ಶಬ್ದದ ಕಸರತ್ತಾಗಬಾರದು, ಅಲ್ಲಿ ಗುಂಪುಗಾರಿಕೆ ಮಾಡಬಾರದು, ಅದು ಭಾವಸ್ಪರ್ಶದ ರಸದೌತಣವಾಗಬೇಕು. ಪಾಂಡಿತ್ಯವು ವಿನಯದೊಂದಿಗೆ ಮೇಳೈಸಿದಾಗ ಮಾತ್ರ ಕಲೆಯು ಪ್ರೇಕ್ಷಕನ ಅಂತರಾತ್ಮವನ್ನು ಮುಟ್ಟಲು ಸಾಧ್ಯ. ಬಣ್ಣದ ಬದುಕಿನ ಅಹಂಕಾರದ ನಡುವೆ, ಶ್ರದ್ಧೆಯ ನೈಜಕಲೆ ಎಂದಿಗೂ ಅಳಿಯಬಾರದು.

(ಲೇಖಕರು ಪತ್ರಕರ್ತರು)

ಅಚ್ಚುಕಟ್ಟು ಪ್ರದೇಶ
RNI no: 3918/59
VISHVAVANI, Printed & Published by : VISHWESHWAR BHAT, On behalf of Vishwakshara Media Private Ltd., #483/1A/2A/3 Shri Ram plaza, 3rd floor, opp to Jain college, behind Kotak Mahindra Bank, Club Road, Hubli. Printed @ manipal media network limited Sy no7/2,plot no CA-3/1,28 (p)&29 (p),Kapnoor,2nd stage industrial area,kapnoor village, Gulbarga-585104
Editor-in Chief : Vishweshwar Bhat. ಪ್ರಧಾನ ಸಂಪಾದಕ: ವಿಶ್ವೇಶ್ವರ ಭಟ್
CopyRight: Vishwakshara Media Private Ltd. All rights reserved. Reproduction in any manner electronic or otherwise, in whole or in part, without prior written permission is prohibited.
ನಮ್ಮ ಆವೃತ್ತಿಗಳು: ಬೆಂಗಳೂರು, ಹುಬ್ಬಳ್ಳಿ ಮಂಗಳೂರು, ಬೆಳಗಾವಿ ಕಲಬುರಗಿ, ದಾವಣಗೆರೆ
Vol:68, Issue: 255

ಸಮಾಚಾರ ಸಣ್ಣದಲ್ಲ

‘ಎಂವಿಎ’, ಉದ್ಧವ್ ಬೇಕಿಲ್ಲ: ಫಡ್ನವೀಸ್

ಮುಂಬೈ: ಮಹಾ ವಿಕಾಸ್ ಅಘಾಡಿ(ಎಂವಿಎ) ಅಥವಾ ಶಿವಸೇನೆ(ಉದ್ಧವ್ ಬಣ) ಮುಖ್ಯಸ್ಥ ಉದ್ಧವ್ ಠಾಕ್ರೆ ಜತೆ ಎಂದೂ ರಾಜಕೀಯ ಹೊಂದಾಣಿಕೆ ಅಥವಾ ಚುನಾವಣಾ ಮೈತ್ರಿ ಬಯಸಲ್ಲ ಎಂದು ಮಹಾರಾಷ್ಟ್ರ ಮುಖ್ಯಮಂತ್ರಿ ದೇವೇಂದ್ರ ಫಡ್ನವೀಸ್ ಹೇಳಿದ್ದಾರೆ.

ಬಿಜೆಪಿ-ಶಿವಸೇನೆ-ಎನ್‌ಸಿಪಿ ಪಕ್ಷಗಳ ಮೈತ್ರಿಕೂಟ ‘ಮಹಾಯುತಿ’ ಸ್ವಂತ ಬಲದ ಮೇಲೇ ಚುನಾವಣೆ ಗೆಲ್ಲುವ ಸಾಮರ್ಥ್ಯ ಹೊಂದಿದೆ. ಹಾಗೆಂದು ‘ಅವರು’ ನಮ್ಮ ಶತ್ರುಗಳೇನೂ ಅಲ್ಲ. ಭವಿಷ್ಯದಲ್ಲಿ ಅವರ ಜತೆ ಚಹಾ ಕುಡಿಯಬಹುದು. ಆದರೆ ರಾಜಕೀಯ ಮೈತ್ರಿ ಅಸಾಧ್ಯ ಎಂದು ದೃಢವಾಗಿ ಹೇಳಿದರು. ಬೃಹನ್ಮುಂಬೈ ಮಹಾನಗರ ಪಾಲಿಕೆ ಸೇರಿದಂತೆ ವಿವಿಧ ಪಾಲಿಕೆಗಳಲ್ಲಿ ಮಹಾಯುತಿಯಿಂದ ತರಕಾರಿ ಮಾರಾಟಗಾರರು, ಸ್ವಂತ ಮನೆ ಇಲ್ಲದವರು, ಮಧ್ಯಮ ವರ್ಗದವರು, ವಕೀಲರು ಸೇರಿದಂತೆ ಸಾಮಾನ್ಯ ಹಿನ್ನೆಲೆ ಅಭ್ಯರ್ಥಿಗಳನ್ನು ಕಣಕ್ಕಿಳಿಸಿದೆ. ಮೊದಲ ದಿನದಿಂದಲೇ ವೃತ್ತಿಪರ ರೀತಿ ಚುನಾವಣಾ ಪ್ರಚಾರ ಆರಂಭಿಸಿದೆ ಎಂದು ಫಡ್ನವಿಸ್ ಹೇಳಿದರು.

ಹಜಾರಿಬಾಗ್ ಸ್ಫೋಟ: 2ಮಹಿಳೆ ಸೇರಿ 3 ಸಾವು

ರಾಂಚಿ: ಜಾರ್ಖಂಡ್ ರಾಜ್ಯದ ಹಜಾರಿಬಾಗ್‌ನ ಬಾರಾ ಬಜಾರ್ ಟಿಒಪಿ ಪ್ರದೇಶದ ಹಬೀಬ್ ನಗರದಲ್ಲಿ ಬುಧವಾರ ಪ್ರಬಲ ಸ್ಫೋಟವಾಗಿದ್ದು, ಪತಿ, ಪತ್ನಿ, ಮತ್ತೊಬ್ಬ ಮಹಿಳೆ ದುರ್ಮರಣಕ್ಕೀಡಾಗಿದ್ದಾರೆ. ಇತರೆ ಇಬ್ಬರು ಗಂಭೀರವಾಗಿ ಗಾಯಗೊಂಡಿದ್ದಾರೆ. ಕೆಲ ಜನರು ಖಾಲಿ ಜಾಗದಲ್ಲಿದ್ದ ಪೊದೆಗಳನ್ನು ತೆರವುಗೊಳಿಸುತ್ತಿದ್ದಾಗ ದಿಢೀರ್ ಸ್ಫೋಟವಾಗಿದೆ ಎನ್ನಲಾಗಿದೆ. ಪ್ರದೇಶವನ್ನು ಬಂದ್ ಮಾಡಲಾಗಿದ್ದು, ವಿಧಿವಿಜ್ಞಾನ ವಿಜ್ಞಾನ ಪ್ರಯೋಗಾಲಯದ ತಂಡ ಸಾಕ್ಷ್ಯ ಸಂಗ್ರಹಿಸುತ್ತಿದೆ. ಸ್ಫೋಟದ ಸ್ವರೂಪ ಮತ್ತು ಕಾರಣ ತಿಳಿಯಲು ತನಿಖೆ ಮಾಡಲಾಗುತ್ತಿದೆ ಎಂದು ಜಾರ್ಖಂಡ್ ಪೊಲೀಸ್ ವಕ್ತಾರ ಮೈಕೆಲ್ ರಾಜ್ ಸುದ್ದಿಗಾರರಿಗೆ ತಿಳಿಸಿದ್ದಾರೆ.

ಬಿಜ್ನೋರ್ ಹನುಮ ಮಂದಿರ ಶ್ವಾನ ಭಕ್ತಿ!

ದೆಹಲಿ: ಉತ್ತರ ಪ್ರದೇಶದ ಬಿಜ್ನೋರ್ ಜಿಲ್ಲೆಯ ಒಂದೆಡೆ ಹನುಮ ಮಂದಿರದಲ್ಲಿ ಶ್ವಾನವೊಂದು ಸತತ 4 ದಿನಗಳಿಂದ ಹನುಮಂತ ದೇವರ ವಿಗ್ರಹಕ್ಕೆ ಪ್ರದಕ್ಷಿಣೆ ಹಾಕುತ್ತಾ ಭಕ್ತಿ ಪ್ರದರ್ಶಿಸುತ್ತಿದೆ. ಅನ್ನ, ನೀರು, ನಿದ್ರೆ ತ್ಯಜಿಸಿರುವ ಬೀದಿಶ್ವಾನ 4 ದಿನಗಳಿಂದ ಹನುಮಂತನ ವಿಗ್ರಹಕ್ಕೆ ಪ್ರದಕ್ಷಿಣೆ ಹಾಕುತ್ತಿದೆ. ಈ ಸಂದರ್ಭ ವಿಡಿಯೊ ಜಾಲತಾಣದಲ್ಲಿ ವೈರಲ್ ಆಗಿದೆ. ಮೈ ನಡುಗಿಸುವ ಚಳಿಯಲ್ಲೂ ಈ ಪುಟ್ಟ ಶ್ವಾನ ಹನುಮ ದೇವರ ವಿಗ್ರಹಕ್ಕೆ ಪ್ರದಕ್ಷಿಣೆ ಹಾಕುತ್ತಲೇ ಇದೆ. ವಿಗ್ರಹಕ್ಕೆ ಪ್ರದಕ್ಷಿಣೆ ಹಾಕುತ್ತಾ ವಿಶಿಷ್ಟ ರೀತಿಯಲ್ಲಿ ಭಕ್ತಿ ಪ್ರದರ್ಶಿಸುತ್ತಿರುವ ಸಾಮಾನ್ಯ ಶ್ವಾನವನ್ನು ನೋಡಲು ಅಕ್ಕಪಕ್ಕದ ಪ್ರದೇಶಗಳು ಜನರ ದೊಡ್ಡ ಗುಂಪೇ ಬಂದು ನೆರೆದಿದೆ.

ಶಬರಿಮಲೆ ಚಿನ್ನ ಕಳವು: ಶಂಕರ್ ದಾಸ್ ಬಂಧನ

ತಿರುವನಂತಪುರಂ: ಶಬರಿಮಲೆ ದೇಗುಲದ ದ್ವಾರಗಳಿಗೆ ಅಳವಡಿಸಿದ್ದ ಚಿನ್ನದ ಹಾಳೆಗಳನ್ನು ನವೀಕರಣಕ್ಕೆ ನೀಡಿದ್ದಾಗ ಭಾರೀ ಪ್ರಮಾಣದಲ್ಲಿ ಚಿನ್ನವನ್ನು ಲಪಟಾಯಿಸಿದ ಪ್ರಕರಣ ಸಂಬಂದ ತನಿಖೆ ನಡೆಸುತ್ತಿರುವ ಕೇರಳದ ‘ವಿಶೇಷ ತನಿಖಾ ತಂಡ’(ಎಸ್‌ಐಟಿ) ಬುಧವಾರ ದೇವಸ್ವಂ ಮಂಡಳಿಯ ಮಾಜಿ ಸದಸ್ಯ ಕೆ.ಪಿ.ಶಂಕರ ದಾಸ್ ಎಂಬಾತನನ್ನು ಬಂಧಿಸಿದೆ. ದೇವಸ್ಥಾನದ ಗರ್ಭಗುಡಿಯ ಬಾಗಿಲು ದಾರಂದ ಮತ್ತು ದ್ವಾರಪಾಲಕ ವಿಗ್ರಹಗಳಿಗೆ ಅಳವಡಿಸಿದ್ದ ಚಿನ್ನದ ಹಾಳೆಗಳಿಂದ ಚಿನ್ನವನ್ನು ಲಪಟಾಯಿಸಿ, ಬದಲಾಗಿ ಚಿನ್ನದ ಹಾಳೆಗಳಿಗೆ ಬೇರೆ ಲೋಹವನ್ನು ಸೇರಿಸಲಾಗಿದೆ ಎಂಬ ಆರೋಪವಿದೆ. ಈ ಚಿನ್ನ ಕಳವು ಸಂಬಂಧಿಸಿ 2 ಪ್ರಕರಣಗಳು ದಾಖಲಾಗಿದ್ದು, ತಿರುವಾಂಕೂರು ದೇವಸ್ವಂ ಮಂಡಳಿ(ಟಿಡಿಬಿ) ಮಾಜಿ ಸದಸ್ಯ ಶಂಕರದಾಸ್‌ನನ್ನು ತಿರುವನಂತಪುರಂನ ಖಾಸಗಿ ಆಸ್ಪತ್ರೆಯಿಂದ ಬಂಧಿಸಲಾಗಿದೆ ಎಂದು ಮೂಲಗಳು ತಿಳಿಸಿವೆ. ಪ್ರಕರಣದಲ್ಲಿ ದಾಸ್ ಎಂಬಾತನನ್ನು ಈವರೆಗೂ ಏಕೆ ಬಂಧಿಸಿಲ್ಲ ಎಂದು ಕೇರಳ ಹೈಕೋರ್ಟ್ ಪ್ರಶ್ನಿಸಿದ ಬಳಿಕ ಬಂಧಿಸಲಾಗಿದೆ. ಇದರೊಂದಿಗೆ ಎರಡೂ ಪ್ರಕರಣಗಳಲ್ಲಿ ಬಂಧಿತರ ಸಂಖ್ಯೆ 12ಕ್ಕೇರಿದೆ. ಪ್ರಕರಣದಲ್ಲಿ ಇನ್ನೂ ಕೆಲವರನ್ನು ಬಂಧಿಸುವ ಸಾಧ್ಯತೆಯಿದೆ ಎಂದು ಮೂಲಗಳು ಹೇಳಿವೆ. ಪ್ರಮುಖ ಆರೋಪಿ ಉನ್ನಿಕೃಷ್ಣನ್ ಪಾಟಿ ಮತ್ತು ತಿರುವಾಂಕೂರು ದೇವಸ್ವಂ ಮಂಡಳಿ ಮಾಜಿ ಅಧ್ಯಕ್ಷ ಎ.ಪದ್ಮಕುಮಾರ್ ಹೇಳಿಕೆ ಆಧರಿಸಿ ಕಂದರಾರು ಅವರನ್ನು ಬಂಧಿಸಲಾಗಿತ್ತು.

{ **ನರೇಂದ್ರ ಮೋದಿ** } ಪ್ರಧಾನಿ

‘ಕಾಶಿ-ತಮಿಳು ಸಂಗಮಂ’ ಸಾಂಸ್ಕೃತಿಕ ಪ್ರಜ್ಞೆ ಬಲಪಡಿಸಿದೆ. ಇದು ಭಾರತದ ಏಕತೆ ಉತ್ಸವ. ನಮ್ಮ ಸಂಸ್ಕೃತಿಗಳ ನಡುವಿನ ಬಾಂಧವ್ಯ ಮತ್ತಷ್ಟು ಬಲಪಡಿಸಿದೆ. ಕಾಶಿ ತಮಿಳು ಸಂಗಮಂ ಕಾರ್ಯಕ್ರಮ ಆಯೋಜಿಸಲು ಕಾಶಿ ಅತ್ಯಂತ ಸೂಕ್ತ ಸ್ಥಳ. ಸಾವಿರಾರು ವರ್ಷಗಳಿಂದ ವಿಶ್ವದ ವಿವಿಧೆಡೆಯ ಜನರು ಜ್ಞಾನ-ಜೀವನದ ಅರ್ಥ-ಮೋಕ್ಷ ಅರಸುತ್ತಾ ಕಾಶಿಗೆ ಬರುತ್ತಿದ್ದಾರೆ.



ಗಾಳಿ ಬೀಸೊ ದಿಕ್ಕಿನಲ್ಲೇ ಚಲಿಸಿ ಒಮಾನ್ ತಲುಪಿದ ‘ಕೌಂಡಿನ್ಯ’ | 5ನೇ ಶತಮಾನ ಮಾದರಿ ಹಾಯಿ ನೌಕೆಯ 17 ದಿನ ಪಯಣ | 1,200 ಕಿಮೀ ಸಮುದ್ರಯಾನ ಐತಿಹಾಸಿಕ: ಪ್ರಧಾನಿ ಮೋದಿ ಶ್ಲಾಘನೆ

ಕೌಂಡಿನ್ಯ ಸಾಧನೆ ಕಡಿಮೆ ಏನಿಲ್ಲಾ

ಹಾಯಿ ನೌಕೆಯ ಪರದೆಗಳ ಮೇಲೆ ಗಂಡಬೇರುಂಡ, ಸೂರ್ಯ ಲಾಂಛನ.

ಜ.14ರಂದು ಒಮಾನ್‌ತಲುಪಿದ ಕೌಂಡಿನ್ಯ ನೌಕೆ ಮಸ್ಕತ್ ಬಂದರಿನಲ್ಲಿ ಲಂಗರು, ಅದ್ದೂರಿ ಸ್ವಾಗತ.

ಅಜಂತಾ ಗುಹಾಂತರ ದೇವಾಲಯದಲ್ಲಿ ಗೋಡೆ ಚಿತ್ರದಲ್ಲಿ ಹಾಯಿದೋಣಿ ಚಿತ್ರ ರಚನೆ.

ಒಮಾನ್/ದೆಹಲಿ: 21 ಶತಮಾನಗಳ ಹಿಂದೆ ಬಳಸುತ್ತಿದ್ದ ‘ಹಾಯಿ ದೋಣಿ’ ಮಾದರಿಯಲ್ಲೇ ಭಾರತೀಯ ನೌಕಾಪಡೆಯ ‘ಐಎನ್‌ಎಸ್‌ವಿ’ ತಯಾರಿಸಿದ ಸಾಂಪ್ರದಾಯಿಕ ನೌಕೆ ‘ಕೌಂಡಿನ್ಯ’ ಗಾಳಿಯ ಬಲವನ್ನೇ ಬಳಸಿಕೊಂಡು 650 ನಾಟಿಕಲ್ ಮೈಲು(1200 ಕಿಮೀ) ದೂರ ಸಾಗಿ ಒಮಾನ್ ದೇಶದ ಬಂದರು ನಗರ ಮಸ್ಕತ್‌ಗೆ ತಲುಪಿದೆ.

ಗುಜರಾತ್‌ನ ಪೋರ್‌ಬಂದರ್‌ನಿಂದ 2025ರ ಡಿ.29ರಂದು ಯಾನ ಆರಂಭಿಸಿದ ‘ಐಎನ್‌ಎಸ್‌ವಿ ಕೌಂಡಿನ್ಯ’ 2026ರ ಜ.14ರಂದು(ಬುಧವಾರ) ಮಸ್ಕತ್ ನಗರದ ‘ಪೋರ್ಟ್ ಸುಲ್ತಾನ್ ಕಾಬೂಸ್’ಗೆ ತಲುಪಿದೆ.

ಈ 17 ದಿನಗಳಲ್ಲಿ ಯಾವುದೇ ಎಂಜಿನ್ ಸಹಾಯವಿಲ್ಲದೇ ಬೀಸುವ ಗಾಳಿಯ ಶಕ್ತಿಯನ್ನೇ ಬಳಸಿಕೊಂಡು 1400 ನಾಟಿಕಲ್ ಮೈಲು ದೂರ ಸಮುದ್ರಯಾನ ನಡೆಸಿ ಯಶಸ್ವಿಯಾಗಿ ಗುರಿಯನ್ನು ಮುಟ್ಟಿದೆ.

ಕ್ಯಾಪ್ಟನ್ ವಿಕಾಸ್ ಶೆರಾನ್ ನೇತೃತ್ವದ 16 ನಾವಿಕರ ತಂಡದ ಈ ಸಾಧನೆಗೆ ಪ್ರಧಾನಿ ನರೇಂದ್ರ ಮೋದಿ ಸೇರಿದಂತೆ ಭಾರತೀಯ ನೌಕಾಪಡೆಯ ಹಿರಿಯ ಅಧಿಕಾರಿಗಳಿಂದಲೂ ಪ್ರಶಂಸೆ ವ್ಯಕ್ತವಾಗಿದೆ.

ಸಂಜೀವ್ ಸನ್ಯಾಲ್ ಪ್ರಸ್ತಾವನೆ: ಪ್ರಧಾನ ಮಂತ್ರಿಗಳ ಆರ್ಥಿಕ ಸಲಹಾ ಮಂಡಳಿಯ ಸದಸ್ಯ ಸಂಜೀವ್ ಸನ್ಯಾಲ್ ಅವರು 5ನೇ ಶತಮಾನದ ಹಾಯಿದೋಣಿಯನ್ನು ಮತ್ತೊಮ್ಮೆ ರೂಪಿಸಿ ಸಮುದ್ರಯಾನ ಕೈಗೊಳ್ಳುವ ಬಗ್ಗೆ ಪ್ರಸ್ತಾಪಿದ್ದಾರೆ. ಆ ಬಳಿಕ ಪ್ರಧಾನಿ ಮೋದಿ ಅವರು ಅನುಮೋದನೆ ನೀಡಿದ್ದಾರೆ. ನಂತರ 2023ರಲ್ಲಿ ಗೋವಾದಲ್ಲಿ ‘ಕೌಂಡಿನ್ಯ ನೌಕೆ’ಯ ನಿರ್ಮಾಣ ಆರಂಭಿಸಿ 2025ರ ಫೆಬ್ರವರಿಗೆ ಪೂರ್ಣಗೊಳಿಸಲಾಗಿದೆ.

ಮರದ ಹಡಗುಗಳ ನಿರ್ಮಾಣದಲ್ಲಿ ಹೆಸರು ಮಾಡಿದ್ದ ಕೇರಳದ ಕುಶಲಕರ್ಮಿಗಳ ತಂಡವನ್ನು ಗೋವಾಗೆ ಕರೆಸಿಕೊಂಡು ಕೆತ್ತನೆ ಕೆಲಸ ಮಾಡಿಸಲಾಗಿದೆ. ಹಲಗೆಗಳನ್ನು ಬೆಸೆಯಲು ‘ಟಂಕೈ’ ವಿಧಾನದ ಹೊಲಿಗೆ ಮಾಡಲಾಗಿದೆ. ನೌಕೆಯ ನಿರ್ಮಾಣದಲ್ಲಿ ಮತ್ತು ಬೃಹತ್ ಪರದೆಗಳನ್ನು ಕಂಬಗಳಿಗೆ ಹಾಗೂ ನೌಕೆಯ ಹಿಂದೆ-ಮುಂದಿನ ಭಾಗಕ್ಕೆ ಬಿಗಿಯಲು ಸಾಂಪ್ರದಾಯಿಕ ಶೈಲಿಯ ತೆಂಗಿನ ನಾರಿನ ಬಲವಾದ ಹಗ್ಗಗಳನ್ನು ಬಳಸಿಕೊಳ್ಳಲಾಗಿದೆ.

ನೌಕೆಯ ನಿರ್ಮಾಣಕ್ಕೆ ಕೇಂದ್ರದ ಸಾಂಸ್ಕೃತಿಕ ಸಚಿವಾಲಯ ಅನುದಾನ ನೀಡಿದೆ. ಇದೇ ನೌಕೆಯ ಒಮಾನ್ ಯಾನದಲ್ಲಿ ಸಂಜೀವ್ ಸನ್ಯಾಲ್ ಅವರೂ ಭಾಗಿಯಾಗಿದ್ದರು, ನಿತ್ಯವೂ ನೌಕಾಯಾನದ ಮಾಹಿತಿಯನ್ನು ಹಂಚಿಕೊಳ್ಳುತ್ತಿದ್ದರು ಎಂಬುದು ಉಲ್ಲೇಖಾರ್ಹ.

5ನೇ ಶತಮಾನ ಮಾದರಿ ಕೌಂಡಿನ್ಯ ನೌಕೆ ವಿನ್ಯಾಸ

ಅಜಂತಾದಲ್ಲಿನ ಗುಹಾಂತರ ದೇಗುಲದ ಗೋಡೆಗಳ ಮೇಲೆ ನೌಕಾಯಾನದ ಚಿತ್ರವಿದೆ. 5ನೇ ಶತಮಾನದಲ್ಲಿ ಭಾರತದ ಅರಸರು ಅರಬ್ ದೇಶದ ಜತೆ ವ್ಯಾಪಾರಕ್ಕಾಗಿ ಹಾಯಿ ದೋಣಿಗಳನ್ನು ಸಿದ್ಧಪಡಿಸಿಕೊಂಡು ಸಮುದ್ರಯಾನ ಕೈಗೊಳ್ಳುತ್ತಿದ್ದ ಬಗೆಯನ್ನು ಈ ಚಿತ್ರದಲ್ಲಿ ನಿರೂಪಿಸಲಾಗಿದೆ. ಅದೇ ಮಾದರಿಯಲ್ಲಿ ‘ಐಎನ್‌ಎಸ್‌ವಿ ಕೌಂಡಿನ್ಯ’ ನೌಕೆಯನ್ನೂ ವಿನ್ಯಾಸಗೊಳಿಸಿ, ಯಾವುದೇ ಯಂತ್ರವನ್ನೂ ಅಳವಡಿಸದೇ, ಕೇವಲ ಬೃಹತ್ ಪರದೆಗಳನ್ನು ಎತ್ತರದ ಕಂಬಕ್ಕೆ ಜೋಡಿಸಿಕೊಂಡು ಗಾಳಿ ಬೀಸುವ ದಿಕ್ಕಿಗೆ ತಕ್ಕಂತೆ ಪರದೆಯನ್ನು ತಿರುಗಿಸುತ್ತಾ, ಗಾಳಿಯ ನೂಕು ಬಲವನ್ನೇ ಇಂಧನವಾಗಿಸಿಕೊಂಡು ನೌಕೆಯನ್ನು ಸರಾಗವಾಗಿ ಮುನ್ನಡೆಸಲಾಗಿದೆ. 1ನೇ ಶತಮಾನದಲ್ಲಿಯೇ ನೌಕಾಯಾನ ಕೈಗೊಂಡು ಹಿಂದೂ ಮಹಾಸಾಗರವನ್ನು ದಾಟಿದ ಕೌಂಡಿನ್ಯ ಎಂಬ ಭಾರತೀಯ ವ್ಯಕ್ತಿ, ಕಾಂಬೋಡಿಯಾದ ರಾಣಿಯನ್ನು ಮದುವೆ ಯಾದರು ಎಂಬ ಇತಿಹಾಸವಿದೆ. ಹಾಗಾಗಿಯೇ ಈ ಹಾಯಿ ನೌಕೆಗೂ ‘ಕೌಂಡಿನ್ಯ’ ಹೆಸರನ್ನೇ ಇಡಲಾಗಿದೆ.

ಕೌಂಡಿನ್ಯ ನೌಕೆ ಕ್ಯಾಪ್ಟನ್ ವಿಕಾಸ್ ಶೆರಾನ್ ಜತೆ ಸಂಜೀವ್ ಸನ್ಯಾಲ್, ಹೇಮಂತ್ ಕುಮಾರ್

ಗಂಡಭೇರುಂಡ ಲಾಂಛನ

ಸಮುದ್ರದ ಅಲೆಗಳ ಮೇಲ್ಭಾಗದಲ್ಲಿ ಬಲವಾಗಿ ಬೀಸುವ ಗಾಳಿಯನ್ನೇ ಶಕ್ತಿಯಾಗಿ ಬಳಸಿಕೊಂಡು ಐಎನ್‌ಎಸ್‌ವಿ ಕೌಂಡಿನ್ಯ ನೌಕೆಯು ಮುಂದೆ ಸಾಗುವಂತೆ ಮಾಡುತ್ತಿದ್ದ ದೊಡ್ಡ ಹಾಯಿ(ಪರದೆ)ಗಳಲ್ಲಿ ಪ್ರಧಾನವಾಗಿ ಎದ್ದು ಕಾಣುವುದು ‘ಗಂಡಬೇರುಂಡ’ ಲಾಂಛನ. ಎರಡು ತಲೆ-ಒಂದೇ ದೇಹದ ಪೌರಾಣಿಕ ಪಕ್ಷಿ. ವಿಷ್ಣುವಿನ ಸಂಕೇತವಾಗಿದೆ. ಮೈಸೂರು ಅರಸರ ಕಾಲದಲ್ಲೂ ಇದೇ ಲಾಂಛನ. ಸದ್ಯ ಕರ್ನಾಟಕ ಸರಕಾರದಲ್ಲಿಯೂ ಇದೇ ಲಾಂಛನದ ಬಳಕೆಯಾಗುತ್ತಿದೆ. ಕೌಂಡಿನ್ಯ ನೌಕೆಯ ಪರದೆಯಲ್ಲಿ ಕಾಣಬರುವ ಮತ್ತೊಂದು ಲಾಂಛನ ‘ಸೂರ್ಯ’ನದ್ದಾಗಿದೆ.

ನೋಟಾ ಅನಪೇಕ್ಷಿತ ಅಭ್ಯರ್ಥಿಗೆ ಉತ್ತೇಜನ

ನಾಗಪುರದಲ್ಲಿ ಮೊದಲಿಗರಾಗಿ ಭಾಗವತ್ ಮತದಾನ

ನಾಗಪುರ: ಮಹಾರಾಷ್ಟ್ರ ರಾಜ್ಯದ 29 ಪುರಸಭೆಗಳ ಚುನಾವಣೆಯಲ್ಲಿ ಗುರುವಾರ ಒಂದೇ ಹಂತದಲ್ಲಿ ಮತದಾನ ನಡೆಯುತ್ತಿದೆ. ರಾಜ್ಯದ ನಾಗಪುರ ಮಹಾನಗರ ಪಾಲಿಕೆ ಚುನಾವಣೆಯಲ್ಲಿ ಮಹಲ್ ಪ್ರದೇಶದ ಮತಗಟ್ಟೆಯಲ್ಲಿ ‘ರಾಷ್ಟ್ರೀಯ ಸ್ವಯಂಸೇವಕ ಸಂಘ’(ಆರ್‌ಎಸ್‌ಎಸ್) ಮುಖ್ಯಸ್ಥ ಮೋಹನ್ ಭಾಗವತ್ ಮೊದಲಿಗೇ ಮತದಾನ ಮಾಡಿದರು. ಗುರುವಾರ ಬೆಳಗ್ಗೆ 7.30ರ ವೇಳೆಗೆಲ್ಲಾ ಮತಗಟ್ಟೆಗೆ ಆಗಮಿಸಿ ಮತ ಚಲಾಯಿಸಿದರು.

ಚುನಾವಣೆಗಳು ಪ್ರಜಾಪ್ರಭುತ್ವದ ಕಡ್ಡಾಯ ಭಾಗ. ಮತದಾನ ಎಲ್ಲಾ ನಾಗರಿಕರ ಜವಾಬ್ದಾರಿ. ಸಾರ್ವಜನಿಕ ಹಿತಾಸಕ್ತಿ ಗಮನದಲ್ಲಿಟ್ಟುಕೊಂಡು ಪ್ರತಿಯೊಬ್ಬರೂ ಚುನಾವಣೆಯಲ್ಲಿ ಸೂಕ್ತ ಅಭ್ಯರ್ಥಿಗೆ ಮತ ಚಲಾಯಿಸ ಬೇಕು ಎಂದು ಭಾಗವತ್ ಹೇಳಿದರು.

‘ನೋಟಾ’ ಆಯ್ಕೆಯನ್ನು ವಿರೋಧಿಸಿದ ಅವರು, ಮತದಾನ ವೇಳೆ ‘ನೋಟಾ’ ಆಯ್ಕೆ ಮಾಡುವುದೆಂದರೆ ಪರೋಕ್ಷವಾಗಿ ಅನಪೇಕ್ಷಿತ ಅಭ್ಯರ್ಥಿಯನ್ನು ಉತ್ತೇಜಿಸಿದಂತೆ ಆಗುತ್ತದೆ ಎಂದರು.

‘ನೋಟಾ’ ಎಂಬುದು ಚುನಾವಣಾ ಕಣದಲ್ಲಿರುವ ಅಭ್ಯರ್ಥಿಗಳ ಕುರಿತು ಮತದಾರ ತನ್ನ ಅಸಮಾಧಾನ ವ್ಯಕ್ತಪಡಿಸಲು ನೀಡಲಾದ ಒಂದು ಆಯ್ಕೆ. ನೋಟಾ ಆಯ್ಕೆಗೆ ಬದಲಾಗಿ ಇರುವವರಲ್ಲೇ ಅರ್ಹ ಅಭ್ಯರ್ಥಿಗೆ ಮತ ಚಲಾಯಿಸುವುದು ಉತ್ತಮ ಎಂದು ಅಭಿಪ್ರಾಯಪಟ್ಟರು. ಆರ್‌ಎಸ್‌ಎಸ್‌ನ ಮಾಜಿ ಪ್ರಧಾನ ಕಾರ್ಯದರ್ಶಿ, ಕೇಂದ್ರ ಸಮಿತಿ ಸದಸ್ಯ ಭಯ್ಯಾಜಿ ಜೋಶಿ ಕೂಡಾ ಮೊದಲಿಗಾಗಿ ಮತದಾನ ಮಾಡಿದರು. ಕಳೆದ ಬಾರಿ 151 ಸದಸ್ಯ ಬಲದ ನಾಗಪುರ ಮುನಿಸಿಪಲ್ ಕೌನ್ಸಿಲ್(ಎನ್‌ಎಂಸಿ) ಚುನಾವಣೆಯಲ್ಲಿ ಬಿಜೆಪಿ 108 ಸ್ಥಾನ ಗೆದ್ದರೆ, ಕಾಂಗ್ರೆಸ್ 28, ಬಿಎಸ್‌ಪಿ 10, ಶಿವಸೇನೆ(ಅವಿಭಜಿತ) 2 ಮತ್ತು ಎನ್‌ಸಿಪಿ (ಅವಿಭಜಿತ) 1 ಸ್ಥಾನ ಗೆದ್ದಿದ್ದವು.

ಶಾಯಿ ಅಳಿಸಿಹೋಗಿದೆ: ಮತದಾರರ ಆರೋಪ

ಮಹಾರಾಷ್ಟ್ರ ಸ್ಥಳೀಯ ಸಂಸ್ಥೆ ಚುನಾವಣೆಯಲ್ಲಿ ಗುರುವಾರ ಮತದಾರರ ಬೆರಳಿಗೆ ಹಾಕಿದ್ದ ‘ಅಳಿಸಲಾಗದ ಶಾಯಿ’ ಕೆಲಕಾಲ ಬಳಿಕ ಅಳಿಸಿಹೋಗುತ್ತಿದೆ.

‘ಅಳಿಸಲಾಗದ ಶಾಯಿ’ ಬದಲಿಗೆ ಮಾರ್ಕರ್ ಪೆನ್ ಬಳಸಿ ಗೆರೆ ಹಾಕಲಾಗುತ್ತಿದೆ. ಇದು ಚುನಾವಣಾ ಅಕ್ರಮಕ್ಕೆ ಕಾರಣವಾಗಬಹುದು ಎಂದು ಪ್ರತಿಪಕ್ಷಗಳು ಆರೋಪ ಮಾಡಿವೆ. ಸ್ಥಳೀಯ ಸಂಸ್ಥೆ ಚುನಾವಣೆ ಗೆಲ್ಲಲು ಸರಕಾರ ಈ ದಾರಿ ಹಿಡಿದಿದೆ. ಇದು ಆರೋಗ್ಯಕರ ಪ್ರಜಾಪ್ರಭುತ್ವದ ಲಕ್ಷಣವಲ್ಲ ಎಂದು ಮಹಾರಾಷ್ಟ್ರ ನವನಿರ್ಮಾಣ ಸೇನೆ(ಎಂಎನ್‌ಎಸ್) ಮುಖ್ಯಸ್ಥ ರಾಜ್ ಠಾಕ್ರೆ ಕಿಡಿಕಾರಿದ್ದಾರೆ. ಕೆಲ ಮತದಾರರು ತಮ್ಮ ಬೆರಳಿಗೆ ಹಾಕಿದ ಶಾಯಿ ಅಳಿಸಿ ಹಾಕಬಹುದಾಗಿದೆ ಎಂದಿದ್ದಾರೆ. ಈ ಕುರಿತ ದೂರುಗಳನ್ನು ತನಿಖೆ ಮಾಡುತ್ತೇವೆ. ಉಗುರಿಗಂಟಿದ ಶಾಯಿ ಅಳಿಸಿದರೂ ಚರ್ಮದ ಮೇಲಿನ ಶಾಯಿ ಅಳಿಸಿಹೋಗದು ಎಂದು ಮುಂಬೈ ಮಹಾನಗರ ಪಾಲಿಕೆ ಆಯುಕ್ತ ಭೂಷಣ್ ಗಗ್ರಾನಿ ಸ್ಪಷ್ಟಪಡಿಸಿದ್ದಾರೆ.

ತವರು ರಾಜ್ಯ ಗುಜರಾತ್‌ನ ನರನ್‌ಪುರ ಪ್ರದೇಶದಲ್ಲಿನ ಕುಟುಂಬ ಸದಸ್ಯರು ಮತ್ತು ಬಂಧುಮಿತ್ರರ ಜತೆಗೂಡಿ ಕೇಂದ್ರ ಗೃಹ ಸಚಿವ ಅಮಿತ್ ಶಾ ಗುರುವಾರ ಮಕರ ಸಂಕ್ರಾಂತಿ ಹಬ್ಬದ ಸಂದರ್ಭ ಗಾಳಿಪಟ ಹಾರಿಸಿ ಸಂಭ್ರಮಿಸಿದರು. ಬೆಳಗ್ಗೆ ಜಮಾಲ್‌ಪುರ ಪ್ರದೇಶದ ಪ್ರಸಿದ್ಧ ಜಗನ್ನಾಥ ದೇವಸ್ಥಾನದಲ್ಲಿ ಪೂಜೆ ಸಲ್ಲಿಸಿದರು.

ಪ್ರಧಾನಿ ದೆಹಲಿ ನಿವಾಸ ಗೋವುಗಳಿಗೆ ಮೇವು ನೀಡಿ ಮೋದಿ ಸಂಕ್ರಾಂತಿ ಸಡಗರ

ದೆಹಲಿ: ದೇಶದಾದ್ಯಂತ ಮಕರ ಸಂಕ್ರಾಂತಿ ಹಬ್ಬವನ್ನು ಸಂಭ್ರಮ-ಸಡಗರದಿಂದ ಆಚರಿಸಲಾಗುತ್ತಿದ್ದು, ಪ್ರಧಾನಿ ನರೇಂದ್ರ ಮೋದಿ ಅವರೂ ದೆಹಲಿಯಲ್ಲಿನ ನಿವಾಸದಲ್ಲಿ ಸಲಹುತ್ತಿರುವ ಪುಟಾಣಿ ಗೋವುಗಳಿಗೆ ಮೇವು ನೀಡಿದರು. ಆ ಮೂಲಕ ಸುಗ್ಗಿಯ ಹಬ್ಬ ಮಕರ ಸಂಕ್ರಾಂತಿಯನ್ನು ಅರ್ಥಪೂರ್ಣವಾಗಿ ಆಚರಿಸಿದರು.

ಹಸಿರು ಮೇವುಗಳನ್ನು ಪುಟಾಣಿ ಗೋವುಗಳಿಗೆ ಮೇವು ನೀಡಿ, ಗೋವುಗಳ ಮೈಸವರಿ ಪ್ರೀತಿ ತೋರಿದ ಮೋದಿ, ಗೋವುಗಳ ಗುಂಪಿನ ಜತೆಗೇ ಕೆಲಕಾಲ ಸಂಭ್ರಮಿಸಿದರು. ಈ ಸಂದರ್ಭದ ಫೋಟೊ ಮತ್ತು ವಿಡಿಯೊ ಜಾಲತಾಣದಲ್ಲಿ ವೈರಲ್ ಆಗಿವೆ.

ಪ್ರಕೃತಿಯೊಂದಿಗೆ ಸಾಮರಸ್ಯ, ಪ್ರಕೃತಿಗೆ ಕೃತಜ್ಞತೆ ಸಲ್ಲಿಸುವ ಆಚರಣೆಯೇ ಮಕರ ಸಂಕ್ರಾಂತಿ ಹಬ್ಬದ ಆಚರಣೆಯ ಉದ್ದೇಶ. ಪ್ರಕೃತಿಯ ಜತೆಗಿನ ಸಮತೋಲನವನ್ನು ಮಾನವರು ಕಾಪಾಡಿಕೊಳ್ಳಬೇಕಾದ ಮಹತ್ವದ ಸಂದೇಶವನ್ನು ಈ ಹಬ್ಬ ನೀಡುತ್ತದೆ ಎಂದು ಪ್ರಧಾನಿ ಮೋದಿ ಹೇಳಿದ್ದಾರೆ.

ದರ್ಭಾಂಗದ ಮಹಾರಾಣಿ ಕಾಮಸುಂದರಿ ದೇವಿ ನಿಧನ

ದರ್ಭಾಂಗ: ಬಿಹಾರ ರಾಜ್ಯದ ದರ್ಭಾಂಗ ರಾಜಮನೆತನದ ಕೊನೆಯ ಮಹಾರಾಣಿ ಕಾಮಸುಂದರಿ ದೇವಿ ತಮ್ಮ ಐತಿಹಾಸಿಕ ನಿವಾಸ ‘ಕಲ್ಯಾಣಿ’ಯಲ್ಲಿ ಜ.12ರಂದು ಅಸ್ತಂಗತರಾದರು. ಇದರೊಂದಿಗೆ ಮಿಥಿಲಾಂಚಲ ಭಾಗದ ಪ್ರಸಿದ್ಧ ರಾಜಮನೆತನದ ಯುಗಾಂತ್ಯವಾಗಿದೆ.

ದರ್ಭಾಂಗ ರಾಜಮನೆತನ ದೇಶಭಕ್ತಿಗೆ ಹೆಸರಾಗಿತ್ತು. 1962ರಲ್ಲಿ ಭಾರತದ ಮೇಲೆ ಚೀನಾ ಯುದ್ಧಕ್ಕೆ ಬಂದಾಗ ಭಾರತ ಸರಕಾರ ಯುದ್ಧದ ವೆಚ್ಚ ಸರಿದೂಗಿಸಲು ನೆರವಾಗುವಂತೆ ದೇಶವಾಸಿಗಳಲ್ಲಿ ಮನವಿ ಮಾಡಿತ್ತು. ಆಗ ಮಹಾರಾಣಿ ಕಾಮಸುಂದರ ದೇವಿ ಅವರು ತಮ್ಮ ಬಳಿ ಇದ್ದ 600 ಕಿಲೋ ಬಂಗಾರವನ್ನೆಲ್ಲಾ ದಾನ ಮಾಡಿದ್ದರು. ದರ್ಭಾಂಗದ ಇಂದ್ರಭವನ ಮೈದಾನದಲ್ಲಿ ನಡೆದ ಈ ಬೃಹತ್ ದಾನ ಕಾರ್ಯಕ್ರಮದಲ್ಲಿ ದೇಶದ ರಕ್ಷಣಾ ನಿಧಿಗೆ ದರ್ಭಾಂ ರಾಜಮನೆತನ 15 ಮಣ ಚಿನ್ನದ ಜತೆಗೆ ತನ್ನಲ್ಲಿದ್ದ 3 ವಿಮಾನಗಳನ್ನೂ ನತ್ತು 90 ಎಕರೆ ಭೂಮಿಯನ್ನೂ ದೇಣಿಗೆಯಾಗಿ ಭಾರತ ಸರಕಾರಕ್ಕೆ ಅರ್ಪಿಸಿತು. ಆ 90 ಎಕರೆ ಜಾಗದಲ್ಲೇ ಇಂದು ದರ್ಭಾಂಗ ವಿಮಾನ ನಿಲ್ದಾಣ ತಲೆಎತ್ತಿದೆ. ಇದಿಷ್ಟೇ ಅಲ್ಲದೇ, ದರ್ಭಾಂಗ ರಾಜಮನೆತನ ವಿಶ್ವವಿದ್ಯಾಲಯಗಳನ್ನು ಆರಂಭಿಸಿ ಶೈಕ್ಷಣಿಕ ಪ್ರಗತಿಗೆ ಮುನ್ನುಡಿ ಬರೆದಿದೆ. ಸಕ್ಕರೆ ಮತ್ತು ಕಾಗದದ ಕಾರ್ಖಾನೆಗಳನ್ನೂ ಸ್ಥಾಪಿಸಿ ಸಾವಿರಾರು ಜನರಿಗೆ ಉದ್ಯೋಗಾವಕಾಶ ಕಲ್ಪಿಸಿದೆ. 1932ರ ಅ.22ರಂದು ಒಡಿಶಾ ರಾಜ್ಯದ ಮಧುಬನಿ ಜಿಲ್ಲೆಯಲ್ಲಿ ಜನಿಸಿದ ಕಾಮಸುಂದರ ದೇವಿ ಅವರಿಗೆ 8ನೇ ವಯಸ್ಸಿನಲ್ಲೇ ವಿವಾಹ ನೆರವೇರಿಸಲಾಗಿದ್ದು, ದರ್ಭಾಂಗದ ಮಹಾರಾಜ ಕಾಮೇಶ್ವರ್ ಸಿಂಗ್ ಅವರ 3ನೇ ಪತ್ನಿಯಾದರು. 1962ರಲ್ಲಿ ಮಹಾರಾಜರ ನಿಧನಾನಂತರ ಒಂಟಿಯಾಗಿಯೇ ಇದ್ದರು.

5 ವರ್ಷದ ಮಗು ಮೇಲೆ 55ರ ವ್ಯಕ್ತಿಯ ಅತ್ಯಾಚಾರ

ರಾಯಪುರ: ಛತ್ತೀಸ್‌ಗಢದ ರಾಯಪುರದಲ್ಲಿನ ಸಿವಿಲ್ ಲೈನ್ಸ್ ಪೊಲೀಸ್ ಠಾಣೆ ವ್ಯಾಪ್ತಿಯ ನಿವಾಸಿಯಾದ ಅನ್ಸಾರಿ ಎಂಬ 55 ವರ್ಷದ ಕಾಮುಕ ನೆರೆಮನೆಯ 5 ವರ್ಷದ ಹೆಣ್ಣು ಮಗುವಿನ ಮೇಲೆ 5 ದಿನಗಳ ಕಾಲ ಹಲವು ಬಾರಿ ಲೈಂಗಿಕ ದೌರ್ಜನ್ಯ ನಡೆಸಿದ್ದಾನೆ. ಯಾರಿಗಾದರೂ ಹೇಳಿದರೆ ಕೊಲ್ಲುವುದಾಗಿ ಬೆದರಿಕೆ ಹಾಕಿದ್ದರಿಂದ ಮಗು ಭಯದಿಂದ ಮೌನತಾಳಿದೆ.

ಹತ್ತಿರದ ಅಂಗಡಿಯಿಂದ ಚಾಕೊಲೆಟ್ ಮತ್ತು ಆಟಿಕೆಗಳನ್ನು ಖರೀದಿಸಿ ಕೊಡುವುದಾಗಿ ಆಮಿಷವೊಡ್ಡಿದ ಆರೋಪಿ ಅನ್ಸಾರಿ ಜ.7ರಿಂದ 11ರವರೆಗೆ ಮಗುವನ್ನು ತನ್ನ ಮನೆಗೆ ಕರೆದೊಯ್ದು ಪೈಶಾಚಿಕ ಕೃತ್ಯ ಎಸಗಿದ್ದಾನೆ. ಕೊಲ್ಲುವ ಬೆದರಿಕೆಯಿಂದಾಗಿ ಮಗು ಭಯಗೊಂಡು ಐದೂ ದಿನ ಮೌನ ತಾಳಿದೆ. ಜ.12ರಂದು ಮಗುವಿಗೆ ಚಿಕ್ಕಮ್ಮ ಸ್ನಾನ ಮಾಡಿಸುವಾಗ ತನ್ನ ಖಾಸಗಿ ಭಾಗಗಳಲ್ಲಿ ತೀವ್ರ ನೋವಿದೆ ಎಂದು ಮಗು ಹೇಳಿಕೊಂಡಿದೆ. ಮಗುವಿನ ದೇಹಸ್ಥಿತಿ ಮತ್ತು ಅದು ಅನುಭವಿಸುತ್ತಿದ್ದ ಯಾತನೆ ಕಂಡು ಕುಟುಂಬ ಸದಸ್ಯರು ಕಂಗಾಲಾಗಿದ್ದಾರೆ. ಮಗುವನ್ನು ನಿಧಾನವಾಗಿ ಪ್ರಶ್ನಿಸಿದಾಗ 5 ದಿನಗಳ ನರಕಯಾತನೆಯನ್ನು ಮಗು ವಿವರಿಸಿದೆ.

ತಕ್ಷಣವೇ ಕುಟುಂಬದವರು ಪೊಲೀಸರಿಗೆ ದೂರು ನೀಡಿದ್ದಾರೆ. ಆರೋಪಿ ಅನ್ಸಾರಿಯನ್ನು ವಶಕ್ಕೆ ಪಡೆದ ಪೊಲೀಸರು ಸದ್ಯ ವಿಚಾರಣೆ ನಡೆಸುತ್ತಿದ್ದಾರೆ. ಮಾಹಿತಿ ಕಲೆಹಾಕಿದ ಬಳಿಕ ನ್ಯಾಯಾಲಯಕ್ಕೆ ಹಾಜರುಪಡಿಸಲಾಗುವುದು ಎಂದು ಪೊಲೀಸರು ತಿಳಿಸಿದ್ದಾರೆ.

5 ವರ್ಷದ ಮಗುವಿನ ಮೇಲಿನ ಅತ್ಯಾಚಾರದ ಸುದ್ದಿ ಕೇಳಿ ಸಾರ್ವಜನಿಕರು ತೀವ್ರ ಆಕ್ರೋಶ ವ್ಯಕ್ತಪಡಿಸಿದ್ದು, ಬಜರಂಗ ದಳ ಸದಸ್ಯರು ಆರೋಪಿಗೆ ಕಠಿಣ ಶಿಕ್ಷೆಗೆ ಆಗ್ರಹಿಸಿದ್ದಾರೆ. ಗಲಭೆಯಾಗದಂತೆ ತಡೆಯಲು ಮುನ್ನೆಚ್ಚರಿಕೆ ಕ್ರಮವಾಗಿ ಪ್ರದೇಶದಲ್ಲಿ ಹೆಚ್ಚಿನ ಪೊಲೀಸ್ ಸಿಬ್ಬಂದಿಗಳನ್ನು ನಿಯೋಜಿಸಲಾಗಿದೆ.

ಪ್ರಯಾಗರಾಜ್‌ನಲ್ಲಿ ಮಕರ ಸಂಕ್ರಾಂತಿಗೆ ಮಾಘ ಮೇಳ

ಉತ್ತರ ಪ್ರದೇಶದ ಪ್ರಯಾಗರಾಜ್‌ನಲ್ಲಿ ಗಂಗಾ ನದಿ ಕಿನಾರೆಯಲ್ಲಿ ಮಕರ ಸಂಕ್ರಾಂತಿ(ಜ.15) ಸಂದರ್ಭ ಪವಿತ್ರ ‘ಮಾಘ ಮೇಳ’ ಆಯೋಜನೆಗೊಂಡಿದ್ದು, ಬುಧವಾರ ಮಧ್ಯರಾತ್ರಿಯಿಂದ ಗುರುವಾರ ಬೆಳಗ್ಗೆ 10ರವರೆಗೆ ಒಟ್ಟು 36 ಲಕ್ಷಕ್ಕೂ ಹೆಚ್ಚು ಭಕ್ತರು ಗಂಗಾ ಮತ್ತು ಸಂಗಮದಲ್ಲಿ ತೀರ್ಥ ಸ್ನಾನ ಮಾಡಿದ್ದಾರೆ.

ಗುರುವಾರ ಸಂಜೆ ವೇಳೆಗೆ ಭಕ್ತರ ಸಂಖ್ಯೆ 1 ಕೋಟಿ ದಾಟುವ ನಿರೀಕ್ಷೆಯಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಈ ಸಾಲಿನ ಮೊದಲ ಪುಣ್ಯಸ್ನಾನ ಜ.3ರಂದು ಪೌಶ್ ಪೌರ್ಣಿಮೆಯಿಂದ ಶುರುವಾಗಿದ್ದು, ಫೆ.15ರಂದು ಮಹಾಶಿವರಾತ್ರಿವರೆಗೂ ಮುಂದುವರಿಯಲಿದೆ. ಜ.18 ಮೌನಿ ಅಮಾವಾಸ್ಯೆ, ಜ.23 ವಸಂತ ಪಂಚಮಿ, ಫೆ.1 ಮಾಘಿ ಪೂರ್ಣಿಮಾ ಬಾಕಿ ಇದೆ.

ಇರಾನ್‌ನ ವಾಯು ಪ್ರದೇಶ ಹಠಾತ್ ಬಂದ್

ಟೆಹರಾನ್/ದೆಹಲಿ: ಇರಾನ್ ವಾಯುಪ್ರದೇಶವನ್ನು ಗುರುವಾರ ಹಠಾತ್ ಬಂದ್ ಮಾಡಿದ ಪರಿಣಾಮ ಭಾರತದಿಂದ ಅಮೆರಿಕಕ್ಕೆ ಹೋಗಬೇಕಿದ್ದ 3 ವಿಮಾನಗಳನ್ನು ಏರ್ ಇಂಡಿಯ ಸಂಸ್ಥೆ ರದ್ದುಗೊಳಿಸಿದೆ. ಯುರೋಪ್ ದೇಶಗಳಿಗೆ ವಿಮಾನ ಸಂಚಾರ ಸೇವೆ ಇನ್ನು ಕೆಲ ದಿನ ವಿಳಂಬವಾಗಲಿದೆ ಎಂಬ ಮುನ್ಸೂಚನೆಯನ್ನೂ ‘ಎಐ’ ನೀಡಿದೆ ಎಂದು ಮೂಲಗಳು ತಿಳಿಸಿವೆ. ದೆಹಲಿ ವಿಮಾನ ನಿಲ್ದಾಣದಿಂದ ನ್ಯೂಯಾರ್ಕ್ ಮತ್ತು ನ್ಯೂವಾರ್ಕ್‌ಗೆ ಸಂಚರಿಸಬೇಕಿದ್ದ ಎರಡು ಏರ್ ಇಂಡಿಯ ವಿಮಾನಗಳು ಮತ್ತು ಮುಂಬೈನಿಂದ ನ್ಯೂಯಾರ್ಕ್‌ಗೆ ಹಾರಾಟ ನಡೆಸಬೇಕಿದ್ದ ಒಂದು ವಿಮಾನದ ಸಂಚಾರ ರದ್ದಾಗಿದೆ. ಇದೇ ಬಗೆಯಲ್ಲಿ ಹಲವಾರು ವಿಮಾನಯಾನ ಸಂಸ್ಥೆಗಳು ಕೂಡಾ ಇರಾನಿನ ವಾಯುಪ್ರದೇಶ ಬಂದ್ ಮಾಡಿರುವುದರಿಂದ ಆ ಮಾರ್ಗವನ್ನು ತಪ್ಪಿಸುವ ಸಲುವಾಗಿ ಅಂತಾರಾಷ್ಟ್ರೀಯ ವಿಮಾನಗಳ ಮಾರ್ಗಗಳನ್ನು ಬದಲಾಯಿಸಿವೆ. ಪರಿಣಾಮ ವಿಮಾನಗಳ ಸಂಚಾರದ ಸಮಯ ಮತ್ತಷ್ಟು ದೀರ್ಘವಾಗಲಿದೆ, ವಿಮಾನ ಯಾನ ಸೇವೆಯಲ್ಲಿ ಬಹಳಷ್ಟು ವ್ಯತ್ಯಯವಾಗಲಿದೆ ಎನ್ನಲಾಗಿದೆ.

ಭಾರತ-ಅಮೆರಿಕ ನಡುವಿನ 3 ಎಐ ವಿಮಾನ ರದ್ದು

ಮಾರ್ಗ ಬದಲಾಯಿಸಲು ಸಾಧ್ಯವಾಗದ ಕಾರಣದಿಂದಲೇ ಕೆಲವು ವಿಮಾನ ಸೇವೆಗಳನ್ನು ರದ್ದುಗೊಳಿಸಲಾಗುತ್ತಿದೆ ಎಂದು ವಿಮಾನಯಾನ ಸಂಸ್ಥೆ ಎಐ ವಿಷಾದ ವ್ಯಕ್ತಪಡಿಸಿದೆ. ಈ ಮಧ್ಯೆ, ಜಾರ್ಜಿಯಾದ ಟಿಬಿಲಿಸಿಯಿಂದ ಬುಧವಾರ ರಾತ್ರಿ ಟಿಬಿಲಿಸಿಯಿಂದ ಹೊರಟು ದೆಹಲಿಯತ್ತ ಸಂಚರಿಸುತ್ತಿದ್ದ ಇಂಡಿಗೋ ವಿಮಾನ ಗುರುವಾರ ನಸುಕಿನ 2.35ರಲ್ಲಿ ಇರಾನ್ ವಾಯು ಪ್ರದೇಶವನ್ನು ಪ್ರವೇಶಿಸಿದ್ದು, ಕೆಲವೇ ಕ್ಷಣಗಳಲ್ಲಿ ದಾಟಿ ಬಂದಿದೆ. ಗುರುವಾರ ಬೆಳಗ್ಗೆ 7.03ಕ್ಕೆ ದೆಹಲಿಯಲ್ಲಿ ಬಂದಿಳಿದಿದೆ.

ಎಸ್.ಜೈಶಂಕರ್-ಸಯ್ಯದ್ ಸುದೀರ್ಘ ಮಾತುಕತೆ

ಭಾರತದ ಸಲಹೆ ಆಲಿಸಿದ ಇರಾನ್ ವಿದೇಶಾಂಗ ಸಚಿವ ಅಬ್ಬಾಸ್ | ಇರಾನ್ ದಾಳಿ ಎಚ್ಚರಿಕೆಗೆ ಅಮೆರಿಕ ಭದ್ರತಾ ಸಿಬ್ಬಂದಿ ಸ್ಥಳಾಂತರ

ಟೆಹ್ರಾನ್/ದೆಹಲಿ: ಸಿಕ್ಕಿದ್ದಕ್ಕೆಲ್ಲಾ ಬೆಂಕಿ ಹಚ್ಚುತ್ತಾ ಸಾಗಿರುವ ಪ್ರತಿಭಟನಾಕಾರರು ಇರಾನ್‌ನ ರಸ್ತೆಗಳಲ್ಲಿ ಹಿಂಸೆಯ ತಾಂಡವಕ್ಕೆ ಕಾರಣವಾಗಿದ್ದು, ಆಯತೊಲ್ಲಾ ಖಮೇನಿ ಸರಕಾರದ ವಿರುದ್ಧದ ಈ ಪ್ರತಿಭಟನೆ ಮುಂದುವರಿದೇ ಇದೆ. ಖಮೇನಿ ಸರಕಾರ ಭದ್ರತಾ ಸಿಬ್ಬಂದಿ ಮತ್ತು ಪ್ರತಿಭಟನಾಕಾರರ ನಡುವಿನ ಸಂಘರ್ಷವೂ ದಿನೇ ದಿನೇ ತೀವ್ರಗೊಳ್ಳುತ್ತಾ ಸಾಗಿದೆ.



ಈ ಮಧ್ಯೆ ಇರಾನ್ ವಿದೇಶಾಂಗ ಸಚಿವ ಸಯ್ಯದ್ ಅಬ್ಬಾಸ್ ಅರಾಘ್ಚಿ ಅವರು ಭಾರತದ ವಿದೇಶಾಂಗ ಸಚಿವ ಎಸ್. ಜೈಶಂಕರ್ ಅವರಿಗೆ ಬುಧವಾರ ಸಂಜೆ ದೂರವಾಣಿ ಕರೆ ಮಾಡಿ ಸುದೀರ್ಘ ಮಾತನಾಡಿದರು. ಇರಾನ್‌ನಲ್ಲಿನ ಸದ್ಯದ ಬಿಕ್ಕಟ್ಟಿನ ಕುರಿತು ಇಬ್ಬರೂ ನಾಯಕರು ಚರ್ಚಿಸಿದರು. ಈ ಬಗ್ಗೆ ಜೈಶಂಕರ್ ಎಕ್ಸ್ ಖಾತೆಯಲ್ಲಿ ಮಾಹಿತಿ ಹಂಚಿಕೊಂಡಿದ್ದಾರೆ. ತಕ್ಷಣವೇ ಇರಾನ್ ತೊರೆಯಲು ಭಾರತೀಯ ನಾಗರಿಕರಿಗೆ ಸೂಚನೆ ನೀಡಿದ ಕೆಲ ಗಂಟೆಗಳ ಬಳಿಕ, ಜೈಶಂಕರ್ ಅವರಿಗೆ ಸಯ್ಯದ್ ಕರೆ ಮಾಡಿದ್ದಾರೆ.

ರಾಜಧಾನಿ ನಗರ ಟೆಹ್ರಾನ್ ಸೇರಿದಂತೆ ಇರಾನ್ ದೇಶದ ವಿವಿಧೆಡೆ ಪ್ರತಿಭಟನೆ, ಉದ್ವಿಗ್ನತೆ ಮುಂದುವರಿದಿರುವ ಮಧ್ಯೆ, ಪ್ರಾದೇಶಿಕ ನೆಲೆಗಳಲ್ಲಿರುವ ತನ್ನ ಭದ್ರತಾ ಸಿಬ್ಬಂದಿಗಳಿಗೆ ಸ್ಥಳಾಂತರಗೊಳ್ಳಲು ಅಮೆರಿಕ ಸೂಚಿಸಿದೆ ಎಂದು ವರದಿಯಾಗಿದೆ.

ಒಂದೊಮ್ಮೆ ಅಮೆರಿಕವೇನಾದರೂ ಇರಾನ್ ಮೇಲೆ ದಾಳಿ ಮಾಡಿದರೆ, ಇರಾನ್ ಮತ್ತು ಸಮೀಪದ ಪ್ರದೇಶಗಳಲ್ಲಿ ನೆಲೆಸಿರುವ ಅಮೆರಿಕದ ಸೇನಾ ಶಿಬಿರಗಳ ಮೇಲೆ ಪ್ರತಿದಾಳಿ ನಡೆಸುವುದಾಗಿ ಇರಾನ್ ಎಚ್ಚರಿಸಿದ ಹಿನ್ನೆಲೆ ತನ್ನ ಭದ್ರತಾಪಡೆ ತುಕಡಿಗಳನ್ನು ಸುರಕ್ಷತೆಗಾಗಿ ಅಮೆರಿಕ ಸರಕಾರ ಈ ಸೂಚನೆ ನೀಡಿದೆ ಎನ್ನಲಾಗಿದೆ.

ಇರಾನ್‌ನಿಂದ ವಾಪಸ್ ಬರುವುದೇ ಸಮಸ್ಯೆ

ಇರಾನ್‌ನಿಂದ ತಕ್ಷಣವೇ ಹೊರಟುಬರುವಂತೆ ಭಾರತೀಯರಿಗೆ ಭಾರತ ಸರಕಾರ ಸೂಚನೆ ನೀಡಿದ ಬಳಿಕ ಟೆಹರಾನ್ ಮತ್ತಿತರ ನಗರಗಳಲ್ಲಿ ನೆಲೆಸಿರುವ ಭಾರತೀಯ ವಿದ್ಯಾರ್ಥಿಗಳು ಹಾಗೂ ಭಾರತದಲ್ಲಿರುವ ಅವರ ಪೋಷಕರಲ್ಲಿ ಆತಂತ ಮೂಡಿದೆ.

ಇರಾನ್ ವೈದ್ಯಕೀಯ ಶಿಕ್ಷಣಕ್ಕೆಂದು ತೆರಳಿರುವ 3 ಸಾವಿರ ಭಾರತೀಯ ವಿದ್ಯಾರ್ಥಿಗಳು ಹಣದ ಸಮಸ್ಯೆ ಮತ್ತು ವಿಶ್ವವಿದ್ಯಾಲಯಗಳು ಪಾಸ್‌ಪೋರ್ಟ್ ಸಿಕ್ಕಿಕೊಂಡಿರುವುದು ಮತ್ತಿತರ ಕಾರಣದಿಂದ ಸಂಕಷ್ಟಕ್ಕೆ ಸಿಲುಕಿದ್ದಾರೆ. ಇವರಲ್ಲಿ ಜಮ್ಮು-ಕಾಶ್ಮೀರದವರೇ ಅಧಿಕವಾಗಿದ್ದಾರೆ. ಇನ್ನೊಂದೆಡೆ ಇರಾನ್‌ನಲ್ಲಿ ಇಂಟರ್ನೆಟ್ ಕಡಿತ ಕಾರಣ ಸಂಪರ್ಕ-ಸಂವಹನ ಮಾರ್ಗ ಕಷ್ಟವಾಗಿ ಭಾರತದಲ್ಲಿರುವ ಪೋಷಕರು ತೀವ್ರ ಆತಂಕದಲ್ಲಿದ್ದಾರೆ.

ಪ್ರತಿ ಭಾರತೀಯ ವಿದ್ಯಾರ್ಥಿಯೂ ತವರಿಗೆ ವಾಪಸಾಗಲು ಬಯಸುತ್ತಿದ್ದಾರೆ. ಆದರೆ, ವಿಮಾನದ ಟಿಕೆಟ್‌ಗೆ 30,000 ರು. ಪಾವತಿಸಬೇಕಾಗಿದೆ. ಪೋಷಕರೇನೋ ಹಣ ಕಳುಹಿಸಲು ಸಿದ್ಧರಿದ್ದಾರೆ. ಆದರೆ ಇರಾನ್‌ಗೆ ಹಣ ವರ್ಗಾವಣೆ ಮಾಡುವ ಮಾರ್ಗಗಳು ಬಂದ್ ಆಗಿವೆ. ಹಾಗಾಗಿ ಭಾರತ ಸರಕಾರವೇ ವಿದ್ಯಾರ್ಥಿಗಳನ್ನು ಕರೆತರಬೇಕು ಎಂದು ಡಾ. ಮೊಹಮ್ಮದ್ ಮೊಮಿನ್ ಖಾನ್ ಮನವಿ ಮಾಡಿದ್ದಾರೆ.

ಇನ್ನೊಂದೆಡೆ ಪಾಸ್‌ಪೋರ್ಟ್‌ಗಳೆಲ್ಲಾ ವಿಶ್ವವಿದ್ಯಾಲಯದ ವಶದಲ್ಲಿವೆ. ಜ.20ರವರೆಗೆ ಪರೀಕ್ಷೆ ಮುಗಿಸಿಕೊಂಡು ನಂತರ ಹೊರಡಿ ಎಂದು ವಿವಿ ಒತ್ತಾಯಿಸುತ್ತಿದೆ. 500ಕ್ಕೂ ಹೆಚ್ಚು ಭಾರತೀಯ ವಿದ್ಯಾರ್ಥಿಗಳಿಗೆ ಎಕ್ಸಿಟ್ ವೀಸಾ ಸಿಕ್ಕಿಲ್ಲ ಎಂದು ಪೋಷಕರು ಆತಂಕ ವ್ಯಕ್ತಪಡಿಸಿದ್ದಾರೆ.

ಸಮಾಚಾರ ಸಣ್ಣದಲ್ಲ

ಕೈಗಾರಿಕೆ ನಿವೇಶನಗಳ ಹಂಚಿಕೆ: ಅರ್ಜಿ ಆಹ್ವಾನ

ಕಲಬುರಗಿ: ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮದಿಂದ ಕಲಬುರಗಿ ಜಿಲ್ಲೆಯ ಚಿತ್ತಾಪುರ ತಾಲೂಕಿನ, ಚಿತ್ತಾಪುರ ಹೋಬಳಿ, ಪಿ. ಚಿತ್ತಾಪುರ ಗ್ರಾಮದ ಸರ್ವೆ ನಂ. 14/1/1, 18, 27/1, 27/2, 27/3, 30/1 ಮತ್ತು 30/3 ರಲ್ಲಿ 31.03 ಎಕರೆ ಪ್ರದೇಶದಲ್ಲಿ ನೂತನವಾಗಿ ಕೈಗಾರಿಕಾ ವಸಾಹತುವನ್ನು ಅಭಿವೃದ್ಧಿಪಡಿಸಲಾಗಿದ್ದು, ಈ ಕೈಗಾರಿಕೆ ನಿವೇಶನಗಳ ಹಂಚಿಕೆಗಾಗಿ (ಕೈಗಾರಿಕಾ ಘಟಕಗಳನ್ನು ಪ್ರಾರಂಭಿಸಲು) ಆಸಕ್ತಿಯುಳ್ಳ ಸಣ್ಣ/ಅತೀ ಸಣ್ಣ ಉದ್ದಿಮೆದಾರರಿಂದ ಅರ್ಜಿ ಆಹ್ವಾನಿಸಲಾಗಿದೆ ಎಂದು ಕಲಬುರಗಿ ಜಿಲ್ಲಾಧಿಕಾರಿ ಬಿ. ಫೌಜಿಯಾ ತರನ್ನುಮ್ ಅವರು ತಿಳಿಸಿದ್ದಾರೆ. ಸಹಾಯಕ ಪ್ರಧಾನ ವ್ಯವಸ್ಥಾಪಕರು(ಕೈವ), ಕ.ರಾ.ಸ.ಕೈ.ಅ.ನಿ.ನಿ, ವಿಭಾಗೀಯ ಕಚೇರಿ, ಕೈಗಾರಿಕಾ ವಸಾಹತು, ಎಂ.ಎಸ್.ಕೆ.ಮಿಲ್ ರಸ್ತೆ, ಕಲಬುರಗಿ ಕಚೇರಿಯಲ್ಲಿ 2026ರ ಜನವರಿ 31 ರ ಸಾಯಂಕಾಲ 5 ಗಂಟೆಯೊಳಗಾಗಿ ಅರ್ಜಿ ಸಲ್ಲಿಸಬೇಕು. ಮತ್ತಿತರ ಹೆಚ್ಚಿನ ಮಾಹಿತಿಗಾಗಿ ಕಚೇರಿ ದೂರವಾಣಿ ಸಂಖ್ಯೆ 9448104599 ಸಂಪರ್ಕಿಸಬೇಕು. ಆಸಕ್ತಿಯುಳ್ಳ ಸಣ್ಣ/ಅತೀ ಸಣ್ಣ ಉದ್ದಿಮೆದಾರರಿಗೆ ಕೈಗಾರಿಕಾ ಘಟಕಗಳನ್ನು ಪ್ರಾರಂಭಿಸಲು ಅನುಕೂಲವಾಗುವಂತೆ ಇದರ ಪ್ರಯೋಜನವನ್ನು ಸದುಪಯೋಗ ಪಡಿಸಿಕೊಳ್ಳಬೇಕೆಂದು ಅವರು ತಿಳಿಸಿದ್ದಾರೆ.

ರಕ್ಷಣಾಧಿಕಾರಿ ಹುದ್ದೆಗೆ ಅರ್ಜಿ ಆಹ್ವಾನ

ಕಲಬುರಗಿ: ದತ್ತು ಪ್ರಕ್ರಿಯೆಗೆ ಒಳಪಡಿಸುವ ಹಿನ್ನೆಲೆಯಲ್ಲಿ ಜಿಲ್ಲಾ ಮಕ್ಕಳ ರಕ್ಷಣಾ ಕಚೇರಿಯಲ್ಲಿ ರಕ್ಷಣಾಧಿಕಾರಿ (ಅಸಾಂಸ್ಥಿಕ) ಹುದ್ದೆಯನ್ನು ಮಿಷನ್ ವಾತ್ಸಲ್ಯ ಮಾರ್ಗಸೂಚಿ ಅನ್ವಯ ಅರ್ಹ ಅಭ್ಯರ್ಥಿಯನ್ನು ಬಾಹ್ಯಮೂಲದಿಂದ ಭರ್ತಿ ಮಾಡಿಕೊಳ್ಳಲು ಅರ್ಜಿ ಆಹ್ವಾನಿಸಲಾಗಿದೆ ಎಂದು ಕಲಬುರಗಿ ಜಿಲ್ಲಾ ಮಕ್ಕಳ ರಕ್ಷಣಾ ಘಟಕದ ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿಗಳು ತಿಳಿಸಿದ್ದಾರೆ. ಅರ್ಹ ಅಭ್ಯರ್ಥಿಗಳು ಜ. 23ರೊಳಗಾಗಿ ಜಿಲ್ಲಾ ಮಕ್ಕಳ ರಕ್ಷಣಾ ಘಟಕ, ಚಂದ್ರಶೇಖರ ಪಾಟೀಲ ಕ್ರೀಡಾಂಗಣದ ಎದುರುಗಡೆ, ಕಲಬುರಗಿ, ಇಲ್ಲಿ ದಾಖಲಾತಿಗಳೊಂದಿಗೆ ಅರ್ಜಿಯನ್ನು ಸಲ್ಲಿಸಬೇಕು. ಮತ್ತಿತರ ಹೆಚ್ಚಿನ ಮಾಹಿತಿಗಾಗಿ ಕಲಬುರಗಿ ಜಿಲ್ಲಾ ಮಕ್ಕಳ ರಕ್ಷಣಾ ಘಟಕದ ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿಗಳ ಕಚೇರಿಯನ್ನು ಹಾಗೂ ಕಚೇರಿ ದೂರವಾಣಿ ಸಂಖ್ಯೆ 08472-243219 ಗೆ ಸಂಪರ್ಕಿಸಲು ಕೋರಲಾಗಿದೆ.

ಮಾಸಿಕ ಒಂದು ದಿನದ ವೇತನ ಸಹಿತ ರಜೆ

ಕಲಬುರಗಿ: ನಾನಾ ಕಾರ್ಮಿಕ ಕಾಯ್ದೆಗಳಡಿಯಲ್ಲಿ ನೋಂದಣಿಯಾಗಿರುವ ಕಲಬುರಗಿ ಜಿಲ್ಲೆಯ ಎಲ್ಲ ಕೈಗಾರಿಕೆಗಳು ಹಾಗೂ ಸಂಸ್ಥೆಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ಮಹಿಳಾ ನೌಕರರಿಗೆ (ಉದ್ಯೋಗದಾತರಿಗೆ) ಋತುಚಕ್ರದ ಸಮಯದಲ್ಲಿ ಮಾಸಿಕ ಒಂದು ದಿನದ ವೇತನ ಸಹಿತ ರಜೆ ಸೌಲಭ್ಯವನ್ನು ನೀಡಬೇಕೆಂದು ಕಲಬುರಗಿ ಪ್ರಾದೇಶಿಕ ಉಪ ಕಾರ್ಮಿಕ ಆಯುಕ್ತರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ. ಕಾರ್ಖಾನೆಗಳ ಕಾಯ್ದೆ 1948, ಕರ್ನಾಟಕ ಅಂಗಡಿ ಮತ್ತು ವಾಣಿಜ್ಯ ಸಂಸ್ಥೆಗಳ ಕಾಯ್ದೆ 1961, ತೋಟ ಕಾರ್ಮಿಕರ ಕಾಯ್ದೆ 1951, ಬೀಡಿ ಮತ್ತು ಸಿಗಾರ್‌ಕಾರ್ಮಿಕರ ಕಾಯ್ದೆ 1966, ಮತ್ತು ಮೋಟಾರು ಸಾರಿಗೆ ಕಾರ್ಮಿಕರ ಕಾಯ್ದೆ 1961ರಡಿ ನೋಂದಣಿಯಾಗಿರುವ ಎಲ್ಲ ಕೈಗಾರಿಕೆಗಳು ಹಾಗೂ ಸಂಸ್ಥೆಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ 18 ರಿಂದ 52 ವರ್ಷದ ವಯೋಮಿತಿಯ ಎಲ್ಲ ಕಾಯಂ/ಗುತ್ತಿಗೆ/ಹೊರಗುತ್ತಿಗೆ ಮಹಿಳಾ ಕಾರ್ಮಿಕರುಗಳಿಗೆ ಅವರ ಋತುಚಕ್ರದ ಸಮಯದಲ್ಲಿ ಪ್ರತಿ ಮಾಸಿಕ ಒಂದು ದಿನದ ರಜೆಯಂತೆ ವಾರ್ಷಿಕ 12 ದಿನಗಳ ವೇತನ ಸಹಿತ ರಜೆಯ ಸೌಲಭ್ಯವನ್ನು ಉದ್ಯೋಗದಾತರು ಒದಗಿಸುವಂತೆ ಸರಕಾರವು ಆದೇಶಿಸಿದ್ದು, ಮಹಿಳಾ ನೌಕರರು ಆಯಾ ತಿಂಗಳ ಋತುಚಕ್ರ ರಜೆಯನ್ನು ಆಯಾ ತಿಂಗಳಿನಲ್ಲಿಯೇ ಬಳಸಿಕೊಳ್ಳುವುದು ಮತ್ತು ಋತುಚಕ್ರ ರಜೆ ಪಡೆಯಲು ಮಹಿಳಾ ನೌಕರರು ಯಾವುದೇ ವೈದ್ಯಕೀಯ ಪ್ರಮಾಣಪತ್ರ ಒದಗಿಸುವ ಅವಶ್ಯಕತೆ ಇರುವುದಿಲ್ಲವೆಂದು ಅವರು ತಿಳಿಸಿದ್ದಾರೆ.

ನೂತನ ಬಸ್‌ಗಳ ಸಂಚಾರಕ್ಕೆ ಶಾಸಕ ಚಾಲನೆ

ಆಳಂದ: ಜಿಲ್ಲಾ ಕೇಂದ್ರಕ್ಕೆ ಪ್ರತಿದಿನ ಸಂಚರಿಸುವ ಶಾಲಾ-ಕಾಲೇಜು ವಿದ್ಯಾರ್ಥಿಗಳು, ಮಹಿಳೆಯರು, ರೈತರು ಹಾಗೂ ವ್ಯಾಪಾರಿಗಳ ಅನುಕೂಲಕ್ಕಾಗಿ ಆಳಂದದಿಂದ ಕಲಬುರಗಿಗೆ ನೂತನ ಎರಡು ಬಸ್‌ಗಳ ಸಂಚಾರಕ್ಕೆ ಶಾಸಕ ಬಿ.ಆರ್. ಪಾಟೀಲ್ ಚಾಲನೆ ನೀಡಿದರು. ಈ ಸಂದರ್ಭದಲ್ಲಿ ಮಾತನಾಡಿದ ಅವರು, ಪ್ರಯಾಣಿಕರ ದಟ್ಟಣೆ ಹಾಗೂ ಸಾರ್ವಜನಿಕರ ಬೇಡಿಕೆಯನ್ನು ಮನಗಂಡು ಹೊಸ ಬಸ್ ಸೇವೆ ಕಲ್ಪಿಸಲಾಗಿದೆ. ಶಕ್ತಿ ಯೋಜನೆಯಡಿ ಮಹಿಳೆಯರ ಸಂಚಾರ ಹೆಚ್ಚಾಗಿರುವುದರಿಂದ ಈ ಬಸ್‌ಗಳು ಸಹಕಾರಿಯಾಗಲಿವೆ ಎಂದರು. ಇದೇ ವೇಳೆ ಪಟ್ಟಣದ ನೂತನ ಬಸ್ ನಿಲ್ದಾಣದ ಕಾಮಗಾರಿ ಮಂದಗತಿಯಲ್ಲಿ ಸಾಗುತ್ತಿರುವುದಕ್ಕೆ ಅಸಮಾಧಾನ ವ್ಯಕ್ತಪಡಿಸಿದ ಶಾಸಕರು, ಕಾಮಗಾರಿ ಶೀಘ್ರ ಪೂರ್ಣಗೊಳಿಸುವಂತೆ ಅಧಿಕಾರಿಗಳಿಗೆ ಕಟ್ಟುನಿಟ್ಟಿನ ಸೂಚನೆ ನೀಡಿದರು.

{ ಡಾ.ಶರಣಪ್ರಕಾಶ ಪಾಟೀಲ }
ವೈದ್ಯಕೀಯ ಶಿಕ್ಷಣ ಸಚಿವ

ನಗರ ಸೌಂದರ್ಯಕ್ಕೆ ಬೇಕಾದ ಅಭಿವೃದ್ಧಿ ಕೆಲಸಗಳನ್ನು ಮುಂದುವರೆಸಿಕೊಂಡು ಹೋಗಲಾಗುತ್ತದೆ. ಬಸವೇಶ್ವರ ವೃತ್ತ ಸೇರಿದಂತೆ ಅಂಬಿಗ ಚೌಡಯ್ಯ, ಸಂಗೊಳ್ಳಿ ರಾಯಣ್ಣ ಮೂರ್ತಿ ಸ್ಥಳದ ಅಭಿವೃದ್ಧಿಯನ್ನು ಕೈಗೊಳ್ಳಯವ ಕುರಿತು ವಾಸ್ತು ತಜ್ಞರೊಟ್ಟಿಗೆ ಚರ್ಚಿಸಿದ್ದೇನೆ. ಬರುವ ದಿನಗಳಲ್ಲಿ ಬೇಕಾದ ಅನುದಾನ ಬಗ್ಗೆ ಸೂಕ್ತ ನಿರ್ಧಾರ ತೆಗೆದುಕೊಂಡು ಈ ಮೂರು ಸ್ಥಳಗಳ ಅಭಿವೃದ್ಧಿ ಪಡಿಸುತ್ತೇನೆ.

ಕಲಬುರಗಿ ಜಿಲ್ಲೆಯಾದ್ಯಂತ ಮಕರ ಸಂಕ್ರಾಂತಿ ಸಡಗರ | ಸುಗ್ಗಿ ಸಂಭ್ರಮದಲ್ಲಿ ಮಿಂದೆದ್ದ ಜನತೆ | ದೇವಾಲಯಗಳಿಗೆ ಭಕ್ತರ ದಂಡು

ಸಂಕ್ರಾಂತಿಯ ಎಳ್ಳು ಬೆಲ್ಲ ತಿಂದು ಒಳ್ಳೆ ಮಾತಾಡು

ಕಲಬುರಗಿ: ಸೂರ್ಯ ಪಥ ಬದಲಿಸಿ ಉತ್ತರಾಯಣಕ್ಕೆ ಪಾದಾರ್ಪಣೆ ಮಾಡುವ ವರ್ಷದ ಮೊದಲ ಹಬ್ಬ 'ಮಕರ ಸಂಕ್ರಾಂತಿ'ಯನ್ನು ಕಲಬುರಗಿ ಜಿಲ್ಲೆಯಾದ್ಯಂತ ಅತ್ಯಂತ ಸಡಗರ-ಸಂಭ್ರಮದಿಂದ ಆಚರಿಸಲಾಯಿತು. ಜಿಲ್ಲೆಯ ನಗರ ಪ್ರದೇಶಗಳಿಂದ ಹಿಡಿದು ಗ್ರಾಮೀಣ ಭಾಗದವರೆಗೂ ಎಳ್ಳು-ಬೆಲ್ಲದ ಸವಿ ಹರಡಿದ್ದು, ಜನರಲ್ಲಿ ಹೊಸ ಉತ್ಸಾಹ ಮೂಡಿಸಿದೆ.

ಬೆಳ್ಳಂಬೆಳಗ್ಗೆಯೇ ಜನರು ಪವಿತ್ರ ನದಿಗಳಲ್ಲಿ ಮತ್ತು ದೇವಸ್ಥಾನಗಳಲ್ಲಿ ಪುಣ್ಯಸ್ನಾನ ಮಾಡಿ ಸೂರ್ಯ ದೇವನಿಗೆ ನಮಸ್ಕರಿಸಿದರು. 'ಎಳ್ಳು ಬೆಲ್ಲ ತಿಂದು ಒಳ್ಳೆ ಮಾತಾಡು' ಎಂಬ ಆಶಯದಂತೆ, ಪರಸ್ಪರ ಎಳ್ಳು-ಬೆಲ್ಲ ವಿನಿಮಯ ಮಾಡಿಕೊಂಡು ಶುಭಾಶಯ ಕೋರಿದರು. ಮನೆಯಂಗಳದಲ್ಲಿ ಸುಂದರ ರಂಗೋಲಿಗಳು ರಾರಾಜಿಸುತ್ತಿದ್ದರೆ, ಮುತ್ತೈದೆಯರು ಕುಂಬ ಹಂಚುವ ಮೂಲಕ ಹಬ್ಬದ ಸಂಪ್ರದಾಯವನ್ನು ಪಾಲಿಸಿದರು.

ಗ್ರಾಮೀಣ ಭಾಗದಲ್ಲಿ ಸುಗ್ಗಿ ಹಬ್ಬದ ಕಳೆ: ಜಿಲ್ಲೆಯ ಆಳಂದ, ಅಫಜಲಪುರ, ಜೇವರ್ಗಿ, ಯಡ್ರಾಮಿ, ಕಮಲಾಪುರ, ಚಿತ್ತಾಪುರ ಮತ್ತು ಚಿಂಚೋಳಿ ಭಾಗಗಳಲ್ಲಿ ರೈತರು ಸುಗ್ಗಿ ಸಂಭ್ರಮದಲ್ಲಿ ಮಗ್ನರಾಗಿದ್ದರು. ಕಟಾವಿಗೆ ಬಂದಿರುವ ಬೆಳೆಗಳನ್ನು ಕಂಡು ಅನ್ನದಾತನ ಮುಖದಲ್ಲಿ ಮಂದಹಾಸ ಮೂಡಿತ್ತು. ಭೂತಾಯಿಗೆ ವಿಶೇಷ ಪೂಜೆ ಸಲ್ಲಿಸಿ, ಹೊಸ ಫಸಲನ್ನು ಮನೆಗೆ ಬರಮಾಡಿಕೊಳ್ಳುವ ಸಂಭ್ರಮ ಮನೆಮಾಡಿತ್ತು. ಎತ್ತುಗಳನ್ನು ಕಿಚ್ಚು ಹಾಯಿಸುವುದು ಹಾಗೂ ಅವುಗಳಿಗೆ ಅಲಂಕಾರ ಮಾಡಿ ಮೆರವಣಿಗೆ ಮಾಡುವ ದೃಶ್ಯಗಳು ಹಳ್ಳಿಗಳಲ್ಲಿ ಸಾಮಾನ್ಯವಾಗಿದ್ದವು.

ವಿಶೇಷ ಅಡುಗೆಯ ಘಮಲು: ಸಂಕ್ರಾಂತಿ ಎಂದರೆ ಉತ್ತರ ಕರ್ನಾಟಕದ ಭಾಗದಲ್ಲಿ ಸಜ್ಜೆ ರೊಟ್ಟಿ ಮತ್ತು ಮಾಧಲಿ ವಿಶೇಷ. ಕಲಬುರಗಿ ಜಿಲ್ಲೆಯ ಮನೆ ಮನೆಗಳಲ್ಲಿ ಸಂಕ್ರಾಂತಿ ಪ್ರಯುಕ್ತ ಸಜ್ಜೆ ರೊಟ್ಟಿ, ಎಳ್ಳು ಹಚ್ಚಿದ ರೊಟ್ಟಿ, ಶೇಂಗಾ ಹೋಳಿಗೆ ಹಾಗೂ ಬಗೆಬಗೆಯ ಪಲ್ಯಗಳ ಅಡುಗೆ ತಯಾರಿಸಲಾಗಿತ್ತು.

ಧಾರ್ಮಿಕ ಕೇಂದ್ರಗಳಲ್ಲಿ ವಿಶೇಷ ಪೂಜೆ: ಜಿಲ್ಲೆಯ ಶರಣಬಸವೇಶ್ವರ ದೇವಸ್ಥಾನ, ಘತ್ತರಗಿ ಭಾಗ್ಯವಂತಿ ಸನ್ನಿಧಿ ಹಾಗೂ ಇನ್ನಿತರ ಪುಣ್ಯಕ್ಷೇತ್ರಗಳಲ್ಲಿ ಭಕ್ತರ ದಂಡು ಕಂಡುಬಂದಿತು.

ಕರ್ನಾಟಕ ಕೇಂದ್ರೀಯ ವಿಶ್ವವಿದ್ಯಾಲಯದ ಶಿಕ್ಷಣ ವಿಭಾಗದಲ್ಲಿ ಮಕರ ಸಂಕ್ರಾಂತಿಯನ್ನು ಆಚರಿಸಲಾಯಿತು.

ಕಲಬುರಗಿ ಸಿಯುಕೆನಲ್ಲಿ ಸಂಕ್ರಾಂತಿ ಸಂಭ್ರಮ

ಕಲಬುರಗಿ ಹೊರವಲಯದ ಕಡಗಂಚಿ ಕರ್ನಾಟಕ ಕೇಂದ್ರೀಯ ವಿಶ್ವವಿದ್ಯಾಲಯದ ಶಿಕ್ಷಣ ವಿಭಾಗದಲ್ಲಿ ಮಕರ ಸಂಕ್ರಾಂತಿಯನ್ನು ಗುರುವಾರ ವಿಜೃಂಭಣೆಯಿಂದ ಆಚರಿಸಲಾಯಿತು. ಕೃಷಿ ಪದ್ಧತಿ, ಸಾಂಸ್ಕೃತಿಕ ವೈವಿಧ್ಯತೆ ಹಾಗೂ ಸಮುದಾಯ ಬಾಂಧವ್ಯದ ಮೌಲ್ಯಗಳನ್ನು ವಿದ್ಯಾರ್ಥಿಗಳಿಗೆ ಪರಿಚಯಿಸುವುದು ಈ ಆಚರಣೆಯ ಉದ್ದೇಶವಾಗಿತ್ತು ಎಂದು ಪ್ರೊ. ಜಿ.ಆರ್. ಅಂಗಡಿ ತಿಳಿಸಿದರು. ಕಾರ್ಯಕ್ರಮದಲ್ಲಿ ಅಧ್ಯಾಪಕ ಡಾ. ಮಯೂರ್ ಪೂಜಾರ, ಡಾ. ಗುರು ಬಿ ಸೇರಿದಂತೆ ಸಂಶೋಧನಾ ವಿದ್ಯಾರ್ಥಿಗಳು ಹಾಗೂ ಸಿಬ್ಬಂದಿ ಪಾಲ್ಗೊಂಡು ಹಬ್ಬದ ಸಡಗರ ಹಂಚಿಕೊಂಡರು.

> ವಿದ್ಯಾರ್ಥಿಗಳಿಗೆ ಕಲಿಕೆಯಲ್ಲಿ ವಿಜ್ಞಾನ, ಸಂಸತಿ ಮತ್ತು ಸಂಪ್ರದಾಯ ಸಂಯೋಜಿಸುವುದನ್ನು ಈ ಹಬ್ಬ ಕಲಿಸುತ್ತದೆ. ನಮ್ಮ ವಿಶ್ವವಿದ್ಯಾಲಯ 22ಕ್ಕೂ ಹೆಚ್ಚು ರಾಜ್ಯಗಳ ವಿದ್ಯಾರ್ಥಿಗಳನ್ನು ಹೊಂದಿದ್ದು, ಅವರು ವೈವಿಧ್ಯತೆಯಲ್ಲಿ ಏಕತೆಯ ಸಂಕೇತವಾಗಿ ಮಕರ ಸಂಕ್ರಾಂತಿಯನ್ನು ಸಡಗರದಿಂದ ಆಚರಿಸಿದ್ದಾರೆ.
>
> - **ಪ್ರೊ.ಜಿ.ಆರ್.ಅಂಗಡಿ, ಡೀನ್ ಸಿಯುಕೆ,** ಕಲಬುರಗಿ

ಚಲಿಸುತ್ತಿದ್ದ ಸಾರಿಗೆ ಬಸ್‌ನಲ್ಲಿ ಬೆಂಕಿ: ತಪ್ಪಿದ ದುರಂತ

ಜೇವರ್ಗಿ: ತಾಲೂಕಿನ ಮದರಿ ಗ್ರಾಮದ ಬಳಿ ಚಲಿಸುತ್ತಿದ್ದ ಸಾರಿಗೆ ಬಸ್ ಇಂಜಿನ್‌ನಲ್ಲಿ ಆಕಸ್ಮಿಕವಾಗಿ ಬೆಂಕಿ ಕಾಣಿಸಿಕೊಂಡಿದ್ದು, ಚಾಲಕನ ಸಮಯ ಪ್ರಜ್ಞೆಯಿಂದಾಗಿ ಪ್ರಯಾಣಿಕರು ಪ್ರಾಣಾಪಾಯದಿಂದ ಪಾರಾಗಿದ್ದಾರೆ.

ಜೇವರ್ಗಿ ಡಿಪೋಗೆ ಸೇರಿದ ಈ ಬಸ್ ಮದರಿ ಗ್ರಾಮದಿಂದ ಜೇವರ್ಗಿ ಪಟ್ಟಣಕ್ಕೆ ತೆರಳುತ್ತಿತ್ತು. ಬಸ್ ಚಲಿಸುತ್ತಿದ್ದಾಗಲೇ ಇಂಜಿನ್ ಭಾಗದಲ್ಲಿ ದಿಢೀರ್ ಬೆಂಕಿ ಕಾಣಿಸಿಕೊಂಡಿದೆ. ತಕ್ಷಣ ಎಚ್ಚೆತ್ತ ಚಾಲಕ ಬಸ್ ನಿಲ್ಲಿಸಿ, ಎಲ್ಲ ಪ್ರಯಾಣಿಕರನ್ನು ಶೀಘ್ರವಾಗಿ ಕೆಳಗಿಳಿಸಿದ್ದಾರೆ. ಇದರಿಂದಾಗಿ ಒಳಗಿದ್ದ ಪ್ರಯಾಣಿಕರು ಯಾವುದೇ ಅಪಾಯವಿಲ್ಲದೆ ಪಾರಾಗಿದ್ದಾರೆ. ಬಸ್‌ನಿಂದ ದಟ್ಟವಾದ ಹೊಗೆ ಆವರಿಸಿದ್ದರಿಂದ ಸ್ಥಳದಲ್ಲಿ ಕೆಲಕಾಲ ಆತಂಕದ ವಾತಾವರಣ ನಿರ್ಮಾಣವಾಗಿತ್ತು. ತಕ್ಷಣವೇ ಕಾರ್ಯ ಪ್ರವೃತ್ತರಾದ ಸ್ಥಳೀಯರು ನೀರು ಸುರಿದು ಬೆಂಕಿ ನಂದಿಸುವಲ್ಲಿ ಯಶಸ್ವಿಯಾಗಿದ್ದಾರೆ.

ಶಾರ್ಟ್ ಸರ್ಕ್ಯೂಟ್‌ನಿಂದಾಗಿ ಈ ಬೆಂಕಿ ಕಾಣಿಸಿಕೊಂಡಿರಬಹುದು ಎಂದು ಶಂಕಿಸಲಾಗಿದೆ. ಘಟನಾ ಸ್ಥಳಕ್ಕೆ ಜೇವರ್ಗಿ ಪೊಲೀಸರು ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ. ಈ ಕುರಿತು ಜೇವರ್ಗಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಬಿಜೆಪಿ ತೊರೆದು ಕಾಂಗ್ರೆಸ್ ಸೇರಿದ ಮುಖಂಡ ಚಲಗೇರಿ

ಅಫಜಲಪುರ: ತಾಲೂಕಿನ ಮಾಶಾಳ ಗ್ರಾಮದ ಪ್ರಭಾವಿ ಬಿಜೆಪಿ ಮುಖಂಡ ವಸಂತರಾಯ ಚಲಗೇರಿ ಅವರು ಬಿಜೆಪಿ ತೊರೆದು ಅಧಿಕೃತವಾಗಿ ಕಾಂಗ್ರೆಸ್ ಪಕ್ಷಕ್ಕೆ ಸೇರ್ಪಡೆಗೊಂಡರು.

ಪಟ್ಟಣದಲ್ಲಿ ಹಮ್ಮಿಕೊಳ್ಳಲಾಗಿದ್ದ ಕಾರ್ಯಕ್ರಮದಲ್ಲಿ ಶಾಸಕ ಎಂ.ವೈ. ಪಾಟೀಲ್ ಹಾಗೂ ಕೆಕೆಆರ್‌ಟಿಸಿ ಅಧ್ಯಕ್ಷ ಅರುಣಕುಮಾರ್ ಪಾಟೀಲ್ ಅವರ ಸಮ್ಮುಖದಲ್ಲಿ ವಸಂತರಾಯ ಅವರು ಕಾಂಗ್ರೆಸ್ ಧ್ವಜ ಹಿಡಿಯುವ ಮೂಲಕ ಪಕ್ಷದ ತತ್ವ ಸಿದ್ಧಾಂತಗಳನ್ನು ಒಪ್ಪಿ ಸೇರ್ಪಡೆಯಾದರು.

ಈ ಸಂದರ್ಭದಲ್ಲಿ ಮಾತನಾಡಿದ ಶಾಸಕರು, ಪಕ್ಷದ ಸಂಘಟನೆಗೆ ಹೊಸಬರ ಸೇರ್ಪಡೆಯಿಂದ ಮತ್ತಷ್ಟು ಬಲ ಬಂದಂತಾಗಿದೆ ಎಂದರು.


ಬಿಜೆಪಿ ತೊರೆದು ಅಧಿಕೃತವಾಗಿ ಕಾಂಗ್ರೆಸ್ ಪಕ್ಷಕ್ಕೆ ಸೇರ್ಪಡೆಗೊಂಡ ಬಿಜೆಪಿ ಮುಖಂಡ ವಸಂತರಾಯ ಚಲಗೇರಿರವರನ್ನು ಸನ್ಮಾನಿಸಲಾಯಿತು .

ಈ ಕಾರ್ಯಕ್ರಮದಲ್ಲಿ ಮುಖಂಡರಾದ ಶಿವಪುತ್ರಪ್ಪ ಜಿಡ್ಡಗಿ, ವಿಜಯಕುಮಾರ ಪ್ರಧಾನಿ, ರವಿದಾಸ್ ಚೌವ್ಹಾಣ್, ನಿಂಗರಾಜ್ ಪಾಟೋಳಿ, ಪಂಡಿತ್ ನಾವಿ, ಚನ್ನು ದೇಶೆಟ್ಟಿ, ದೇವಾನಂದ್ ಜಿಡ್ಡಿಗಿ, ಶಿವಾನಂದ ನಂದಿ, ಚಂದು ಖೇಡಗಿ ಸೇರಿದಂತೆ ಗ್ರಾಮದ ಪ್ರಮುಖರು ಹಾಗೂ ಕಾರ್ಯಕರ್ತರು ಉಪಸ್ಥಿತರಿದ್ದರು.

ಸಂತ್ರಸ್ತರಿಗೆ ಪರಿಹಾರ ನೀಡಲು ಪ್ರಯತ್ನ: ಶಾಸಕ

ಆಳಂದ: ಪಟ್ಟಣದ ಅಭಿವೃದ್ಧಿ ಹಾಗೂ ಸೌಂದರ್ಯೀಕರಣದ ದೃಷ್ಟಿಯಿಂದ ಕೈಗೆತ್ತಿಕೊಂಡಿರುವ ರಸ್ತೆ ಅಗಲೀಕರಣ ಕಾಮಗಾರಿಯಿಂದ ಆಸ್ತಿ ಕಳೆದುಕೊಂಡವರಿಗೆ ಸರಕಾರದಿಂದ ಪರಿಹಾರ ಕೊಡಿಸಲು ಪ್ರಾಮಾಣಿಕ ಪ್ರಯತ್ನ ಮಾಡುವುದಾಗಿ ಕರ್ನಾಟಕ ರಾಜ್ಯ ನೀತಿ ಮತ್ತು ಯೋಜನಾ ಆಯೋಗದ ಉಪಾಧ್ಯಕ್ಷ ಹಾಗೂ ಶಾಸಕ ಬಿ.ಆರ್. ಪಾಟೀಲ್ ಭರವಸೆ ನೀಡಿದರು.

ಗುರುವಾರ ಪಟ್ಟಣದ ಹಳೆ ತಹಸೀಲ್ ಕಚೇರಿಯಿಂದ ದರ್ಗಾ ಬೇಸ್ ವರೆಗಿನ ಸ್ಥಳ ವೀಕ್ಷಣೆ ನಡೆಸಿದ ಅವರು, ನಂತರ ಪ್ರವಾಸಿ ಮಂದಿರದಲ್ಲಿ ಪತ್ರಕರ್ತರೊಂದಿಗೆ ಮಾತನಾಡಿದರು. ರಸ್ತೆ ಅಗಲೀಕರಣದಿಂದ ಸಂತ್ರಸ್ತರಾದವರು ಪರಿಹಾರ ಕೇಳುವುದು ಅವರ ಹಕ್ಕು. ಈಗಾಗಲೇ ಶೇ. 90ರಷ್ಟು ಕಾಮಗಾರಿ ಪೂರ್ಣಗೊಂಡಿದ್ದು, ಸಾರ್ವಜನಿಕರ ಸಹಕಾರ ಶ್ಲಾಘನೀಯ. ತಡೆಯಾಜ್ಞೆ ತಂದಿರುವ ಕೆಲವರನ್ನು ಮನವೊಲಿಸುವ ಪ್ರಕ್ರಿಯೆ ನಡೆಯುತ್ತಿದೆ ಎಂದರು.

ಈ ಹಿಂದೆ ಮಾಜಿ ಶಾಸಕರ ಅವಧಿಯಲ್ಲಿ ಬಾಕಿ ಉಳಿದಿದ್ದ ಈ ಕಾರ್ಯವನ್ನು ಈಗ ಪೂರ್ಣಗೊಳಿಸಲಾಗುತ್ತಿದೆ. ಸುಸಜ್ಜಿತ ರಸ್ತೆ, ಬೀದಿ ದೀಪ, ಚರಂಡಿ ವ್ಯವಸ್ಥೆ ಹಾಗೂ ಜನದಟ್ಟಣೆ ನಿಯಂತ್ರಣಕ್ಕಾಗಿ ಈ ಕ್ರಮ ಅನಿವಾರ್ಯವಾಗಿದೆ. ಮಂದಿರ-ಮಸೀದಿಗಳೂ ಈ ಯೋಜನೆಗೆ ಸಹಕರಿಸುತ್ತಿವೆ ಎಂದು ಅವರು ತಿಳಿಸಿದರು.

ಎಪಿಎಂಸಿ ಮಾರುಕಟ್ಟೆ ಸುಧಾರಣೆ ಹಾಗೂ ಕಣ್ಣಿನ ಚಿಕಿತ್ಸೆಯ ಕಾರಣದಿಂದ ವೀಕ್ಷಣೆ ಕೊಂಚ ವಿಳಂಬವಾಯಿತು ಎಂದು ಅವರು ಇದೇ ಸಂದರ್ಭದಲ್ಲಿ ಸ್ಪಷ್ಟಪಡಿಸಿದರು.

ಕಾರ್ಯಕ್ರಮದಲ್ಲಿ ಮುಖಂಡರಾದ ಶಿವಪುತ್ರಪ್ಪ ಪಾಟೀಲ್, ಸತೀಶ ಕಟಂಬಲೆ, ಈರಣ್ಣಾ ಹತ್ತರಕಿ ಸೇರಿದಂತೆ ಹಲವು ಪ್ರಮುಖರು ಉಪಸ್ಥಿತರಿದ್ದರು.

ಪಟ್ಟಣದ ಹಳೆ ತಹಸೀಲ್ ಕಚೇರಿಯಿಂದ ದರ್ಗಾ ಬೇಸ್ ವರೆಗಿನ ಸ್ಥಳವನ್ನು ಕರ್ನಾಟಕ ರಾಜ್ಯ ನೀತಿ ಮತ್ತು ಯೋಜನಾ ಆಯೋಗದ ಉಪಾಧ್ಯಕ್ಷ ಹಾಗೂ ಶಾಸಕ ಬಿ.ಆರ್. ಪಾಟೀಲ್ ವೀಕ್ಷಿಸಿದರು.

ಶ್ರೀ ನಿಜಶರಣ ಅಂಬಿಗರ ಚೌಡಯ್ಯ ಜಾತ್ರಾ ಮಹೋತ್ಸವ

ಕಾಳಗಿ: ಪಟ್ಟಣದಲ್ಲಿ ಪ್ರತಿ ವರ್ಷದಂತೆ ಈ ವರ್ಷವೂ ಶ್ರೀ ನಿಜಶರಣ ಅಂಬಿಗರ ಚೌಡಯ್ಯನವರ ಜಾತ್ರಾ ಮಹೋತ್ಸವವು ಅತ್ಯಂತ ಸಡಗರ-ಸಂಭ್ರಮ ಹಾಗೂ ಧಾರ್ಮಿಕ ವೈಭವದೊಂದಿಗೆ ಜರುಗಿತು.

ಜಾತ್ರೆಯ ಅಂಗವಾಗಿ ಆಯೋಜಿಸಲಾಗಿದ್ದ ಅಂಬಿಗರ ಚೌಡಯ್ಯನವರ ಭವ್ಯ ಮೆರವಣಿಗೆಗೆ ಶ್ರೀ ನೀಲಕಂಠ ಮರಿದೇವರು ಚಾಲನೆ ನೀಡಿದರು. ದೇವಸ್ಥಾನದಿಂದ ಆರಂಭವಾದ ಈ ಮೆರವಣಿಗೆಯು ಪಟ್ಟಣದ ಪ್ರಮುಖ ಬೀದಿಗಳಲ್ಲಿ ಸಂಚರಿಸಿತು. ಮೆರವಣಿಗೆ ಯುದ್ದಕ್ಕೂ ವಿವಿಧ ವಾದ್ಯಮೇಳಗಳು, ಭಕ್ತರ ಜಯ ಘೋಷ ಹಾಗೂ ಸಾಂಸ್ಕೃತಿಕ ಕಲಾತಂಡಗಳು ಮೆರುಗು ನೀಡಿದವು. ಭಕ್ತಾದಿಗಳು ದಾರಿಯುದ್ದಕ್ಕೂ ದೇವರಿಗೆ ಪೂಜೆ ಸಲ್ಲಿಸಿ ದರ್ಶನ ಪಡೆದರು.

ಈ ಸಂದರ್ಭದಲ್ಲಿ ದೇವಸ್ಥಾನದ ಗೌರವಾಧ್ಯಕ್ಷ ಭೀಮರಾಯ ಮಲಘಾಣ, ಅಧ್ಯಕ್ಷ ಪ್ರಸಾದ ರಟಕಲ್, ಉಪಾಧ್ಯಕ್ಷ ಕಾಶಿನಾಥ ರಾಜಾಪೂರ, ಮುಖಂಡರಾದ ನೀಲಕಂಠ ಗುತ್ತೇದಾರ, ಶಿವಶರಣಪ್ಪ ಕಮಲಾಪುರ, ರಾಘವೇಂದ್ರ ಗುತ್ತೇದಾರ ಸೇರಿದಂತೆ ಸಮಿತಿಯ ಪ್ರಮುಖರು ಉಪಸ್ಥಿತರಿದ್ದರು.

ಗಣ್ಯರಾದ ರಮೇಶ ಕಿಟ್ಟದ, ಗುರುರಾಜ ಮದ್ದೂರ, ರತ್ನಮ್ಮ ಡೊಣ್ಣೂರ, ದತ್ತು ಗುತ್ತೇದಾರ ಹಾಗೂ ಪಟ್ಟಣದ ನೂರಾರು ಭಕ್ತಾದಿಗಳು ಪಾಲ್ಗೊಂಡಿದ್ದರು. ಯಾವುದೇ ಅಹಿತಕರ ಘಟನೆ ನಡೆಯದಂತೆ ಪಟ್ಟಣದ ಪೊಲೀಸರು ಸೂಕ್ತ ಬಂದೋಬಸ್ತ್ ಏರ್ಪಡಿಸಿದ್ದರು.

ಶ್ರೀ ನಿಜಶರಣ ಅಂಬಿಗರ ಚೌಡಯ್ಯನವರ ಜಾತ್ರಾ ಮಹೋತ್ಸವವು ಅತ್ಯಂತ ಸಡಗರ-ಸಂಭ್ರಮ ಹಾಗೂ ಧಾರ್ಮಿಕ ವೈಭವದೊಂದಿಗೆ ಜರುಗಿತು.

ಕನಕಗುರು ಪೀಠದ ಶ್ರೀಗಳು ನಿಧನಕ್ಕೆ ಸಚಿವ ಖರ್ಗೆ ಕಂಬನಿ

ಕಲಬುರಗಿ: ದೇವದುರ್ಗ ತಾಲೂಕಿನ ತಿಂಥಣಿ ಬ್ರಿಜ್ ಕಾಗಿನೆಲೆ ಕನಕ ಗುರುಪೀಠದ ಪೀಠಾಧಿಪತಿ ಶ್ರೀ ಸಿದ್ದರಾಮನಂದಪುರಿ ಸ್ವಾಮೀಜಿ (55) ಗುರುವಾರ ಬೆಳಗಿನ ಜಾವ ನಿಧನರಾದ ಸುದ್ದಿ ಕೇಳಿ ಅತೀವ ದುಃಖವಾಗಿದೆ ಎಂದು ಆರ್ ಡಿಪಿಆರ್, ಕಲಬುರಗಿ ಜಿಲ್ಲಾ ಉಸ್ತುವಾರಿ ಸಚಿವ ಪ್ರಿಯಾಂಕ್ ಖರ್ಗೆ ಸಂತಾಪ ಸೂಚಿಸಿದ್ದಾರೆ.

ಸ್ವಾಮೀಜಿಗಳು ಬಾಲ್ಯದಿಂದಲೇ ಅಧ್ಯಾತ್ಮಿಕ ಚಿಂತನೆಗಳನ್ನು ಬೆಳೆಸಿಕೊಂಡಿದ್ದರು. ರಾಯಚೂರು ಜಿಲ್ಲೆ ದೇವದುರ್ಗ ತಾಲೂಕಿನ ತಿಂಥಣಿ ಬ್ರಿಜ್ ಬಳಿ ಕನಕಗುರು ಪೀಠ ಸ್ಥಾಪನೆ ಮಾಡಿ ಪೀಠಾಧಿಪತಿಗಳಾದರು. ಆ ಮೂಲಕ ಸಮಾಜಸೇವೆ, ಉಚಿತ ಶಿಕ್ಷಣ, ದಾಸೋಹ, ಸರ್ವಧರ್ಮ ಸಮನ್ವಯತೆ ವೈಗೂಡಿಸಿಕೊಳ್ಳುವುದರ ಜೊತೆಗೆ ಪ್ರಗತಿಪರ ಚಿಂತನೆಯುಳ್ಳ ಸಾಮಾಜಿಕ ಕಳಕಳಿಯುಳ್ಳವರಾಗಿದ್ದರು.

ಅವರ ಸಾಮಾಜಿಕ ಸೇವೆ, ಸಮಾಜಕ್ಕೆ ಮಾರ್ಗದರ್ಶನ ಮತ್ತಷ್ಟು ಬೇಕಿತ್ತು ಎನ್ನುವ ಸಮಯದಲ್ಲೇ ಶ್ರೀಗಳು ಅಕಾಲಿನ ನಿಧನ ಹೊಂದಿದ್ದಾರೆ. ಶ್ರೀಗಳ ಅಕಾಲಿಕ ನಿಧನದ ಅವರ ಅಪಾರ ಭಕ್ತರಲ್ಲಿ ಹಾಗೂ ಸಾರ್ವಜನಿಕರಲ್ಲಿ ನೋವುಂಟು ಮಾಡಿದೆ. ಅವರ ದುಃಖದಲ್ಲಿ ನಾನೂ ಕೂಡಾ ಭಾಗಿಯಾಗಿದ್ದೇನೆ ಆ ನೋವು ಭರಿಸುವ ಶಕ್ತಿ ಭಗವಂತ ನೀಡಲಿ ಎಂದು ಪ್ರಾರ್ಥನೆ ಸಲ್ಲಿಸುತ್ತೇನೆ ಎಂದು ಸಚಿವರು ತಮ್ಮ ಶೋಕ ಸಂದೇಶದಲ್ಲಿ ತಿಳಿಸಿದ್ದಾರೆ.

ಭಕ್ತಿ-ಭಾವದಿಂದ ಶ್ರೀ ಸಿದ್ಧರಾಮೇಶ್ವರ ಜಯಂತಿ ಆಚರಣೆ

ಚಿಂಚೋಳಿ: ತಾಲೂಕು ಆಡಳಿತ ಸೌಧ 'ಪ್ರಜಾಸೌಧ'ದಲ್ಲಿ ಭೋವಿ ಸಮಾಜದ ಆರಾಧ್ಯ ದೈವ ಶಿವಯೋಗಿ ಶ್ರೀ ಸಿದ್ಧರಾಮೇಶ್ವರ ಜಯಂತಿಯನ್ನು ಅತ್ಯಂತ ಸಡಗರದಿಂದ ಆಚರಿಸಲಾಯಿತು.

ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿದ ಪಂಚ ಗ್ಯಾರಂಟಿ ಯೋಜನೆ ಸಮಿತಿ ಅಧ್ಯಕ್ಷ ಬಸವರಾಜ ಮಲಿ ಮಾತನಾಡಿ, 12ನೇ ಶತಮಾನದಲ್ಲಿ ಸಿದ್ಧರಾಮೇಶ್ವರರು ಅಕ್ಷರ ಜ್ಞಾನವಿಲ್ಲದಿದ್ದರೂ ಮಹಾಜ್ಞಾನಿಗಳಾಗಿದ್ದರು. ಬಸವಣ್ಣ ಹಾಗೂ ಅಲ್ಲಮಪ್ರಭುಗಳ ಜೊತೆಗೂಡಿ ಲೋಕ ಕಲ್ಯಾಣಕ್ಕಾಗಿ ಕ್ರಾಂತಿ ಮಾಡಿದವರು ಎಂದು ಸ್ಮರಿಸಿದರು.

ತಹಸೀಲ್ದಾರ್ ಸುಬ್ಬಣ್ಣ ಜಮಖಂಡಿ ಮಾತನಾಡಿ, ಭೋವಿ ಸಮಾಜವು ಕಾಯಕದಲ್ಲಿ ಕೈಲಾಸ ಕಂಡ ಶಾಂತಪ್ರಿಯ ಸಮಾಜವಾಗಿದ್ದು, ಸರಕಾರಿ ಸೌಲಭ್ಯಗಳನ್ನು ಬಳಸಿಕೊಂಡು ಶೈಕ್ಷಣಿಕವಾಗಿ ಮತ್ತಷ್ಟು ಸಬಲರಾಗಬೇಕು ಎಂದರು.

ಮುಖಂಡ ಹಣಮಂತ ಭೋವಿ ಮಾತನಾಡಿ, ಮಕ್ಕಳಿಗೆ ಆಯುಧಗಳ ಬದಲು ಪುಸ್ತಕ-ಪೆನು ನೀಡಿ ಶಿಕ್ಷಣವಂತರನ್ನಾಗಿ ಮಾಡುವ ಮೂಲಕ ಸಮಾಜವನ್ನು ಮುಖ್ಯವಾಹಿನಿಗೆ ತರಬೇಕು ಎಂದು ಕರೆ ನೀಡಿದರು. ಪ್ರೊ. ಮಲ್ಲಿಕಾರ್ಜುನ ಪಾಲಾ ಮೂಲ ಅವರು ಉಪನ್ಯಾಸ ನೀಡಿದರು. ಇದಕ್ಕೂ ಮುನ್ನ ಅಂಬೇಡ್ಕರ್ ವೃತ್ತದಿಂದ ಪ್ರಜಾಸೌಧದವರೆಗೆ ಭಾವಚಿತ್ರದ ಭವ್ಯ ಮೆರವಣಿಗೆ ನಡೆಯಿತು. ಕಾರ್ಯಕ್ರಮದಲ್ಲಿ ಸಮಾಜದ ಅಧ್ಯಕ್ಷ ಜಗನ್ನಾಥ ರಾಜಾಪೂರ ಸೇರಿದಂತೆ ವಿವಿಧ ಮುಖಂಡರು ಹಾಗೂ ಅಧಿಕಾರಿಗಳು ಉಪಸ್ಥಿತರಿದ್ದರು.

ಚಿಂಚೋಳಿ ತಾಲೂಕಿನ ಆಡಳಿತ ಸೌಧ 'ಪ್ರಜಾಸೌಧ'ದಲ್ಲಿ ಭೋವಿ ಸಮಾಜದ ಆರಾಧ್ಯ ದೈವ ಶಿವಯೋಗಿ ಶ್ರೀ ಸಿದ್ಧರಾಮೇಶ್ವರ ಜಯಂತಿಯನ್ನು ಅತ್ಯಂತ ಸಡಗರದಿಂದ ಆಚರಿಸಲಾಯಿತು.

ಕಲಬುರಗಿ ಭಾಗದಲ್ಲಿ ಕ್ರೀಡೆಗೆ ಹೆಚ್ಚಿನ ಆದ್ಯತೆ ನೀಡಬೇಕು | ಬಾಸ್ಕೆಟ್ ಬಾಲ್ ರೂರಲ್ ಲೀಗ್ ಪಂದ್ಯಾವಳಿಗೆ ಶಾಸಕ ಚಾಲನೆ

ಕ್ರೀಡಾಂಗಣಕ್ಕೆ ಅಗತ್ಯ ಸೌಲಭ್ಯ: ಅಲ್ಲಮಪ್ರಭು ಪಾಟೀಲ್ ಭರವಸೆ

ಕಲಬುರಗಿ: ಕಲಬುರಗಿ ಭಾಗದಲ್ಲಿ ಕ್ರೀಡೆಗೆ ಹೆಚ್ಚಿನ ಆದ್ಯತೆ ನೀಡಬೇಕಿದೆ. ನಗರದ ಅಕ್ಕ ಮಹಾದೇವಿ ಕಾಲನಿಯಲ್ಲಿರುವ ಬಾಸ್ಕೆಟ್‌ಬಾಲ್ ಅಂಕಣಕ್ಕೆ ಕುಡಿಯುವ ನೀರು, ಶೌಚಗೃಹ ಮತ್ತು ಡ್ರೆಸಿಂಗ್ ರೂಂ ಸೇರಿದಂತೆ ಅಗತ್ಯ ಮೂಲಭೂತ ಸೌಕರ್ಯಗಳನ್ನು ಶೀಘ್ರವೇ ಒದಗಿಸಲಾಗುವುದು ಎಂದು ಶಾಸಕ ಅಲ್ಲಮಪ್ರಭು ಪಾಟೀಲ್ ಭರವಸೆ ನೀಡಿದರು.

ನಗರದ ಅಕ್ಕಮಹಾದೇವಿ ಕಾಲನಿಯ ಬಾಸ್ಕೆಟ್ ಬಾಲ್ ಅಂಕಣದಲ್ಲಿ ರಾಜ್ಯ ಹಾಗೂ ಜಿಲ್ಲಾ ಬಾಸ್ಕೆಟ್ ಬಾಲ್ ಸಂಸ್ಥೆಗಳ ಸಹಯೋಗದಲ್ಲಿ ಏರ್ಪಡಿಸಿದ್ದ 'ಗುಲ್ಬರ್ಗ ವಿಭಾಗದ ಬಾಸ್ಕೆಟ್ ಬಾಲ್ ರೂರಲ್ ಲೀಗ್' ಪಂದ್ಯಾವಳಿಗೆ ಚಾಲನೆ ನೀಡಿ ಅವರು ಮಾತನಾಡಿದರು.

ನಗರದ ವಿವಿಧೆಡೆ ಚಿಕ್ಕಪುಟ್ಟ ಕ್ರೀಡಾ ಅಂಕಣಗಳ ಅಭಿವೃದ್ಧಿಗೆ ಅನುದಾನ ನೀಡಲಾಗುತ್ತಿದ್ದು, ಚಂದ್ರಕಾಂತ ಪಾಟೀಲ್ ಕ್ರೀಡಾಂಗಣದ ಪಕ್ಕದಲ್ಲಿ ಬೃಹತ್ ಮಹಿಳಾ ಕ್ರೀಡಾಂಗಣ ನಿರ್ಮಿಸಲಾಗುತ್ತಿದೆ ಎಂದು ಅವರು ತಿಳಿಸಿದರು.

ನಗರ ಪೊಲೀಸ್ ಆಯುಕ್ತ ಡಾ.ಶರಣಪ್ಪ ಎಸ್.ಡಿ. ಮಾತನಾಡಿ, ಬಾಸ್ಕೆಟ್ ಬಾಲ್ ನಿರಂತರ ಚಲನಶೀಲತೆಯ ಕ್ರೀಡೆಯಾಗಿದೆ. ಕ್ರೀಡೆಯಲ್ಲಿ ಸಕ್ರಿಯವಾಗಿ ತೊಡಗಿಸಿ ಕೊಳ್ಳುವುದರಿಂದ ದೈಹಿಕ ಮತ್ತು ಮಾನಸಿಕ ಆರೋಗ್ಯ ವೃದ್ಧಿಸುವುದಲ್ಲದೆ, ಸಂಘಟನಾ ಕೌಶಲವೂ ಬೆಳೆಯುತ್ತದೆ. ರಾಜ್ಯ ಮತ್ತು ರಾಷ್ಟ್ರಮಟ್ಟದಲ್ಲಿ ಕ್ರೀಡಾಪಟುಗಳಿಗೆ ಹತ್ತಾರು ಅವಕಾಶಗಳಿದ್ದು, ಯುವಕರು ಇದರ ಸದುಪಯೋಗ ಪಡೆಯಬೇಕು ಎಂದು ಕರೆ ನೀಡಿದರು.

ಕಾರ್ಯಕ್ರಮದಲ್ಲಿ ಅಸೋಸಿಯೇಷನ್ ಅಧ್ಯಕ್ಷ ಮಲ್ಲಿಕಾರ್ಜುನ ಉದನೂರ, ಕಾರ್ಯದರ್ಶಿ ಚಂದ್ರಕಾಂತ ಶಿರೋಳಿ, ತರಬೇತುದಾರ ಪ್ರವಿಣಕುಮಾರ ಪುಣೆ, ಮಹೇಶ ಪವಾರ, ಭರತ್ ಭೂಷಣ, ಡಾ. ಪ್ರತಾಪ್ ಸಿಂಗ್ ತಿವಾರಿ ಸೇರಿದಂತೆ ಗಣ್ಯರು ಉಪಸ್ಥಿತರಿದ್ದರು.

ಡಾ. ರಾಜಕುಮಾರ ಸ್ವಾಗತಿಸಿದರು ಮತ್ತು ಡಾ. ಶಂಕರ್‌ಸೂರೆ ಪ್ರಾಸ್ತಾವಿಕವಾಗಿ ಮಾತನಾಡಿದರು.

ನಗರದ ಅಕ್ಕಮಹಾದೇವಿ ಕಾಲನಿಯ ಬಾಸ್ಕೆಟ್ ಬಾಲ್ ಅಂಕಣದಲ್ಲಿ ರಾಜ್ಯ ಹಾಗೂ ಜಿಲ್ಲಾ ಬಾಸ್ಕೆಟ್ ಬಾಲ್ ಸಂಸ್ಥೆಗಳ ಸಹಯೋಗದಲ್ಲಿ ಏರ್ಪಡಿಸಿದ್ದ ''ಗುಲ್ಬರ್ಗ ವಿಭಾಗದ ಬಾಸ್ಕೆಟ್ ಬಾಲ್ ರೂರಲ್ ಲೀಗ್'' ಪಂದ್ಯಾವಳಿಗೆ ಶಾಸಕ ಅಲ್ಲಮಪ್ರಭು ಪಾಟೀಲ್ ಚಾಲನೆ ನೀಡಿದರು.

ಎಂಟು ತಂಡಗಳ ಕಾದಾಟ

ಈ ಪಂದ್ಯಾವಳಿಯಲ್ಲಿ ಅಕ್ಕಮಹಾದೇವಿ ತಂಡ, ಕುವೆಂಪು ತಂಡ, ಮಾದನಹಿಪ್ಪರಗಿಯ ವಿವೇಕಾನಂದ ತಂಡ, ಭಗವಾನ್ ತಂಡ, ಬಳ್ಳಾರಿಯ ವೈಸಿಬಿಸಿ, ನಂದಿ ತಂಡ, ಬೀದರ್‌ನ ಎಸಿಬಿಸಿ ಹಾಗೂ ಹುಮನಾಬಾದ್ ನ ಮಾಣಿಕಪ್ರಭು ತಂಡ ಸೇರಿದಂತೆ ಒಟ್ಟು 8 ತಂಡಗಳು ಭಾಗವಹಿಸಿವೆ. ಗುರುವಾರ ಅಂತಿಮ ಪಂದ್ಯಗಳು ನಡೆಯಲಿದ್ದು, ವಿಜೇತ ತಂಡಗಳು ರಾಜ್ಯಮಟ್ಟದ ಪಂದ್ಯಾವಳಿಗೆ ಅರ್ಹತೆ ಪಡೆಯಲಿವೆ.

> ಕ್ರೀಡಾ ಕ್ಷೇತ್ರದ ಅಭಿವೃದ್ಧಿಗೆ ಕಲಬುರಗಿ ನಗರದ ಚಂದ್ರಕಾಂತ ಪಾಟೀಲ್ ಕ್ರೀಡಾಂಗಣದ ಪಕ್ಕ ಬೃಹತ್ ಮಹಿಳಾ ಕ್ರೀಡಾಂಗಣ ನಿರ್ಮಿಸಲಾಗುತ್ತಿದೆ. ನಗರದ ವಿವಿಧೆಡೆ ಚಿಕ್ಕಪುಟ್ಟ ಬೇರೆ ಬೇರೆ ಕ್ರೀಡೆಗಳ ಅಂಕಣವನ್ನು ಅಭಿವೃದ್ಧಿ ಪಡಿಸಲು ಅನುದಾನ ಒದಗಿಸಲಾಗುತ್ತಿದೆ.
>
> - **ಅಲ್ಲಮಪ್ರಭು ಪಾಟೀಲ್,** ಶಾಸಕ

> ನಮ್ಮ ಭಾಗದಲ್ಲಿ ಕ್ರೀಡೆಗೆ ಆದ್ಯತೆ ನೀಡಬೇಕಿದ್ದು, ಕ್ರೀಡೆಯಲ್ಲಿ ರಾಜ್ಯ, ರಾಷ್ಟ್ರ, ಅಂತಾರಾಷ್ಟ್ರೀಯ ಮಟ್ಟದಲ್ಲಿ ಹಲವು ಅವಕಾಶಗಳಿವೆ. ಯುವಕರು ಸಕ್ರೀಯವಾಗಿ ತೊಡಗಿಸಿಕೊಂಡರೆ ಬೆಳವಣಿಗೆ ಜತೆಗೆ ವ್ಯಕ್ತಿತ್ವ ರೂಪಿಸಿಕೊಳ್ಳಲು ಸಹಕಾರಿ ಆಗಲಿದೆ.
>
> - **ಡಾ.ಶರಣಪ್ಪ ಎಸ್.ಡಿ.,** ನಗರ ಪೊಲೀಸ್ ಆಯುಕ್ತ

ಸಮಾಚಾರ ಸಣ್ಣದಲ್ಲ

ಟಿ20 ಕ್ರಿಕೆಟ್ ಸರಣಿ: ಸುಂದರ್ ಹೊರಕ್ಕೆ

ದೆಹಲಿ: ನ್ಯೂಜಿಲೆಂಡ್ ವಿರುದ್ಧದ ಮುಂಬರುವ ಐದು ಪಂದ್ಯಗಳ ಟಿ20 ಸರಣಿಯಿಂದ ಭಾರತ ತಂಡದ ಆಲ್‌ರೌಂಡರ್ ವಾಷಿಂಗ್ಟನ್ ಸುಂದರ್ ಹೊರಗುಳಿದಿದ್ದಾರೆ. ವಡೋದರಾದಲ್ಲಿ ನಡೆದ ಆರಂಭಿಕ ಏಕದಿನ ಪಂದ್ಯದ ವೇಳೆ ಎದುರಾದ ಗಾಯದ ಸಮಸ್ಯೆಯಿಂದಾಗಿ ಏಕದಿನ ಸರಣಿಯಿಂದ ಹೊರಗುಳಿದಿದ್ದರು. ಇದೀಗ ಅವರನ್ನು ನ್ಯೂಜಿಲೆಂಡ್ ವಿರುದ್ಧದ ಟಿ20 ಸರಣಿಯಿಂದ ಹೊರಗಿಡಲಾಗಿದೆ ಎಂದು ಬಿಸಿಸಿಐ ಅಧಿಕಾರಿಯೊಬ್ಬರು ತಿಳಿಸಿದ್ದಾರೆ. ಸುಂದರ್ ಭಾರತದ ಅತ್ಯಂತ ಪರಿಣಾಮಕಾರಿ ಟಿ20 ಆಲ್‌ರೌಂಡರ್‌ಗಳಲ್ಲಿ ಒಬ್ಬರಾಗಿದ್ದು, ಇದುವರೆಗೂ ಅವರು 16 ಇನ್ನಿಂಗ್ಸ್‌ಗಳಿಂದ 13.05 ಸರಾಸರಿ ಮತ್ತು 6.16 ಎಕಾನಮಿ ರೇಟ್‌ನಲ್ಲಿ 20 ವಿಕೆಟ್‌ಗಳನ್ನು ಗಳಿಸಿದ್ದಾರೆ. ಈ ತಿಂಗಳ ಅಂತ್ಯದ ವರೆಗೂ ಅವರು ಗಾಯದ ಸಮಸ್ಯೆಯಿಂದ ಮುಕ್ತರಾಗದಿದ್ದರೆ ಮುಂದಿನ ತಿಂಗಳು ಆರಂಭವಾಗಲಿರುವ ಟಿ20 ವಿಶ್ವಕಪ್ ತಂಡಕ್ಕೂ ವಾಷಿಂಗ್ಟನ್ ಸುಂದರ್ ಆಯ್ಕೆ ಆಗುವ ಸಾಧ್ಯತೆ ಕಡಿಮೆ ಎನ್ನಲಾಗುತ್ತಿದೆ. ಸದ್ಯ ವಾಷಿಂಗ್ಟನ್ ಸುಂದರ್ ಬೆಂಗಳೂರಿನಲ್ಲಿ ಬಿಸಿಸಿಐ ಪುನಶ್ಚೇತನಾ ಕೇಂದ್ರದಲ್ಲಿ ಸೂಕ್ತ ಚಿಕಿತ್ಸೆಯ ಜತೆಗೆ ತಮ್ಮ ಫಿಟ್ನೆಸ್ ಕಾಯ್ದುಕೊಳ್ಳುವತ್ತ ಗಮನ ಕೇಂದ್ರೀಕರಿಸಿದ್ದಾರೆ.

5 ವಿಕೆಟ್ ಪಡೆದ ಹೆನಿಲ್ ಪಟೇಲ್

ಬುಲವಾಯೊ: ಅಂಡರ್-19 ವಿಶ್ವಕಪ್ ಕ್ರಿಕೆಟ್ ಪಂದ್ಯಾವಳಿ ಗುರುವಾರ ಆರಂಭವಾಗಿದ್ದು, ಭಾರತ ಯುವ ಪಡೆ ತನ್ನ ಮೊದಲ ಪಂದ್ಯದಲ್ಲಿ ಅಮೆರಿಕ ತಂಡವನ್ನು ಎದುರಿಸಿದೆ. ಪಂದ್ಯದಲ್ಲಿ ಮೊದಲು ಬ್ಯಾಟಿಂಗ್ ಮಾಡಿದ ಅಮೆರಿಕ ಕೇವಲ 107 ರನ್‌ಗಳಿಗೆ ಆಲೌಟ್ ಆಯಿತು. ಎದುರಾಳಿ ತಂಡವನ್ನು ಕಡಿಮೆ ಮೊತ್ತಕ್ಕೆ ಕಟ್ಟಿಹಾಕುವಲ್ಲಿ ಪ್ರಮುಖ ಪಾತ್ರವಹಿಸಿದ ಯುವ ವೇಗಿ ಹೆನಿಲ್ ಪಟೇಲ್ ತಮ್ಮ ಮೊದಲ ಪಂದ್ಯದಲ್ಲೇ ಅದ್ಭುತ ಪ್ರದರ್ಶನ ನೀಡಿ, ಕೇವಲ 16 ರನ್‌ಗಳನ್ನು ನೀಡಿ 5 ವಿಕೆಟ್ ಗಳಿಸಿದರು. ಬೌಲಿಂಗ್‌ಗೆ ಅನುಕೂಲಕರವಾದ ಬುಲವಾಯೊ ಕ್ರಿಕೆಟ್ ಸ್ಟೇಡಿಯಂ ಪಿಚ್‌ನಲ್ಲಿ ವೇಗಿ ಹೆನಿಲ್ ಪಟೇಲ್ ತಮ್ಮ ಮೊದಲ ಓವರ್‌ನಲ್ಲೇ ಅತ್ಯುತ್ತಮ ದಾಳಿ ನಡೆಸಿ, ಆರಂಭಿಕ ಆಟಗಾರ ಅಮರಿಂದರ್ ಗಿಲ್ ಅವರನ್ನು ಔಟ್ ಮಾಡಿದ ನಂತರ, ಅರ್ಜುನ್ ಮಹೇಶ್ ಅವರ ವಿಕೆಟ್ ಪಡೆದರು. ಆ ಬಳಿಕ ಅಮೆರಿಕ ನಾಯಕ ಉತ್ಕರ್ಷ್ ಶ್ರೀವಾಸ್ತವ ಅವರನ್ನು ಶೂನ್ಯಕ್ಕೆ ಪೆವಿಲಿಯನ್‌ಗಟ್ಟಿದರು. ತಮ್ಮ ಮೊದಲ ಸ್ಪೆಲ್‌ನಲ್ಲಿ ಮೂರು ವಿಕೆಟ್‌ಗಳನ್ನು ಪಡೆದ ಹೆನಿಲ್, 35ನೇ ಓವರ್‌ನಲ್ಲಿ ಸತತ ಎಸೆತಗಳಲ್ಲಿ ಎರಡು ವಿಕೆಟ್‌ಗಳೊಂದಿಗೆ ಪಂದ್ಯದಲ್ಲಿ ಐದು ವಿಕೆಟ್‌ಗಳನ್ನು ಪಡೆಯುವಲ್ಲಿ ಯಶಸ್ವಿಯಾದರು.

ವಿಜಯ್ ಹಜಾರೆ ಕ್ರಿಕೆಟ್ ಟೂರ್ನಿ | ವಿದರ್ಭ ಎದುರು ಮಾಯಾಂಕ್ ಪಡೆಗೆ ಸೋಲು

ಕರ್ನಾಟಕದ ಫೈನಲ್ ಕನಸು ಭಗ್ನ

ಬೆಂಗಳೂರು: ಇಲ್ಲಿ ಗುರುವಾರ ನಡೆದ ವಿಜಯ್ ಹಜಾರೆ ಕ್ರಿಕೆಟ್ ಟೂರ್ನಿಯ ಸೆಮಿ ಫೈನಲ್ ಪಂದ್ಯದಲ್ಲಿ ಕರ್ನಾಟಕವನ್ನು 6 ವಿಕೆಟ್‌ಗಳಿಂದ ಸೋಲಿಸಿದ ವಿದರ್ಭ ತಂಡವು ಫೈನಲ್ ಪ್ರವೇಶಿಸಿದೆ.

ನಗರದ ಹೊರ ವಲಯದ ಬಿಸಿಸಿಐ ಕೇಂದ್ರದ ಮೈದಾನದಲ್ಲಿ ನಡೆದ ಉಪಾಂತ್ಯ ಪಂದ್ಯದಲ್ಲಿ ಮೊದಲು ಬ್ಯಾಟ್ ಮಾಡಿದ ಕರ್ನಾಟಕವು 49.4 ಓವರ್‌ಗಳಲ್ಲಿ ಆಲೌಟ್ ಆಗಿ 280 ರನ್ ಗಳಿಸಿತು. ಆ ಮೊತ್ತವನ್ನು ಬೆಂಬತ್ತಿದ್ದ ವಿದರ್ಭ ತಂಡವು 46.2 ಓವರ್‌ಗಳಲ್ಲಿ ಕೇವಲ 4 ವಿಕೆಟ್‌ಗೆ 284 ರನ್ ಬಾರಿಸಿ ಗೆಲುವಿನ ಕೇಕೆ ಹಾಕಿತು.

ಟಾಸ್ ಗೆದ್ದ ಕರ್ನಾಟಕವು ಮೊದಲು ಬ್ಯಾಟಿಂಗ್ ಆಯ್ದುಕೊಂಡಿತು. ರಾಜ್ಯ ತಂಡದ ಮೊತ್ತ ಕೇವಲ 14 ರನ್ ಆಗುವಷ್ಟರಲ್ಲಿ 9 ರನ್ ಗಳಿಸಿದ ನಾಯಕ ಮಾಯಾಂಕ್ ಅಗರ್ವಾಲ್ ತಮ್ಮ ವಿಕೆಟ್ ಕಳೆದುಕೊಂಡರು. ಆ ಬಳಿಕ ಮತ್ತೆ ತಂಡದ ಮೊತ್ತ 20 ರನ್ ಆದಾಗ ಕೇವಲ 4 ರನ್ ಗಳಿಸಿದ್ದ ಇನ್ನೋರ್ವ ಆರಂಭಿಕ ಆಟಗಾರ ದೇವದತ್ ಪಡಿಕ್ಕಲ್ ತಮ್ಮ ವಿಕೆಟ್ ಒಪ್ಪಿಸಿ ಪೆವಿಲಿಯನ್‌ಗೆ ಮರಳಿದರು. ನಂತರ ಕರುಣ್ ನಾಯರ್ ಮತ್ತು ಧ್ರುವ್ ಪ್ರಭಾಕರ್ ಕರ್ನಾಟಕ ತಂಡಕ್ಕೆ ಆಸರೆಯಾಗಿ ಉತ್ತಮ ಜತೆಯಾಟ ಪ್ರದರ್ಶಿಸಿದರು. ಕರುಣ್ 90 ಬಾಲ್‌ಗಳನ್ನು ಎದುರಿಸಿ 76 ರನ್ ಗಳಿಸಿದರೆ, ಧ್ರುವ್ 33 ಎಸೆತಗಳನ್ನು ಎದುರಿಸಿ 28 ರನ್ ಗಳಿಸಿದರು. ಆ ನಂತರ ಕ್ರೀಸ್‌ಗೆ ಬಂದ ಶ್ರೀಜಿತ್ ಕೂಡಾ ಅರ್ಧ ಶತಕ (53 ಬಾಲ್, 54 ರನ್) ಬಾರಿಸಿ ಕರ್ನಾಟಕವನ್ನು ಸುಭದ್ರ ಸ್ಥಿತಿಯತ್ತ ಕೊಂಡೊಯ್ಯಲು ಪ್ರಯತ್ನಿಸಿದರು.

ಉಳಿದಂತೆ ರಾಜ್ಯ ತಂಡದ ಪರ ಶ್ರೇಯಸ್ ಗೋಪಾಲ್ 36 ರನ್ ಗಳಿಸಿದರೆ, ಅಭಿನವ್ ಮನೋಹರ್ 26 ರನ್ ಗಳಿಸಿದರು. ವೈಶಾಕ್ ವಿಜಯ್ ಕುಮಾರ್ 11 ಬಾಲ್‌ಗಳನ್ನು ಎದುರಿಸಿ 17 ರನ್‌ದ ಗಳಿಸಿದರು. ಉಳಿದಂತೆ ವಿದ್ಯಾಧರ್ ಪಾಟೀಲ್ ಕೇವಲ 1 ರನ್, ಅಭಿಲಾಷ್ ಶೆಟ್ಟಿ 4 ರನ್ ಗಳಿಸಿದರೆ, ವಿದ್ವತ್ ಕಾವೇರಪ್ಪ ಯಾವುದೇ ರನ್ ಗಳಿಸಲಿಲ್ಲ.

ಉತ್ತಮ ಬೌಲಿಂಗ್ ಪ್ರದರ್ಶನ ತೋರಿದ ದರ್ಶನ್ ನಲ್ಕಂಡೆ.

ಅಮನ್ ಮೊಖಾಡೆ ಆಕರ್ಷಕ ಶತಕ

ನಿಗದಿತ ಓವರ್ ಮುಗಿಯಲು 2 ಬಾಲ್ ಬಾಕಿ ಇದ್ದಾಗ ಕರ್ನಾಟಕ 280 ರನ್‌ಗೆ ಆಲ್ ಔಟ್ ಆಯಿತು.

ವಿದರ್ಭ ತಂಡದ ಪರ ದರ್ಶನ್ ನಲ್ಕಂಡೆ 48 ರನ್ ನೀಡಿ 5 ಮಂದಿ ಆಟಗಾರರನ್ನು ಔಟ್ ಮಾಡುವ ಮೂಲಕ ರಾಜ್ಯ ತಂಡಕ್ಕೆ ಸಿಂಹಸ್ವಪ್ನರಾದರು.

281 ರನ್‌ಗಳ ಗುರಿ ಬೆಂಬತ್ತಿದ ವಿದರ್ಭ ತಂಡ ಕೇವಲ 9 ರನ್ ಆದಾಗ, ಅಥರ್ವ ತಾಯಡೆ ಅವರ ವಿಕೆಟ್ ಕಳೆದುಕೊಂಡಿತು. ಆದರೆ ಆ ಬಳಿಕ ಅಮನ್ ಮೊಖಡೆ ಮತ್ತು ಧ್ರುವ ಶೋರೆ ವಿದರ್ಭ ತಂಡಕ್ಕೆ ಆಸರೆಯಾಗಿ ಉತ್ತಮ ಜತೆಯಾಟ ಪ್ರದರ್ಶಿಸಿದರು. ಧ್ರುವ್ ಶೋರೆ 64 ಬಾಲ್ ಎದುರಿಸಿ 47 ರನ್ ಗಳಿಸಿದರು. ಅಮನ್ ಮೊಖಾಡೆ 122 ಬಾಲ್‌ಗಳನ್ನು ಎದುರಿಸಿ ಶತಕದಾಟದ (138) ಪ್ರದರ್ಶನ ನೀಡಿ ವಿದರ್ಭದ ಗೆಲುವಿನಲ್ಲಿ ಪ್ರಮುಖ ಪಾತ್ರ ವಹಿಸಿದರು. ಉಳಿದಂತೆ ರವಿಕುಮಾರ್ ಸಮರ್ಥ್ 69 ಬಾಲ್ ಎದುರಿಸಿ ಅಜೇಯ 76 ರನ್ ಗಳಿಸಿದರೆ, ರೋಹಿತ್ ಬಿನ್ಕರ್ 11 ರನ್ ಗಳಿಸಿದರು.

ಕೊಹ್ಲಿ ಬಗ್ಗೆ ಮಾಂಜ್ರೇಕರ್ ವಿವಾದಾತ್ಮಕ ಹೇಳಿಕೆ

ಮಾಂಜ್ರೇಕರ್‌ರನ್ನು ಟೀಕಿಸಿದ ಭಜ್ಜಿ

ದೆಹಲಿ: ಟೆಸ್ಟ್ ಕ್ರಿಕೆಟ್‌ಗೆ ವಿದಾಯ ಹೇಳಿ 50 ಓವರ್‌ಗಳ ಸುಲಭದ ಸ್ವರೂಪವನ್ನು ವಿರಾಟ್ ಕೊಹ್ಲಿ ಆಯ್ಕೆ ಮಾಡಿಕೊಂಡಿದ್ದಾರೆಂದ ಮಾಜಿ ಕ್ರಿಕೆಟಿಗ ಹಾಗೂ ಕ್ರಿಕೆಟ್ ವೀಕ್ಷಕ ವಿವರಣೆಗಾರ ಸಂಜಯ್ ಮಾಂಜ್ರೇಕರ್ ಅವರ ಹೇಳಿಕೆಗೆ ಸ್ಪಿನ್ ದಿಗ್ಗಜ ಹರ್ಭಜನ್ ಸಿಂಗ್ ಖಾರವಾದ ಪ್ರತಿಕ್ರಿಯೆ ನೀಡಿದ್ದಾರೆ. 'ಉನ್ನತ ಮಟ್ಟದಲ್ಲಿ ಪ್ರದರ್ಶನ ನೀಡಲು ಏನು ಬೇಕು ಎಂಬುದರ ಬಗ್ಗೆ ಇಂತಹ ಅಭಿಪ್ರಾಯಗಳು ಅನ್ಯಾಯ ಮತ್ತು ತಿರಸ್ಕಾರಾರ್ಹ' ಎಂದು ಕರೆದ ಹರ್ಭಜನ್ ಸಿಂಗ್, ಕೊಹ್ಲಿ ಅವರ ಘನತೆ ಮತ್ತು ಸ್ಥಿರತೆಯನ್ನು ಸಮರ್ಥಿಸಿಕೊಂಡಿದ್ದಾರೆ. 'ಯಾವುದೇ ಸ್ವರೂಪದಲ್ಲಿ ರನ್ ಗಳಿಸುವುದು ಸುಲಭವಾದರೆ, ಪ್ರತಿಯೊಬ್ಬ ಆಟಗಾರನೂ ರನ್ ಗಳಿಸುತ್ತಿದ್ದರು. ಕ್ರಿಕೆಟಿಗರು ಉತ್ತಮ ಪ್ರದರ್ಶನ ತೋರಿದರೆ ಅದನ್ನು ನೀವು ಆನಂದಿಸಬೇಕು. ಅವರು ಚೆನ್ನಾಗಿ ಬ್ಯಾಟಿಂಗ್ ಮಾಡುತ್ತಿದ್ದರೆ, ಪಂದ್ಯಗಳನ್ನು ಗೆಲ್ಲುತ್ತಿದ್ದರೆ ಹಾಗೂ ವಿಕೆಟ್‌ಗಳನ್ನು ಪಡೆಯುತ್ತಿದ್ದರೆ ಕ್ರಿಕೆಟ್ ಪ್ರೇಮಿಗಳಿಗೆ ಅಷ್ಟೇ ಸಾಕಲ್ಲವೇ? ಯಾರು ಯಾವ ಸ್ವರೂಪದಲ್ಲಿ ಆಡು ತ್ತಿದ್ದಾರೆಂಬುದು ಇಲ್ಲಿ ಮುಖ್ಯವಲ್ಲ. ವಿರಾಟ್ ಕೊಹ್ಲಿ ಒಂದು ಸ್ವರೂಪವನ್ನು ಮಾತ್ರ ಆಡಲಿ ಅಥವಾ ಎಲ್ಲಾ ಸ್ವರೂಪದಲ್ಲಿಯೇ ಆಡಲಿ, ಅವರು ಅದ್ಭುತ ಆಟಗಾರ ಹಾಗೂ ಅವರು ನಿಜಕ್ಕೂ ಮ್ಯಾಚ್ ವಿನ್ನರ್ ಎಂದು ಹರ್ಭಜನ್ ಸಿಂಗ್ ಹೇಳಿದ್ದಾರೆ.

ಮಂಜ್ರೇಕರ್ ಹೇಳಿದ್ದೇನು?

'ಟಾಪ್ ಆರ್ಡರ್ ಬ್ಯಾಟ್ಸ್‌ಮನ್‌ಗಳಿಗೆ ಏಕದಿನ ಕ್ರಿಕೆಟ್ ಆಟ ಬಹಳ ಸುಲಭ ಎಂದು ನಾನು ಏಕೆ ಹೇಳುತ್ತಿದ್ದೇನೆ ಎಂದು ಬಹಳಷ್ಟು ಜನರು ನನ್ನನ್ನು ಕೇಳಿದ್ದಾರೆ' ಎಂದು ಸಂಜಯ್ ಮಾಂಜ್ರೇಕರ್ ವೀಕ್ಷಕ ವಿವರಣೆ ಬಗ್ಗೆ ಹೇಳಿದ್ದರು. 'ಹಲವು ಭಾರತೀಯ ಬ್ಯಾಟ್ಸ್‌ಮನ್‌ಗಳು ಟೆಸ್ಟ್ ಕ್ರಿಕೆಟ್‌ನಲ್ಲಿ ಮಧ್ಯಮ ಕ್ರಮಾಂಕದಲ್ಲಿ ಆಡುವುದನ್ನು ಆನಂದಿಸದೆ ಸುಲಭವಾಗಿರುವ ಏಕದಿನ ಕ್ರಿಕೆಟ್‌ನಲ್ಲಿ ಆನಂದಿಸುತ್ತಾರೆ, ಹಾಗಾಗಿ ಏಕದಿನ ಕ್ರಿಕೆಟ್ ಅನ್ನು ಮುಂದುವರಿಸುತ್ತಿದ್ದಾರೆ ಎಂಬ ಅಂಶವನ್ನು ಮಾಂಜ್ರೇಕರ್ ವೀಕ್ಷಕ ವಿವರಣೆ ನೀಡುವ ವೇಳೆ ಉಲ್ಲೇಖಿಸಿದ್ದರು.

ಮೊಹಮ್ಮದ್ ರಿಜ್ವಾನ್‌ಗೆ ಅವಮಾನ

ಸಿಡ್ನಿ: ಆಸ್ಟ್ರೇಲಿಯಾದಲ್ಲಿ ನಡೆಯುತ್ತಿರುವ ಬಿಗ್ ಬ್ಯಾಷ್ ಟೂರ್ನಿಯನ್ನು ತೊರೆದು ತವರಿಗೆ ಮರಳುವಂತೆ ಮೊಹಮ್ಮದ್ ರಿಜ್ವಾನ್‌ಗೆ ಪಾಕಿಸ್ತಾನದ ಮಾಜಿ ವಿಕೆಟ್ ಕೀಪರ್-ಬ್ಯಾಟ್ಸ್‌ಮನ್ ಕಮ್ರಾಲ್ ಅಕ್ಮಲ್ ಆಗ್ರಹಿಸಿದ್ದಾರೆ. ರಿಜ್ವಾನ್ ಪ್ರಸ್ತುತ ಮೆಲ್ಬೋರ್ನ್ ರೆನೆಗೇಡ್ಸ್ ತಂಡವನ್ನು ಪ್ರತಿನಿಧಿಸುತ್ತಿದ್ದರೂ ಉತ್ತಮ ಬ್ಯಾಟಿಂಗ್ ಪ್ರದರ್ಶನವನ್ನು ತೋರುವಲ್ಲಿ ವಿಫಲರಾಗಿ ಕಠಿಣ ಪರಿಸ್ಥಿತಿಯನ್ನು ಎದುರಿಸುತ್ತಿದ್ದಾರೆ. ಸಿಡ್ನಿ ಥಂಡರ್ ವಿರುದ್ಧದ ಪಂದ್ಯದಲ್ಲಿ 23 ಎಸೆತಗಳಲ್ಲಿ 26 ರನ್ ಗಳಿಸಿ ಆಡುತ್ತಿದ್ದ ಮೊಹಮ್ಮದ್ ರಿಝ್ವಾನ್ ಅವರನ್ನು ರಿಟೈರ್ ಔಟ್ ಆಗುವಂತೆ ಸೂಚಿಸಲಾಗಿತ್ತು, ಇದನ್ನು ಅವಮಾನಕರ ಎಂದು ಅಕ್ಮಲ್ ದೂರಿದ್ದಾರೆ.

ರಣಜಿ ಕ್ರಿಕೆಟ್ ಟ್ರೋಫಿ | ತಿಲಕ್ ವರ್ಮಾ ಸ್ಥಾನಕ್ಕೆ ವೇಗದ ಬೌಲರ್ ಆಯ್ಕೆ

ಹೈದರಾಬಾದ್‌ಗೆ ಸಿರಾಜ್ ನಾಯಕ



ಹೈದರಾಬಾದ್: ಭಾರತದ ವೇಗದ ಬೌಲರ್ ಮೊಹಮ್ಮದ್ ಸಿರಾಜ್ ಅವರನ್ನು 2025-26ರ ಋತುವಿನ ಇನ್ನುಳಿದ ಪಂದ್ಯಗಳಿಗೆ ಹೈದರಾಬಾದ್ ರಣಜಿ ಟ್ರೋಫಿ ತಂಡದ ನಾಯಕರನ್ನಾಗಿ ನೇಮಿಸಲಾಗಿದೆ. ನ್ಯೂಜಿಲೆಂಡ್ ವಿರುದ್ಧ ನಡೆಯುತ್ತಿರುವ ಸರಣಿಯ ಸಮಯದಲ್ಲಿ ಅವರು ಏಕದಿನ ತಂಡಕ್ಕೆ ಮರಳಿದ ನಂತರ ಈ ಆಯ್ಕೆ ನಡೆದಿದೆ. ಹೈದರಾಬಾದ್ ತಂಡವು ಎಲೈಟ್ ಗ್ರೂಪ್-ಡಿಯಲ್ಲಿ ಇನ್ನೂ ಸ್ಪರ್ಧೆಯಲ್ಲಿರುವ ಕಾರಣ, ಆಯ್ಕೆದಾರರು ಪಂದ್ಯಾವಳಿಯ ಅಂತಿಮ ಹಂತಕ್ಕೆ ನಾಯಕತ್ವದ ಜವಾಬ್ದಾರಿಯನ್ನು ಸಿರಾಜ್‌ಗೆ ವಹಿಸಿದ್ದಾರೆ.

ಹೈದರಾಬಾದ್ ತಂಡವು ತನ್ನ ಉಳಿದ ಎರಡು ರಣಜಿ ಪಂದ್ಯಗಳನ್ನು ತವರಿನಲ್ಲಿ ಆಡಲಿದ್ದು, ಜನವರಿ 22ರಿಂದ ಮುಂಬೈ ಮತ್ತು ಜನವರಿ 29ರಿಂದ ಛತ್ತೀಸ್‌ಗಢ ತಂಡಗಳನ್ನು ರಾಜೀವ್ ಗಾಂಧಿ ಅಂತಾರಾಷ್ಟ್ರೀಯ ಕ್ರೀಡಾಂಗಣದಲ್ಲಿ ಎದುರಿಸಲಿದೆ. ತಂಡವು ಪ್ರಸ್ತುತ ಗ್ರೂಪ್-ಡಿಯಲ್ಲಿ 13 ಅಂಕಗಳೊಂದಿಗೆ ನಾಲ್ಕನೇ ಸ್ಥಾನದಲ್ಲಿದೆ. ಇದರ ಫಲಿತಾಂಶವು ಕ್ವಾರ್ಟರ್ ಫೈನಲ್‌ಗೆ ಅರ್ಹತೆ ಪಡೆಯುವ ಅವಕಾಶವನ್ನು ನೀಡಲಿದೆ. ತಿಲಕ್ ವರ್ಮಾ ಅವರನ್ನು ಆರಂಭದಲ್ಲಿ ರಣಜಿ ತಂಡದ ನಾಯಕನನ್ನಾಗಿ ಹೈದರಾಬಾದ್ ಆಯ್ಕೆ ಮಾಡಿತ್ತು. ಆದರೆ ನ್ಯೂಜಿಲೆಂಡ್ ವಿರುದ್ಧದ ಮೊದಲ ಏಕದಿನ ಪಂದ್ಯದ ವೇಳೆ ಹೊಟ್ಟೆಯ ಭಾಗದಲ್ಲಿ ಗಾಯವಾದ ಕಾರಣಕ್ಕಾಗಿ ಅವರನ್ನು ಹೊರಗಿಡಲಾಯಿತು. ಹಾಗಾಗಿ ಹೈದರಾಬಾದ್ ತಂಡದ ಆಯ್ಕೆದಾರರೂ ತಿಲಕ್ ವರ್ಮಾರನ್ನು ಹೊರಗಿಟ್ಟು, ಸಿರಾಜ್ ಅವರ ಆಯ್ಕೆಗೆ ಒಲವು ತೋರಿಸಿದರು. ವೃತ್ತಿಪರ ನಾಯಕನಾಗಿ ಯಾವುದೇ ಪೂರ್ವ ಅನುಭವವಿಲ್ಲದಿದ್ದರೂ ಸಹ ಅವರ ಮೇಲಿನ ವಿಶ್ವಾಸ ಮತ್ತು ನಿರೀಕ್ಷೆಯಿಂದ ತಂಡದ ನಾಯಕತ್ವ ನೀಡಲಾಗಿದೆ.

ಜನವರಿ 19ರಿಂದ 23ರ ವರೆಗೆ ನಡೆಯಲಿರುವ ಸೈಕ್ಲಿಂಗ್ ರೋಡ್‌ರೇಸ್

ಧೋನಿ ಗುಡ್‌ವಿಲ್ ಅಂಬಾಸಿಡರ್

ಬೆಂಗಳೂರು: ಭಾರತದ ಕ್ರಿಕೆಟ್ ತಂಡದ ಮಾಜಿ ನಾಯಕ ಮಹೇಂದ್ರ ಸಿಂಗ್ ಧೋನಿಯನ್ನು ಬಹು ನಿರೀಕ್ಷಿತ ಬಜಾಜ್ ಪುಣೆ ಗ್ರ್ಯಾಂಡ್ ಟೂರ್-2026ರ ಗುಡ್‌ವಿಲ್ ಅಂಬಾಸಿಡರ್ ಆಗಿ ನೇಮಕ ಮಾಡಲಾಗಿದೆ. ಇದು ಭಾರತದ ಮೊದಲ ಅಂತಾರಾಷ್ಟ್ರೀಯ ಸೈಕ್ಲಿಂಗ್ ರೋಡ್‌ರೇಸ್ ಆಗಿದ್ದು, ಜನವರಿ 19ರಿಂದ 23ರ ವರೆಗೆ ಪುಣೆ ಯಲ್ಲಿ ನಡೆಯಲಿದೆ. ಭಾರತ ಜಾಗತಿಕ ವೃತ್ತಿಪರ ಸೈಕ್ಲಿಂಗ್ ಕ್ಯಾಲೆಂಡರ್‌ಗೆ ಪ್ರವೇಶಿಸುತ್ತಿರುವ ಮಹತ್ವದ ಸಂದರ್ಭದಲ್ಲಿ ಧೋನಿಯ ಈ ಸಹಭಾಗಿತ್ವ ಬಹಳ ಮಹತ್ವ ಪಡೆದಿದೆ. ಯುವ ಕ್ರೀಡಾಪಟುಗಳಲ್ಲಿ ಸೈಕ್ಲಿಂಗ್ ಕುರಿತು ಆಸಕ್ತಿ ಮೂಡಿಸುವಲ್ಲಿ ಧೋನಿ ಪ್ರಮುಖ ಪಾತ್ರ ವಹಿಸಲಿದ್ದಾರೆ.

ಬಜಾಜ್ ಪುಣೆ ಗ್ರ್ಯಾಂಡ್ ಟೂರ್-2026 ಭಾರತದ ಮೊದಲ ಯುಸಿಐ 2.2 ವರ್ಗದ, ಐದು ದಿನಗಳ ಬಹು ಹಂತದ ಕಾಂಟಿನೆಂಟಲ್ ರಸ್ತೆ ಸೈಕ್ಲಿಂಗ್ ಸ್ಪರ್ಧೆಯಾಗಿದ್ದು, ಭಾರತವನ್ನು ಜಾಗತಿಕ ವೃತ್ತಿಪರ ಸೈಕ್ಲಿಂಗ್ ವಲಯದಲ್ಲಿ ದೃಢವಾಗಿ ಸ್ಥಾಪಿಸುವ ಉದ್ದೇಶ ಹೊಂದಿದೆ. ಐದು ದಿನಗಳ ಈ ರೇಸ್ 437 ಕಿ.ಮೀ ಹೊಸ ಮಾರ್ಗವನ್ನು ಒಳಗೊಂಡಿದ್ದು, ತೀಕ್ಷ್ಣ ತಿರುವುಗಳು ಮತ್ತು ಸವಾಲಿನ ಏರುಭಾಗಗಳನ್ನು ಹೊಂದಿದೆ. ಈ ಸ್ಪರ್ಧೆಯಲ್ಲಿ 35 ದೇಶಗಳ 29 ತಂಡಗಳಿಂದ 171 ಸೈಕ್ಲಿಸ್ಟ್‌ಗಳು ಭಾಗವಹಿಸಲಿದ್ದಾರೆ. ತಮ್ಮ ಸಹಭಾಗಿತ್ವದ ಬಗ್ಗೆ ಪ್ರತಿಕ್ರಿಯಿಸಿದ ಎಂಎಸ್ ಧೋನಿ, 'ಈ ಕ್ರೀಡೆಯನ್ನು ಉತ್ತೇಜಿಸುವ ಸಲುವಾಗಿ ಪುಣೆ ಗ್ರ್ಯಾಂಡ್ ಟೂರ್ ಜತೆ ಸಂಬಂಧ ಹೊಂದಿರುವುದಕ್ಕೆ ನನಗೆ ಸಂತೋಷವಾಗಿದೆ. ಪುಣೆ ಗ್ರ್ಯಾಂಡ್ ಟೂರ್ ಮೂಲಕ ಭಾರತ ವೃತ್ತಿಪರ ಸೈಕ್ಲಿಂಗ್‌ನಲ್ಲಿ ಹೊಸ ಅಧ್ಯಾಯಕ್ಕೆ ಪಾದಾರ್ಪಣೆ ಮಾಡುತ್ತಿದೆ. ಎಲ್ಲಾ ಸ್ಪರ್ಧಿಗಳಿಗೆ ನಾನು ಶುಭಾಶಯಗಳನ್ನು ಕೋರುತ್ತೇನೆ' ಎಂದು ಹೇಳಿದ್ದಾರೆ.

ಬೃಹನ್‌ಮುಂಬೈ ಕಾರ್ಪೊರೇಷನ್‌ಗೆ ಮತಗಟ್ಟೆ ಸಮೀಕ್ಷೆ

ಆಡಳಿತ ಪಕ್ಷಕ್ಕೇ ಜನಾಶೀರ್ವಾದ

ಮುಂಬೈ: ಪ್ರತಿಷ್ಠಿತ ಬೃಹನ್‌ಮುಂಬೈ ಕಾರ್ಪೊರೇಷನ್‌ಗೆ (ಬಿಎಂಸಿ) ಗುರುವಾರ ನಡೆದ ಚುನಾವಣೆಯ ಮತಗಟ್ಟೆ ಸಮೀಕ್ಷೆಗಳು ಪ್ರಕಟವಾಗಿದೆ. ಬಿಜೆಪಿ ಮತ್ತು ಏಕನಾಥ್ ಶಿಂಧೆ ಅವರ ಶಿವಸೇನೆ ಹೆಚ್ಚಿನ ಸ್ಥಾನಗಳಲ್ಲಿ ಗೆಲುವು ಸಾಧಿಸಲಿವೆ ಎಂದು ಆಕ್ಸಿಸ್ ಮೈ ಇಂಡಿಯಾ ಸೇರಿದಂತೆ 3 ಮತಗಟ್ಟೆ ಸಮೀಕ್ಷೆ ತಿಳಿಸಿವೆ.

ಠಾಕ್ರೆ ಸಹೋದರರು ಮತ್ತೆ ಒಂದಾಗಿದ್ದರೂ ಮರಾಠಿ ಮತ್ತು ಮುಸ್ಲಿಂ ಮತಗಳನ್ನು ಪಡೆಯಬಹುದು, ಆದರೆ ಉತ್ತರ ಹಾಗೂ ದಕ್ಷಿಣ ಭಾರತೀಯರು ಹೆಚ್ಚಾಗಿ ಬಿಜೆಪಿಗೆ ಮತ್ತ ಹಾಕಿದ್ದಾರೆ ಎಂದು ಮತಗಟ್ಟೆ ಸಮೀಕ್ಷೆಗಳು ಭವಿಷ್ಯ ನುಡಿದಿವೆ. ಬಹುತೇಕ ಯುವ ಮತದಾರರು ಮತ್ತು ಮಹಿಳೆಯರು ಬಿಜೆಪಿಯತ್ತ ಒಲವು ತೋರಿದ್ದಾರೆ ಎಂದು ಸಮೀಕ್ಷೆಯಲ್ಲಿ ಹೇಳಲಾಗಿದೆ. ಬೃಹನ್ ಮುಂಬೈ ಮಹಾನಗರ ಪಾಲಿಕೆ ಚುನಾವಣೆಯಲ್ಲಿ ಬಿಜೆಪಿ ಹಾಗೂ

ಶಿವಸೇನೆ ಮೈತ್ರಿಕೂಟ ಭರ್ಜರಿ ಗೆಲುವು ಸಾಧಿಸಲಿದೆ ಎಂದು ಆಕ್ಸಿಸ್ ಮೈ ಇಂಡಿಯಾ - ಜೆವಿಸಿ ಸಮೀಕ್ಷೆಯಲ್ಲಿ ಹೇಳ ಲಾಗಿದೆ. ಸಮೀಕ್ಷೆ ಪ್ರಕಾರ ಬಿಜೆಪಿ 138 ಸ್ಥಾನಗಳನ್ನು ಪಡೆದರೆ, ಉದ್ಧವ್ ಠಾಕ್ರೆ ಶಿವಸೇನಾ 59 ಸ್ಥಾನ, ಕಾಂಗ್ರೆಸ್ 23 ಸ್ಥಾನಗಳನ್ನು ಪಡೆಯಲಿದೆ ಎಂದು ಭವಿಷ್ಯ ನುಡಿದಿದೆ. ಆಕ್ಸಿಸ್ ಮೈ ಇಂಡಿಯಾ ಸಮೀಕ್ಷೆ ಪ್ರಕಾರ ಬಿಜೆಪಿ ಮತ್ತು ಶಿವಸೇನೆ 131-151 ಸ್ಥಾನಗಳನ್ನು ಮತ್ತು ಸೇನಾ ಯುಬಿಟಿ ಮೈತ್ರಿಕೂಟ 58-68 ಸ್ಥಾನಗಳನ್ನು ಗಳಿಸುವ ನಿರೀಕ್ಷೆಯಿದೆ. ಸಕಾಲ್ ಸಮೀಕ್ಷೆ ಪ್ರಕಾರ ಬಿಜೆಪಿ ಮತ್ತು ಶಿವಸೇನೆಗೆ 119 ಸ್ಥಾನ, ಯುಬಿಟಿ 75 ಸ್ಥಾನಗಳನ್ನು ಪಡೆಯುವ ನಿರೀಕ್ಷೆ ಇದೆ ಎಂದು ಸಮೀಕ್ಷೆ ಭವಿಷ್ಯ ನುಡಿದಿದೆ.

ಐ.ಟಿ ಉದ್ಯೋಗಿ ಬಂಧನ ಆಗಿಲ್ಲ: ಸಲೀಲ್ ಪರೇಖ್

ದೆಹಲಿ: ಅಮೆರಿಕ ವಲಸೆ ಮತ್ತು ಕಸ್ಟಮ್ಸ್ ಜಾರಿ ಅಧಿಕಾರಿ ಗಳು ಐ.ಟಿ ಸಂಸ್ಥೆಯ ಯಾವುದೇ ಉದ್ಯೋಗಿಯನ್ನು ಬಂಧಿಸಿಲ್ಲ ಅಥವಾ ಗಡೀಪಾರು ಮಾಡಿಲ್ಲ ಎಂದು ಇನ್ಫೋಸಿಸ್ ಸಿಇಒ ಸಲೀಲ್ ಪರೇಖ್ ಸ್ಪಷ್ಟಪಡಿಸಿದ್ದಾರೆ. ಇನ್ಫೋಸಿಸ್ ಉದ್ಯೋಗಿಯೊಬ್ಬರನ್ನು ಅಮೆರಿಕದಲ್ಲಿ ಐಸಿಇ ಏಜೆಂಟರು ವಶಕ್ಕೆ ಪಡೆದಿದ್ದಾರೆ ಎಂದು ಎಕ್ಸ್‌ನಲ್ಲಿ ಹಂಚಿಕೊಂಡ ವಿಚಾರ ವೈರಲ್ ಆದ ಒಂದು ದಿನದ ನಂತರ ಪರೇಖ್ ಅವರ ಸ್ಪಷ್ಟೀಕರಣ ನೀಡಿದ್ದಾರೆ. ಇನ್ಫೋಸಿಸ್ ಉದ್ಯೋಗಿಯನ್ನು ಅಮೆರಿಕ ಪ್ರವೇಶಿಸಿದ ನಂತರ ಬಂಧಿಸಿ ಭಾರತಕ್ಕೆ ಕಳುಹಿಸಲಾಗಿದೆ ಎಂದು ಪರೇಖ್ ಹೇಳಿದ್ದಾರೆ. ಕಂಪನಿಯ ಪ್ರಮುಖ ಸಭೆ ಯೊಂದರಲ್ಲಿ ಮಾತನಾಡಿದ ಇನ್ಫೋಸಿಸ್‌ನ ಸಿಇಒ ಮತ್ತು ಎಂಡಿ ಈ ವಿಷಯವನ್ನು ಸ್ಪಷ್ಟಪಡಿಸಿದ್ದಾರೆ.

ಆಂಧ್ರದಲ್ಲಿ ಕೋಳಿ ಕಾಳಗ ಜೂಜು

ಹೈದರಾಬಾದ್: ಆಂಧ್ರಪ್ರದೇಶ ಸರಕಾರದ ಅಧಿಕಾರಿಗಳ ಎಚ್ಚರಿಕೆ ಮಧ್ಯೆಯೂ ಸಂಕ್ರಾಂತಿ ದಿನವಾದ ಗುರುವಾರ ಕೋಳಿ ಕಾಳಗಗಳು ಅದ್ದೂರಿಯಾಗಿ ನಡೆದವು. ಆಂಧ್ರಪ್ರದೇಶದ ಪಶ್ಚಿಮ ಗೋದಾವರಿ, ಪೂರ್ವ ಗೋದಾವರಿ ಮತ್ತು ಕೃಷ್ಣ ಜಿಲ್ಲೆಗಳಾದ್ಯಂತ ಆಯೋಜಿಸಿದ್ದ ಅನಧಿಕೃತ ಹುಂಜಗಳ ಕಾಳಗ ಮತ್ತು ಜೂಜಾಟದಲ್ಲಿ ಕೋಟ್ಯಂತರ ರೂಪಾಯಿ ವ್ಯವಹಾರವಾಗಿದೆ.

ಅಕ್ರಮ ಹುಂಜಗಳ ಕಾಳಗದ ವಿರುದ್ಧ ಕಠಿಣ ಕ್ರಮ ಕೈಗೊಳ್ಳುವ ಬಗ್ಗೆ ಅಧಿಕಾರಿಗಳು ಪದೇ ಪದೇ ಎಚ್ಚರಿಕೆ ನೀಡಲಾಗಿದ್ದರೂ, ಕಾರ್ಯಕ್ರಮಗಳನ್ನು ಮುಕ್ತವಾಗಿ ನಡೆಸಲಾಯಿತು. ಆಂಧ್ರಪ್ರದೇಶ, ತೆಲಂಗಾಣ, ರಾಯಲಸೀಮಾ ಮತ್ತು ತಮಿಳುನಾಡಿನಿಂದ ಸಾವಿರಾರು ಜನರು ಕಾಳಗಗಳನ್ನು ವೀಕ್ಷಿಸಲು ಭಾರಿ ಸಂಖ್ಯೆಯಲ್ಲಿ ಆಗಮಿಸಿದ್ದರು. ಅಭಜಿತ ಪಶ್ಚಿಮ ಗೋದಾವರಿ ಜಿಲ್ಲೆಯಲ್ಲಿ ಮಂಗಳವಾರ ಮಧ್ಯರಾತ್ರಿಯಿಂದಲೇ ಕೋಳಿ ಕಾಳಗ ಆರಂಭವಾಗಿತ್ತು. ಸಾವಿರಾರು ಪ್ರವಾಸಿಗರು ಕಾರುಗಳಲ್ಲಿ ಆಗಮಿಸಿದ್ದರಿಂದ ಅಖಾಡದ ಬಳಿ ಟ್ರಾಫಿಕ್ ಜಾಮ್ ಉಂಟಾಗಿತ್ತು. ದುಗ್ಗಿರಾಳ, ಮಿರ್ಜಾಪುರಂ, ಚೇಬ್ರೋಲು, ಗೊಲ್ಲಗುಡೆಂ, ಕೊಯ್ಯಲಗುಡೆಂ, ಕೈಕಲೂರು, ಕಾಳಿದಿಂಡಿ, ಮುದಿನೆ ಪಲ್ಲಿ, ಚಿಂತಲಪುಡಿ, ಪೋಲಾವರಂ, ಹಾಗೂ ಭೀಮಾವರಂ, ಪಾಲ ಕೊಳ್ಳು, ನರಸಾಪುರಂ, ತಾಡೆಪಲ್ಲಿಗುಡೆಂ ಸೇರಿ ಹಲವೆಡೆ ಹುಂಜಗಳು ಅಖಾಡದಲ್ಲಿ ಸೆಣಸಿದವು. ಶಾಸಕರು, ಉಪಸಭಾಪತಿ, ಸಂಸದರು ಸೇರಿದಂತೆ ಹಲವು ಜನಪ್ರತಿನಿಧಿಗಳು ಕೋಳಿ ಕಾಳಗ ವೀಕ್ಷಣೆಗೆ ಆಗಮಿಸಿದ್ದರು.

100 ಕೋಟಿ ಬೆಟ್ಟಿಂಗ್: ಅವಿಭಜಿತ ಪೂರ್ವ ಗೋದಾವರಿ ಜಿಲ್ಲೆಯಲ್ಲಿ ಬುಧವಾರವಷ್ಟೇ 90ಕ್ಕೂ ಹೆಚ್ಚು ಕಡೆ ಕೋಳಿ ಕಾಳಗ ಆಯೋಜಿಸಲಾಗಿತ್ತು. ಈ ಜೂಜಾಟದಲ್ಲಿ ಸುಮಾರು 100 ಕೋಟಿಗೂ ಹೆಚ್ಚು ಹಣ ಹರಿದಾಡಿದೆ ಎಂದು ತಿಳಿದುಬಂದಿದೆ. ಮುರಮಲ್ಲದಲ್ಲಿ ರುವ ಬೃಹತ್ ಅಖಾಡದಲ್ಲಿ ಒಂದೇ ದಿನ 25 ಪಂದ್ಯಗಳನ್ನು ನಡೆಸಿದ್ದು, 10 ಲಕ್ಷದಿಂದ 50 ಲಕ್ಷದವರೆಗೆ ಬೆಟ್ಟಿಂಗ್ ಕಟ್ಟಿದ್ದರು.

ಆನೆ ಕುಸಿದು ಸಾವು

ಮಲಪ್ಪುರಂ: ದೇವಾಲಯವೊಂದರ ಉತ್ಸವಕ್ಕಾಗಿ ಕರೆತಂದಿದ್ದ ಸಾಕಾನೆಯೊಂದು ದಿಢೀರ್ ಕುಸಿದು ಸಾವನ್ನಪ್ಪಿರುವ ಧಾರುಣ ಘಟನೆ ಕೇರಳದಲ್ಲಿ ನಡೆದಿದೆ. ಮಲಪ್ಪುರಂನಲ್ಲಿರುವ ವಲ್ಲಿಕುನ್ನು ಅಯ್ಯಪ್ಪ ದೇವಸ್ಥಾನದ ಉತ್ಸವಕ್ಕೆ ತಂದು, ಮಕರ ಸಂಕ್ರಾಂತಿ ನಿಮಿತ್ತ ಮೆರವಣಿಗೆ ನಡೆಸುತ್ತಿದ್ದಾಗ ಬಾಲುಸ್ಸೇರಿ ಗಜೇಂದ್ರನ್ ಎಂಬ ಆನೆ ಇದ್ದಕ್ಕಿದ್ದಂತೆ ಕುಸಿದು ಬಿದ್ದು ಸಾವನ್ನಪ್ಪಿದೆ. ಗುರುವಾರ ಬೆಳಿಗ್ಗೆ 7 ಗಂಟೆ ಸುಮಾರಿಗೆ ಆನೆಯನ್ನು ಮೆರವಣಿಗೆಗೆ ಸಿದ್ಧಪಡಿಸುತ್ತಿದ್ದಾಗ ಈ ಘಟನೆ ಸಂಭವಿಸಿದೆ ಎಂದು ಅಧಿಕಾರಿಗಳು ಹೇಳಿದ್ದಾರೆ. ಗಜೇಂದ್ರನ್ ಅನ್ನು ಬುಧವಾರ ರಾತ್ರಿ ಮೆರವಣಿಗೆಗಾಗಿ ದೇವಸ್ಥಾನಕ್ಕೆ ತರಲಾಯಿತು. ಆ ಆನೆ ಕೋಯಿಕ್ಕೋಡ್‌ನ ಬಾಲುಸ್ಸೇರಿಯ ಸ್ಥಳೀಯರೊಬ್ಬರ ಒಡೆತನದಲ್ಲಿದೆ. ಆನೆಯ ಸಾವಿಗೆ ಕಾರಣ ಸ್ಪಷ್ಟವಾಗಿಲ್ಲ. ಅರಣ್ಯ ಇಲಾಖೆಯು ಆನೆಯ ಮರಣೋತ್ತರ ಪರೀಕ್ಷೆಗಳನ್ನು ಪೂರ್ಣಗೊಳಿಸಿದ ನಂತರ ಅಂತ್ಯಕ್ರಿಯೆ ನಡೆಯಲಿದೆ. ಕೇರಳದ ಮಲಪ್ಪುರಂ ಜಿಲ್ಲೆ, ಕೋಝಿಕ್ಕೋಡ್ ಮತ್ತು ತ್ರಿಶೂರ್ ಜಿಲ್ಲೆಗಳಲ್ಲಿ ಅನೇಕ ಸಣ್ಣ ಮತ್ತು ದೊಡ್ಡ ಹಬ್ಬಗಳಲ್ಲಿ ಗಜೇಂದ್ರನ್ ಆನೆ ಸಕ್ರಿಯವಾಗಿ ಭಾಗವಹಿಸಿತ್ತು.

{ **ದಯಾನಿಧಿ ಮಾರನ್** } ಸಂಸದ

ತಮಿಳುನಾಡಿನಲ್ಲಿ ಮಹಿಳೆಯರನ್ನು ಓದಲು, ಅಧ್ಯಯನ ಮಾಡಲು ನಾವು ಸದಾ ಪ್ರೋತ್ಸಾಹಿಸುತ್ತೇವೆ. ಆದರೆ ಉತ್ತರ ಭಾರತದಲ್ಲಿ ಮಹಿಳೆಯರನ್ನು ಮದುವೆಯಾಗಲು, ಮಕ್ಕಳನ್ನು ಹೆರಲು ಪ್ರೋತ್ಸಾಹಿಸಲಾಗುತ್ತದೆ. ತಮಿಳುನಾಡು ಸರಕಾರವು ಮಹಿಳೆಯರ ಪ್ರಗತಿಯಲ್ಲಿ ಪ್ರಮುಖ ಪಾತ್ರ ವಹಿಸುತ್ತದೆ.

ತುಪ್ಪ ಮಾರಾಟದಿಂದ ಬಂದ ಹಣ ದುರುಪಯೋಗ | ಕೇರಳ ಹೈಕೋರ್ಟ್ ಆದೇಶದಂತೆ ಜಾಗೃತ ತನಿಖಾ ದಳದಿಂದ ತನಿಖೆ

ಶಬರಿಮಲೆ ತುಪ್ಪದಲ್ಲೂ ಅವ್ಯವಹಾರ ಆರೋಪ

ತಿರುವನಂತಪುರ: ಈ ಹಿಂದೆ ವಿವಾದಕ್ಕೆ ಕಾರಣವಾಗಿದ್ದ ತಿರುಮಲ ವೆಂಕಟೇಶ್ವರ ದೇವಸ್ಥಾನದ ತುಪ್ಪದಲ್ಲಿ ನಡೆದಿದ್ದ ಭಾರೀ ಅವ್ಯವಹಾರ ಪ್ರಕರಣ ಬಯಲಾದ ಬೆನ್ನಲ್ಲೇ, ಇದೀಗ ಹಿಂದೂಗಳ ಮತ್ತೊಂದು ಪವಿತ್ರ ಕ್ಷೇತ್ರವಾದ ಶಬರಿಮಲೆ ತುಪ್ಪದಲ್ಲೂ ಭಾರೀ ಅವ್ಯವಹಾರ ನಡೆದಿದೆ ಎಂದು ಹೇಳಲಾಗುತ್ತಿದೆ.

ಈ ಹಿಂದೆ ಸನ್ನಿಧಾನದ ಚಿನ್ನದ ಕಳ್ಳತನ ವಿಚಾರವಾಗಿ ಭಾರಿ ಸುದ್ದಿಗೆ ಗ್ರಾಸವಾಗಿದ್ದ ಶಬರಿಮಲೆಯಲ್ಲಿ ಇದೀಗ ಈ ಹಗರಣ ಭಾರೀ ಸದ್ದು ಮಾಡುತ್ತಿದೆ. ಈ ಬಾರಿ ಅಯ್ಯಪ್ಪ ಭಕ್ತರಿಗೆ ನೀಡುವ ತುಪ್ಪದಲ್ಲಿ ಭಾರಿ ಅವ್ಯವಹಾರ ನಡೆದಿದೆ ಎಂದು ಆರೋಪಿಸಲಾಗಿದೆ. ಈ ಸಂಬಂಧ ಕೇರಳ ಹೈಕೋರ್ಟ್ ಕೂಡ ಕೇರಳ ಜಾಗೃತ ತನಿಖಾ ದಳವು ತನಿಖೆಗೆ ಆದೇಶಿಸಿರುವುದು ಪ್ರಕರಣದ ಗಂಭೀರತೆಗೆ ಸಾಕ್ಷಿಯಾಗಿದೆ.

ಶಬರಿಮಲೆ ಸನ್ನಿಧಾನದಲ್ಲಿ 'ಆದಿಯ ಶಿಷ್ಟಂ ತುಪ್ಪ' (ತುಪ್ಪದ ಅಭಿಷೇಕದ ನಂತರ ಉಳಿದ ತುಪ್ಪ) ಮಾರಾಟದಿಂದ ಬಂದ ಹಣವನ್ನು ದುರುಪಯೋಗಪಡಿಸಿಕೊಂಡ ಆರೋಪದ ಬಗ್ಗೆ ವಿಜಿಲೆನ್ಸ್ ತನಿಖೆಗೆ ಹೈಕೋರ್ಟ್ ಮಂಗಳವಾರ ಆದೇಶಿಸಿದೆ.

ತುಪ್ಪ ಮಾರಾಟದಿಂದ ಬಂದ ಹಣವನ್ನು ದುರುಪಯೋಗಪಡಿಸಿಕೊಂಡ ಆರೋಪದ ಬಗ್ಗೆ ವಿವರವಾದ ಕೇರಳ ಜಾಗೃತ ತನಿಖಾ ದಳದ ತನಿಖೆ ಕೋರಿ ಶಬರಿಮಲೆ ವಿಶೇಷ ಆಯುಕ್ತರು ಸಲ್ಲಿಸಿದ ವರದಿಯನ್ನು ಪರಿಗಣಿಸಿದ ನ್ಯಾಯಮೂರ್ತಿಗಳಾದ ವಿ.ರಾಜ ವಿಜಯರಾಘವನ್ ಮತ್ತು ಕೆ.ವಿ. ಜಯಕುಮಾರ್ ಅವರ ಪೀಠವು ಈ ಆದೇಶವನ್ನು ನೀಡಿದೆ. ಸುನಿಲ್ ಕುಮಾರ್ ಪೊಟ್ಟಿ ವಿರುದ್ಧವೂ ಗಂಭೀರ ಆರೋಪಗಳಿವೆ ಎಂದು ನ್ಯಾಯಾಲಯ ಹೇಳಿದೆ.

ಪೂರ್ವಾನುಮತಿ ಕಡ್ಡಾಯ: ಇದೇ ವೇಳೆ ನ್ಯಾಯವ್ಯಾಪ್ತಿಯ ನ್ಯಾಯಾಲಯದ ಮುಂದೆ ಅಂತಿಮ ವರದಿಯನ್ನು ಸಲ್ಲಿಸುವ ಮೊದಲು ಪೀಠದ ಪೂರ್ವಾನುಮತಿ ಪಡೆಯಬೇಕು ಎಂದು ಹೈಕೋರ್ಟ್ ಆದೇಶಿಸಿದೆ. ಡಿಸೆಂಬರ್ 14, 2025ರಂದು ಮುಖ್ಯ ಜಾಗೃತ ಮತ್ತು ಭದ್ರತಾ ಅಧಿಕಾರಿ ನಡೆಸಿದ ತಪಾಸಣೆಯ ಸಮಯದಲ್ಲಿ, ಮರಮತ ಕಟ್ಟಡ ಕೌಂಟರ್ ಮೂಲಕ ಮಾರಾಟವಾದ 16,628 ಪ್ಯಾಕೆಟ್ ತುಪ್ಪದ ಮಾರಾಟದ ಆದಾಯವನ್ನು ತಿರುವಾಂಕೂರು ದೇವಸಂ ಬೋರ್ಡ್‌ನ ಖಾತೆಗೆ ಜಮಾ ಮಾಡಲಾಗಿಲ್ಲ ಎಂದು ಕಂಡುಬಂದಿದೆ. 700 ಲೀಟರ್ ಸಾಮರ್ಥ್ಯದ ಉಕ್ಕಿನ ತೊಟ್ಟಿಯಲ್ಲಿ ತುಪ್ಪವನ್ನು ಸಂಗ್ರಹಿಸಿ ಮೋಟಾರ್ ಬಳಸಿ ಪ್ಯಾಕೆಟ್‌ಗಳಲ್ಲಿ ತುಂಬಿಸಲಾಗುತ್ತದೆ. ಗುತ್ತಿಗೆದಾರರು ಪ್ರತಿ ಪ್ಯಾಕೆಟ್‌ಗೆ 100 ಮಿ.ಲೀ. ತುಪ್ಪವನ್ನು ತುಂಬಿಸಬೇಕಾಗಿತ್ತು, ನಂತರ ಅದನ್ನು ಕೌಂಟರ್‌ಗಳಲ್ಲಿ ಭಕ್ತರಿಗೆ ಪ್ರತೀ ಪ್ಯಾಕೆಟ್‌ಗೆ 100 ರು.ಗೆ ಮಾರಾಟ ಮಾಡಲಾಗುತ್ತಿತ್ತು. ನ.17, 2025ರಿಂದ ಡಿಸೆಂಬರ್ 26, 2026ರ ವರೆಗೆ, ಗುತ್ತಿಗೆದಾರರು ತಲಾ 100 ಮಿಲಿಯ 3,52,050 ಪ್ಯಾಕೆಟ್‌ಗಳನ್ನು ಪ್ಯಾಕ್ ಮಾಡಿದ್ದಾರೆ ಮತ್ತು ಅವುಗಳನ್ನು ಮಾರಾಟಕ್ಕಾಗಿ ದೇವಾಲಯದ ವಿಶೇಷ ಅಧಿಕಾರಿಗೆ ಹಸ್ತಾಂತರಿಸಲಾಯಿತು ಎಂದು ತಪಾಸಣೆಯಲ್ಲಿ ತಿಳಿದುಬಂದಿದೆ.

ಇವುಗಳಲ್ಲಿ ಸುಮಾರು 89,300 ಪ್ಯಾಕೆಟ್‌ಗಳನ್ನು ಮರಮತ ಕಟ್ಟಡದ ಕೌಂಟರ್ ಮೂಲಕ ವಿವಿಧ ದಿನಗಳಲ್ಲಿ ಮಾರಾಟ ಮಾಡಲಾಗಿದೆ. ಆದರೆ ಕೌಂಟರ್‌ನ ಉಸ್ತುವಾರಿ ವಹಿಸಿದ್ದ ನೌಕರರು 75,450 ಪ್ಯಾಕೆಟ್‌ಗಳಿಗೆ ಸಂಬಂಧಿಸಿದ ಹಣವನ್ನು ಮಾತ್ರ ಠೇವಣಿ ಮಾಡಿದ್ದಾರೆ. ಆದ್ದರಿಂದ ದಾಖಲೆಗಳು 13,679 ಪ್ಯಾಕೆಟ್‌ಗಳ ಮಾರಾಟದ ಆದಾಯವು 13.68 ಲಕ್ಷ ರು.ಗಳನ್ನು ರವಾನೆ ಮಾಡಲಾಗಿಲ್ಲ ಎಂದು ಸೂಚಿಸುತ್ತವೆ.

ಈ ಮಧ್ಯೆ ದೇವಸ್ವಂ ಉದ್ಯೋಗಿ ಸುನೀಲ್ ಕುಮಾರ್ ಪೊಟ್ಟಿ ಭಕ್ತರಿಗೆ ತುಪ್ಪ ಮಾರಾಟ ಮಾಡಿದ್ದಕ್ಕಾಗಿ ರಶೀದಿಗಳನ್ನು ನೀಡಲು ವಿಫಲರಾಗಿದ್ದಾರೆ ಎಂದು ಟಿಡಿಬಿ ಹೈಕೋರ್ಟ್‌ಗೆ ತಿಳಿಸಿದೆ. ನವೆಂಬರ್ 24, 2025ರಿಂದ ನವೆಂಬರ್ 30, 2025ರ ವರೆಗೆ, ಮಾರಾಟದಿಂದ ಸಂಗ್ರಹಿಸಲಾದ 68,200 ರು.ಗಳನ್ನು ಮಂಡಳಿಗೆ ರವಾನೆ ಮಾಡಲಾಗಿಲ್ಲ. ನಿರ್ದೇಶನಗಳನ್ನು ನೀಡಿದ ನಂತರವೇ ಮತ್ತು ಅದೂ 17 ದಿನಗಳ ವಿಳಂಬದ ನಂತರವೇ ಮೊತ್ತವನ್ನು ರವಾನೆ ಮಾಡಲಾಗಿದೆ ಎಂದು ತಿರುವಾಂಕೂರು ದೇವಸಂ ಬೋರ್ಡ್ ತಿಳಿಸಿದೆ. ದುರುಪಯೋಗದ ಬಗ್ಗೆ ಮಾಹಿತಿ ಪಡೆದ ನಂತರ, ಸುನಿಲ್ ಕುಮಾರ್ ಪೊಟ್ಟಿ ಅವರನ್ನು ಅಮಾನತುಗೊಳಿಸಲಾಗಿದ್ದು, ಅವರ ವಿರುದ್ಧ ಮತ್ತಷ್ಟು ಶಿಸ್ತು ಕ್ರಮ ಕೈಗೊಳ್ಳಲು ಪ್ರಸ್ತಾಪಿಸಲಾಗಿದೆ ಎಂದು ಮಂಡಳಿ ತಿಳಿಸಿದೆ.

ಘಟನೆಯ ಹಿನ್ನೆಲೆ

ನವೆಂಬರ್ 17, 2025ರಿಂದ ಡಿಸೆಂಬರ್ 26, 2026ರ ವರೆಗೆ ಮತ್ತು ಡಿಸೆಂಬರ್ 27, 2025ರಿಂದ ಜನವರಿ 2, 2026ರ ವರೆಗಿನ ಅವಧಿಯಲ್ಲಿ ನಡೆದಿರುವ ತುಪ್ಪ ಮಾರಾಟ ದುರುಪಯೋಗ ಸುಮಾರು 35 ಲಕ್ಷ ರುಪಾಯಿ ಗಳಷ್ಟಿದೆ ಎಂದು ಹೈಕೋರ್ಟ್ ಗಮನಿಸಿದೆ. ತಿರುವಾಂಕೂರು ದೇವಸಂ ಬೋರ್ಡ್‌ನ ಭದ್ರತಾ ಅಧಿಕಾರಿಯ ವರದಿಯ ಆಧಾರದ ಮೇಲೆ ಸಮರ್ಥ ಅಧಿಕಾರಿಗಳ ತಂಡವನ್ನು ರಚಿಸಿ ಅಪರಾಧವನ್ನು ದಾಖಲಿಸಲು ಕ್ರಮಗಳನ್ನು ಪ್ರಾರಂಭಿಸಲು ನ್ಯಾಯಾಲಯವು ನಿರ್ದೇಶನ ನೀಡಿತು. ಒಂದು ತಿಂಗಳೊಳಗೆ ಪ್ರಗತಿ ವರದಿಯನ್ನು ಸಲ್ಲಿಸುವಂತೆ ಜಾಗೃತ ತನಿಖಾ ದಳಕ್ಕೆ ನಿರ್ದೇಶಿಸಲಾಗಿದೆ.

- ಅಯ್ಯಪ್ಪ ಭಕ್ತರಿಗೆ ನೀಡುವ ತುಪ್ಪದಲ್ಲಿ ಅವ್ಯವಹಾರ
- ಕೇರಳ ಹೈಕೋರ್ಟ್‌ನಿಂದ ತನಿಖೆಗೆ ಆದೇಶ
- ಜಮಾ ಆಗದ 16,628 ಪ್ಯಾಕೆಟ್ ತುಪ್ಪದ ಬೆಲೆ
- ಶಿಸ್ತುಕ್ರಮ ಕೈಗೊಳ್ಳಲು ಟಿಡಿಬಿ ಪ್ರಸ್ತಾಪ

ರಾಕೇಶ್ ಅಗರ್ವಾಲ್ ಎನ್‌ಐಎ ಮುಖ್ಯಸ್ಥ

ದೆಹಲಿ: ರಾಕೇಶ್ ಅಗರ್ವಾಲ್ ಅವರನ್ನು ಭಯೋತ್ಪಾದನಾ ನಿಗ್ರಹ ದಳವಾದ ರಾಷ್ಟ್ರೀಯ ತನಿಖಾ ಸಂಸ್ಥೆಯ (ಎನ್‌ಐಎ) ಹೊಸ ಮಹಾ ನಿರ್ದೇಶಕರಾಗಿ ನೇಮಿಸಲಾಗಿದೆ. ಇದೇ ವೇಳೆ, ಹರಿಯಾಣದ ಮಾಜಿ ಪೊಲೀಸ್ ಮುಖ್ಯಸ್ಥ ಶತ್ರುಜಿತ್ ಸಿಂಗ್ ಕಪೂರ್ ಅವರು ಇಂಡೋ- ಟಿಬೆಟಿಯನ್ ಗಡಿ ಪೊಲೀಸ್ (ಐಟಿಬಿಪಿ) ಮಹಾ ನಿರ್ದೇಶಕರಾಗಿ ನಿಯುಕ್ತಿಯಾದರು.

1994ರ ಬ್ಯಾಚ್‌ನ ಹಿಮಾಚಲ ಪ್ರದೇಶ ಕೇಡರ್‌ನ ಭಾರತೀಯ ಪೊಲೀಸ್ ಸೇವೆ (ಐಪಿಎಸ್) ಅಧಿಕಾರಿಯಾಗಿರುವ ರಾಕೇಶ್ ಅಗರ್ವಾಲ್ ಅವರು ಪ್ರಸ್ತುತ ಭಯೋತ್ಪಾದನಾ ನಿಗ್ರಹ ಸಂಸ್ಥೆಯಲ್ಲಿ ವಿಶೇಷ ಮಹಾ ನಿರ್ದೇಶಕರಾಗಿ ಕಾರ್ಯನಿರ್ವಹಿಸುತ್ತಿದ್ದಾರೆ. ಕಳೆದ ತಿಂಗಳು ಸದಾನಂದ ವಸಂತ್ ಡೇಟ್ ಅವರನ್ನು ಮಹಾ ರಾಷ್ಟ್ರಕ್ಕೆ ವಾಪಸ್ ಕಳುಹಿಸಿದ ನಂತರ ಅವರು ಎನ್‌ಐಎ ಹೆಚ್ಚುವರಿ ಡಿಜಿ ಹೊಣೆ ನಿಭಾಯಿಸಿದ್ದರು.

ಎನ್‌ಐಎ ಮುಖ್ಯಸ್ಥರಾಗಿ ನೇಮಕವಾಗಿರುವ ಅಗರ್ವಾಲ್ ಅವರ ಅಧಿಕಾರವಧಿ 2028ರ ಆಗಸ್ಟ್ 31ರ ವರೆಗೆ ಇರಲಿದೆ. ಈ ನೇಮಕಾತಿಗೆ ಕೇಂದ್ರ ಸಂಪುಟದ ನೇಮಕಾತಿ ಸಮಿತಿ ಅನುಮೋದನೆ ನೀಡಿದೆ ಎಂದು ಸಿಬ್ಬಂದಿ ಸಚಿವಾಲಯ ಹೊರಡಿಸಿದ ಆದೇಶ ದಲ್ಲಿ ತಿಳಿಸಲಾಗಿದೆ. ಅವರು ಭಯೋತ್ಪಾದನೆ ಚಟು ವಟಿಕೆ, ಉಗ್ರರಿಗೆ ಹಣಕಾಸು ನೆರವು ಮತ್ತು ಮೂಲ ಭೂತವಾದ ನಿಗ್ರಹದಲ್ಲಿ ಪರಿಣತಿ ಹೊಂದಿದ್ದಾರೆ. ಓರ್ವ ಅತ್ಯುತ್ತಮ ತನಿಖಾಧಿಕಾರಿ ಎಂದೇ ಖ್ಯಾತರಾಗಿ ದ್ದಾರೆ. ಕಷ್ಟಕರವಾದ ಆಂತರಿಕ ಭದ್ರತಾ ಘಟನೆಗಳಲ್ಲಿ ತೀಕ್ಷ್ಣ ತನಿಖೆಗಳನ್ನು ನಿರ್ವಹಿಸುವಲ್ಲಿ ನಿಪುಣರಲ್ಲದೆ, ಕೇಂದ್ರ ತನಿಖಾ ದಳ (ಸಿಬಿಐ)ಯೊಂದಿಗೆ ಕೆಲಸ ಮಾಡಿದ ಅನುಭವವೂ ಇದೆ.

ಕಪೂರ್‌ಗೆ ಚೀನಾ ಗಡಿ ಹೊಣೆ: ಶತ್ರುಜಿತ್ ಸಿಂಗ್ ಕಪೂರ್ ಅವರು ಚೀನಾ ಭಾಗದಲ್ಲಿ ಗಡಿ ಕಾಯುವ ಇಂಡೋ-ಟಿಬೆಟಿಯನ್ ಗಡಿ ಪೊಲೀಸ್ (ಐಟಿಬಿಪಿ)ಯ ಮಹಾನಿರ್ದೇಶಕರಾಗಿ ನಿಯುಕ್ತಿಯಾದರು.

ಆರಾಮ
ವಿಶ್ವವಾಣಿ
@vishwavaninews
16-01-2026
ಶುಕ್ರವಾರ

ಚಿತ್ತವಿಹಾರ

ವಿಶ್ವಾಸವೇ ವಿಶ್ವ...

• ರಂಗನಾಥ್ ಗುಡಿಮನಿ

ಈ ಬದುಕು ಎನ್ನುವ ಸುದೀರ್ಘ ಪಯಣವನ್ನು ಸರಾಗವಾಗಿ ಪೂರ್ಣಗೊಳಿಸಲು ಬೇಕಾಗಿರುವ ಪ್ರಬಲ ಅಸ್ತ್ರವೇ ವಿಶ್ವಾಸ. ನಮ್ಮ ಸಾಮರ್ಥ್ಯದ ಮೇಲೆ ನಮಗೆ ಮುಗಿಯದ ವಿಶ್ವಾಸವಿರಲಿ. ಇದೊಂದು ಪ್ರತಿಯೊಬ್ಬರ ಬಹುದೊಡ್ಡ ಆಸ್ತಿ ಹಾಗೂ ಆಂತರಿಕ ಮೌಲ್ಯ ಎನಿಸಿಕೊಂಡಿದೆ. ಇವತ್ತಿಗೂ ಜಗತ್ತಿನ ಎಲ್ಲ ಬಗೆಯ ಸಂಬಂಧಗಳು ತಮ್ಮ ಮಹತ್ವ, ಘನತೆ, ಗೌರವಗಳನ್ನು ಕಾಪಾಡಿಕೊಂಡು ಬಂದಿರಲು ಬಹುಮುಖ್ಯ ಕಾರಣವೇ ವಿಶ್ವಾಸ. ಒಬ್ಬ ವ್ಯಕ್ತಿ, ಒಂದು ವಸ್ತು, ಸಂಗತಿಯಾಗಿರಲಿ ಅದರ ಮೇಲೆ ಎಷ್ಟು ಅವಶ್ಯವೋ ಅಷ್ಟೇ ವಿಶ್ವಾಸವಿರಲಿ. ಅತಿಯಾದ ಅಮೃತವೂ ವಿಷವಾಗುವಂತೆ, ಅತಿಯಾದ ವಿಶ್ವಾಸವೂ ಒಮ್ಮೊಮ್ಮೆ ವಿಷಕ್ಕಿಂತಲೂ ಅಪಾಯಕಾರಿಯಾಗಿರುತ್ತದೆ. ಅವರು ಯಾರೇ ಆಗಿರಲಿ,

ಅದು ಯಾವುದೇ ಇರಲಿ ನಮ್ಮ ವಿಶ್ವಾಸಕ್ಕೆ ಔಚಿತ್ಯವೆನಿಸಿದ್ದನ್ನು ಕೂಲಂಕಷವಾಗಿ ಅಳೆದು ತೂಗಿ ಒಪ್ಪಿಕೊಂಡು ಮುನ್ನಡೆಯಬೇಕು.

ನಮ್ಮೊಳಗೆ ಆಳವಾದ ವಿಶ್ವಾಸವಿರಲಿ. ಇಂಥ ವಿಶ್ವಾಸವಿದ್ದರೆ ಉಳಿದವರಿಗಿಂತ ನಾವು ವಿಭಿನ್ನ ಮತ್ತು ವಿಶೇಷವಾಗಿ ಕಾಣಿಸಲು ಸಾಧ್ಯ. ತಮ್ಮೊಳಗೆ ವಿಶ್ವಾಸವಿಲ್ಲದವರ ಬದುಕು ನಿಜಕ್ಕೂ ಕಷ್ಟಕರ. ವಿಶ್ವಾಸವೊಂದಿದ್ದರೆ ವಿನಯ, ವಿವೇಕ ಹಾಗೂ ವಿನೂತನ ವಿಚಾರಗಳು ಹೇಳದೆ ಕೇಳದೆ ನಮ್ಮಲ್ಲಿ ಜನ್ಮವೆತ್ತುತ್ತವೆ. ನಮ್ಮ ಉಸಿರಾಟದ ತುಂಬೆಲ್ಲ ವಿಶ್ವಾಸವೇ ತುಂಬಿರಲಿ. ಒಮ್ಮೆ ನಮ್ಮಿಂದ ಕಳೆದುಹೋದರೆ ಅದು ಮತ್ತೆ ಮರಳಿ ಸಿಗುವಂಥದ್ದಲ್ಲ. ವಿಶ್ವಾಸವಿದ್ದಲ್ಲಿ ನಲಿವಿದೆ, ನೆಮ್ಮದಿಯಿದೆ. ಎಲ್ಲಕ್ಕಿಂತ ಮುಖ್ಯವಾಗಿ ಬದುಕಿನ ಸ್ವಾದವಿದೆ. ವಿಶ್ವಾಸವಿಲ್ಲದವನಿಗೆ ತಾನು ಇಡುವ ಒಂದೊಂದು ಹೆಜ್ಜೆಯೂ ದುಸ್ತರವೆನಿಸಿ, ಒಂದು ಕೂದಲೆಳೆಯು ಕೂಡ ಭಾರ ಎನಿಸುವುದು. ಎಲ್ಲದರಲ್ಲಿಯೂ ಸೋತು ಸುಣ್ಣವಾದವರು ಮತ್ತೆ ಲವಲವಿಕೆಯಿಂದ ಪುಟಿದೇಳಲು ವಿಶ್ವಾಸವೇ ಊರುಗೋಲಾಗುತ್ತದೆ.

ವಿಶ್ವಾಸ ಹಾಗೂ ವಿಜಯ ಇವೆರಡೂ ಗಳಸ್ಯ-ಕಂಠಸ್ಯ. ವಿಜಯದ ಮುನ್ನುಡಿಯೇ ವಿಶ್ವಾಸ. ಇದಕ್ಕೆ ಎಣೆಯಾದ ಮತ್ತೊಂದು ಬಲವಿಲ್ಲ. ಯಾರು ವಿಶ್ವಾಸಿಗರೋ ಅವರೇ ಇಲ್ಲಿ ವಿಜಯಿಗಳು. ವಿಶ್ವಾಸದಿಂದ ಮುನ್ನಡೆದವರು ಇಡೀ ವಿಶ್ವವನ್ನೇ ಗೆದ್ದು ಬೀಗಿದ ಹತ್ತು ಹಲವು ನಿದರ್ಶನಗಳು ಸುತ್ತಮುತ್ತ ತುಂಬಿಕೊಂಡಿವೆ. ನಮ್ಮನ್ನು ಹಾಗೂ ನಮ್ಮೆದುರಿನ ಈ ವಿಶಾಲ ವಿಶ್ವವನ್ನು ಗೆಲ್ಲಲು ವಿಶ್ವಾಸ ಬೇಕೇ ಬೇಕು. ವಿಶ್ವಾಸ ಇದ್ದಾತ ಸಕಲವನ್ನೂ ಸಾಧಿಸಿ ತೋರಿಸಬಲ್ಲ. ಒಟ್ಟಾರೆ ನಮ್ಮಲ್ಲಿ ವಿಶ್ವಾಸವು ತುಂಬಿ ತುಳುಕುತ್ತಿದ್ದರೆ ವಿಜಯದ ಪತಾಕೆಯನ್ನು ಎತ್ತಿ ಹಿಡಿಯಬಹುದು, ಮೇಲಾಗಿ ಗೆಲುವಿನ ರಥದ ಸಾರಥಿಯಾಗಬಹುದು.

ಬದಲಾದ ಕಾಲಘಟ್ಟದಲ್ಲಿ ಸಂಕ್ರಾಂತಿಯ ಸ್ವರೂಪ

• ಲಕ್ಷ್ಮಿಕಾಂತ್ ಎಲ್.ವಿ., ತುಮಕೂರು

ನಿನ್ನೆಯಷ್ಟೇ ಮಕರ ಸಂಕ್ರಾಂತಿ ಹಬ್ಬವನ್ನು ಆಚರಿಸಿದ್ದೇವೆ. ಪ್ರಕೃತಿಯ ಗಡಿಯಾರದಲ್ಲಿ ಈ ಸಂಕ್ರಾಂತಿಗೊಂದು ವಿಶಿಷ್ಟ ಸ್ಥಾನವಿದೆ. ಸೂರ್ಯನು ಧನುರ್ ರಾಶಿಯಿಂದ ಮಕರ ರಾಶಿಗೆ ಪ್ರವೇಶಿಸುವ ಸಂಕ್ರಮಣ ಕಾಲವಿದು. ವಿಜ್ಞಾನದ ದೃಷ್ಟಿಯಲ್ಲಿ ಇದು ಉತ್ತರಾಯಣದ ಆರಂಭ, ಅಂದರೆ ಸೂರ್ಯನ ಪಯಣ ಉತ್ತರದ ಕಡೆಗೆ. ಆದರೆ ಭಾರತೀಯ ಸಂಸ್ಕೃತಿಯಲ್ಲಿ ಇದು ಕೇವಲ ಖಗೋಳ ವಿದ್ಯಮಾನವಲ್ಲ; ಇದು ಸುಗ್ಗಿ. ಬೆಳೆದ ಬೆಳೆ ಕೈಗೆ ಬಂದು, ರೈತನ ಮುಖದಲ್ಲಿ ಮಂದಹಾಸ ಮೂಡುವ ಹೊತ್ತು. ಮಾಗಿ ಚಳಿಯ ನಡುಕವನ್ನು ಕಮ್ಮಿ ಮಾಡುವ ಬೆಚ್ಚಗಿನ ಕಿಚ್ಚು ಈ ಹಬ್ಬದ ಜೀವಾಳ.

ಸುಗ್ಗಿ ಸಂಭ್ರಮ, ಮಣ್ಣಿನ ಮಮತೆ

ಒಂದು ಕಾಲವಿತ್ತು, ಹಳ್ಳಿಗಳಲ್ಲಿ ಸಂಕ್ರಾಂತಿ ಎಂದರೆ ಹದಿನೈದು ದಿನಗಳ ಮುಂಚೆಯೇ ಸಂಭ್ರಮ ಶುರುವಾಗುತ್ತಿತ್ತು. ಮನೆಯ ಮುಂದೆ ಬಣ್ಣಬಣ್ಣದ ರಂಗೋಲಿಗಳು, ದನದ ಕೊಟ್ಟಿಗೆಯ ಶುಚಿತ್ವ, ಎತ್ತುಗಳ ಮೈ ತೊಳೆದು ಅವುಗಳ ಕೊಂಬಿಗೆ ಬಣ್ಣ ಹಚ್ಚುವ ಸಂಭ್ರಮ ಆಕಾಶ ಮುಟ್ಟುತ್ತಿತ್ತು. ಆದರೆ, ವರ್ತಮಾನದಲ್ಲಿ ಸಂಕ್ರಾಂತಿ ತನ್ನ ಸ್ವರೂಪವನ್ನು ಬದಲಿಸಿಕೊಂಡಿದೆ. ನಗರದ ಅಪಾರ್ಟ್‌ಮೆಂಟ್‌ಗಳಲ್ಲಿ ಸಂಕ್ರಾಂತಿ ಎಂದರೆ ಕೇವಲ ವಾಟ್ಸಾಪ್ ಸ್ಟೇಟಸ್‌ಗಳಿಗೆ ಅಥವಾ ಆನ್‌ಲೈನ್‌ನಲ್ಲಿ ಆರ್ಡರ್ ಮಾಡಿದ ಎಳ್ಳು-ಬೆಲ್ಲದ ಪ್ಯಾಕೆಟ್‌ಗಳಿಗೆ ಸೀಮಿತವಾಗುತ್ತಿದೆ. ಕಾಂಕ್ರೀಟ್ ಕಾಡಿನ ನಡುವೆ ನಮಗೆ ಸೂರ್ಯ ಕಾಣುವುದೇ ಅಪರೂಪವಾಗಿರುವಾಗ, ಸೂರ್ಯನ ಪಥ ಬದಲಾವಣೆಯ ಮಹತ್ವ ಅರ್ಥವಾಗುವುದು ಕಷ್ಟವೇ. ಆದರೂ, ಈ ಯಾಂತ್ರಿಕ ಬದುಕಿನ ನಡುವೆಯೂ ಮನುಷ್ಯ ತನ್ನ ಬೇರುಗಳನ್ನು ಹುಡುಕುತ್ತಿರುವುದು ಆಶಾದಾಯಕ ಸಂಗತಿ.

ಸೌಹಾರ್ದತೆಯ ಸಂಕೇತ

'ಎಳ್ಳು ಬೆಲ್ಲ ತಿಂದು ಒಳ್ಳೆಯ ಮಾತಾಡು' ಎಂಬ ಗಾದೆಮಾತು ಕೇವಲ ಹಾರೈಕೆಯಲ್ಲ, ಅದೊಂದು ಜೀವನ ದರ್ಶನ. ವರ್ತಮಾನದ ರಾಜಕೀಯ ಮತ್ತು ಸಾಮಾಜಿಕ ಅಸ್ಥಿರತೆಯ ನಡುವೆ, ಪರಸ್ಪರ ದ್ವೇಷಗಳನ್ನು ಮರೆತು ಪ್ರೀತಿಯಿಂದ ಎಳ್ಳು-ಬೆಲ್ಲ ಹಂಚುವುದು ಇಂದಿನ ತುರ್ತು ಅಗತ್ಯವಾಗಿದೆ. ಮೊಬೈಲ್ ಪರದೆಗಳ ಮೇಲೆ ಬೆರಳುಗಳನ್ನಾಡಿಸುವ ನಾವು, ನೆರೆಹೊರೆಯವರ ಮನೆಗೆ ಹೋಗಿ ಪ್ರೀತಿಯಿಂದ ಸಂಕ್ರಾಂತಿಯ ಶುಭಾಶಯವನ್ನು ಹಂಚಿಕೊಳ್ಳುವುದು ಮನುಷ್ಯ ಸಂಬಂಧಗಳನ್ನು ಗಟ್ಟಿ ಮಾಡುತ್ತದೆ. ಪ್ರಕೃತಿಯು ಹೇಗೆ ಭೇದಭಾವವಿಲ್ಲದೆ ಎಲ್ಲರಿಗೂ ಬೆಳಕನ್ನು ನೀಡುತ್ತದೆಯೋ, ಹಾಗೆಯೇ ಮನುಷ್ಯನೂ ಉದಾರ ಮನೋಭಾವ ಬೆಳೆಸಿಕೊಳ್ಳಬೇಕು ಎಂಬುದು ಈ ಹಬ್ಬದ ಸಂದೇಶ.

ಕೃಷಿ ಸಂಸ್ಕೃತಿ ಮತ್ತು ಇಂದಿನ ಸವಾಲುಗಳು

ಸಂಕ್ರಾಂತಿ ಎಂದರೆ ರೈತನ ಹಬ್ಬ. ಭೂತಾಯಿಗೆ ಕೃತಜ್ಞತೆ ಸಲ್ಲಿಸುವ ದಿನ. ಆದರೆ ಇಂದಿನ ಕೃಷಿ ಕ್ಷೇತ್ರ ಹತ್ತು ಹಲವು ಸವಾಲುಗಳನ್ನು ಎದುರಿಸುತ್ತಿದೆ. ಅಕಾಲಿಕ ಮಳೆ, ಹವಾಮಾನ ಬದಲಾವಣೆ ಮತ್ತು ಮಾರುಕಟ್ಟೆಯ ಅನಿಶ್ಚಿತತೆಗಳ ನಡುವೆ ರೈತನು ಸಂಕ್ರಾಂತಿಯನ್ನು ಆಚರಿಸುತ್ತಿದ್ದಾನೆ. ಹಿಂದೆ ಹಟ್ಟಿ ಹಬ್ಬದಂದು ಎತ್ತುಗಳನ್ನು ಕಿಚ್ಚು ಹಾಯಿಸುವುದು ದೊಡ್ಡ ಸಂಭ್ರಮವಾಗಿತ್ತು. ಇಂದು ಹಳ್ಳಿಗಳಲ್ಲಿ ಎತ್ತುಗಳ ಸಂಖ್ಯೆ ಕಡಿಮೆಯಾಗಿ ಟ್ರ್ಯಾಕ್ಟರ್‌ಗಳು ಆ ಜಾಗವನ್ನು ಆಕ್ರಮಿಸಿವೆ. ತಾಂತ್ರಿಕತೆ ಅಗತ್ಯವೇ ಆದರೂ, ಪ್ರಾಣಿಗಳೊಂದಿಗೆ ನಮಗಿದ್ದ ಆ ಭಾವನಾತ್ಮಕ ನಂಟು ತುಂಡಾಗುತ್ತಿರುವುದು ನೋವಿನ ಸಂಗತಿ. ಆದರೂ, ಎಷ್ಟೇ ಆಧುನಿಕತೆಯಿದ್ದರೂ ಮನುಷ್ಯನ ಹಸಿವು ನೀಗಿಸಲು ಮಣ್ಣಿನ ಜತೆಗಿನ ಸಂಬಂಧ ಅನಿವಾರ್ಯ ಎಂಬುದನ್ನು ಸುಗ್ಗಿ ಹಬ್ಬ ನೆನಪಿಸುತ್ತಲೇ ಇರುತ್ತದೆ.

ಪರಿಸರ ಮತ್ತು ಅಧ್ಯಾತ್ಮದ ಮೇಳೈಕೆ

ಸಂಕ್ರಾಂತಿ ಹಬ್ಬದ ಆಹಾರ ಪದ್ಧತಿಯನ್ನು ಗಮನಿಸಿದರೆ

ಅದರಲ್ಲಿ ವೈಜ್ಞಾನಿಕ ಹಿನ್ನೆಲೆಯಿದೆ. ಚಳಿಗಾಲದಲ್ಲಿ ದೇಹದ ಉಷ್ಣತೆಯನ್ನು ಕಾಪಾಡಿಕೊಳ್ಳಲು ಎಳ್ಳು, ಶೇಂಗಾ, ಬೆಲ್ಲದ ಬಳಕೆ ಮಾಡಲಾಗುತ್ತದೆ. ಇದು ನಮ್ಮ ಪೂರ್ವಜರ ಆರೋಗ್ಯ ಪ್ರಜ್ಞೆಯನ್ನು ತೋರಿಸುತ್ತದೆ. ಪ್ರಕೃತಿಯನ್ನು ಪೂಜಿಸುವುದೆಂದರೆ ನಮ್ಮನ್ನು ನಾವು ಪೂಜಿಸಿಕೊಂಡಂತೆ.

ಬದಲಾಗುತ್ತಿರುವ ಜಗತ್ತಿನಲ್ಲಿ ನಾವು ಸಮನ್ವಯ ಸಾಧಿಸಬೇಕಿದೆ. ಹಳೆಯ ಸಂಪ್ರದಾಯಗಳ ಸತ್ವವನ್ನು ಉಳಿಸಿಕೊಂಡು, ಹೊಸ ಕಾಲದ ಚಿಂತನೆಗಳಿಗೆ ತೆರೆದುಕೊಳ್ಳುವುದೇ ನಿಜವಾದ ಸಂಕ್ರಮಣ. ಸೂರ್ಯನು ಕತ್ತಲೆಯನ್ನು ಸರಿಸಿ ಬೆಳಕನ್ನು ನೀಡುವಂತೆ, ನಮ್ಮ ಒಳಗಿನ ಅಜ್ಞಾನದ ಕತ್ತಲೆ ದೂರವಾಗಲಿ.

ಸುಗ್ಗಿಯ ಸಂಭ್ರಮದ ಒಳನೋಟ

ಸುಗ್ಗಿ ಹಬ್ಬದ ಯಶಸ್ಸಿನ ಹಿಂದೆ ತೆರೆಯ ಮರೆಯಲ್ಲಿ ಕೆಲಸ ಮಾಡುವ ಮಹಿಳೆಯರ ಪಾತ್ರ ಅನನ್ಯವಾದುದು. ಹೊಲದಲ್ಲಿ ಬೆಳೆ ಬೆಳೆಯುವುದರಿಂದ ಹಿಡಿದು, ಮನೆಯ ಹೊಸ್ತಿಲಲ್ಲಿ ರಂಗೋಲಿ ಇಡುವವರೆಗೆ ಅವರ ಶ್ರಮದ ಸಾರವಿದೆ. ವರ್ತಮಾನದಲ್ಲಿ ಹಳ್ಳಿಗಳಿಂದ ಪುರುಷರು ಉದ್ಯೋಗಕ್ಕಾಗಿ ನಗರಕ್ಕೆ ವಲಸೆ ಹೋಗುತ್ತಿರುವಾಗ, ಹಳ್ಳಿಯ ಕೃಷಿ ಮತ್ತು ಸಂಸ್ಕೃತಿಯನ್ನು ಜೀವಂತವಾಗಿರಿಸಿದವರು ನಮ್ಮ ಗ್ರಾಮೀಣ ಮಹಿಳೆಯರು. ಸಂಕ್ರಾಂತಿಯ ಎಳ್ಳು-ಬೆಲ್ಲವನ್ನು ಸಿದ್ಧಪಡಿಸುವಾಗ ಅವರು ಹಂಚಿಕೊಳ್ಳುವ ಹರಟೆಗಳು, ಜಾನಪದ ಹಾಡುಗಳು ಕೇವಲ ಹರಟೆಯಲ್ಲ; ಅವು ಮೌಖಿಕ ಪರಂಪರೆಯ ಸಂರಕ್ಷಣೆ. ಈ ಹಬ್ಬವು ಹೆಣ್ಣುಮಕ್ಕಳ ಸೃಜನಶೀಲತೆಗೆ ಹೊಸ ವೇದಿಕೆಯನ್ನು ಒದಗಿಸುತ್ತದೆ, ಅವರ ಶ್ರಮಕ್ಕೆ ಗೌರವ ಸಲ್ಲಿಸುವ ಮೂಲಕ ಸುಗ್ಗಿ ಹಬ್ಬವು ಸಾಮಾಜಿಕ ಸಮಾನತೆಯ ಸಂದೇಶವನ್ನೂ ಸಾರುತ್ತದೆ.

ಸಾಂಸ್ಕೃತಿಕ ಪರಂಪರೆಯ ಪುನರುತ್ಥಾನ

ಆಧುನಿಕ ತಂತ್ರಜ್ಞಾನವು ಹಬ್ಬದ ಹಳೆಯ ಸೊಬಗನ್ನು ಅಳಿಸುತ್ತಿದೆ ಎಂಬ ಆತಂಕದ ನಡುವೆಯೇ, ಸೋಷಿಯಲ್ ಮೀಡಿಯಾದಂಥ ವೇದಿಕೆಗಳು ಸಂಕ್ರಾಂತಿಯ ಆಚರಣೆಯನ್ನು ಜಗತ್ತಿನಾದ್ಯಂತ ಪಸರಿಸುತ್ತಿವೆ. ಇಂದು ನಗರದಲ್ಲಿರುವ ಯುವಕರು ಸಂಕ್ರಾಂತಿ ಹಬ್ಬದ ಬ್ಲಾಗ್ ಮಾಡುವ ಮೂಲಕ ಅಥವಾ ಇನ್‌ಸ್ಟಾಗ್ರಾಮ್ ರೀಲ್ಸ್‌ಗಳಲ್ಲಿ ಸುಗ್ಗಿಯ ಸಂಭ್ರಮವನ್ನು ಹಂಚಿಕೊಳ್ಳುವ ಮೂಲಕ ಮರೆಯಾಗುತ್ತಿದ್ದ ಕಲೆಗಳಿಗೆ ಮರುಜೀವ ನೀಡುತ್ತಿದ್ದಾರೆ. ಇದು ಕೇವಲ ಪ್ರದರ್ಶನವಲ್ಲ, ಬದಲಿಗೆ ಕಳೆದುಹೋಗುತ್ತಿದ್ದ ಗ್ರಾಮೀಣ ಸೊಗಡನ್ನು ಡಿಜಿಟಲ್ ಆರ್ಕೈವ್ ಆಗಿ ಉಳಿಸುವ ಪ್ರಯತ್ನವಾಗಿದೆ. ಜಾಗತೀಕರಣದ ಈ ಕಾಲದಲ್ಲಿ ನಮ್ಮತನವನ್ನು ಉಳಿಸಿಕೊಳ್ಳಲು ತಂತ್ರಜ್ಞಾನವನ್ನೇ ಸೇತುವೆಯನ್ನಾಗಿ ಮಾಡಿಕೊಳ್ಳುವ ಈ ಹೊಸ ನಡೆಯು ಸಂಕ್ರಾಂತಿಯ ಆಚರಣೆಗೆ ಒಂದು ಆಧುನಿಕ ಆಯಾಮವನ್ನು ನೀಡಿದೆ.

ಹೊಸ ಹಾದಿಯತ್ತ ಪಯಣ

ಸಂಕ್ರಾಂತಿ ಎಂದರೆ ಕೇವಲ ಎಳ್ಳು-ಬೆಲ್ಲದ ಸಿಹಿಯಲ್ಲ; ಅದು ಬದುಕಿನ ಕಹಿ ಘಟನೆಗಳನ್ನು ಮರೆತು, ಹೊಸ ಭರವಸೆಯೊಂದಿಗೆ ಮುನ್ನಡೆಯುವ ಸಂಕಲ್ಪ. ವರ್ತಮಾನದ ಗದ್ದಲಗಳ ನಡುವೆ ಮೌನವಾಗಿ ಪ್ರಕೃತಿಯನ್ನು ಗಮನಿಸಿದರೆ, ಪ್ರತಿ ಸಂಕ್ರಾಂತಿಯೂ ನಮಗೆ ಹೊಸ ಪಾಠವನ್ನು ಕಲಿಸುತ್ತದೆ. ಗದ್ದೆಯ ಬದುವಿನಲ್ಲಿ ನಿಂತು ರೈತ ನಗುವಾಗ, ಆ ನಗು ಇಡೀ ದೇಶಕ್ಕೆ ಅನ್ನದ ಭರವಸೆಯಾಗಿರುತ್ತದೆ. ಈ ಸುಗ್ಗಿ ಹಬ್ಬ ನಮ್ಮ ಸಂಸ್ಕೃತಿಯ ಉಳಿವಿಗೆ ಪ್ರೇರಣೆಯಾಗಲಿ. ಪ್ರತಿಯೊಬ್ಬರ ಮನೆಯಲ್ಲೂ ಸಂಕ್ರಾಂತಿಯ ಸಂಭ್ರಮವು ಕೇವಲ ಒಂದು ದಿನದ ಆಚರಣೆಯಾಗದೆ ನಿರಂತರವಾಗಿರಲಿ, ಅಂತರಂಗದ ಶುದ್ಧೀಕರಣವಾಗಲಿ...

ವೀಳ್ಯದೆಲೆಯ ವಿರಾಟರೂಪ

• ಮಂಜುನಾಥ ಡಿ.ಎಸ್., ಬೆಂಗಳೂರು

ವೀಳ್ಯೆದೆಲೆ ಎಂದೇ ಚಿರಪರಿಚಿತವಾಗಿರುವ ವೀಳ್ಯದೆಲೆ ತನ್ನ ಬಹೂಪಯೋಗಿ ಗುಣದಿಂದಾಗಿ ಭಾರತೀಯ ಆಧ್ಯಾತ್ಮಿಕ ಮತ್ತು ಸಾಂಸ್ಕೃತಿಕ ಪರಂಪರೆಯ ಅವಿಭಾಜ್ಯ ಅಂಗವಾಗಿದೆ. ನಾಗವಲ್ಲಿ, ತಾಂಬೂಲಬಳ್ಳಿ, ಸೋಮಪತ್ರ, ಸಪ್ತಸಿರಿ ಇತ್ಯಾದಿ ಹೆಸರುಗಳನ್ನು ಹೊಂದಿರುವ ವೀಳ್ಯದೆಲೆ ಸಮುದ್ರ ಮಂಥನದಲ್ಲಿ ಅಮೃತದೊಡನೆ ಉದ್ಭವಿಸಿತೆಂದೂ, ಅದರಲ್ಲಿ ಹಲವಾರು ದೇವತೆಗಳು ವಾಸಿಸುವರೆಂದೂ ಭಾವಿಸಲಾಗಿದೆ. ಶುಭ ಮತ್ತು ಸಮೃದ್ಧಿಯ ಸಂಕೇತವಾದ ವೀಳ್ಯದೆಲೆಗೆ ಪೂಜಾಕೈಂಕರ್ಯಗಳಲ್ಲಿ ಹಾಗೂ ಎಲ್ಲ ಶುಭ ಸಂದರ್ಭಗಳಲ್ಲಿ ಪ್ರಾಶಸ್ತ್ಯವಿದೆ.

ಭಾರತೀಯ ಆಹಾರ ಪದ್ಧತಿಯಲ್ಲಿ ಊಟದ ನಂತರ ಎಲೆ-ಅಡಕೆ ಸೇವಿಸುವುದು ಹಿಂದಿನಿಂದಲೂ ಬಂದ ಅಭ್ಯಾಸವಾಗಿದೆ. ರಸಿಕರು ತಾಂಬೂಲ ಮೆಲ್ಲುತ್ತಾ ಸರಸ-ಸಲ್ಲಾಪ ನಡೆಸುತ್ತಿದ್ದ ವಿವರಣೆಗಳು ನಮ್ಮ ಸಾಹಿತ್ಯದಲ್ಲಿ ಕಂಡುಬರುತ್ತವೆ. ಮುದ್ದಣ ಮನೋರಮೆಯರ ಸಲ್ಲಾಪದಲ್ಲೂ ತಾಂಬೂಲ ಪ್ರವೇಶಿಸಿರುವುದನ್ನು ನೋಡಿದ್ದೇವೆ. ಆಮಂತ್ರಿಸುವುದನ್ನು 'ವೀಳೆಯ ಕೊಡು' ಎನ್ನುವುದೂ, ಒಳ್ಳೆಯ ಕಾರ್ಯಗಳಿಗೆ ಹೊರಡುವಾಗ 'ವೀಳಯಗೊಳ್' (ವೀಳಯವನ್ನು ಸ್ವೀಕರಿಸು) ಎನ್ನುವುದೂ, ನಿಶ್ಚಿತಾರ್ಥದಲ್ಲಿ ವೀಳೆಯ ಶಾಸ್ತ್ರ ಇರುವುದೂ, ಅತಿಥಿಗಳನ್ನು ಬೀಳ್ಕೊಡುವಾಗ ಎಲೆ-ಅಡಕೆ ಸಹಿತ ತಾಂಬೂಲ ನೀಡುವ ರೂಢಿಯಿರುವುದೂ ತಿಳಿದ ವಿಷಯಗಳೇ ಆಗಿವೆ. ಕುಂಕುಮಾರ್ಚನೆಗೂ ವೀಳ್ಯದೆಲೆ ಬಳಸುವುದು ಶ್ರೇಷ್ಠ ಎಂಬ ನಂಬಿಕೆಯಿದೆ. ಪುರಾಣಗಳಲ್ಲಿಯೂ ವೀಳ್ಯದೆಲೆ ಕುರಿತ ಪ್ರಸಂಗಗಳಿವೆ.

ಆರೋಗ್ಯ ರಕ್ಷಣೆಯಲ್ಲೂ ವೀಳ್ಯದೆಲೆಯ ಪಾತ್ರವಿದೆ. ಸ್ವರವನ್ನು ಸುಧಾರಿಸಲು ಇದನ್ನು ಬಳಸಬಹುದೆಂದು ಸುಶ್ರುತ ಸಂಹಿತೆಯಲ್ಲಿ ಹೇಳಲಾಗಿದೆ. ಆಯುರ್ವೇದದಲ್ಲಿ ತಿಳಿಸಿರುವಂತೆ, ವೀಳ್ಯದೆಲೆಗೆ ರೋಗನಿರೋಧಿಸುವ, ಜೀರ್ಣಕ್ರಿಯೆ ವೃದ್ಧಿಸುವ, ಗಾಯಗಳನ್ನು ಗುಣಪಡಿಸುವ, ಶೀತ ಮತ್ತು ಕಫವನ್ನು ಕಳೆಯುವ ಔಷಧೀಯ ಗುಣಗಳಿವೆ. ದಶಕಗಳ ಹಿಂದೆ, ಮಕ್ಕಳಿಗೆ ಶೀತ ಬಾಧಿಸದಂತೆ ಎಚ್ಚರಿಕೆಯ ಕ್ರಮವಾಗಿ ವೀಳ್ಯದೆಲೆಯ ರಸವನ್ನು ಕುಡಿಸುತ್ತಿದ್ದುದು ನೆನಪಿನಲ್ಲಿದೆ. ಈಗಲೂ ವೀಳ್ಯದೆಲೆ ಮತ್ತು ಕೆಂಪು ಕಲ್ಲುಸಕ್ಕರೆ ಕೆಮ್ಮಿಗೆ ಮನೆಮದ್ದಾಗಿ ಬಳಕೆಯಲ್ಲಿದೆ. ಆದರೆ, 'ಅತಿಯಾದರೆ ಅಮೃತವೂ ವಿಷವಾಗುತ್ತದೆ' ಎಂಬ ಲೋಕೋಕ್ತಿಯಿಂದ ಇದೂ ಹೊರತಾಗಿಲ್ಲ ಎಂಬುದನ್ನು ನೆನಪಿನಲ್ಲಿಡಬೇಕು.

ನಮ್ಮ ಪೂರ್ವಿಕರು ಬೆಣ್ಣೆ ಕಾಯಿಸಿ ತುಪ್ಪ ತಯಾರಿಸಿದ ನಂತರ ಅದಕ್ಕೆ ಒಂದೆರಡು ಚೂರು ವೀಳ್ಯದೆಲೆಯನ್ನು ಸೇರಿಸಿ ಅದನ್ನು ಪರಿಮಳಯುಕ್ತ ಹಾಗು ರುಚಿಕರವಾಗಿಸುತ್ತಿದ್ದರು. ಸ್ವಲ್ಪ ವೀಳ್ಯದೆಲೆ ಬೆರೆಸಿ ವಿಶೇಷ ರುಚಿಯ ಚಟ್ನಿಯನ್ನು ತಯಾರಿಸಿದ ಉದಾಹರಣೆಗಳೂ ಉಂಟು. ಹಬ್ಬ ಹರಿದಿನಗಳಲ್ಲಿ ವೀಳ್ಯದೆಲೆಯ ಅನಿವಾರ್ಯತೆಯನ್ನು ಅರಿತುಕೊಂಡ ಕೆಲ ವರ್ತಕರು, ಅದಕ್ಕೆ ಮನಸ್ಸಿಗೆ ಬಂದ ಬೆಲೆ ನಿಗದಿಪಡಿಸಿ ಗ್ರಾಹಕರನ್ನು ಶೋಷಿಸುವುದನ್ನು ಕಂಡಾಗ ವೀಳ್ಯದೆಲೆಯ ವಿರಾಟರೂಪ ಮನಃಪಟಲದಲ್ಲಿ ಮೂಡಿತು...

ಪ್ರಪಂಚಕ್ಕೆ ತಲ್ಲಣ ತಂದ್ಯಲ್ಲೋ ಟ್ರಂಪಣ್ಣ!

• ಎಚ್. ಪ್ರಹ್ಲಾದ ರಾವ್

ಈ ಟ್ರಂಪಣ್ಣ ಸುಮ್ಮನೆ ಇರೋನ?
ಇಲ್ಲ, ವೆನಿಜುವೆಲಾ ನಂತರ ಇರಾನ
ಪ್ರಪಂಚದಲ್ಲೇ ಮಹಾ ಬಲವಾನ
ಅಂತ ಈತನಿಗೆ ಇವನದೇ ದೃಷ್ಟಿ ಕೋನ
ಆಡಿದ್ದನ್ನು ಮಾಡುವ ಏನಕೇನ ಪ್ರಕಾರೇಣ
ಪ್ರಪಂಚದ ಇಂದಿನ ತಲ್ಲಣಕ್ಕೆ ಇವನೇ ಕಾರಣ...

ಪದಬಂಧ

• ಸಿ.ರವಿಶಂಕರ ಶಾಸ್ತ್ರಿ, ದಂಬೆ

1		2	■	3		4	■	5
	■	6			■	7		
	■		■		■		■	
■	8	■	9	■	10		11	■
12		■	13			■	14	
■	15	16		■		■		■
17	■		■	18	■	19	■	20
21			■	22			■	
	■	23			■	24		

ಎಡದಿಂದ ಬಲಕ್ಕೆ

1. ಕೆಟ್ಟದಾದ ದಿವಸವನ್ನು ಹೀಗೆನ್ನುವರು (3)
3. ಗೆದ್ದವರಿಗೆ ಸಿಗುವ ಬಿಲ್ಲೆ (3)
6. ನೋವಿನಿಂದ ಕೊಟ್ಟಿರುವ ಬೀಳ್ಕೊಡುಗೆ (3)
7. ಚಿನ್ನವಲ್ಲ, ಇದು ಬೆಳ್ಳಿ (3)
10. ನೂಲು ತೆಗೆಯುವ ಒಂದು ಉಪಕರಣ (3)
12. ಎರಡಕ್ಷರದ ಬಾಗಿಲು (2)
13. ಬನವಾಸಿಯನ್ನು ರಾಜಧಾನಿಯಾಗಿ ಹೊಂದಿದ್ದ ರಾಜವಂಶ (3)
14. ಪೊಲೀಸರ ಕೈಯಲ್ಲಿರುವ ದಂಡ (2)
15. ಸರಿಬಿಡಿ, ಇದು ಪ್ರಾಣಿ ಅಥವಾ ವಾಹನದ ಮೇಲೆ ಕುಳಿತು ಸಂಚರಿಸುವುದು (3)
21. ಶಯನದ ಸಮಯದಲ್ಲೇನು ಗುಮಾನಿ (3)
22. ಬಿಡುವಿದ್ದಾಗ ಬಂದಿರುವ ಅಗಸ (3)
23. ಸ್ವರ್ಗದ ವಿರುದ್ಧ ಪದ (3)
24. ಅಂಚೆಯ ಮೂಲಕ ಬಂದ ಪತ್ರ, ಪಾಲು ಕೇಳಿದೆ (3)

ಮೇಲಿಂದ ಕೆಳಕ್ಕೆ

1. ಮನಸ್ಸಿನ ವ್ಯಸನ ಅಥವಾ ಚಿಂತೆಗೆ ಮತ್ತೊಂದು ಹೆಸರು (3)
2. ನಮ್ಮ ರಾಷ್ಟ್ರಪಕ್ಷಿ (3)
3. ಹಣತೊಟ್ಟು ಮಾಡಿದ ಸಂಚಾರ (3)
4. ಲೆಕ್ಕ ಬರೆಯುವವನು (4)
5. ಜಹಗೀರು (3)
8. ಪ್ರೀತಿಯಿಂದ ಕೂಡಿದ ಎಂಬುದು ವಿನೋದವೂ ಆಗಬಲ್ಲುದು (3)
9. ಕ್ರಯಕ್ಕೆ ಮಾರಾಟ ಮಾಡು (3)
10. ಒಂದು ಬಗೆಯ ಚರ್ಮವಾದ್ಯ (3)
11. ಹಲವು ಬಗೆ ನಡೆಯಿತು ಹರಾಜು (3)
16. ಶುದ್ಧ ವಾತಾವರಣದ ಗಾಳಿ ಬರಲು ಬೇಕು ಕಿಟಕಿ (4)
17. ಋತುಗಳ ರಾಜನಿವನು (3)
18. ಕೆಡುಕನ್ನು ಉಂಟುಮಾಡುವುದು ಎಂದರ್ಥ (3)
19. ಹತ್ತಿರವೆನ್ನುವ ಮತ್ತೊಂದು ಪದ (3)
20. ಮರದರೆಂಬೆ, ಟಿಸಿಲು (3)

ಸರಿಯುತ್ತರಗಳು

ಮೇಲಿಂದ ಕೆಳಕ್ಕೆ
1.ದುಗುಡ 2.ನವಿಲು 3.ಪಯಣ 4.ಕರಣಿಕ 5.ವತನ 8.ಸರಸ 9.ಬಿಕರಿ 10.ತಬಲ 11.ಲಿಲಾವು 16.ವಾತಾಯನ 17.ವಸಂತ 18.ಮಾರಕ 19.ನಿಕಟ 20.ಕವಲು

ಎಡದಿಂದ ಬಲಕ್ಕೆ
1.ದುರ್ದಿನ 3.ಪದಕ 6.ವಿದಾಯ 7.ರಜತ 10.ತಕಲಿ 12.ದ್ವಾರ 13.ಕದಂಬ 14.ಲಾಠಿ 15.ಸವಾರಿ 21.ಸಂಶಯ 22.ರಜಕ 23.ನರಕ 24.ಟಪಾಲು

ಕತ್ತಲ ಕೋಣೆಯ ಬೆಳಕು: ನೆಲ್ಲಿ ಬ್ಲೈ ಸಾಹಸ

ಒಂದೊಳ್ಳೆ ಮಾತು

ರೂಪಾ ಗುರುರಾಜ್
rgururaj628@gmail.com

ಒಂದೊಳ್ಳೆ ಮಾತು
Vishwavani TV Special
ಯೂಟ್ಯೂಬ್ ಚಾನೆಲ್‌ನಲ್ಲಿ

ಸೆಪ್ಟೆಂಬರ್ 1887. ನ್ಯೂಯಾರ್ಕ್ ನಗರದ ಬೀದಿಗಳಲ್ಲಿ ಒಬ್ಬ ಯುವತಿ ಅಲೆದಾಡುತ್ತಿದ್ದಳು. ಆಕೆಯ ಹೆಸರು ನೆಲ್ಲಿ ಬ್ಲೈ. ಕೇವಲ ಇಪ್ಪತ್ಮೂರು ವರ್ಷದ ಈಕೆ ಸಾಧಾರಣ ಯುವತಿಯಲ್ಲ; ಸತ್ಯವನ್ನು ಹುಡುಕಿ ಹೊರಟ ದಿಟ್ಟ ಪತ್ರಕರ್ತೆ. ಅಂದು ಆಕೆ ಒಂದು ವಸತಿ ನಿಲಯಕ್ಕೆ ಕಾಲಿಟ್ಟು, ತನಗೆ ಹುಚ್ಚು ಹಿಡಿದಂತೆ ನಟಿಸಲು ಆರಂಭಿಸಿದಳು. ಆಕೆಯ ನಟನೆಯ ಹಿಂದೆ ಒಂದು ಬಲವಾದ ಕಾರಣವಿತ್ತು: ಬ್ಲ್ಯಾಕ್‌ವೆಲ್ ದ್ವೀಪದ 'ಮಹಿಳಾ ಹುಚ್ಚು ಆಸ್ಪತ್ರೆ'ಯಲ್ಲಿ (Women's Lunatic Asylum) ನಡೆಯುತ್ತಿದ್ದ ಅನ್ಯಾಯಗಳನ್ನು ಜಗತ್ತಿಗೆ ತೋರಿಸುವುದು.

ಅಧಿಕಾರಿಗಳು ಆಕೆಯ ನಟನೆಯನ್ನು ನಿಜವೆಂದು ನಂಬಿದರು. ಯಾವುದೇ ಸರಿಯಾದ ತಪಾಸಣೆ ಇಲ್ಲದೆ, ಒಬ್ಬ ವೈದ್ಯ ಮತ್ತು ನ್ಯಾಯಾಧೀಶ ಆಕೆಗೆ 'ಹುಚ್ಚಿ' ಎಂಬ ಹಣೆಪಟ್ಟಿ ಹಚ್ಚಿ ಆಸ್ಪತ್ರೆಗೆ ಕಳುಹಿಸಿದರು. ಅಲ್ಲಿಗೆ ಹೋದ ನಂತರ ನೆಲ್ಲಿ ಕಂಡ ದೃಶ್ಯಗಳು ಎದೆ ನಡುಗಿಸುವಂತಿದ್ದವು.

ಆಸ್ಪತ್ರೆಯ ಒಳಗಿನ ನರಕ: ಅಲ್ಲಿ ಸಾವಿರ ಜನರಿರಬೇಕಾದ ಜಾಗದಲ್ಲಿ ಹದಿನಾರು ನೂರು ಮಹಿಳೆಯರನ್ನು ಕುರಿಗಳಂತೆ ತುಂಬಲಾಗಿತ್ತು. ಅಲ್ಲಿ ಕೇವಲ ರೋಗಿಗಳಿರಲಿಲ್ಲ; ಇಂಗ್ಲಿಷ್ ಮಾತನಾಡಲು ಬಾರದ ವಲಸೆ ಮಹಿಳೆಯರು ಮತ್ತು ಬಡವರೂ ಇದ್ದರು. ಅಲ್ಲಿನ ನರ್ಸ್‌ಗಳು ಕ್ರೂರಿಗಳಾಗಿದ್ದರು. ಮಹಿಳೆಯರಿಗೆ ಮಂಜುಗಡ್ಡೆಯಂಥ ತಣ್ಣೀರಿನಲ್ಲಿ ಸ್ನಾನ ಮಾಡಿಸಲಾಗುತ್ತಿತ್ತು, ಕೆಟ್ಟ ಆಹಾರ ನೀಡಲಾಗುತ್ತಿತ್ತು ಮತ್ತು ಸಣ್ಣ ತಪ್ಪುಗಳಿಗೂ ದೈಹಿಕ ಹಿಂಸೆ ನೀಡಲಾಗುತ್ತಿತ್ತು. ಅಲ್ಲಿ ಹೋದ ಸೌಮ್ಯ ಹೆಣ್ಣುಮಕ್ಕಳು ಸಹ ಅಲ್ಲಿನ ಕಿರುಕುಳಕ್ಕೆ ನಿಜವಾಗಿಯೂ ಹುಚ್ಚರಾಗುವ ಪರಿಸ್ಥಿತಿ ಇತ್ತು.

ನೆಲ್ಲಿ ಅಲ್ಲಿಗೆ ಹೋದ ತಕ್ಷಣ ತನ್ನ ನಟನೆಯನ್ನು ನಿಲ್ಲಿಸಿ ಸಾಮಾನ್ಯರಂತೆ ಮಾತನಾಡತೊಡಗಿದಳು. ಆದರೆ ವಿಪರ್ಯಾಸವೆಂದರೆ, ಒಮ್ಮೆ ಹುಚ್ಚರೆಂದು ಮುದ್ರೆ ಬಿದ್ದ ಮೇಲೆ ಅವರು ಆಡುವ ಸತ್ಯದ ಮಾತುಗಳೂ ಸಹ ಹುಚ್ಚುತನದ ಲಕ್ಷಣಗಳಾಗಿಯೇ ಕಾಣುತ್ತಿದ್ದವು. ನೆಲ್ಲಿ ಅಲ್ಲಿ ಹತ್ತು ದಿನಗಳ ಕಾಲ ನರಕ ಯಾತನೆಯನ್ನು ಅನುಭವಿಸುತ್ತಲೇ ಪ್ರತಿಯೊಂದು ಘಟನೆಯನ್ನು ತನ್ನ ಮನಸ್ಸಿನಲ್ಲಿ ದಾಖಲಿಸಿಕೊಂಡಳು.

ಸತ್ಯದ ಜಯ: ಹತ್ತು ದಿನಗಳ ನಂತರ ವಕೀಲರ ನೆರವಿನಿಂದ ನೆಲ್ಲಿ ಬಿಡುಗಡೆಯಾದಳು. ಅಕ್ಟೋಬರ್ 9, 1887ರಂದು 'ನ್ಯೂಯಾರ್ಕ್ ವರ್ಲ್ಡ್' ಪತ್ರಿಕೆಯಲ್ಲಿ ಆಕೆಯ ವರದಿ Behind Asylum Bars ಪ್ರಕಟವಾಯಿತು. ಇಡೀ ನ್ಯೂಯಾರ್ಕ್ ನಗರವೇ ಬೆಚ್ಚಿಬಿದ್ದಿತು. ಸಾರ್ವಜನಿಕರ ಆಕ್ರೋಶ ಮುಗಿಲು ಮುಟ್ಟಿತು. ಪರಿಣಾಮವಾಗಿ ಸರಕಾರವು ತನಿಖೆಗೆ ಆದೇಶಿಸಿತು. ಆಸ್ಪತ್ರೆಗೆ ಹೆಚ್ಚಿನ ಅನುದಾನ ಸಿಕ್ಕಿತು, ಕ್ರೂರಿ ನರ್ಸ್‌ಗಳನ್ನು ತೆಗೆದುಹಾಕಲಾಯಿತು ಮತ್ತು ರೋಗಿಗಳ ಸ್ಥಿತಿ ಸುಧಾರಿಸಿತು.

ನೆಲ್ಲಿ ಬ್ಲೈ ಕೇವಲ ವರದಿಗಾರ್ತಿಯಾಗಿ ಉಳಿಯಲಿಲ್ಲ; ಆಕೆ 'ತನಿಖಾ ಪತ್ರಿಕೋದ್ಯಮ'ದ (Investigative Journalism) ಜನಕಿಯಾದಳು. ವ್ಯವಸ್ಥೆಯ ಕತ್ತಲೆಯನ್ನು ಹೋಗಲಾಡಿಸಲು ಸ್ವತಃ ಆ ಕತ್ತಲೆಯೊಳಗೆ ಇಳಿದು ಹೋಗಬೇಕೆಂದು ಅವಳು ಜಗತ್ತಿಗೆ ತೋರಿಸಿಕೊಟ್ಟಳು. ಇಂದು ಬ್ಲ್ಯಾಕ್‌ವೆಲ್ ದ್ವೀಪದಲ್ಲಿ ನೆಲ್ಲಿ ಬ್ಲೈ ಅವರ ಸ್ಮಾರಕವಿದ್ದು, ಅದು ಅಸಹಾಯಕರ ಪರವಾಗಿ ಧ್ವನಿ ಎತ್ತಿದ ಒಬ್ಬ ಧೀಮಂತ ಮಹಿಳೆಯ ಸಾಕ್ಷಿಯಾಗಿ ನಿಂತಿದೆ.

ನಾವು ಮಾಡುವ ವೃತ್ತಿ ಯಾವುದೇ ಆದರೂ ಅದರಲ್ಲಿ ನೆಲಿ ಬ್ಲೈನಂತೆ ಒಂದು ಪ್ರಾಮಾಣಿಕ ಪ್ರಯತ್ನ ಇದ್ದಾಗ ಮಾತ್ರ ಈ ರೀತಿಯ ಧೈರ್ಯ ಮಾಡಲು ಸಾಧ್ಯ. ಸೈನ್ಯದಲ್ಲಿ, ವೈದ್ಯ ಪ್ರಪಂಚದಲ್ಲಿ, ಪೊಲೀಸ್ ಇಲಾಖೆಯಲ್ಲಿ, ಮಾಧ್ಯಮ ಕ್ಷೇತ್ರದಲ್ಲಿ ಹೀಗೆ ಸಮಾಜದ ನಾನಾ ಸ್ತರಗಳಲ್ಲಿ ಅನೇಕರು ತಮ್ಮ ಜೀವವನ್ನೇ ಪಣಕ್ಕೊಡ್ಡಿ ಸತ್ಯದ ಅನ್ವೇಷಣೆಗೆ ತೊಡಗುತ್ತಾರೆ. ಅವರಿಗೂ ಕುಟುಂಬ, ಭಾವನಾತ್ಮಕ ಸಂಬಂಧಗಳು ಎಲ್ಲವೂ ಇರುತ್ತವೆ. ಆದರೆ ವೃತ್ತಿಪರತೆ ಮತ್ತು ಆತ್ಮಸ್ಥೈರ್ಯ ಎಲ್ಲರಿಗಿಂತ ಎರಡು ಹಿಡಿ ಜಾಸ್ತಿಯೇ ಇರುತ್ತದೆ. ಇಂಥವರ ಅನೇಕ ಸಾಹಸಗಳಿಂದ, ತ್ಯಾಗಗಳಿಂದ ಸಾಮಾನ್ಯರ ಬದುಕು ಸುರಕ್ಷಿತವಾಗಿದೆ. ಅನ್ಯಾಯಕ್ಕೆ ಒಳಗಾದ ಅನೇಕರಿಗೆ ನ್ಯಾಯ ದೊರಕಿಸುವಲ್ಲಿ ಇವರು ಒಂದಿಷ್ಟೂ ಹಿಂಜರಿಯದೆ ನೆರವಾಗಿದ್ದಾರೆ. ಇಂಥವರಿಗೆಲ್ಲ ದೊಡ್ಡ ನಮಸ್ಕಾರ.

ಕಾಲ ಬದಲಾದಂತೆ ನಾವೂ ಬದಲಾದೆವು

• ಮಿರ್ಲೆ ಚಂದ್ರಶೇಖರ, ಮೈಸೂರು

ಕುರಿಕಂಬಳಿ, ಈಚಲುಚಾಪೆ, ಮಡಕೆ ಇವುಗಳನ್ನು ಬಳಸುತ್ತಿದ್ದ ಕೆಲವರು ಈಗಲೂ ನಮ್ಮ ನಡುವೆ ಇದ್ದಾರೆ. ಕೆಲವೇ ವರ್ಷಗಳಲ್ಲಿ ಅವರೂ ಇಲ್ಲವಾಗುವರು. ಅಭಿವೃದ್ಧಿಯ ಪಥದಲ್ಲಿರುವಾಗ ಹಳತೆಲ್ಲಾ ಹೊಸರೂಪ ಪಡೆದು ಬಳಕೆಗೆ ಬರುತ್ತಿವೆ. ಅಂದಿನ ಬದುಕಲ್ಲಿ ಬಳಸುತ್ತಿದ್ದ ಹಲವಾರು ವಸ್ತುಗಳ ಪರಿಚಯವೇ ಇಂದಿನ ಪೀಳಿಗೆಗೆ ಇಲ್ಲ, ಅವರಿಗೆ ಅದು ಬೇಕಾಗಿಯೂ ಇಲ್ಲ. ಏಕೆಂದರೆ ಹೊದೆಯಲು ಬಗೆಬಗೆಯ ಹೊದಿಕೆಗಳು, ಮಲಗಲು ಕುಶನ್ ಮೆತ್ತೆಗಳು, ಅಡುಗೆಗೆ ಕುಕ್ಕರ್ ಹಾಗೂ ವೈವಿಧ್ಯಮಯ ವಿನ್ಯಾಸದ ಸ್ಟೀಲ್ ಪಾತ್ರೆಗಳು ಬಂದಿವೆ, ತಂತ್ರಜ್ಞಾನವು ನೆಮ್ಮದಿಯೊಂದನ್ನು ಬಿಟ್ಟು ಮಿಕ್ಕೆಲ್ಲವನ್ನೂ ಉನ್ನತಮಟ್ಟಕ್ಕೇರಿಸಿದೆ.

ಕುರಿಕಂಬಳಿ ಹೊದ್ದು ಮಲಗಿದರೆ ಅದರ ಕೂದಲು ಮೈಗೆಲ್ಲಾ ಚುಚ್ಚುತ್ತಿತ್ತು. ಬೆಳಗ್ಗೆ ಎದ್ದಾಗ ಮೈಮೇಲೆ ಕುರಿಯ ತುಪ್ಪಳ ಅಂಟಿಕೊಂಡಿರುತ್ತಿತ್ತು, ಕಸ ಗುಡಿಸಿದರೆ ಮನೆ ತುಂಬ ತುಪ್ಪಳ. ಇನ್ನು, ಸುರುಳಿ ಆಕಾರದಲ್ಲಿ ಸುತ್ತಿಡುತ್ತಿದ್ದ ಈಚಲು ಚಾಪೆಯ ಗೋಳು ಬೇರೆಯ ರೀತಿಯದು. ಹಾಸಿದರೆ ಮತ್ತೆ ಸುರುಳಿ ಸುತ್ತಿಕೊಂಡು ಮಡಚಿಕೊಳ್ಳುತ್ತಿತ್ತು. ಇಷ್ಟರ ನಡುವೆಯೂ ಸುಖನಿದ್ರೆಗೆ ಕೊರತೆಯಿರಲಿಲ್ಲ. ಅಡುಗೆಗೆ ಬಳಸುತ್ತಿದ್ದುದು ಮಣ್ಣಿನ ಮಡಕೆ-ಕುಡಿಕೆಗಳನ್ನು. ಮರದ ಕವೆಗೋಲು ನಡುವೆ ಮುದ್ದೆಯ ಮಡಕೆಯಿಟ್ಟು, ಅದು ಒಡೆದುಹೋಗದ ಹಾಗೆ ಮುದ್ದೆಯನ್ನು ತಿರುವುತ್ತಿದ್ದ ಅಮ್ಮನ ಕೌಶಲ ಅದ್ಭುತವಾಗಿರುತ್ತಿತ್ತು. ಅದನ್ನು ನೋಡುವುದೇ ಒಂದು ಖುಷಿ. ಸುಗ್ಗಿಯ ಕಾಲ ಬಂತೆಂದರೆ ನಮ್ಮೂರ ಬೀದಿಗಳಲ್ಲಿ ಕಂಬಳಿ, ಚಾಪೆ ಮತ್ತು ಮಡಕೆ ಮಾರುವವರು ಬರುತ್ತಿದ್ದರು. ಭತ್ತವನ್ನು ಕೊಟ್ಟು ಅವುಗಳನ್ನು ಕೊಳ್ಳಲಾಗುತ್ತಿತ್ತು. ಹಳ್ಳಿಗಳಲ್ಲಿ ಹಣ ಎಲ್ಲಿಂದ ಬರಬೇಕು, ಬೆಳೆಯುತ್ತಿದ್ದ ಫಸಲೇ ಹಣದಂತೆ ಚಲಾವಣೆಯಾಗುತ್ತಿತ್ತು. ವರ್ಷಕ್ಕೊಮ್ಮೆ ಮಾತ್ರ ಬರುತ್ತಿದ್ದ ಇವರ ಬಳಿ, ಮುಂದಿನ ವರ್ಷದವರೆಗೂ ಅಗತ್ಯವಿರುವಷ್ಟು ಮಡಕೆ-ಚಾಪೆ-ಕಂಬಳಿಗಳನ್ನು ಜನರು ತೆಗೆದುಕೊಳ್ಳುತ್ತಿದ್ದರು.

ಈಗ ಸಾಕಷ್ಟು ಬದಲಾವಣೆಯಾಗಿದೆ. ಬಹುತೇಕರ ಮನೆಗಳಲ್ಲಿ ಮಡಕೆ, ಈಚಲುಚಾಪೆ, ಕುರಿಕಂಬಳಿ, ರಾಗಿಹೊಟ್ಟಿನ ತಲೆದಿಂಬು ಸಿಗುವುದೇ ಇಲ್ಲ. ಇವುಗಳ ಪರಿಷ್ಕೃತ ರೂಪಗಳು ದಾಂಗುಡಿಯಿಟ್ಟಿವೆ. ಆದರೆ, ಹೊಸತೊಂದು ಉತ್ಪನ್ನ ಬಂದು ಜೀವನಕ್ರಮ ಉತ್ತಮವಾಯಿತು ಎನ್ನುವಷ್ಟರಲ್ಲಿ ಮತ್ತೆ ಇನ್ನೇನೋ ಬೇಕು ಎನ್ನಿಸುತ್ತಿದೆ. ಹಿಂದಿನ ಉತ್ಪನ್ನಗಳು ಕೊಡುತ್ತಿದ್ದ ಸುಖ-ನೆಮ್ಮದಿಯನ್ನು ಇವು ಕೊಡುತ್ತಿಲ್ಲ ಎಂಬ ಭಾವ ಕಾಡುತ್ತದೆ...

ಮಕರ ಸಂಕ್ರಮಣ

• ಪ್ರಜ್ಞಾ ರವೀಶ್
ಕುಳಮರ್ವ, ಕಾಸರಗೋಡು.

ಸಂಭ್ರಮದ ಹಬ್ಬವಿದು
ಮಕರ ಸಂಕ್ರಮಣ
ಅರಳಲೆಲ್ಲರ ಮೊಗದಲೂ
ನಗುವಿನ ತೋರಣ
ಗಂಗೆಯಲಿ ಅಭ್ಯಂಜನಗೈದು
ರವಿಗೆ ನಮಿಸಿ
ಕೈ ಮುಗಿದು ಬೇಡೋಣ
ಭಕ್ತಿಯನು ಬೆರೆಸಿ...

ಉತ್ತರದೆಡೆಗೆ ಸಂಚರಿಸಿದ
ಸೂರ್ಯದೇವನು
ಸಕಲ ಪಾಪ ನಿವಾರಕನು
ಸರ್ವಶಕ್ತಿಯುತನು
ತನ್ನ ಶಾಖದಿ ಸಕಲ ಜೀವಿಗಳಲೂ
ಕಳೆ ತುಂಬಿ
ಮಾಗಿ ಚಳಿಯನು ನಿವಾರಿಸುವನು
ಮನದುಂಬಿ!
ರೈತರು ಶ್ರಮಪಟ್ಟು ಉತ್ತು ಬಿತ್ತ
ಫಸಲನು ಕಂಡು
ಹರುಷದಿ ಕುಣಿದಾಡುವ
ಸುಗ್ಗಿಯ ಹಿಗ್ಗಿನ ದಿನವು
ಹಾರುವ ಗಾಳಿಪಟದಿ
ಜೀವನಪಾಠವ ಮನಗಂಡು
ರಂಗೋಲಿ ರಂಗಿನಂತೆ ರಂಜಿಸಲಿ
ಬಾಳು ಅನುಕ್ಷಣವು...

ರೈತಗೆ ಫಸಲು ಉತ್ತು ನೆರವಾದ
ಜಾನುವಾರುಗಳಿಗೆ
ತನುವು ಸ್ವಚ್ಛವಾದ ಬೆಚ್ಚನೆಯ
ಹಿತ ಅನುಭವವು
ಬೆಂಕಿಯಿಂದ ದಾಟಿಸುವರು
ದುಷ್ಟಶಕ್ತಿ ನಿವಾರಣೆಗೆ
ಉರಿಯುವ ಬೆಂಕಿಯಲಿ
ಭಸ್ಮವಾಗಲಿ ಅಹಂಕಾರವು...

ಜೀವನವು ಎಳ್ಳು ಬೆಲ್ಲಗಳ
ಹದವಾದ ಮಿಶ್ರಣ
ಜತೆಗೂಡಿ ಸವಿಯೋಣ
ಹುಗ್ಗಿ ಅನ್ನದ ಹೂರಣ
ದ್ವೇಷ, ಮತ್ಸರ, ಅಹಂಕಾರವ
ನೆಲದಲ್ಲಿಯೇ ಬಿಟ್ಟು
ಹಾರೋಣ ಗಾಳಿಪಟದಂತೆ
ಅವನಲ್ಲಿ ನಂಬಿಕೆಯಿಟ್ಟು...

ನೀವೂ ಬರೆಯಬಹುದು
ನಮ್ಮ ವಿಳಾಸ
ಪುರವಣಿ ವಿಭಾಗ, ನಂ.1687, 3ನೇ ಮಹಡಿ, ನಿಸರ್ಗ ಸೆರೆನಿಟಿ ಕಾಂಪ್ಲೆಕ್ಸ್, ರಾಘವೇಂದ್ರ ಸ್ವಾಮಿ ಮಠದ ಹತ್ತಿರ, ಬಿಇಎಂಎಲ್ ಬಡಾವಣೆ, ರಾಜರಾಜೇಶ್ವರಿ ನಗರ, ಬೆಂಗಳೂರು-560098
e-mail: vishwavanimagazine@gmail.com

ಕಲ್ಟ್ ನನಗೆ ಮೆಟ್ಟಿಲಾಗಲಿದೆ ಮಲೈಕಾ ವಸುಪಾಲ್ ಸಂತಸ

ಕಿರುತೆರೆಯಲ್ಲಿ ಪ್ರಸಿದ್ಧ ಪಡೆದ ಮಲೈಕಾ ವಸುಪಾಲ್, ಉಪಾಧ್ಯಕ್ಷನ ಜತೆಗೆ ಬೆಳ್ಳಿತೆರೆಗೂ ಎಂಟ್ರಿಕೊಟ್ಟರು. ಬಳಿಕ ವಿದ್ಯಾಪತಿಯ ಜತೆಗೂ ಅಭಿನಯಿಸಿದರು. ಈಗ ಕಲ್ಟ್ ಮೂಲಕ ಮತ್ತೆ ಬೆಳ್ಳಿತೆರೆಯಲ್ಲಿ ಮಿಂಚಲು ಸಿದ್ಧವಾಗಿದ್ದಾರೆ. ಕಲ್ಟ್ ಸಿನಿಮಾದ ಕುರಿತಂತೆ ಮಲೈಕಾ, ವಿ. ಸಿನಿಮಾಸ್‌ನೊಂದಿಗೆ ಮಾತನಾಡಿದ್ದಾರೆ.

ಡಬ್ಬಲ್ ಶೇಡ್

ಕಲ್ಟ್ ಅಪರೂಪದ ಅದ್ಭುತ ಕಥೆಯನ್ನು ಹೊತ್ತು ಬರುತ್ತಿದೆ. ಈ ಚಿತ್ರದಲ್ಲಿ ನಾನು ಡಬಲ್ ಶೇಡ್‌ನಲ್ಲಿ ಮಿಂಚಿದ್ದೇನೆ. ನನ್ನ ಹಿಂದಿನ ಸಿನಿಮಾಗಳಿಗಿಂತ ಇಲ್ಲಿ ಬೇರೆ ಥರದ ಪಾತ್ರವಿದೆ. ಸಿನಿಮಾ ನೋಡುವಾಗ ಒಂದು ಕ್ಷಣ ಶಾಕ್ ಆಗುವುದಂತೂ ಖಚಿತ. ಅಷ್ಟರಮಟ್ಟಿಗೆ ನನ್ನ ಪಾತ್ರ ಗಮನಸೆಳೆಯುತ್ತದೆ. ಕಲ್ಟ್ ಸಿನಿಮಾ ನನ್ನ ಕೆರಿಯರ್‌ಗೆ ಮೆಟ್ಟಿಲಾಗಲಿದೆ. ಸಿನಿಮಾದ ಅಯ್ಯೋ ಶಿವನೇ... ಹಾಡು ಸೂಪರ್ ಹಿಟ್ ಆಗಿದೆ. ಅದರಲ್ಲಿ ನಾನು ಸಾಂಪ್ರದಾಯಿಕ ಹುಡುಗಿಯಾಗಿ ಕಾಣಿಸಿಕೊಂಡಿದ್ದೇನೆ.

ಮನಸಿಗೆ ಮೆಚ್ಚಿದ ಕಥೆ

ನಿರ್ದೇಶಕ ಅನಿಲ್ ಕುಮಾರ್ ಕಲ್ಟ್ ಚಿತ್ರದ ಕಥೆ ಹೇಳುವಾಗಲೇ ಈ ಪಾತ್ರ ನನ್ನ ಮನದೊಳಗೆ ಮನೆ ಮಾಡಿತ್ತು. ಅನಿಲ್ ಅವರೊಂದಿಗೆ ಉಪಾಧ್ಯಕ್ಷ ಸಿನಿಮಾದಲ್ಲಿ ಕೆಲಸ ಮಾಡಿದ್ದರಿಂದ ನಾನು ಹೇಗೆ ಕಾಣಿಸಿಕೊಂಡರೆ ಚೆಂದ ಎಂಬುದು ಅವರಿಗೆ ಗೊತ್ತಿತ್ತು. ಹಾಗಾಗಿ ಈ ಪಾತ್ರಕ್ಕೆ ನನ್ನನ್ನು ಆಯ್ಕೆ ಮಾಡಿದರು. ಪಾತ್ರಕ್ಕೆ ಅನುಗುಣವಾಗಿ ಕಾಸ್ಟ್ಯೂಮ್, ಮೇಕಪ್, ಡೈಲಾಗ್ ಎಲ್ಲವೂ ಮೆಚ್ಚುವಂತಿದೆ.

> ಅನವಶ್ಯಕ ದೃಶ್ಯಗಳು, ಕಿಸ್ಸಿಂಗ್ ಸೀನ್ ಇದ್ದರೆ ನಾನು ನಟಿಸಲು ಒಪ್ಪಿಕೊಳ್ಳುವುದಿಲ್ಲ. ಇದನ್ನು ಕಥೆ ಹೇಳುವ ಮೊದಲೇ ಹೇಳಿಬಿಡುತ್ತೇನೆ. ನನ್ನ ಮನೆಯಲ್ಲಿ ಹಾಕಿರುವ ಶರತ್ತು ಅದು. ಜತೆಗೆ ನನಗೆ ನಾನೇ ಹಾಕಿಕೊಂಡಿರುವ ಕೆಲವು ಎಲ್ಲೆಯೂ ಇವೆ.

ದೊಡ್ಡ ತಾರಾಬಳಗ

ಕಲ್ಟ್ ಸಿನಿಮಾದಲ್ಲಿ ತಾರಾಗಣ, ತಾಂತ್ರಿಕ ಬಳಗ ಎಲ್ಲವೂ ದೊಡ್ಡದಾಗಿದೆ. ಈಗಾಗಲೇ ಬಿಡುಗಡೆಯಾಗಿರುವ ಹಾಡುಗಳು ಸೂಪರ್ ಹಿಟ್ ಆಗಿವೆ. ರಚಿತಾ ರಾಮ್ ಅವರೊಂದಿಗೆ ನಟಿಸಿದ್ದು ಖುಷಿಕೊಟ್ಟಿದೆ. ಅವರಿಂದಲೂ ತುಂಬಾ ಕಲಿತ್ತಿದ್ದೇನೆ. ಝೈದ್ ಖಾನ್ ಕೂಡ ವಿಭಿನ್ನ ಗೆಟಪ್‌ನಲ್ಲಿ ಅಭಿನಯಿಸಿದ್ದಾರೆ. ನಾವು ಮೂವರು ಒಂದೇ ಸೀನ್‌ನಲ್ಲಿ ಕಾಣಿಸಿಕೊಂಡಿದ್ದೇವೆ. ಅದರಲ್ಲಿ ನನಗೆ ಡೈಲಾಗ್ ಇರದಿದ್ದರೂ, ಇಡೀ ದೃಶ್ಯ ಚೆನ್ನಾಗಿ ಮೂಡಿ ಬಂದಿದೆ. ಅರ್ಜುನ್ ಜನ್ಯ ಸಂಗೀತ, ಜಗದೀಶ್ ವಾಲಿ ಛಾಯಾಗ್ರಹಣ ಚಿತ್ರಕ್ಕೆ ಶಕ್ತಿತುಂಬಿದೆ.

ವಿಟಾಕೀಸ್

ಭೂಗತ ಲೋಕದಲ್ಲಿ ಸೂರ್ಯನ ಸದ್ದು

ಸಂಕ್ರಾಂತಿ ಹಬ್ಬದ ಪ್ರಯುಕ್ತ ಸೂರ್ಯ ತೆರೆಗೆ ಬಂದಿದ್ದಾನೆ. ಸೂರ್ಯನವಿರಾದ ಪ್ರೇಮಕಥೆಯ ಜತೆಗೆ ತೊಂಬತ್ತರ ದಶಕದ ಭೂಗತ ಲೋಕದ ಸ್ಟೋರಿಯನ್ನು ಹೊತ್ತು ಬಂದಿದೆ. ಅದರೊಂದಿಗೆ ಸೆಂಟಿಮೆಂಟ್ ಕಥೆಯೂ ಬೆರೆತಿದೆ. ಸಾಗರ್ ದಾಸ್ ಈ ಚಿತ್ರಕ್ಕೆ ಕಥೆ ಬರೆದು ನಿರ್ದೇಶನ ಮಾಡಿದ್ದು, ತಮ್ಮ ಸಿನಿಮಾದ ಕುರಿತಂತೆ ವಿ.ಸಿನಿಮಾಸ್‌ನೊಂದಿಗೆ ಮಾತನಾಡಿದ್ದಾರೆ.

> ಇಂದಿನ ಮತ್ತು ಹಿಂದಿನ ಕಾಲಘಟ್ಟದ ಕಥೆಯನ್ನು ಬೆಸೆಯುವುದು ಶ್ರಮದಾಯಕ. ಆದರೂ ನಿರ್ಮಾಪಕರ ಸಹಕಾರದಿಂದ ಅದು ಸಾಧ್ಯವಾಗಿದೆ. ಎಲ್ಲಾ ಪ್ರೇಕ್ಷಕರಿಗೆ ಹಿಡಿಸುವ ಸಿನಿಮಾ ಇದಾಗಿದ್ದು, ನೂರಕ್ಕೂ ಹೆಚ್ಚು ಚಿತ್ರಮಂದಿರಗಳಲ್ಲಿ ನಮ್ಮ ಚಿತ್ರ ತೆರೆಗೆ ಬರಲಿದೆ.

ವಿ.ಸಿನಿಮಾಸ್ : ಇಲ್ಲಿ ಲವ್ ಸ್ಟೋರಿಯೇ ಪ್ರಮುಖವಾಗಿದೆಯೆ?

ಸಾಗರ್ ದಾಸ್ : ಇಲ್ಲಿ ಎಲ್ಲರ ಮನಗೆಲ್ಲುವ ರೊಮ್ಯಾಂಟಿಕ್ ಲವ್ ಸ್ಟೋರಿ ಇದೆ. ಅದರ ಜತೆಗೆ ಸೆಂಟಿಮೆಂಟ್ ಕೂಡ ಬೆರೆತಿದೆ. ಹಾಗಂತ ಅಷ್ಟಕ್ಕೆ ಸೀಮಿತವಾಗಿಲ್ಲ. ತೊಂಬತ್ತರ ದಶಕದಲ್ಲಿದ್ದ ಬೆಂಗಳೂರಿನ ಭೂಗದ ಜಗತ್ತಿನ ಕುರಿತ ಕಥೆಯೂ ಸಾಗಲಿದೆ. ಮಧ್ಯಮ ವರ್ಗದಲ್ಲಿ ಬೆಳೆದ ನಾಯಕ, ತನ್ನ ಆಸ್ತಿತ್ವವನ್ನು ಹೇಗೆ ಉಳಿಸಿಕೊಳ್ಳುತ್ತಾನೆ. ಈ ನಡುವೆ ಮನಸಿಗೆ ಹಿಡಿಸಿದ ಹುಡುಗಿ ಸಿಕ್ಕಾಗ, ತನ್ನ ಪ್ರೀತಿಯನ್ನು ಹೇಗೆ ಉಳಿಸಿಕೊಳ್ಳುತ್ತಾನೆ ಎಂಬುದನ್ನು ಇಲ್ಲಿ ಹೇಳಲಾಗಿದೆ. ಮೂವತ್ತು ವರ್ಷದ ಈ ಸ್ಟೋರಿ ಇಂದಿನ ಕಾಲಘಟ್ಟಕ್ಕೂ ಹೊಂದುವಂತಿದೆ.

ವಿ.ಸಿ : ಚಿತ್ರಕ್ಕೆ ಹೊಸಬರನ್ನೇ ಆಯ್ದುಕೊಳ್ಳಲು ಕಾರಣ ?

ಸಾಗರ್ : ಚಿತ್ರದ ಕಥೆಯಲ್ಲಿ ಬರುವ ಪಾತ್ರಕ್ಕೆ ಹೊಂದಿಕೊಳ್ಳಲು ಹೊಸಬರ ಅಗತ್ಯವಿತ್ತು. ಯಾಕೆಂದರೆ ಅವರನ್ನು ಪಾತ್ರಕ್ಕೆ ತಕ್ಕಂತೆ ಸಿದ್ಧಪಡಿಸಬಹುದಿತ್ತು. ಹಾಗಾಗಿಯೇ ಹೊಸಬರಿಗೆ ಅವಕಾಶ ನೀಡಿದ್ದೇವೆ. ಪ್ರಶಾಂತ್ ನಾಯಕನಾಗಿ ನಟಿಸಿದ್ದು, ಹರ್ಷಿತಾ ನಾಯಕಿಯಾಗಿ ಬಣ್ಣಹಚ್ಚಿದ್ದಾರೆ. ಆರ್ಮುಗಂ ರವಿಶಂಕರ್, ಪ್ರಮೋದ್ ಶೆಟ್ಟಿ, ಶ್ರುತಿ, ವಸಂತ್ ಕುಮಾರ್ ಹೀಗೆ ದೊಡ್ಡ ತಾರಾಬಳಗವೇ ಸಿನಿಮಾದಲ್ಲಿದೆ. ಈ ಚಿತ್ರ ನಾಯಕ ಮತ್ತು ನಾಯಕಿಯ ಸುತ್ತ ಸಾಗುತ್ತದೆ. ಬಸವರಾಜ ಬೆಣ್ಣೆ ಹಾಗೂ ರವಿ ಬೆಣ್ಣೆ ಸಹೋದರರು ನಂದಿ ಸಿನಿಮಾಸ್ ಬ್ಯಾನರ್‌ನಲ್ಲಿ ಈ ಚಿತ್ರವನ್ನು ನಿರ್ಮಾಣ ಮಾಡಿದ್ದಾರೆ.

ವಿ.ಸಿ: ಚಿತ್ರದಲ್ಲಿ ರವಿಂಶಂಕರ್ ಅವರ ಪಾತ್ರ?

ಸಾಗರ್ : ರವಿಂಶಕರ್ ಅವರು ಇಲ್ಲಿ ಪವರ್ ಫುಲ್ ಪಾತ್ರದಲ್ಲಿ ನಟಿಸಿದ್ದಾರೆ. ಕೆಂಪೇಗೌಡ ಚಿತ್ರದ ಬಳಿಕ ರವಿಶಂಕರ್ ಅದೇ ರೀತಿಯ ಪಾತ್ರದಲ್ಲಿ ಅಬ್ಬರಿಸಿದ್ದಾರೆ. ಮಾರಿ ಎಂಬ ಪಾತ್ರ ಅವರದ್ದಾಗಿದ್ದು ಹಠವಾದಿಯಾಗಿ ಮಿಂಚಿದ್ದಾರೆ. ಅವರ ಡೈಲಾಗ್ ಪವರ್ ಫುಲ್ ಆಗಿವೆ. ಶ್ರುತಿ ಅವರು ಈ ಹಿಂದಿನ ಎಲ್ಲಾ ಸಿನಿಮಾಗಳಿಗಿಂತ ವಿಭಿನ್ನವಾದ ಪಾತ್ರದಲ್ಲಿ ಬಣ್ಣಹಚ್ಚಿದ್ದಾರೆ.

ಹಿಟ್ ಲಿಸ್ಟ್‌ನಲ್ಲಿ ಲ್ಯಾಂಡ್ ಲಾರ್ಡ್

ದುನಿಯಾ ವಿಜಯ್ ನಟನೆಯ ಲ್ಯಾಂಡ್ ಲಾರ್ಡ್ ಮುಂದಿನ ವಾರ ಅದ್ದೂರಿಯಾಗಿ ತೆರೆಗೆ ಬರಲಿದೆ. ಈ ಚಿತ್ರದ ರೋಮಾಂಚಕ ಎಂಬ ಹಾಡು ಬಿಡುಗಡೆಯಾಗಿದ್ದು, ಹಿಟ್ ಲಿಸ್ಟ್ ಸೇರಿದೆ. ಈಗಾಗಲೇ ಮೂರು ಮಿಲಿಯನ್‌ಗೂ ಹೆಚ್ಚು ವೀಕ್ಷಣೆ ಕಂಡಿರುವ ಈ ಗೀತೆ ಯುವ ಮನಸ್ಸುಗಳನ್ನು ಕದ್ದಿದೆ. ದುನಿಯಾ ವಿಜಯ್ ಪುತ್ರಿ ರಿತನ್ಯಾ ಹಾಗೂ ಶಿಶಿರ್ ಬೈಕಾಡಿ ಈ ಹಾಡಿನಲ್ಲಿ ಕಾಣಿಸಿಕೊಂಡಿದ್ದಾರೆ. ನಾಗಾರ್ಜುನ ಶರ್ಮಾ ಸಾಹಿತ್ಯ ಬರೆದಿರುವ ಈ ಹಾಡಿಗೆ ಸಂಚಿತ್ ಹೆಗ್ಡೆ ಹಾಗೂ ಹರ್ಷಿಕಾ ದನಿಯಾಗಿದ್ದಾರೆ.

ಈ ಚಿತ್ರದಲ್ಲಿ ವಿಜಯ್ ರಾಚಯ್ಯ ಎಂಬ ಪಾತ್ರದಲ್ಲಿ ನಟಿಸಿದ್ದು, ರಚಿತಾ ರಾಮ್ ನಿಂಗವ್ವನಾಗಿ ಕಾಣಿಸಿಕೊಂಡಿದ್ದಾರೆ. ಬಹುತೇಕ ಚಿತ್ರಗಳಲ್ಲಿ ಕಾಮಿಡಿಯಲ್ಲಿಯೇ ಮನಗೆದ್ದಿದ್ದ ರಾಜ್.ಬಿ.ಶೆಟ್ಟಿ ಇಲ್ಲಿ ರಗಡ್ ಆಗಿ ಕಾಣಿಸಿಕೊಂಡಿದ್ದು, ನಟಿಸಿದ್ದು, ಖಳನಾಗಿ ಅಬ್ಬರಿಸಲು ಸಲಿದ್ದಾರೆ. ಲ್ಯಾಂಡ್ ಲಾರ್ಡ್‌ನಲ್ಲಿ ವಿಜಯ್ ಪುತ್ರಿ ರಿತನ್ಯಾ ನಟಿಸಿದ್ದು, ಈ ಚಿತ್ರದ ಮೂಲಕ ಚಿತ್ರರಂಗಕ್ಕೆ ಎಂಟ್ರಿಯಾಗುತ್ತಿದ್ದಾರೆ. ಕಾಟೇರನ ಕಥೆಗಾರ ಜಡೇಶ್ ಕುಮಾರ್ ಹಂಪಿ ಈ ಚಿತ್ರಕ್ಕೂ ಕಥೆ ಬರೆದು ನಿರ್ದೇಶನ ಮಾಡಿದ್ದಾರೆ. ಇದು ಅಳಿದವರ ಕಥೆಯಲ್ಲ ಅಳಿದು ಉಳಿದವರ ಕಥೆ ಎಂಬ ಅಡಿಬರಹ ಚಿತ್ರದದಲ್ಲಿದ್ದು ಅದು ಸಿನಿಮಾದ ಬಗ್ಗೆ ಕುತೂಹಲ ಮೂಡಿಸಿದೆ. ಉಳ್ಳವರು ಮತ್ತು ಇಲ್ಲದವರ ನಡುವಿನ ಹೋರಾಟ ಚಿತ್ರದುದ್ದಕ್ಕೂ ಸಾಗಲಿದೆ. ಸಾರಥಿ ಫಿಲಂಸ್ ಲಾಂಛನದಲ್ಲಿ ಕೆ.ವಿ.ಸತ್ಯಪ್ರಕಾಶ್, ಹೇಮಂತ್ ಗೌಡ ಚಿತ್ರ ನಿರ್ಮಾಣ ಮಾಡಿದ್ದಾರೆ.

ಹೊಸದಾಗಿ ಪ್ರಾರಂಭವಾಗುತ್ತಿರುವ
AMB CINEMAS KAPALI
ಚಿತ್ರಮಂದಿರದಲ್ಲಿ ಬಿಡುಗಡೆಯಾಗುತ್ತಿರುವ ಮೊದಲ ಚಿತ್ರ ಸೂರ್ಯ
(ಕೆ.ಜಿ. ರೋಡ್) (1.10 pm)

ನವರಂಗ್ 1 ಆಟ
(ರಾಜಾಜಿನಗರ) (10.30 am & 1.30pm)

PVR INOX
ORION | GT MALL | FORUM
VAISHNAVI | REGALIA
MARKET CITY | VR MALL
ARENA | SPIRIT | VEGA CITY
SUPER PLEX | GLOBAL MALL
MANTHRI | SWAGATH
CENTRAL | IDO
BROOKFIELD | MALL OF ASIA

cinépolis
LULU
ROYAL MEENAKSHI
ETA | FUN SIGMA
ORION EAST
SHANTINIKETAN

GOPALAN CINEMAS
LEGACY MALL 4.30 PM
(Mysore road)
SIGNATURE MALL 1.30 PM
(Old Madras road)
ARCADE MALL 2.30 PM

PARADISE
Sapphire Centre YESHAVANTHA PURA (7.10pm)
GT WORLD MALL
MIRAJ SUNKADAKATTE
ಮಾರುತಿ (ರಾಜಗೋಪಾಲನಗರ)

ಪ್ರಸನ್ನ DTS ಮಾಗಡಿ ರೋಡ್ 2 ಆಟ
(10.30 am & 1.30pm)

ತುಮಕೂರು PVR INOX S MALL
ಅರಸೀಕೆರೆ ಸಾಧನ
ಮೈಸೂರು ಪ್ರಭಾ ಬಾಲಾಜಿ DRC CINEMAS PVR INOX VISION CINEMAS
ಮಂಡ್ಯ ಸಂಜಯ
ಮದ್ದೂರು ಸಂಜಯ
ನಾಗಮಂಗಲ ವೆಂಕಟೇಶ್ವರ
ಉಲ್ಲಹಳ್ಳಿ ಯಜಮನ
ಬನ್ನೂರು ರತ್ನಮಹಲ್
ಹೊಳೆನರಸೀಪುರ ಎಸ್‌ಎಲ್‌ಎನ್
ಚೆನ್ನರಾಯಪಟ್ಟಣ ಬಾಲಾಜಿ
ಪಿರಿಯಾಪಟ್ಟಣ ಶಾರದ
ಪಾಂಡವಪುರ ಕೋಕಿಲ

ಸಾಂಗ್ಲಿ THE ARC CINEMA
ಕೆ.ಆರ್. ಪೇಟೆ ಬಸವೇಶ್ವರ
ಹಾಸನ ಪಿಕ್ಚರ್‌ಪ್ಯಾಲೇಸ್
ಸಕಲೇಶಪುರ ತೇಜಸ್ವಿನಿ
ನಂಜನಗೂಡು ಲಲಿತ
ಸಾತನೂರು ವೆಂಕಟೇಶ್ವರ
ಚಾಮರಾಜನಗರ ಗುರುರಾಘವೇಂದ್ರ
ಬಾಬುರಾಯನ ಕೊಪ್ಪಲು ಕೋಕಿಲ
ಶನಿವಾರ ಸಂತೆ ಎಸ್.ಎಸ್.ವಿ
ಶಿವಮೊಗ್ಗ Bharath Cinemas
ಶಿಕಾರಿಪುರ ಮಾಲತೇಶ್
ಕಡೂರು ವಿಜಯಲಕ್ಷ್ಮಿ
ತೀರ್ಥಹಳ್ಳಿ ವೆಂಕಟೇಶ್ವರ
ಚೆನ್ನಗಿರಿ ಲಕ್ಷ್ಮಿ

ಹುಬ್ಬಳ್ಳಿ ಚಂದ್ರಕಲ LAXMI CITY PRIDE
ಧಾರವಾಡ PVR INOX
ಬೆಳಗಾಂ ನಿರ್ಮಲ ಸಂತೋಷ್
ಬಿಜಾಪುರ ಅಮೀರ್
ಬಾಗಲಕೋಟೆ SMART MOVIES
ಹಾವೇರಿ ಮಾಧವಿ
ರೋಣ ಮಲ್ಲಿಕಾರ್ಜುನ್
ಗೋಕಾಕ್ ಆನಂದ್
ಮುಧೋಳ್ ಸುಭಾಷಿಣಿ
ಜಮಖಂಡಿ ಸುವರ್ಣ
ಯಾದವಾಡ ಬಸವೇಶ್ವರ
ರಾಮದುರ್ಗ ವೆಂಕಟೇಶ್
ಬನಹಟ್ಟಿ ವೈಭವ
ರಾಯಬಾಗ ದತ್ತ
ಹಾರೋಗೇರಿ ಚಂದ್ರಮ
ತಾಳಿಕೋಟೆ ಅಮೀರ್

ಇಂಡಿ ಮಹಾವೀರ್
ಉಮದಿ ರಾಜ್‌ದೀಪ್
ಮುದ್ದೇಬಿಹಾಳ ಗಿರಿಜಾಶಂಕರ್
ಬ. ಬಾಗೇವಾಡಿ ಸತ್ಯನಾರಾಯಣ
ಅಣ್ಣಿಗೇರಿ ಜನತ
ಗುಲ್ಬರ್ಗ ತ್ರಿವೇಣಿ
ಗಂಗಾವತಿ ಅಮರ್
ಹಗರಿಬೊಮ್ಮನಹಳ್ಳಿ ಶ್ರೀಕೃಷ್ಣ ಟಾಕೀಸ್
ಹೂವಿನಹಡಗಲಿ ಶಂಕರ್
ಮಂಗಳೂರು Bharath Cinemas
ಉಡುಪಿ ಅಲಂಕಾರ್
ಕುಂದಾಪುರ Bharath Cinemas
ಹಾಗೂ ರಾಜ್ಯಾದ್ಯಂತ ಮತ್ತು ಹೊರ ರಾಜ್ಯಗಳಲ್ಲೂ ಬಿಡುಗಡೆ

MAHARASTHRA
PUNE: MULSHI, PIRNGUT
FUN SQUARE GHOTWADE PHATA
YUKTI FUN SQUARE, NERAL
NR KARJAT
FUN SQUARE NAVI MUMBAI
SANPADA, NAVI MUMBAI
KANNADA VERSION
WITH ENGLISH SUBTITLES

For Entire Karnataka : NANDI CINEMAS THROUGH JAYADEV FILMS